ಸೋಮವಾರ, ಮಾರ್ಚ್ 15, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 74 | ಪುಟ 12 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಭವಿಷ್ಯದಲ್ಲಿ ಏನಾಗಬೇಕು ಮತ್ತು ಅದಕ್ಕಾಗಿ ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಎಂಬುದಕ್ಕೆ ಎಸ್ಸೆಸ್ಸೆಲ್ಸಿಯಲ್ಲಿದ್ದಾಗಲೇ ಭದ್ರ ಬುನಾದಿ ಹಾಕಿಕೊಳ್ಳುವುದು ಸೂಕ್ತ.

ಮ್ಯಾನ್ಮಾರ್: 14 ಮಂದಿ ಪ್ರತಿಭಟನಕಾರರ ಹತ್ಯೆ 11
ಪ್ರೊ. ರವಿವರ್ಮ ಕುಮಾರ್ ಸಲಹೆ
ಆಳ-ಅಗಲ ಬಿಲಿಯನೇರ್‌ಗಳ ಸಂಪತ್ ಸಮೃದ್ಧಿ
ಇಶಾನ್–ಕೊಹ್ಲಿ ಅಬ್ಬರದಾಟಕ್ಕೆ ಒಲಿದ ಜಯ 12
'ಮೀಸಲಾತಿ ಉಳಿವಿಗಾಗಿ ಕಾನೂನು ಹೋರಾಟವೂ ಅಗತ್ಯ' 4

ಜಾತಿ– ನಿಗಮಗಳಿಗೆ ಭರಪೂರ • ಕಲೆ, ಸಂಸ್ಕೃತಿಗಿಲ್ಲ ಹಣ • ಸಾಂಸ್ಕೃತಿಕ ವಲಯದ ಆಕ್ರೋಶ

ಗಡಿ, ನುಡಿಗೆ ಅನುದಾನ ಕತ್ತರಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಜಾತಿ ನಿಗಮಗಳಿಗೆ ಧಾರಾಳವಾಗಿ ಹಣ ಹಂಚಿರುವ ರಾಜ್ಯ ಸರ್ಕಾರ, ನುಡಿ, ಗಡಿ, ಸಂಸ್ಕೃತಿಗೆ ಭಾರಿ ಪ್ರಮಾಣದಲ್ಲಿ ಅನುದಾನ ಕಡಿತ ಮಾಡಿರುವುದು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಆಕ್ರೋಶಕ್ಕೆ ಕಾರಣವಾಗಿದೆ.

ಆಯವ್ಯಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ ₹ 2 ಕೋಟಿ, ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 5 ಕೋಟಿ ಹಂಚಿಕೆ ಮಾಡಲಾಗಿದೆ. ಆದರೆ, ಮರಾಠಾ ನಿಗಮಕ್ಕೆ ₹ 50 ಕೋಟಿ, ವೀರಶೈವ ಮತ್ತು ಒಕ್ಕಲಿಗ ನಿಗಮಕ್ಕೆ ತಲಾ ₹ 500 ಕೋಟಿ, ಅಲ್ಪಸಂಖ್ಯಾತರಿಗೆ ₹ 1,500 ಕೋಟಿ ಮೀಸಲಿಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 2020–21ನೇ ಸಾಲಿನ ಬಜೆಟ್‌ನಲ್ಲಿ ₹ 259 ಕೋಟಿ ಹಂಚಿಕೆ ಮಾಡಿದ್ದ ಸರ್ಕಾರ, ಬಳಿಕ ಕೋವಿಡ್ ಕಾರಣಕ್ಕೆ ₹ 55 ಕೋಟಿ ಕಡಿತಗೊಳಿಸಿ, ₹ 192 ಕೋಟಿ ಬಿಡುಗಡೆ ಮಾಡಿತ್ತು. ಆದರೆ, ಈ ಸಾಲಿನಲ್ಲಿ ಇನ್ನೂ ₹ 50 ಕೋಟಿ ಕಡಿತ ಮಾಡಲಾಗಿದೆ. ಕಲೆ, ಸಾಹಿತ್ಯ, ಕಲಾವಿದರ ಹಲವು ಯೋಜನೆಗಳಿಗೆ ಅನುದಾನ ಕಡಿತ ಮಾಡಿ, ಒಟ್ಟು ₹ 152 ಕೋಟಿ ಹಂಚಿಕೆಯಾಗಿದೆ.

'ವಲಯವಾರು ಹಣ ಹಂಚಿಕೆ ಮಾಡಿದ್ದರಿಂದ ವಿವಿಧ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿರುವ ಅನುದಾನದ ಸ್ಪಷ್ಟ ಮಾಹಿತಿ ಅನೇಕರಿಗೆ ಇನ್ನೂ ಸಿಕ್ಕಿಲ್ಲ. ಈ ಬಗ್ಗೆ ಸಂಘಟನೆಗಳು, ಕಲಾವಿದರು ವಿಚಾರಿಸುತ್ತಿದ್ದಾರೆ' ಎಂದು ಕನ್ನಡ ಮತ್ತು ಸಂಸ್ಕತಿ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಸ್ವಾತಂತ್ರ್ಯ ಯೋಧರ ಗ್ರಾಮಗಳ ಅಭಿವೃದ್ಧಿಗೆ ಕಳೆದ ಸಾಲಿನಲ್ಲಿ ₹ 1 ಕೋಟಿ ನೀಡಿದ್ದ ಸರ್ಕಾರ, ಸ್ವಾತಂತ್ರೋತ್ಸವದ 75ನೇ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಈ ಯೋಜನೆಯನ್ನೇ ಕೈಬಿಟ್ಟಿದೆ. ಹಂಪಿ, ಕದಂಬ ಉತ್ಸವಕ್ಕೂ ಹಣ ಇಟ್ಟಿಲ್ಲ. ವೃತ್ತಿ ನಾಟಕ ಕಂಪನಿಗಳಿಗೆ ನೆರವು, ಸಾಂಸ್ಕೃತಿಕ ಚಟುವಟಿಕೆಯ ಪ್ರೋತ್ಸಾಹಕ್ಕೆ ಅನುದಾನ ಕಡಿತಗೊಳಿಸಲಾಗಿದೆ. ರಾಜ್ಯ, ರಾಷ್ಟ್ರೀಯ ಉತ್ಸವಗಳ ಆಚರಣೆಗೂ ಹಣ ಕಡಿಮೆ ಇಡಲಾಗಿದೆ. ಅಕಾಡೆಮಿಗಳು, ಪ್ರಾಧಿಕಾರಗಳ ಅನುದಾನಕ್ಕೂ ಕತ್ತರಿ ಪ್ರಯೋಗಿಸಲಾಗಿದೆ.

5ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಕನ್ನಡ ಸಾಂಸ್ಕೃತಿಕ ಹೆಜ್ಜೆ ಗುರುತುಗಳನ್ನು ಮೂಡಿಸುವ ಪ್ರಾಧಿಕಾರಗಳಿಗೆ ಸರ್ಕಾರ ಅನುದಾನ ಕೊಡದಿದ್ದರೆ ಹೇಗೆ? ಅದೂ ಈ ವರ್ಷ 'ಕನ್ನಡ ಕಾಯಕ ವರ್ಷ'

ಟಿ.ಎಸ್. ನಾಗಾಭರಣ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸಾಂಸ್ಕೃತಿಕ ವಿಷಯಗಳಲ್ಲಿ ಸರ್ಕಾರಕ್ಕೆ ಕಾಳಜಿ ಇರಬೇಕಿತ್ತು. ಅದು ಇಲ್ಲವಾಗುತ್ತಿದೆ. ಕೈಗೆ ಕಾಸು ಕೊಡದೆ ಕುರ್ಚಿಯಲ್ಲಿ ಕುಳಿತು ಜಪ ಮಾಡಿ ಹೋಗುವ ಸ್ಥಿತಿಯಿದೆ

ಪ್ರೊ. ಎಂ.ಎ. ಹೆಗಡೆ
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಅಕಾಡೆಮಿ

ಕಳೆದ ಸಾಲಿನಲ್ಲಿ ಲಭ್ಯವಿದ್ದ ಅನುದಾನ ಸದ್ಬಳಕೆ ಮಾಡಿದ್ದೇವೆ. ಈ ಬಾರಿಯ ಚಟುವಟಿಕೆಗೆ ಕೊರತೆಯಾದರೆ ಸರ್ಕಾರ ಪೂರಕ ಅನುದಾನ ಕೊಡುವ ವಿಶ್ವಾಸವಿದೆ

ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಗಡಿಭಾಗದ ಅವಶ್ಯಕತೆಗಳಿಗೆ ಅನುದಾನ ಕಡಿಮೆಯಿದೆ. ಆ ಭಾಗದ ಕನ್ನಡಿಗರ ಸ್ಥಿತಿಗತಿ ಅರಿತಿರುವ ಮುಖ್ಯಮಂತ್ರಿ ₹ 75 ಕೋಟಿಗೂ ಹೆಚ್ಚು ಅನುದಾನ ಕೊಡುವ ನಂಬಿಕೆಯಿದೆ

ಸಿ. ಸೋಮಶೇಖರ, ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

ರಥೋತ್ಸವ ಮಹಾಶಿವರಾತ್ರಿ ಜಾತ್ರೋತ್ಸವ ಅಂಗವಾಗಿ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿಯ ರಥೋತ್ಸವ ಭಾನುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು ಪ್ರಜಾವಾಣಿ ಚಿತ್ರ/ ಜಿ.ಪ್ರದೀಪ್ ಕುಮಾರ್

ಕೋವಿಡ್ ಹೆಚ್ಚಳ: ತಜ್ಞರ ಜೊತೆ ಸಿ.ಎಂ ಸಭೆ ಇಂದು

'ಲಾಕ್‌ಡೌನ್ ಬೇಡ ಎಂದರೆ ಸಹಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಮತ್ತೊಮ್ಮೆ ರಾಜ್ಯ ಲಾಕ್‌ಡೌನ್ ಆಗಬಾರದು, ಕರ್ಫ್ಯೂ ವಿಧಿಸಬಾರದು ಎಂದಿದ್ದರೆ ಜನರು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ಸಹಕರಿಸಬೇಕು' ಎಂದು ಮನವಿ ಮಾಡಿದ್ದಾರೆ.

ರಾಜ್ಯ ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚುತ್ತಿದೆ. ಈ ಬಗ್ಗೆ ಚರ್ಚಿಸಲು ಅವರು ವಿಧಾನಸೌಧದಲ್ಲಿ ಸೋಮವಾರ ತಜ್ಞರ ಸಭೆ ಕರೆದಿದ್ದಾರೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ಕೋವಿಡ್ ತಾಂತ್ರಿಕ ಸಮಿತಿಯ ಸದಸ್ಯರು ಮತ್ತು ಹಿರಿಯ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಯಡಿಯೂರಪ್ಪ, 'ಸದ್ಯ ಲಾಕ್‌ಡೌನ್ ಚಿಂತನೆ ಇಲ್ಲ. ಜನರು ಮಾಸ್ಕ್ ಹಾಕಬೇಕು, ವೈಯಕ್ತಿಕ ಅಂತರ ಕಾಪಾಡಬೇಕು. ನಿಯಮ ಪಾಲಿಸಿದರೆ ಕೋವಿಡ್ ನಿಯಂತ್ರಿಸಬಹುದು. ಸೋಮವಾರ ನಡೆಯುವ ಸಭೆಯಲ್ಲಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತೇವೆ' ಎಂದರು.

'ರಾಜ್ಯದಲ್ಲಿ ದಿನೇ ದಿನೇ ಕೋವಿಡ್ ಹೆಚ್ಚಾಗುತ್ತಿದೆ. ಲಾಕ್ ಡೌನ್ ಮಾಡದೆ, ಎಲ್ಲ ವ್ಯವಹಾರಗಳು ನಡೆಯಬೇಕೆಂದರೆ ಜನರ ಸಹಕಾರ ಅಗತ್ಯ. ಈಗಾಗಲೇ ಸಾಕಷ್ಟು ನಷ್ಟ (ಲಾಕ್‌ಡೌನ್‌ನಿಂದ) ಅನುಭವಿಸಿದ್ದೇವೆ. ಇನ್ನು ಮುಂದೆ ಮದುವೆ ಸಮಾರಂಭಗಳಿಗೆ ಇಂತಿಷ್ಟೇ ಜನರು ಇರಬೇಕು ಎಂದು ನಿಗದಿ ಮಾಡುತ್ತೇವೆ. ಮಹಾರಾಷ್ಟ್ರದಲ್ಲೂ ಕೋವಿಡ್ ಹೆಚ್ಚುತ್ತಿದೆ. ಹೀಗಾಗಿ ಗಡಿಗಳಲ್ಲಿಯೂ ಬಿಗಿ ಕ್ರಮ ಕೈಗೊಳ್ಳುವ ಬಗ್ಗೆ ನಿರ್ಧರಿಸುತ್ತೇವೆ. ಲಾಕ್ ಡೌನ್ ಮಾಡಲು ಅವಕಾಶ ಕೊಡದಂತೆ ಕ್ರಮ ಕೈಗೊಳ್ಳುತ್ತೇವೆ' ಎಂದೂ ಅವರು ಹೇಳಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, 'ಹೆಚ್ಚುತ್ತಿರುವ ಕೊರೊನಾ ಕಾರಣಕ್ಕೆ ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಜಾರಿ ಬಗ್ಗೆ ಈವರೆಗೆ ಯಾವುದೇ ಚರ್ಚೆ ಆಗಿಲ್ಲ. ಮುಖ್ಯಮಂತ್ರಿ ಕರೆದಿರುವ ಸಭೆಯಲ್ಲಿ ಯಾವ ವಿಷಯ ಚರ್ಚೆ ಆಗುತ್ತೋ ನೋಡೋಣ' ಎಂದರು.

25 ಸಾವಿರಕ್ಕೂ ಹೆಚ್ಚು ಪ್ರಕರಣ

ನವದೆಹಲಿ: ದೇಶದಲ್ಲಿ ಭಾನುವಾರ ಒಂದೇ ದಿನದಲ್ಲಿ 25,320 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ.

ಇದು ಕಳೆದ 84 ದಿನಗಳಲ್ಲೇ ದಾಖಲಾದ ಗರಿಷ್ಠ ಪ್ರಕರಣಗಳಾಗಿವೆ. ಮಹಾರಾಷ್ಟ್ರದಲ್ಲೇ 15,602 ಮತ್ತು ಕೇರಳದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪ್ರಕರಣಗಳು ದೃಢಪಟ್ಟಿವೆ. 5

ಸಿ.ಡಿ. ಪ್ರಕರಣ: ಯುವತಿ ಪತ್ತೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ.ಯಲ್ಲಿರುವ ಯುವತಿಯನ್ನು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಹೊರ ರಾಜ್ಯದಲ್ಲಿ ಪತ್ತೆ ಹಚ್ಚಿದ್ದು, ಅವರನ್ನು ಬೆಂಗಳೂರಿಗೆ ಕರೆತರುತ್ತಿರುವುದಾಗಿ ಗೊತ್ತಾಗಿದೆ.

ಪ್ರಕರಣ ಸಂಬಂಧ ವಿಚಾರಣೆ ಚುರುಕುಗೊಳಿಸಿರುವ ಎಸ್‌ಐಟಿ ತಂಡ, ಶಿಕ್ಷಕಿ ಹಾಗೂ ವರದಿಗಾರರು ಸೇರಿ 10 ಮಂದಿಯ ವಿಚಾರಣೆಯನ್ನು ಈಗಾಗಲೇ ನಡೆಸಿದೆ. ಹಲವರ ಮನೆ ಹಾಗೂ ಕಚೇರಿಯಲ್ಲೂ ಪರಿಶೀಲನೆ ನಡೆಸಿ ಕಂಪ್ಯೂಟರ್ ಸೇರಿ ಹಲವು ವಸ್ತುಗಳನ್ನು ಜಪ್ತಿ ಮಾಡಿದೆ.

ವಿಚಾರಣೆಯಲ್ಲಿ ಸಿಕ್ಕ ಮಾಹಿತಿ ಆಧರಿಸಿ ತನಿಖೆ ಮುಂದುವರಿಸಿರುವ ತಂಡ, ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಇತರರ ಪತ್ತೆಗೆ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಗೋವಾದಲ್ಲಿ ಶೋಧ ನಡೆಸುತ್ತಿದೆ.

ಶನಿವಾರವಷ್ಟೇ ವಿಡಿಯೊ ಹರಿಬಿಟ್ಟಿದ್ದ ಯುವತಿ, ಹೈದರಾಬಾದ್‌ನಲ್ಲಿರುವ ಮಾಹಿತಿ ಎಸ್‌ಐಟಿ ತಂಡಕ್ಕೆ ಸಿಕ್ಕಿತ್ತು. ಮಹಿಳಾ ಇನ್‌ಸ್ಪೆಕ್ಟರ್ ನೇತೃತ್ವದ ತಂಡವೊಂದು ಹೈದರಾಬಾದ್‌ಗೆ ಹೋಗಿ ಯುವತಿಯನ್ನು ಪತ್ತೆ ಮಾಡಿರುವುದಾಗಿ ಗೊತ್ತಾಗಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿರುವ ಎಸ್‌ಐಟಿ ತಂಡದ ಮುಖ್ಯಸ್ಥ ಸೌಮೆಂದು ಮುಖರ್ಜಿ, 'ಐಎಸ್‌ಟಿ ತನಿಖೆ ನಡೆಸುತ್ತಿದೆ. ಪ್ರಕರಣದ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ನೀಡಲಾಗದು' ಎಂದರು.

ಮಡಿವಾಳದಲ್ಲಿ ವಿಚಾರಣೆ: 'ಸಿ.ಡಿ ಬಿಡುಗಡೆ ನಂತರ ಯುವತಿ, ಹೈದರಾಬಾದ್‌ಗೆ ಹೋಗಿ ಮನೆಯೊಂದರಲ್ಲಿ ಉಳಿದುಕೊಂಡಿದ್ದರು. ಯುವತಿ ಹಾಗೂ ಇಬ್ಬರು ಯುವಕರು ಎಸ್‌ಐಟಿಗೆ ಸಿಕ್ಕಿದ್ದಾರೆ. ಮೂವರನ್ನೂ ಮಡಿವಾಳದಲ್ಲಿರುವ ವಿಶೇಷ ವಿಚಾರಣಾ ಕೊಠಡಿಗೆ ಕರೆತರಲಾಗುತ್ತಿದೆ. ಮುಂಜಾಗ್ರತಾ ಕ್ರಮವಾಗಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

ಇನ್ನಷ್ಟು ಸುದ್ದಿಗಳು 4

ಯುವತಿಗೆ ಪೊಲೀಸ್ ನೋಟಿಸ್

ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ನೀಡಿದ್ದ ದೂರಿನ ವಿಚಾರಣೆ ನಡೆಸುತ್ತಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ಪ್ರಕರಣದ ಸಂಬಂಧ ಹೇಳಿಕೆ ನೀಡುವಂತೆ ಯುವತಿಗೆ ನೋಟಿಸ್ ನೀಡಿದ್ದಾರೆ. ಇ-ಮೇಲ್ ಮೂಲಕ ನೋಟಿಸ್ ಪ್ರತಿ ರವಾನಿಸಿದ್ದಾರೆ. ಜೊತೆಗೆ, ಸಿಬ್ಬಂದಿಯೊಬ್ಬರು ವಿಜಯಪುರ ಜಿಲ್ಲೆಯಲ್ಲಿರುವ ಅವರ ಅಜ್ಜಿಯ ಮನೆ ಬಾಗಿಲಿಗೂ ನೋಟಿಸ್ ಪ್ರತಿ ಅಂಟಿಸಿ ಬಂದಿದ್ದಾರೆ.

'ದೂರು ಹಿಂಪಡೆಯುವ ಬಗ್ಗೆ ದಿನೇಶ್ ಪತ್ರ ಬರೆದಿದ್ದರು. ಅದಕ್ಕೆ ಅವಕಾಶವಿಲ್ಲ. ತನಿಖೆ ಮುಂದುವರಿಸಲಾಗಿದೆ. ಯುವತಿಯೇ ವಿಡಿಯೊ ಬಿಡುಗಡೆ ಮಾಡಿದ್ದಾರೆ. ಹೀಗಾಗಿ, ಹೇಳಿಕೆ ನೀಡಲು ಕೋರಿ ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಪ್ರಕರಣದಲ್ಲಿ ನಿಮ್ಮ ಹೇಳಿಕೆ ಅತ್ಯಗತ್ಯವಾಗಿದೆ. ನೋಟಿಸ್ ತಲುಪಿದ ಕೂಡಲೇ ಕಬ್ಬನ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಅವರನ್ನು ಮೊಬೈಲ್ ನಂಬರ್ ಅಥವಾ ಇ-ಮೇಲ್ ಮೂಲಕ ಸಂಪರ್ಕಿಸಿ. ತಾವು (ಯುವತಿ) ನಿಗದಿಪಡಿಸಿದ ದಿನಾಂಕ, ಸಮಯ, ಸ್ಥಳಕ್ಕೆ ಬಂದು ಹೇಳಿಕೆ ಪಡೆಯಲಾಗುವುದು. ತಮ್ಮ ಮನವಿಯಂತೆ ಸೂಕ್ತ ರಕ್ಷಣೆಯನ್ನೂ ಒದಗಿಸಲಾಗುವುದು' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಎಸ್‌ಐಟಿ ಅಧಿಕಾರಿಗಳು ಬಾಗಲಕೋಟೆ ಜಿಲ್ಲೆಯ ಗ್ರಾಮವೊಂದರಲ್ಲಿ ಯುವತಿಯ ತಂದೆಯ ಕುಟುಂಬದವರ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ.

ಸಚಿನ್ ವಾಜೆ ಬಂಧನ: 25ರವರೆಗೆ ಎನ್ಐಎ ವಶಕ್ಕೆ

ಮುಂಬೈ: ಉದ್ಯಮಿ ಮುಕೇಶ್ ಅಂಬಾನಿ ಅವರ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ರಾತ್ರಿ ಬಂಧಿತರಾಗಿದ್ದ ಮುಂಬೈ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಮಾರ್ಚ್ 25ರವರೆಗೆ ಎನ್ಐಎ ವಶಕ್ಕೆ ಒಪ್ಪಿಸಲಾಗಿದೆ. ಸ್ಥಳೀಯ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ದಕ್ಷಿಣ ಮುಂಬೈನ ನ್ಯಾಯಾಲಯದಲ್ಲಿ ವಾಜೆ ಅವರನ್ನು ಹಾಜರುಪಡಿಸಲಾಯಿತು. 11

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–7

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

'ಜೆಡಿಎಸ್ ಜತೆ ಮೈತ್ರಿಯೇ ಇಲ್ಲ' 4

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕರಡು ನಿಯಮ ಪ್ರಕಟಿಸಿದ ನಗರಾಭಿವೃದ್ಧಿ ಇಲಾಖೆ

ಕಟ್ಟಡ ನಕ್ಷೆ: ಶುಲ್ಕ ಇಳಿಕೆಗೆ ಪ್ರಸ್ತಾವ

ಬೆಂಗಳೂರು: ರಾಜ್ಯದ ನಗರ ಪ್ರದೇಶಗಳಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ಶುಲ್ಕವನ್ನು ಇಳಿಕೆ ಮಾಡಲು ಮುಂದಾಗಿರುವ ನಗರಾಭಿವೃದ್ಧಿ ಇಲಾಖೆ, ಈ ಸಂಬಂಧ ಮಾರ್ಚ್ 10ರಂದು ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ.

ದರ ನಿಗದಿಗೆ ಹಿಂದಿನ ಪದ್ಧತಿಯನ್ನು ಕೈಬಿಡಲು ನಿರ್ಧರಿಸಿರುವ ಇಲಾಖೆ, ಆಯಾ ಯೋಜನಾ ಪ್ರದೇಶಗಳಲ್ಲಿನ ಜನಸಂಖ್ಯೆಯ ಆಧಾರದಲ್ಲಿ ಪರಿಷ್ಕೃತ ದರ ನಿಗದಿ ಮಾಡಿದೆ. ಆಯಾ ಕಟ್ಟಡದ ಮಾರ್ಗಸೂಚಿ ದರದ ಒಟ್ಟು ಮೌಲ್ಯದ ಶೇಕಡ 0.1ರಿಂದ ಶೇ 0.5ರವರೆಗೆ ಶುಲ್ಕ ವಿಧಿಸುವ ಪ್ರಸ್ತಾವವನ್ನು ಈ ಅಧಿಸೂಚನೆಯಲ್ಲಿ ಪ್ರಕಟಿಸಿದೆ.

1993ರಿಂದಲೂ ಕಟ್ಟಡದ ಪ್ರತಿ ಚದರ ಅಡಿಗೆ ₹ 20 ರ ಕನಿಷ್ಠ ದರದ ಆಧಾರದಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ಶುಲ್ಕ ವಿಧಿಸುವ ನಿಯಮ ಜಾರಿಯಲ್ಲಿತ್ತು. ಅದನ್ನು ಪರಿಷ್ಕರಿಸಿ 2020ರ ಫೆಬ್ರುವರಿ 25ರಿಂದ ಪೂರ್ವಾನ್ವಯವಾಗುವಂತೆ ಸೆಪ್ಟೆಂಬರ್‌ನಲ್ಲಿ ಆದೇಶ ಹೊರಡಿಸಲಾಗಿತ್ತು.

ನಕ್ಷೆ ಮಂಜೂರಾತಿ ಶುಲ್ಕದ ಒಟ್ಟು ಮೊತ್ತದ ಶೇ 8ರಷ್ಟು ಅಭಿವೃದ್ಧಿ ಶುಲ್ಕ ಪಾವತಿಯನ್ನೂ ಕಡ್ಡಾಯಗೊಳಿಸಲಾಗಿತ್ತು. ಕಟ್ಟಡದ ಮೊದಲ ಅಂತಸ್ತಿನ ನಕ್ಷೆ ಮಂಜೂರಾತಿಗೆ ವಸತಿ ಕಟ್ಟಡಗಳಿಗೆ ಸ್ಥಿರಾಸ್ತಿ ಮಾರ್ಗಸೂಚಿ ದರದ ಶೇ 0.5, ಕೈಗಾರಿಕಾ ಕಟ್ಟಡಗಳಿಗೆ ಶೇ 1, ವಾಣಿಜ್ಯ ಕಟ್ಟಡಗಳಿಗೆ ಶೇ 1.5 ಮತ್ತು ಇತರ ಸ್ವರೂಪದ ಕಟ್ಟಡಗಳಿಗೆ ಶೇ 0.5ರಷ್ಟು ಶುಲ್ಕ ವಿಧಿಸಲು ಆದೇಶ ಹೊರಡಿಸಲಾಗಿತ್ತು.

6ನೇ ಪುಟ ನೋಡಿ

ದಕ್ಷಿಣ ಭಾರತದಲ್ಲೇ ಮೊದಲ ಬಾರಿಗೆ ಶಿರಸಿ ತಾಲ್ಲೂಕಿನಲ್ಲಿ ಯೋಜನೆ ಜಾರಿ

ನೀರಿನ ಬುಗ್ಗೆಗಳ ಪುನಶ್ಚೇತನ

• ಗಣಪತಿ ಹೆಗಡೆ

ಶಿರಸಿ: ಸ್ವಾಭಾವಿಕ ನೀರಿನ ಬುಗ್ಗೆಗಳಿಗೆ ಪುನಶ್ಚೇತನ ನೀಡಿ ವರ್ಷಪೂರ್ತಿ ನೀರು ಹರಿಯುವಂತೆ ಮಾಡಲು ನಬಾರ್ಡ್ ದಕ್ಷಿಣ ಭಾರತದಲ್ಲೇ ಮೊದಲ ಪ್ರಾಯೋಗಿಕ ಯೋಜನೆಯನ್ನು ಶಿರಸಿ ತಾಲ್ಲೂಕಿನ ಹುಲೇಕಲ್, ದೇವನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕೈಗೊಂಡಿದೆ.

ಹುಲೇಕಲ್, ನೆಕ್ಷೆ, ಕೋಡಿಗಾರ, ಬಕ್ಕಳ, ಹಾರೇಹುಲೇಕಲ್, ಸರಗೊಪ್ಪ, ದೇವನಳ್ಳಿಯಲ್ಲಿ ಸ್ವಾಭಾವಿಕ ನೀರಿನ ಬುಗ್ಗೆಗಳನ್ನು ಗುರುತಿಸಿದ್ದು, ಅವುಗಳಿಗೆ ಆಧಾರವಾಗಿರುವ ದೊಡ್ಡ ಪ್ರಮಾಣದ ನೀರಿನ ಮೂಲದಲ್ಲಿ ನೀರಿನ ಪ್ರಮಾಣ ಹೆಚ್ಚಿಸಲಾಗುತ್ತದೆ. ಇದರ ಸುತ್ತಲಿನ 481 ಹೆಕ್ಟೇರ್ ಪ್ರದೇಶದಲ್ಲಿ ಪೂರಕ ಚಟುವಟಿಕೆ ನಡೆಸಲು ನಿರ್ಧರಿಸಲಾಗಿದೆ.

ಭಾರತೀಯ ಅಗ್ರೋ ರಿಸರ್ಚ್ ಫೌಂಡೇಷನ್ (ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ) ಸಹಯೋಗದಲ್ಲಿ ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ ಬುಗ್ಗೆಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ನಬಾರ್ಡ್ ಹೊಂದಿದೆ.

'ಈಚಿನ ವರ್ಷಗಳಲ್ಲಿ ಮಳೆ ಕಡಿಮೆಯಾಗಿದ್ದು, ನೀರಿನ ಬಳಕೆ ಪ್ರಮಾಣ ಅಧಿಕವಾಗಿದೆ. ಹೀಗಾಗಿ, ಸ್ವಾಭಾವಿಕ ಜಲಮೂಲಗಳು ಫೆಬ್ರುವರಿ ವೇಳೆಗೆ ಬರಿದಾಗುತ್ತಿವೆ. ಅದನ್ನು ವರ್ಷ ಪೂರ್ತಿ ಹರಿಯುವಂತೆ ಮಾಡಲು ಅಗತ್ಯ ರೂಪುರೇಷೆ ಸಿದ್ಧಪಡಿಸಲಾಗಿದೆ' ಎನ್ನುತ್ತಾರೆ ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಜಿಲ್ಲಾ ಘಟಕದ ಸಂಯೋಜಕ ಎಂ.ಎನ್.ಹೆಗಡೆ.

ಹುಲೇಕಲ್ ಗ್ರಾಮದಲ್ಲಿ ನೀರಿನ ಬುಗ್ಗೆ ಪುನಶ್ಚೇತನಗೊಳಿಸುವ ಯೋಜನೆಗೆ ಚಾಲನೆ ನೀಡಲಾಯಿತು

'ಬುಗ್ಗೆಗಳ ನೀರಿನ ಮೂಲವನ್ನು ಭೂಗರ್ಭ ಶಾಸ್ತ್ರಜ್ಞರು ಪತ್ತೆ ಹಚ್ಚುತ್ತಾರೆ. ಬಳಿಕ ಅದರ ಸುತ್ತಲಿನ ಪ್ರದೇಶದಲ್ಲಿ ನೀರು ಇಂಗಿಸಲು ಇಂಗುಗುಂಡಿ ನಿರ್ಮಾಣವಾಗಲಿದೆ. ನೀರು ಇಂಗಿಸಬಲ್ಲ ಗಿಡಗಳನ್ನು ನೆಡಲಾಗುವುದು, ಸಣ್ಣ ಚೆಕ್‌ಡ್ಯಾಂಗಳನ್ನು ನಿರ್ಮಿಸಲಾಗುತ್ತದೆ' ಎಂದು ವಿವರಿಸಿದರು.

'ಸಿಕ್ಕಿಂ ರಾಜ್ಯದಲ್ಲಿ ಮಾತ್ರ ಈ ಮಾದರಿಯ ಯೋಜನೆ ಕೈಗೊಳ್ಳಲಾಗಿತ್ತು. ಕೇರಳ, ಚಿಕ್ಕಮಗಳೂರಿನ ಕೊಪ್ಪ ಗ್ರಾಮದಲ್ಲೂ ಪ್ರಾಯೋಗಿಕ ಯೋಜನೆ ಅನುಷ್ಠಾನಕ್ಕೆ ಚಿಂತನೆ ನಡೆದಿದೆ. ಆದರೆ, ಮೊದಲಿಗೆ ಹುಲೇಕಲ್‌ನಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ' ಎಂದು ನಬಾರ್ಡ್ ಜಿಲ್ಲಾ ವ್ಯವಸ್ಥಾಪಕ ರೇಜಿಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಯೋಜನೆಗೆ ತಗಲುವ ವೆಚ್ಚದಲ್ಲಿ ಶೇ.84ರಷ್ಟು ನಬಾರ್ಡ್ ಭರಿಸುತ್ತದೆ. ಉಳಿದ ಶೇ 16ರಷ್ಟನ್ನು ಸ್ಥಳೀಯರಿಂದ ಮಾನವ ಶ್ರಮ ಅಥವಾ ವಂತಿಗೆ ರೂಪದಲ್ಲಿ ಸಂಗ್ರಹಿಸಲಾಗುತ್ತದೆ' ಎಂದು ಹೇಳಿದರು.

ಜಲಾನಯನ ಅಭಿವೃದ್ಧಿಗೆ ನಬಾರ್ಡ್ ಕೈಗೆತ್ತಿಕೊಳ್ಳುತ್ತಿರುವ ಯೋಜನೆಗಳಲ್ಲಿ ಬುಗ್ಗೆಗಳ ಅಭಿವೃದ್ಧಿಯೂ ಒಂದಾಗಿದ್ದು, ಹಿಂದಿನ ಯೋಜನೆಗಳಿಗಿಂತ ಭಿನ್ನವಾಗಿದೆ

ರೇಜಿಸ್, ನಬಾರ್ಡ್ ಜಿಲ್ಲಾ ವ್ಯವಸ್ಥಾಪಕ

ಕಲ್ಯಾಣಿ ಹೂಳೆತ್ತುವಿಕೆ ಯಶಸ್ಸು

'ನಬಾರ್ಡ್ ಜಲಮೂಲಗಳ ಅಭಿವೃದ್ಧಿಪಡಿಸುವ ಯೋಜನೆಗೂ ಮೊದಲು ಆಯಾ ಗ್ರಾಮಗಳಲ್ಲಿ ಅದಕ್ಕೆ ಪೂರಕವಾದ ಪ್ರಾಯೋಗಿಕ ಅಧ್ಯಯನ ನಡೆಸುತ್ತದೆ. 2019ರಲ್ಲಿ ಬತ್ತಿಹೋಗಿದ್ದ ಹುಲೇಕಲ್ ಗ್ರಾಮದ ಕಲ್ಯಾಣಿಯೊಂದರ ಹೂಳೆತ್ತುವ ಪ್ರಯೋಗ ನಡೆಸಲಾಗಿತ್ತು. ಅದು ಯಶಸ್ವಿಯಾಗಿ ಈಗ ಕಲ್ಯಾಣಿಯಲ್ಲಿ ನೀರು ಭರ್ತಿಯಾಗಿದೆ. ಹೀಗಾಗಿ, ಬುಗ್ಗೆಗಳ ಅಭಿವೃದ್ಧಿಗೆ ಈ ಭಾಗದಲ್ಲಿ ಅವಕಾಶವಿದೆ ಎಂಬುದನ್ನು ಮನಗಂಡಿದ್ದೇವೆ' ಎಂದು ನಬಾರ್ಡ್ ತಾಂತ್ರಿಕ ವಿಭಾಗದ ಅಧಿಕಾರಿ ಚೌಡಾ ರೆಡ್ಡಿ ತಿಳಿಸಿದರು.

ಮೊತ್ತಮೊದಲು ಲೈಫ್ ಇನ್‌ಶ್ಯೂರೆನ್ಸ್

ಆಕರ್ಷಕ ಲಾಭಗಳೊಂದಿಗೆ ಜೀವನ ಸುರಕ್ಷೆ

ಎಲ್‌ಐಸಿಯ ಜೀವನ ಲಾಭ
ಸೀಮಿತ ಪ್ರೀಮಿಯಂ ಎಂಡೋಮೆಂಟ್ ಪ್ಲಾನ್

ಪಾಲಿಸಿ ಅವಧಿ	ಪ್ರೀಮಿಯಂ ಸಂದಾಯ ಅವಧಿ
16	10
21	15
25	16

Plan No.: 936 UIN No.: 512N304V02

- ಕನಿಷ್ಠ ವಿಮಾ ಮೊತ್ತ : ₹200,000/-.
- ಗರಿಷ್ಠ ವಿಮಾ ಮೊತ್ತ : ಯಾವ ಮಿತಿಯೂ ಇಲ್ಲ
- ಪ್ರವೇಶದಲ್ಲಿ ಕನಿಷ್ಠ ವಯಸ್ಸು : 8 ವರ್ಷಗಳು
- ಪ್ರವೇಶದಲ್ಲಿ ಗರಿಷ್ಠ ವಯಸ್ಸು : 25/21/16 ವರ್ಷಗಳ ಪಾಲಿಸಿಗಾಗಿ 50/54/59 ವರ್ಷಗಳು

ನಿಮ್ಮ ಏಜೆಂಟರನ್ನು /ಶಾಖೆಯನ್ನು ಸಂಪರ್ಕಿಸಿರಿ ಅಥವಾ ನಮ್ಮ ವೆಬ್‌ಸೈಟ್ www.licindia.inಗೆ ಲಾಗ್ ಆನ್ ಮಾಡಿ ಅಥವಾ ನಿಮ್ಮ ಊರ ಹೆಸರನ್ನು 56767474ಕ್ಕೆ SMS ಮಾಡಿ

Follow us : YouTube LIC India Forever

IRDAI Regn No.: 512

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೋಲಿಸರಲ್ಲಿ ದೂರು ನೀಡಬೇಕಾಗಿ ವಿನಂತಿ.

LIC
ಭಾರತೀಯ ಜೀವ ವಿಮಾ ನಿಗಮ
LIFE INSURANCE CORPORATION OF INDIA

LIC/AR/19-20/31/KAN

ಆಪತ್ತಿನ ಅಂಶಗಳು, ನಿಬಂಧನೆಗಳು ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಲು, ದಯವಿಟ್ಟು ಮಾರಾಟ ಪೂರ್ಣಗೊಳಿಸುವ ಮೊದಲು ಮಾರಾಟ ಪುಸ್ತಿಕೆಯನ್ನು ತಪ್ಪದೇ ಓದಿಕೊಳ್ಳಿ.

ಜೀವನದೊಂದಿಗೂ, ಜೀವನದ ನಂತರವೂ.

‘ರಂಗ ಸಂಭ್ರಮ’ ನಾಟಕೋತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ವಿವೇಕಾನಂದ ಕಲಾ ಕೇಂದ್ರ ನಗರದಲ್ಲಿ ಹಮ್ಮಿಕೊಂಡಿದ್ದ 9 ದಿನಗಳ ‘ರಂಗ ಸಂಭ್ರಮ’ ನಾಟಕೋತ್ಸವವು ಸಂಪನ್ನಗೊಂಡಿದ್ದು, ಇದರಲ್ಲಿ 400ಕ್ಕೂ ಅಧಿಕ ಯುವ ಕಲಾವಿದರು ಭಾಗವಹಿಸಿದ್ದರು.

ಪ್ರತಿಭಾವಂತ ಯುವ ಕಲಾವಿದರು ಹಾಗೂ ನಿರ್ದೇಶಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕೇಂದ್ರವು ನಾಟಕೋತ್ಸವವನ್ನು ಹಮ್ಮಿಕೊಂಡಿತ್ತು. ಯುವ ನಿರ್ದೇಶಕರಾದ ಮಾಲತೇಶ ಬಡಿಗೇರ, ಎನ್.ಸಿ. ಮಹೇಶ್, ಗುರುಪ್ರಸಾದ್ ಕೆ., ರಾಮಕೃಷ್ಣ ಬೆಳತೂರು, ಎಂ. ಪ್ರಹ್ಲಾದ್, ಅನುರಾಗ್ ಮೈಸೂರು, ಎಸ್.ವಿ. ಕಶ್ಯಪ್ ಹಾಗೂ ಸಿದ್ಧರಾಮ ಕೊಪ್ಪರ ನಿರ್ದೇಶನದಲ್ಲಿ ವಿವಿಧ ತಂಡಗಳು ನಾಟಕ ಪ್ರದರ್ಶನ ನೀಡಿದವು.

‘ಶತಮರ್ಕಟ’ ನಾಟಕದ ದೃಶ್ಯ

‘ಚಿತ್ರಪಟ’, ‘ಬೀ.ಚಿ. ರಸಾಯನ’, ‘ಶೋಕಚಕ್ರ’, ‘ಸಾಲುಮರಗಳ ತಾಯಿ ತಿಮ್ಮಕ್ಕ’, ‘ಟೊಳ್ಳುಗಟ್ಟಿ’, ‘ಅವಾಂತರದ ಅಳಿಯ’, ‘ಶತಮರ್ಕಟ’, ‘ಇಂದೂರಿನ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್’ ಸೇರಿದಂತೆ ವಿವಿಧ ನಾಟಕಗಳು ಪ್ರದರ್ಶನ ಕಂಡವು.

ಯಡಿಯೂರು ವಾರ್ಡ್‌ನಲ್ಲಿ ನಾಲ್ಕು ವರ್ಷಗಳಲ್ಲಿ ನಡೆದಿರುವ ಬೆಳವಣಿಗೆ

ಒಬ್ಬ ಗುತ್ತಿಗೆದಾರನಿಗೆ 60 ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ ನಿರ್ವಹಣೆಯಿಂದ ಹಿಡಿದು ಕಟ್ಟಡ ನಿರ್ಮಾಣದವರೆಗೆ, ರಸ್ತೆ ಕಾಂಕ್ರೀಟೀಕರಣದಿಂದ ಹಿಡಿದು ಚರಂಡಿ ಅಭಿವೃದ್ಧಿಯವರೆಗೆ, ವಾರ್ಡ್ ನಿರ್ವಹಣೆಗೆ ಗ್ಯಾಂಗ್‌ಮನ್‌ಗಳನ್ನು ಒದಗಿಸುವುದರಿಂದ ಹಿಡಿದು ಕುಡಿಯುವ ನೀರು ಪೂರೈಸುವುದರ ವರೆಗೆ ಒಂದೇ ವಾರ್ಡ್‌ನಲ್ಲಿ 60ಕ್ಕೂ ಅಧಿಕ ಕಾಮಗಾರಿಗಳ ಗುತ್ತಿಗೆ ಒಬ್ಬನೇ ಗುತ್ತಿಗೆದಾರನಿಗೆ ಸಿಗಲು ಸಾಧ್ಯವೇ?

ರಾಜಕೀಯ ಕೃಪಾಕಟಾಕ್ಷ, ಅಧಿಕಾರಿಗಳ ಸಹಕಾರ ಇದ್ದರೆ ಇದು ಕೂಡಾ ಸಾಧ್ಯ. ಇದಕ್ಕೆ ತಾಜಾ ಉದಾಹರಣೆ ಬೇಕಿದ್ದರೆ ಯಡಿಯೂರು ವಾರ್ಡ್‌ನಲ್ಲಿ 2017–18ರ ನಂತರ ನಡೆದಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳ ಬಗ್ಗೆ ಸರ್ಕಾರದ ಇಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಕಣ್ಣಾಡಿಸಿದರೆ ಸಾಕು. ಈ ವಾರ್ಡ್‌ನಲ್ಲಿ 2017–18ರಿಂದ ಇದುವರೆಗೆ ಸತೀಶ್ ಆರ್. ಎಂಬ ಒಬ್ಬನೇ ಗುತ್ತಿಗೆದಾರನಿಗೆ ಬರೋಬ್ಬರಿ 60ಕ್ಕೂ ಅಧಿಕ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ. ಅಚ್ಚರಿಯೆಂದರೆ 2015–16ನೇ ಸಾಲಿನವರೆಗೆ ಅವರು ಯಾವುದೇ ಗುತ್ತಿಗೆ ನಿರ್ವಹಿಸಿಲ್ಲ.

2016ರ ಏಪ್ರಿಲ್‌ನಲ್ಲಿ ಯಡಿಯೂರು ವಾರ್ಡ್‌ನ ಶಾಸ್ತ್ರಿನಗರ 1ನೇ ಮುಖ್ಯರಸ್ತೆಯಲ್ಲಿ ಕಾಬಲ್ ಸ್ಟೋನ್ ಅಳವಡಿಸುವ ಕಾಮಗಾರಿಯಿಂದ ಹಿಡಿದು 2021ರ ಫೆಬ್ರುವರಿಯಲ್ಲಿ ವಾರ್ಡ್‌ನ ನಿರ್ವಹಣೆಗೆ ಗ್ಯಾಂಗ್‌ಮನ್‌ಗಳನ್ನು ಪೂರೈಸುವುದರವರೆಗೆ ಒಟ್ಟು 64 ಕಾಮಗಾರಿಗಳ ಟೆಂಡರ್‌ಗಳಲ್ಲಿ ಸತೀಶ್ ಆರ್.ಅವರು ಅತಿ ಕಡಿಮೆ ಮೊತ್ತ ನಮೂದಿಸಿದ ಗುತ್ತಿಗೆದಾರರಾಗಿ (ಎಲ್–1) ಆಗಿ ಹೊರಹೊಮ್ಮಿದ್ದು, ಅಷ್ಟೂ ಕಾಮಗಾರಿಗಳು ಅವರ ಪಾಲಾಗಿವೆ. ಕಾಕತಾಳೀಯವೆಂದರೆ ಅವರು ಭಾಗವಹಿಸಿದ ಈ ವಾರ್ಡ್‌ನ ಟೆಂಡರ್ ಪ್ರಕ್ರಿಯೆಗಳಲ್ಲೆಲ್ಲ ಗುತ್ತಿಗೆ ಅವರಿಗೇ ಸಿಗುತ್ತವೆ.

2017ರಲ್ಲಿ ಸತೀಶ್ ಅವರು ಯಡಿಯೂರು ವಾರ್ಡ್ ಒಂದರಲ್ಲೇ 9 ಕಾಮಗಾರಿಗಳನ್ನು ಗುತ್ತಿಗೆ ಪಡೆಯುತ್ತಾರೆ. ಅವುಗಳಲ್ಲೆಲ್ಲ ಮಂಜುನಾಥ ಎಸ್. ಎಂಬ ಇನ್ನೊಬ್ಬ ಗುತ್ತಿಗೆದಾರರು ಎಲ್–2 ಆಗಿರುವುದು ಇನ್ನೊಂದು ಕಾಕತಾಳೀಯ. 2018ರ ಆ 13ರಂದು ಒಂದೇ ದಿನ ಈ ವಾರ್ಡ್‌ನ ಆರು ಕಾಮಗಾರಿಗಳ ಗುತ್ತಿಗೆಯನ್ನು ಸತೀಶ್ ಆರ್. ಅವರಿಗೆ ನೀಡಲಾಗುತ್ತದೆ. ಅಷ್ಟೂ ಕಾಮಗಾರಿಗಳಲ್ಲಿ ಎಲ್–2 ಆಗಿದ್ದುದು ಎಚ್.ಎಚ್.ನಂದಿನಿ (ಇಂಪನ ಕನ್‌ಸ್ಟ್ರಕ್ಷನ್ಸ್) ಎಂಬುವರು ಎಲ್–2 ಆಗಿದ್ದುದು ಇನ್ನೊಂದು ಕಾಕತಾಳೀಯ. ಅದೇ ದಿನ ಟೆಂಡರ್ ಆದೇಶವಾದ ಇನ್ನೊಂದು ಕಾಮಗಾರಿಯ ಟೆಂಡರ್‌ನಲ್ಲಿ ಸತೀಶ್ ಆರ್. ಅವರ ಜೊತೆ ಭಾಗವಹಿಸಿದ ಇಂಪನಾ ಕನ್‌ಸ್ಟ್ರಕ್ಷನ್ಸ್ ಸಂಸ್ಥೆ ಇಎಂಡಿ ಮೊತ್ತ ನೀಡಿದ್ದರೂ ಅಧಿಕಾರಿಗಳು ಅದನ್ನು ಪರಿಶೀಲನೆ ನಡೆಸುವುದಿಲ್ಲ. ಅನುಮೋದನೆಗೆ ಸಲ್ಲಿಕೆಯಾಗುವ ಟಿಪ್ಪಣಿ ಹಾಳೆಯಲ್ಲಿ ಟೆಂಡರ್‌ನಲ್ಲಿ ಸತೀಶ್ ಅವರು ಒಬ್ಬರೇ ಭಾಗವಹಿಸಿದ್ದಾರೆ ಎಂದು ನಮೂದಿಸುತ್ತಾರೆ.

2018ರ ಜುಲೈ ನಂತರ ಈ ವಾರ್ಡ್‌ನಲ್ಲಿ ಒಟ್ಟು 36 ಕಾಮಗಾರಿಗಳ ಗುತ್ತಿಗೆ ಸತೀಶ್ ಆರ್. ಅವರಿಗೇ ಸಿಕ್ಕಿದೆ. ಇವುಗಳಲ್ಲಿ 33 ಟೆಂಡರ್‌ಗಳಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದಾರೆ. 32 ಟೆಂಡರ್‌ಗಳಲ್ಲಿ ಸತೀಶ್ ಅವರ ಜೊತೆ ಮೋಹನ್ ಕುಮಾರ್ ನಂಜಪ್ಪ ಬೆಂಗಳೂರು ಎಂಬ ಇನ್ನೊಬ್ಬ ಗುತ್ತಿಗೆದಾರರ ಹಾಗೂ ಇನ್ನೊಂದರಲ್ಲಿ ಸತೀಶ್ ಎಸ್ ಎಲ್–2 ಆಗಿದ್ದಾರೆ. ಇನ್ನುಳಿದ ಮೂರು ಕಾಮಗಾರಿಗಳ ಟೆಂಡರ್‌ಗಳಲ್ಲಿ ಮೂವರು ಗುತ್ತಿಗೆದಾರರು ಭಾಗವಹಿಸಿದ್ದರು.

ಸತೀಶ್ ಆರ್. ಅವರಿಗೆ ಸಿಕ್ಕಿದ ಈ 64 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ಬಹುತೇಕವುಗಳಲ್ಲಿ ಶಿಫಾರಸು ಮಾಡಿದ ಎಂಜಿನಿಯರ್ ಒಬ್ಬರೇ. ಸಹಾಯಕ ಎಂಜಿನಿಯರ್ ಆಗಿರುವ ಅವರಿಗೆ ಕಡಿಮೆ ಅವಧಿಯಲ್ಲಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಕಾರ್ಯಪಾಲಕ ಎಂಜಿನಿಯರ್ ಪ್ರಭಾರ ಹೊಣೆಯನ್ನೂ ನೀಡಲಾಗಿದೆ.

‘ಒಬ್ಬ ಗುತ್ತಿಗೆದಾರ ಆರ್ಥಿಕ ಅರ್ಹತೆ ಹೊಂದಿದ್ದರೆ ಎಷ್ಟು ಕಾಮಗಾರಿಗಳಲ್ಲೂ ಭಾಗವಹಿಸಬಹುದು. ಟೆಂಡರ್‌ನಲ್ಲಿರುವ ಕಾಮಗಾರಿಯದ್ದೇ ಮಾದರಿಯ ಬೇರೆ ಕೆಲಸಗಳನ್ನು ಮಾಡಿರುವ ಅನುಭವ ಆತನಿಗೆ ಇರಬೇಕಾಗುತ್ತದೆ. ಆದರೆ, ಒಂದೇ ವಾರ್ಡ್‌ನಲ್ಲಿ ಇಷ್ಟೊಂದು ಪ್ರಮಾಣದ ಕಾಮಗಾರಿಯನ್ನು ಒಬ್ಬನೇ ಗುತ್ತಿಗೆದಾರನಿಗೆ ನೀಡಿರುವುದು ಹಾಗೂ ಬಹುತೇಕ ಟೆಂಡರ್‌ಗಳಲ್ಲಿ ಎಲ್–2 ಆಗಿರುವ ಗುತ್ತಿಗೆದಾರರೂ ಅವರೇ ಇರುವುದು ಸಹಜವಾಗಿಯೇ ಅನುಮಾನ ಮೂಡಿಸುತ್ತದೆ. ಟೆಂಡರ್ ಕರೆದು ಕಾಮಗಾರಿ ನೀಡುವ ಪ್ರಮುಖ ಉದ್ದೇಶವೇ, ಅರ್ಹತೆ ಹೊಂದಿರುವ ಯಾವುದೇ ಗುತ್ತಿಗೆದಾರರು ಬೇಕಾದರೂ ಬಿಡ್‌ಗಳಲ್ಲಿ ಭಾಗವಹಿಸಲು ಮುಕ್ತ ಅವಕಾಶ ಸಿಗಬೇಕು ಎಂಬುದು. ಅಧಿಕಾರಿಗಳು, ರಾಜಕಾರಣಿಗಳು ಶಾಮೀಲಾಗಿ ತಮಗೆ ಬೇಕಾದವರಿಗೆ ಕಾಮಗಾರಿಯ ಗುತ್ತಿಗೆ ಸಿಗುವಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಆಟವಾಡುವ ಪರಿಪಾಠ ಈ ಆಶಯವನ್ನೇ ಮೂಲೆಗುಂಪು ಮಾಡಿ ಬಿಡುತ್ತದೆ’ ಎಂದು ಬಿಬಿಎಂಪಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳ ಒಳಹೊರಗನ್ನು ಚೆನ್ನಾಗಿ ಬಲ್ಲ ಎಂಜಿನಿಯರ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಅನುದಾನ ಅನ್ಯ ಉದ್ದೇಶಕ್ಕೆ ಬಳಕೆ?

ಕಸ ನಿರ್ವಹಣೆಗೆ ಕಾಮಗಾರಿ ಸಂಖ್ಯೆ (ಜಾಬ್ ಕೋಡ್) ಪಡೆದು ಸಿವಿಲ್ ಕಾಮಗಾರಿ ನಡೆಸುವ ಮೂಲಕ ಅನುದಾನ ದುರುಪಯೋಗಪಡಿಸಿಕೊಂಡಿರುವ ಅನುಮಾನವೂ ವ್ಯಕ್ತವಾಗಿದೆ (ಇಂಡೆಂಟ್ ಸಂಖ್ಯೆ: BBMP/ 2020-21/OW/ Work_INDENT42913/CALL -3).

‘ವಾರ್ಡ್ ಹಂತದ ಕಸ ನಿರ್ವಹಣೆ ಕಾಮಗಾರಿಗಳಲ್ಲಿ ಕಾಂಕ್ರೀಟ್ ಕಟ್ಟಡ ನಿರ್ಮಿಸಬೇಕಾಗಿ ಬರುವ ಪ್ರಮೇಯಗಳು ಕಡಿಮೆ. ವಾರ್ಡ್ ಹಂತದಲ್ಲಿ ಕಸ ನಿರ್ವಹಣೆಯ ಟೆಂಡರ್‌ನಲ್ಲಿ ನಿರ್ಮಾಣಕ್ಕೆ ಸಂಬಂಧಿಸಿದ ಅಂಶಗಳಿದ್ದಾಗ ಮುಖ್ಯ ಎಂಜಿನಿಯರ್‌ಗಳು ಪರಿಶೀಲಿಸದೆಯೇ ಹೇಗೆ ಅನುಮೋದನೆ ನೀಡುತ್ತಾರೋ ತಿಳಿಯದು. ಕಸ ನಿರ್ವಹಣೆಯ ಅನುದಾನವನ್ನು ಸಿವಿಲ್ ಕಾಮಗಾರಿಗೆ ಬಳಸಲು ಅವಕಾಶ ಇಲ್ಲ. ಇಂತಹ ಪ್ರಕರಣಗಳಲ್ಲಿ ಕಸ ನಿರ್ವಹಣೆ ಮೊತ್ತವನ್ನು ಡಿ.ಸಿ.ಬಿಲ್ ಮೂಲಕ ಸಾದಿಲ್ವಾರು ವೆಚ್ಚದ ಅನುದಾನದಲ್ಲೂ ಬಳಸಿಕೊಳ್ಳುವ ಮೂಲಕ ಅಕ್ರಮ ನಡೆಸಲಾಗುತ್ತದೆ. ವಾರ್ಡ್ ಹಂತದಲ್ಲಿ ರಾಜಕೀಯ ಬೆಂಬಲ ಇಲ್ಲದೇ ಕೇವಲ ಅಧಿಕಾರಿಗಳು ಈ ರೀತಿ ಅಕ್ರಮ ನಡೆಸಲು ಸಾಧ್ಯವಿಲ್ಲ’ ಎಂದು ಎಂಜಿನಿಯರ್ ಒಬ್ಬರು ವಿವರಿಸಿದರು.

ಕ್ಲಾಸಿಫೈಡ್ಸ್ CONNECT

ರೀಚಾರ್ಜ್ ಮಾಡಬಹುದಾದ ಶ್ರವಣ ಸಾಧನ
ಆಳವಾದ ಶ್ರವಣದೋಷ ಇರುವವರಿಗಾಗಿ
Motion Charge&Go SP X
Premium care is Applicable only on
Signia 3x, 5x, 7x Hearing Aids*
LOST COVER | WATER / LIQUID DAMAGE COVER | THEFT COVER | FIRE COVER
Up to 61hrs runtime*
ಉಚಿತ ಶ್ರವಣದೋಷ ತಪಾಸಣೆ | ಹೊಸ ಶ್ರವಣ ಸಾಧನಗಳ ಉಚಿತ ಪ್ರಯೋಗ | ಅತ್ಯಾಕರ್ಷ ಕೊಡುಗೆಗಳು ಅಪ್‌ಗ್ರೇಡ್‌ನಲ್ಲಿ | 1 ವರ್ಷ ಬ್ಯಾಟರಿ ಉಚಿತವಾಗಿ ಪಡೆಯಿರಿ | 4 ವರ್ಷ ಖಾತರಿ* | EMI ಸುಲಭ ಮತ್ತು ಮತ್ತು ಕಡಿಮೆ ವೆಚ್ಚದ ಇಎಂಐ
*Conditions Apply

aanvii HEARING Hear • Connect • Live
ಆನ್ವಿ ಹಿಯರಿಂಗ್ ಸೊಲ್ಯೂಷನ್ಸ್ ಪ್ರೈ. ಲಿ.
ದೇಶದ ಅತ್ಯುತ್ತಮ ಸೌಂಡ್ ಸೆಂಟರ್‌ಗಳ ಬೃಹತ್ ಸರಣಿ
a BestSound Center | Privileged Partner | signia
Centers Located at Mumbai, Chennai, Ahmedabad, Nagpur & Pune

ಗಂಗಾನಗರ	HSR ಲೇ ಔಟ್	ಇಂದಿರಾನಗರ	ಜಯನಗರ	ಕೋರಮಂಗಲ	ಕೆ.ಆರ್.ಪುರಂ	ಮಾರತಹಳ್ಳಿ	ಜೆ. ಪಿ. ನಗರ
86187 25510	7892893052	9886114400	7892893052	98861 14400	7411474042	7411474042	7892893052
ನ್ಯೂ ಬಿಇಎಲ್ ರೋಡ್	ನಾಗರಭಾವಿ	ರಾಜರಾಜೇಶ್ವರಿನಗರ	ಸಹಕಾರನಗರ	ವಿಜಯನಗರ	ವೈಟ್‌ಫೀಲ್ಡ್	ಯಲಹಂಕ	ಮಂಗಳೂರು
63620 92500	9886114368	94810 40991	98450 38374	94810 40991	7411474042	98450 38374	84312 24391

aanviihearing.com

SVR GROUP OF INSTITUTIONS
SVR College of Commerce & Management Studies
Affiliated to Bangalore University & Approved by AICTE & MHRD, New Delhi
H.S.R. Layout, 2nd Sector, Bangalore - 102. | www.svrinstitutions.com | Ph. +91 97397 17000
1st RANK M.Com
Hearty Congratulations
2nd RANK MBA
for securing 1st & 2nd Rank in M.Com & MBA, Bangalore University Batch (2018 - 2020)
Deepashree M
Reg. No.: 18ZFCOM006
Thanushree H D
Reg. No.: 18ZFCMD048
- The Management, Principal & Faculty

ಸ್ಥಳೀಯ ನಿವಾಸಿಗಳು ಮಡಿವಾಳ ಕೆರೆಯ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು

ಕೆರೆ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದ ಸ್ಥಳೀಯರು

‘ಬಿಬಿಎಂಪಿ ಬೇಜವಾಬ್ದಾರಿಯಿಂದ ಮಡಿವಾಳ ಕೆರೆಗೆ ದುಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯ ಬೇಜವಾಬ್ದಾರಿಯಿಂದ ಮಡಿವಾಳ ಕೆರೆ ತ್ಯಾಜ್ಯಗಳಿಂದ ಆವರಿಸಿಕೊಂಡು ದುಸ್ಥಿತಿಗೆ ತಲುಪಿದೆ. ಪರಿಸರ ಚಿಂತಕರು ಹಾಗೂ ತಜ್ಞರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ, ಇದನ್ನು ಮಾದರಿ ಕೆರೆಯನ್ನಾಗಿ ಪರಿವರ್ತಿಸಲು ಕಾರ್ಯಯೋಜನೆ ರೂಪಿಸಲಾಗುವುದು’ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಸ್ವಚ್ಛ ಭಾರತ ಅಭಿಯಾನದ ಭಾಗವಾಗಿ ರೈನ್ ಬೋ ಮಕ್ಕಳ ಆಸ್ಪತ್ರೆಯ ಸಹಭಾಗಿತ್ವದಲ್ಲಿ ಮಡಿವಾಳ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು ತೇಜಸ್ವಿ ಸೂರ್ಯ ನೇತೃತ್ವದಲ್ಲಿ ಭಾನುವಾರ ಮಡಿವಾಳ ಕೆರೆಯ ಸುತ್ತಮುತ್ತ ಸ್ವಚ್ಛತಾ ಕಾರ್ಯ ನಡೆಸಿತು.

‘ನಗರದ ಶೇ 90ರಷ್ಟು ಸಮಸ್ಯೆಗಳಿಗೆ ಮೂಲ ಕಾರಣವೇ ಬಿಬಿಎಂಪಿ. ಅದರ ಕೆಲಸ ಕಾರ್ಯಗಳಲ್ಲಿ ಪಾರದರ್ಶಕತೆ ಮತ್ತು ಬದ್ಧತೆಯಿಲ್ಲ. ಮಡಿವಾಳ ಕೆರೆಯನ್ನು ಅರಣ್ಯ ಇಲಾಖೆಯಿಂದ ಪಾಲಿಕೆಗೆ ಹಸ್ತಾಂತರಿಸಿದ ಬಳಿಕ ನಿರ್ವಹಣೆ ಕೊರತೆಯಿಂದ ಸೊರಗಿದೆ. ಈ ಬಗ್ಗೆ ಸ್ಥಳೀಯರು ಹಲವಾರು ಬಾರಿ ಪಾಲಿಕೆಗೆ ದೂರು ನೀಡಿದರೂ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ಈ ಕೆರೆಯ ಕೆಲಸವು ನನ್ನ ವ್ಯಾಪ್ತಿಗೆ ಬರದಿದ್ದರೂ ಆದ್ಯತೆಯಾಗಿ ತೆಗೆದುಕೊಂಡು, ಕೆರೆ ಸಂರಕ್ಷಣೆಗೆ ಕೈ ಜೋಡಿಸುತ್ತೇನೆ. ಖುದ್ದಾಗಿ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ, ಈ ಕೆರೆಯ ನಿರ್ವಹಣೆಯನ್ನ ಮತ್ತೆ ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ಮನವಿ ಮಾಡಿಕೊಳ್ಳಲಾಗುವುದು’ ಎಂದು ತೇಜಸ್ವಿ ಸೂರ್ಯ ಹೇಳಿದರು.

ಸ್ಥಳೀಯ ನಿವಾಸಿ ಹಾಗೂ ರೈನ್ ಬೋ ಮಕ್ಕಳ ಆಸ್ಪತ್ರೆಯ ಸ್ತ್ರೀ ರೋಗ ತಜ್ಞೆ ಡಾ. ಸುಮನ್ ಸಿಂಗ್ ಮಾತನಾಡಿ, ‘ಕೆರೆಯ ಪ್ರದೇಶಕ್ಕೆ ವಾಯು ವಿಹಾರಕ್ಕೆ ಪ್ರತಿನಿತ್ಯ ಬರುತ್ತೇವೆ. ಆದರೆ, ಇತ್ತೀಚಿನ ದಿನಗಳಲ್ಲಿ ಇಲ್ಲಿನ ವಾತಾವರಣ ಆರೋಗ್ಯಪೂಣವಾಗಿಲ್ಲ. ಎಲ್ಲೆಂದರಲ್ಲಿ ಕಸ ಹಾಕಲಾಗಿದೆ. ಬಿಬಿಎಂಪಿ ಕಿಂಚಿತ್ತೂ ನಿರ್ವಹಣೆ ಮಾಡಿಲ್ಲ. ಹೀಗಾಗಿ, ಕೂಡಲೇ ಸುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ, ವಾಯುವಿಹಾರಿಗಳಿಗೆ ಮತ್ತು ಪರಿಸರ ಪ್ರೇಮಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕು’ ಎಂದು ಆಗ್ರಹಿಸಿದರು.

ಇದಕ್ಕೂ ಮೊದಲು ಮಡಿವಾಳ ಭಾಗದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು, ‘ಮಡಿವಾಳ ಕೆರೆಯನ್ನು ಜೀವವೈವಿಧ್ಯ ಉದ್ಯಾನವನ್ನಾಗಿ ಮಾಡಬೇಕು. ಅದೇ ರೀತಿ, ಕೆರೆಯ ಸುತ್ತಮುತ್ತಲಿನ ಪ್ರದೇಶವನ್ನು ಪಕ್ಷಿಧಾಮವನ್ನಾಗಿ ಪರಿವರ್ತಿಸಿ, ಕೆರೆಯ ನಿರ್ವಹಣೆಯನ್ನು ಬಿಬಿಎಂಪಿಯಿಂದ ಅರಣ್ಯ ಇಲಾಖೆಯ ವ್ಯಾಪ್ತಿಗೆ ಹಸ್ತಾಂತರಿಸಲು ಕ್ರಮಕೈಗೊಳ್ಳಬೇಕು’ ಎಂದು ಸಂಸದರಿಗೆ ಮನವಿ ಸಲ್ಲಿಸಿದರು.

‘ಬೆಳಗಾವಿ ವಿಚಾರದಲ್ಲಿ ಪ್ರಧಾನಿ ಮಧ್ಯಸ್ಥಿಕೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಗಡಿ ವಿವಾದದ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಯಾರ ಮಧ್ಯಸ್ಥಿಕೆಯೂ ಬೇಡ ಎಂದು ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

‘ಬೆಳಗಾವಿ ವಿಚಾರದಲ್ಲಿ ಪ್ರಧಾನಿ ಮಧ್ಯಸ್ಥಿಕೆ ವಹಿಸಬೇಕು’ ಎಂಬ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರ ಹೇಳಿಕೆ ವಿರೋಧಿಸಿ ಭಾನುವಾರ ಸರಣಿ ಟ್ವೀಟ್ ಮಾಡಿರುವ ಕುಮಾರಸ್ವಾಮಿ, ‘ಪ್ರಧಾನಿ ಮಧ್ಯಸ್ಥಿಕೆ ವಹಿಸಿದರೆ ಬಿಜೆಪಿ ಮಹಾರಾಷ್ಟ್ರ ಘಟಕವು ಅವರ ಮೇಲೆ ಪ್ರಭಾವ ಬೀರದೇ ಇರುವುದೆ? ಮೋದಿ ಅವರು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ವಹಿಸಿದರೆ ರಾಜ್ಯದ ಬಿಜೆಪಿಯವರು ಮುಖಂಡರು ಒಪ್ಪುವರೆ’ ಎಂದು ಪ್ರಶ್ನಿಸಿದ್ದಾರೆ.



ಕುಮಾರಸ್ವಾಮಿ

ಪದೇ ಪದೇ ಗಡಿ ಮತ್ತು ಭಾಷಾ ವಿವಾದ ಕೆಣಕುತ್ತಿರುವ ಶಿವಸೇನೆಯ ನಡೆ ಖಂಡನೀಯ. ಸರ್ಕಾರದ ವಿರುದ್ಧ ಜನರಿಗೆ ಇರುವ ಅಸಮಾಧಾನ ಮರೆಮಾಚಲು ಶಿವಸೇನೆ ಕೆಣಕುವ ಕೆಲಸ ಮಾಡುತ್ತಿದೆ. ಬೆಳಗಾವಿಯಲ್ಲಿ ಕನ್ನಡ ಧ್ವಜ ಹಾರಿಸುವುದನ್ನು ಪ್ರಶ್ನಿಸುವ ಯಾವುದೇ ಹಕ್ಕು ಶಿವಸೇನೆಗೆ ಇಲ್ಲ ಎಂದು ಹೇಳಿದ್ದಾರೆ.

ಬೆಳಗಾವಿಯ ವಿಚಾರದಲ್ಲಿ ಮಹಾಜನ ವರದಿಯೇ ಅಂತಿಮ. ಈ ವರದಿಯನ್ನು ಪ್ರಶ್ನಿಸಿರುವ ಕಾನೂನು ಹೋರಾಟದಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ ಹಿನ್ನಡೆಯಾಗಲಿದೆ. ಅಲ್ಲಿಯವರೆಗೂ ನೆರೆಯ ರಾಜ್ಯವು ವಿಸ್ತರಣಾವಾದದ ಮಾತುಗಳನ್ನು ನಿಲ್ಲಿಸುವುದು ಒಳಿತು ಎಂದು ಸಲಹೆ ನೀಡಿದ್ದಾರೆ.

ಆರೆಸ್ಸೆಸ್ ಅಖಿಲ ಭಾರತೀಯ ಪ್ರತಿನಿಧಿ ಸಭೆ ಇದೇ 19ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರೆಸ್ಸೆಸ್) ನೀತಿ ನಿರ್ಧಾರಗಳನ್ನು ನಿರೂಪಿಸುವ ಮಹತ್ವದ ವಾರ್ಷಿಕ ಅಧಿವೇಶನ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ ಮಾಗಡಿ ಮುಖ್ಯ ರಸ್ತೆಯ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಇದೇ 19 ಮತ್ತು 20ರಂದು ನಡೆಯಲಿದೆ. ರಾಜ್ಯದಲ್ಲಿ ನಡೆಯುತ್ತಿರುವ ಎಂಟನೇ ಪ್ರತಿನಿಧಿ ಸಭೆಯಿದು.

ಆರೆಸ್ಸೆಸ್‌ನ ಸರಸಂಘಚಾಲಕರಾದ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹರಾದ ಸುರೇಶ್ (ಭಯ್ಯಾಜೀ) ಜೋಷಿಯವರು ಈ ಸಭೆಯ ಕಲಾಪಗಳನ್ನು ನಡೆಸಲಿದ್ದಾರೆ. ಅಧಿವೇಶನದಲ್ಲಿ ಆರೆಸ್ಸೆಸ್ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ 35ಕ್ಕೂ ಹೆಚ್ಚು ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

‘ಆರೆಸ್ಸೆಸ್ ಹಾಗೂ ವಿವಿಧ ಸಂಘಟನೆಗಳ ವಾರ್ಷಿಕ ವರದಿ, ಸಂಘಟನೆಯ ವಿಸ್ತಾರ, ಹೊಸ ಆಯಾಮಗಳು, ಕಾರ್ಯಕ್ರಮಗಳು, ಮುಂಬರುವ ವರ್ಷದ ಯೋಜನೆ ಇತ್ಯಾದಿ ವಿಷಯಗಳು ಸಭೆಯಲ್ಲಿ ಚರ್ಚೆಗೆ ಬರಲಿದೆ. ರಾಷ್ಟ್ರೀಯ ಮಹತ್ವದ ಕೆಲವು ವಿಷಯಗಳ ಕುರಿತು ಕೂಡಾ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗುತ್ತದೆ’ ಎಂದು ಆರೆಸ್ಸೆಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business to Business

Finance

“URGENT LOAN Avail. @ 3.5% p.a Personal, Business, Project, Takeover all types loan in just 5 days OM FINANCE LTD. Call/ WhatsApp:: 8826494700.”

JOB OPPORTUNITIES

Wanted

WANTED LADIES house worker with family we provide house for living. Contact Shashidhar: 9886092877.

PERSONAL

Change of Name

I, AKKAMAHADEVI D/o Madivalayya, R/at #337/B, Marenahalikere, Jayanagar 9thBlock, Bangalore-560069, Have Changed My Name to Madhvi.M., Vide Affidavit dated 13/03/2021, before Notary Devikakumari.A.,

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

ANGEL ACAADEMY®
6 DAYS TRAINING THE TRAINERS COURSE
(Become a certified Money Coach)
CASH WISDOM™
(24 April, 2021 to 29 April, 2021)
This metaphysically & spiritually guided & licensed training supports you to :
1. Understand the pre requisites & philosophical background of how Cash Wisdom works.
2. Explore the worldly wise principles of cash radiation & transmutation for today's life.
3. Experience prosperity transformation at the cellular & molecular level for mind body soul balancing.
4. Dissolve debilitating past life & ancestral patterns of debt, loss & bankruptcy affecting you or your beloved ones.
5. Create & adapt your own personal money blueprint for your children, their future & lineage.
6. Practice & share your money journey with students & clients through workshops, coaching & retreats.
7. Begin immediately with a tool kit containing the start up manual, course material, sound therapy tracks, workshop skill sets & more.
Early Bird Offers & Registrations : Kalyaan Kumar Jain 09320010301
angelacaademy@gmail.com • angelacaademy.com

REAL ESTATE SELLING

Commercial Land

Out-Station

GOA INDUSTRIAL Area 1000 meter plot 260 meter builtup area. Ideal for Pharma also. Contact: 9620938350/ 9844243147.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATIONAL

Distance Education

DEGREE/ DIPLOMA LOGISTICS and Supply Chain, Airport Ground Staff, Airport Management, Automobile Production and Servicing,Textile Technology,Telecom,Hotel Management,Hospital Management,Montessori, NTTC Call: 9778261645/9745910775

Classifieds
Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

‘ಜುಲೈ– ಆಗಸ್ಟ್‌ನಲ್ಲಿ ಡಿಸಿಇಟಿ: 2021–22ಕ್ಕೆ ಪ್ರವೇಶ’

ಬೆಂಗಳೂರು: ‘2021ರ ಜುಲೈ–ಆಗಸ್ಟ್‌ನಲ್ಲಿ ನಡೆಯುವ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆ (ಡಿಸಿಇಟಿ) 2021-22ನೇ ಸಾಲಿಗೆ ಲ್ಯಾಟರಲ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಅನ್ವಯಿಸಲಿದೆ’ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದ್ದಾರೆ.

ಡಿಸಿಇಟಿ ಬಗ್ಗೆ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, 'ವಿದ್ಯಾರ್ಥಿ ವೇತನಕ್ಕೆ ವೃತ್ತಿಪರ ಕೋರ್ಸ್‌ಗಳಾದ ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ, ನರ್ಸಿಂಗ್, ಪ್ಯಾರಾ ಮೆಡಿಕಲ್, ಫಾರ್ಮಸಿ ಮುಂತಾದ ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ದತ್ತಾಂಶವನ್ನು ಕೆಇಎಯಿಂದ ಪಡೆಯಲಾಗುವುದು’ ಎಂದಿದ್ದಾರೆ.

‘ವಿದ್ಯಾರ್ಥಿಗಳ ನೈಜತೆ, ವಿಶ್ವಾಸ ಯೋಗ್ಯ ಮಾಹಿತಿ ಪ್ರಮಾಣೀಕರಿಸಲು ವಿದ್ಯಾರ್ಥಿಗಳ ದತ್ತಾಂಶವನ್ನು ಅವರು ಅಧ್ಯಯನ ಮಾಡುತ್ತಿರುವ ವಿಶ್ವವಿದ್ಯಾಲಯಗಳು ಮತ್ತು ಇಲಾಖೆಗಳಿಂದ ಪಡೆಯಲಾಗುತ್ತದೆ. 2020-2021ನೆ ಸಾಲಿಗೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಎಸ್‌ಸಿ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತ, ತಾಂತ್ರಿಕ, ವೈದ್ಯಕೀಯ ಶಿಕ್ಷಣ ಸೇರಿದಂತೆ ಎಲ್ಲ ವಿಭಾಗಗಳ ವಿದ್ಯಾರ್ಥಿ ವೇತನಕ್ಕೂ ಅರ್ಜಿ ಸಲ್ಲಿಸಲು ಇದೇ ಜಾಲತಾಣವಾಗಿದ್ದು, ಹೆಚ್ಚಿನ ಮಾಹಿತಿಯನ್ನು ಈ ಜಾಲತಾಣದಿಂದ ಪಡೆಯಬಹುದು’ ಎಂದೂ ತಿಳಿಸಿದ್ದಾರೆ.

‘ವಿದ್ಯಾರ್ಥಿಗಳು ಕಡಿಮೆ ಸಮಯದಲ್ಲಿ, ಹೆಚ್ಚಿನ ದಾಖಲಾತಿ ಒದಗಿಸದೇ ಸುಲಭವಾಗಿ ಅರ್ಜಿ ಸಲ್ಲಿಸಬಹುದು. ಈ ವ್ಯವಸ್ಥೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಅಧ್ಯಯನಕ್ಕಾಗಿ ತುಂಬಿರುವ ಶುಲ್ಕ ರಸೀದಿ ಮಾತ್ರ ಅಪ್‌ಲೋಡ್ ಮಾಡಬೇಕು. ಕೌನ್ಸೆಲಿಂಗ್ ಪ್ರಕ್ರಿಯೆ ಜಾರಿಯಲ್ಲಿರುವುದರಿಂದ ಮುಂದಿನ 10 ದಿನಗಳಲ್ಲಿ ದತ್ತಾಂಶವನ್ನು ಜಾಲತಾಣಕ್ಕೆ ಅಳವಡಿಸಲಾಗುವುದು. ಡಿಸಿಇಟಿ ಮುಖಾಂತರ ಪ್ರವೇಶ ಪಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಭರಿಸುವ ಶುಲ್ಕ ಮರು ಪಾವತಿಗೆ ಸಂಬಂಧಿಸಿದ ವಿಷಯವಾಗಿದ್ದರೆ, ಈ ವಿದ್ಯಾರ್ಥಿಗಳಿಗೆ ಪೂರಕವಾಗಿ ಕ್ರಮ ಕೈಗೊಳ್ಳಲಾಗುವುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ 31ರವರೆಗೆ ಅವಧಿ ವಿಸ್ತರಿಸಲಾಗಿದೆ’ ಎಂದೂ ಅವರು ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಹೊಸ ವಿವಿ ಬದಲು, ಇರುವುದಕ್ಕೆ ಸೌಲಭ್ಯ ಕಲ್ಪಿಸಿ’

ಬೆಂಗಳೂರು: ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಬದಲು ಈಗ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಿ, ಸಿಬ್ಬಂದಿ ನೇಮಕ ಮಾಡಲು ರಾಜ್ಯಸರ್ಕಾರ ಮುಂದಾಗಬೇಕು ಎಂದು ದಿ ಫೋರಂ ಆಫ್ ಫಾರ್ಮರ್ ವೈಸ್ ಚಾನ್ಸಲರ್ಸ್ ಆಫ್ ಕರ್ನಾಟಕ (ಎಫ್‌ವಿಸಿಕೆ) ಸಲಹೆ ನೀಡಿದೆ.

‘ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಾಗಿ ಸರ್ಕಾರ ಘೋಷಿಸಿದೆ. ಆದರೆ, ಈಗಿರುವ ವಿಶ್ವವಿದ್ಯಾಲಯಗಳೇ ಅಗತ್ಯ ಮೂಲಸೌಲಭ್ಯಗಳಿಲ್ಲದೆ, ಸಾಕಷ್ಟು ಅನುದಾನವಿಲ್ಲದೆ ನರಳುತ್ತಿವೆ. ಅವುಗಳ ಸುಧಾರಣೆಗೆ ಮೊದಲು ಕ್ರಮ ತೆಗೆದುಕೊಳ್ಳಬೇಕು’ ಎಂದು ವಿಶ್ರಾಂತ ಕುಲಪತಿಗಳು ಒತ್ತಾಯಿಸಿದ್ದಾರೆ.

‘ಈಗ 32 ರಾಜ್ಯ ವಿಶ್ವವಿದ್ಯಾಲಯಗಳು, 14 ಡೀಮ್ಡ್, 17 ಖಾಸಗಿ ಹಾಗೂ ಒಂದು ಮುಕ್ತ ವಿಶ್ವವಿದ್ಯಾಲಯವಿದೆ. ಇದರ ಜೊತೆಗೆ, ಐಐಎಸ್‌ಸಿ, ನಿಮ್ಹಾನ್ಸ್‌ನಂತಹ ರಾಷ್ಟ್ರೀಯ ಸಂಸ್ಥೆಗಳು ಕೂಡ ವಿಶ್ವವಿದ್ಯಾಲಯಗಳ ಪಾತ್ರವನ್ನು ನಿರ್ವಹಿಸುತ್ತಿವೆ’ ಎಂದು ಎಫ್‌ವಿಸಿಕೆ ಪ್ರಕಟಣೆಯಲ್ಲಿ ಹೇಳಿದೆ.

ಪಿಎಚ್‌.ಡಿ ವಿದ್ಯಾರ್ಥಿಗಳ ಪ್ರತಿಭಟನೆ ಇಂದು

ಬೆಂಗಳೂರು: ‘ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಾವಳಿ ಗಾಳಿಗೆ ತೂರಿ ಪಿಎಚ್‌.ಡಿ ಪ್ರವೇಶ ಪ್ರಕ್ರಿಯೆ ನಡೆಸಲಾಗುತ್ತಿದೆ. ಇದಕ್ಕೆ ವಿಶ್ವವಿದ್ಯಾಲಯದ ಕುಲಪತಿಯವರ ನಿರ್ಲಕ್ಷ್ಯ ಧೋರಣೆಯೇ ಕಾರಣ’ ಎಂದು ಆರೋಪಿಸಿ ಸಂಶೋಧನಾ ವಿದ್ಯಾರ್ಥಿಗಳು ಸೋಮವಾರ (ಮಾ.15) ಪ್ರತಿಭಟನೆ ನಡೆಸಲಿದ್ದಾರೆ.

‘ಯುಜಿಸಿ ನಿಯಮಾವಳಿಗಳ ಪ್ರಕಾರ ಪ್ರತಿ ಪ್ರವೇಶ ಪ್ರಕ್ರಿಯೆಯಲ್ಲಿ ಸಾಮಾನ್ಯ ವರ್ಗಕ್ಕೆ ಶೇ 55, ಹಿಂದುಳಿದ ವರ್ಗಗಳಿಗೆ ಶೇ 50 ಮತ್ತು ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗೆ ಶೇ 45ರಷ್ಟು ಅರ್ಹತಾ ಅಂಕಗಳನ್ನು ನಿಗದಿಪಡಿಸಬೇಕು. ಆದರೆ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಯಾವುದೇ ವಿನಾಯಿತಿ ನೀಡದೆ ಪ್ರವೇಶ ಪ್ರಕ್ರಿಯೆ ನಡೆಸಲಾಗುತ್ತಿದೆ’ ಎಂದು ವಿದ್ಯಾರ್ಥಿಯೊಬ್ಬರು ದೂರಿದರು.

‘ನಿವೃತ್ತಿಗೆ 6 ತಿಂಗಳು ಬಾಕಿ ಇರುವ ಪ್ರಾಧ್ಯಾಪಕರಿಗೆ ಪಿಎಚ್‌.ಡಿ ಮಾರ್ಗದರ್ಶನ ನೀಡಲು ಪ್ರೊ. ಕೆ.ಆರ್. ವೇಣುಗೋಪಾಲ್ ಅವರು ಅವಕಾಶ ನಿರಾಕರಿಸುತ್ತಿದ್ದಾರೆ. ಇದರಿಂದ 80ಕ್ಕೂ ಹೆಚ್ಚು ವಿದ್ಯಾರ್ಥಿಗಳ ಪಿಎಚ್‌.ಡಿ ಕನಸು ಮಣ್ಣುಪಾಲಾಗಿದೆ’ ಎಂದು ಮತ್ತೊಬ್ಬ ವಿದ್ಯಾರ್ಥಿ ಹೇಳಿದರು.

‘11 ಗಂಟೆಯಿಂದ ಪ್ರತಿಭಟನೆ ಪ್ರಾರಂಭಿಸುತ್ತೇವೆ. ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಬಾಗಿಲುಗಳಿಗೆ ಬೀಗ ಹಾಕಲಾಗುವುದು. ಸಾವಿರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದರು.

‘ತುರ್ತು ಪರಿಸ್ಥಿತಿಗಿಂತ ಕರಾಳ ವಾತಾವರಣ’

ಗದಗ: ‘ದೇಶ ಕವಲು ದಾರಿಯಲ್ಲಿದೆ. ಪ್ರಧಾನಿ ಮೋದಿ ಅವರು ರಾಜಕೀಯ ಅಜ್ಞಾನಿ. ದೇಶದಲ್ಲಿ ಇಂದು ತುರ್ತು ಪರಿಸ್ಥಿತಿಗಿಂತ 20 ಪಟ್ಟು ಹೆಚ್ಚಿನ ಕರಾಳ ವಾತಾವರಣವಿದೆ’ ಎಂದು ಸಾಮಾಜಿಕ ಕಾರ್ಯಕರ್ತ ಎಸ್.ಆರ್.ಹಿರೇಮಠ ಹೇಳಿದರು.

ಇಲ್ಲಿನ ಹಾತಲಗೇರಿ ರಸ್ತೆಯ ನಿಸರ್ಗ ಬಡಾವಣೆಯ ಬಸವ ಭವನದಲ್ಲಿ ಖಾಸಗೀಕರಣ ವಿರೋಧಿ ಹೋರಾಟ ವೇದಿಕೆ ಭಾನುವಾರ ಆಯೋಜಿಸಿದ್ದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ.ಟಿ.ಆರ್.ಚಂದ್ರಶೇಖರ ಮಾತನಾಡಿದರು.

'ನ್ಯಾಯಾಂಗ ತನಿಖೆಗೆ ವಹಿಸಬೇಕು'

ಬೆಂಗಳೂರು: 'ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ಸಂತ್ರಸ್ತೆಯ ಹೇಳಿಕೆ ಮತ್ತು ಇತರ ಬೆಳವಣಿಗೆಗಳನ್ನು ಗಮನಿಸಿದಾಗ, ಅಧಿಕಾರ ದುರ್ಬಳಕೆ, ನಂಬಿಕೆ ದ್ರೋಹ, ಅತ್ಯಾಚಾರ, ಜೀವ ಬೆದರಿಕೆ ಸಂಶಯ ಮೂಡುತ್ತಿದೆ' ಎಂದು ಕಾಂಗ್ರೆಸ್ ವಕ್ತಾರ ಸಂಕೇತ ಏಣಗಿ ಹೇಳಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ರಮೇಶ ಜಾರಕಿಹೊಳಿ ಮೇಲೆ ಈವರೆಗೂ ಎಫ್‌ಐಆರ್ ದಾಖಲಾಗಿಲ್ಲ. ಜಾರಕಿಹೊಳಿ ಸಹೋದರರು ನೀಡುತ್ತಿರುವ ಹೇಳಿಕೆಗಳು ಪರೋಕ್ಷವಾಗಿ ಬೆದರಿಕೆ ಹಾಕುವಂತಿದೆ. ಜಾರಕಿಹೊಳಿ ಕಪಿಮುಷ್ಠಿಯಲ್ಲಿ ಸರ್ಕಾರ ಇದ್ದಂತಿದೆ' ಎಂದೂ ಅವರು ದೂರಿದ್ದಾರೆ.

ಸದನದಲ್ಲಿ ವಿರೋಧ ಪಕ್ಷಗಳನ್ನು ಎದುರಿಸುವ ವಿಚಾರ– ಇಂದು ಬಿಎಸ್‌ವೈ ಸಭೆ

ಸಚಿವರ ಒಗ್ಗಟ್ಟಿಗೆ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಮಂಡಲದ ಬಜೆಟ್ ಅಧಿವೇಶನ ಸೋಮವಾರ ಬೆಳಿಗ್ಗೆ ಆರಂಭವಾಗುವುದಕ್ಕೂ ಮೊದಲು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯರಪ್ಪ ಸಂಪುಟ ಸಹೋದ್ಯೋಗಿಗಳ ಜೊತೆ ಅನೌಪಚಾರಿಕ ಸಭೆ ನಡೆಸಲಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಯಡಿಯೂರಪ್ಪ, 'ಸದನದಲ್ಲಿ ಎಲ್ಲರೂ ಒಟ್ಟಾಗಿ ಇರಲು ಮತ್ತು ಜನರ ಸಮಸ್ಯೆಗಳನ್ನು ಆಲಿಸುವ ಕುರಿತು ಸಚಿವರ ಜೊತೆ ಚರ್ಚಿಸಲು ಸಭೆ ಕರೆದಿದ್ದೇನೆ' ಎಂದರು.

'ತಮ್ಮ ವಿರುದ್ಧ ಮಾನಹಾನಿಕರ ಸುದ್ದಿ ಪ್ರಕಟಿಸದಂತೆ ಮಾಧ್ಯಮಗಳ ಮೇಲೆ ನಿರ್ಬಂಧ ವಿಧಿಸುವಂತೆ ಕೋರಿ ಕೋರ್ಟ್ ಮೊರೆ ಹೋಗಿರುವ ಆರು ಸಚಿವರಿಗೆ ಸದನದಲ್ಲಿ ಉತ್ತರಿಸಲು ನೈತಿಕತೆ ಇಲ್ಲ' ಎಂದು, ಆ ಸಚಿವರ ಉತ್ತರವನ್ನು ವಿರೋಧ ಪಕ್ಷ ಕಾಂಗ್ರೆಸ್ ಶಾಸಕರು ಬಹಿಷ್ಕರಿಸಲು ಮುಂದಾಗಿರುವ ಹಿನ್ನೆಲೆಯಲ್ಲಿ ಈ ಸಭೆ ಮಹತ್ವ ಪಡೆದಿದೆ.

ಬಿ.ಎಸ್. ಯಡಿಯೂರಪ್ಪ

ರಮೇಶ್ ಜಾರಕಿಹೊಳಿ ಸಿ.ಡಿ ಪ್ರಕರಣವನ್ನು ಸದನದಲ್ಲಿ ಪ್ರಸ್ತಾಪಿಸಲು ಕಾಂಗ್ರೆಸ್ ನಿರ್ಧರಿಸಿದೆ. ಹೀಗಾಗಿ, ಈ ಸಂದರ್ಭದಲ್ಲಿ ಎಲ್ಲ ಸಚಿವರು ಒಟ್ಟಾಗಿದ್ದು, ಕಾಂಗ್ರೆಸ್ ನಾಯಕರ ವಾಗ್ದಾಳಿ ಎದುರಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸುವ ಬಗ್ಗೆಯೂ ಚರ್ಚೆ ನಡೆಯಲಿದೆ.

ಏನು ಬೇಕಾದರೂ ಪ್ರಸ್ತಾಪ ಮಾಡಲಿ: 'ಅಧಿವೇಶನದಲ್ಲಿ ಅವರು (ಕಾಂಗ್ರೆಸ್‌ನವರು) ಕಾನೂನು ಸುವ್ಯವಸ್ಥೆ, ಸಿ.ಡಿ ವಿಚಾರ ಹೀಗೆ ಏನು ಬೇಕಾದರೂ ಪ್ರಸ್ತಾಪ ಮಾಡಲಿ. ಸರ್ಕಾರದ ಗಮನ ಸೆಳೆಯಲಿ. ಸಚಿವರು ಎಚ್ಚರಿಕೆಯಿಂದ ಕೆಲಸ ಮಾಡಲು ಸಹಕಾರಿ ಆಗುತ್ತದೆ. ಒಳ್ಳೆಯ ಸಲಹೆ ಕೊಟ್ಟರೆ ಖಂಡಿತವಾಗಿ ಸ್ವೀಕರಿಸುತ್ತೇವೆ' ಎಂದು ಯಡಿಯೂರಪ್ಪ ಹೇಳಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಯಡಿಯೂರಪ್ಪ,'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಯಾವುದೇ ವಿಷಯ ಪ್ರಸ್ತಾಪಿಸಲು ಸರ್ವಸ್ವತಂತ್ರರು' ಎಂದರು.

ಸಮರ್ಥನೆಗೂ ಮುಂದಾಗಬೇಕು

ಸರ್ಕಾರದ ಮೇಲೆ ಯಾವುದೇ ವಿಷಯದ ಬಗ್ಗೆ ವಿರೋಧ ಪಕ್ಷಗಳು ಟೀಕಾ ಪ್ರಹಾರ ನಡೆಸಿದಾಗ ಸಮರ್ಥನೆಗೆ ಸಚಿವರು ಮುಂದಾಗಬೇಕು. ಯಾರೋ ಒಬ್ಬರು ಅಥವಾ ಇಬ್ಬರು ಸಮರ್ಥನೆಗೆ ನಿಂತು ಉಳಿದವರು ಮೌನವಾಗಿ ಕೂರುವುದು ಸರಿಯಲ್ಲ ಎಂದೂ ಯಡಿಯೂರಪ್ಪ ಸಭೆಯಲ್ಲಿ ತಿಳಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಸ್ಸಂಜೆಯಲಿ... ಬಿಸಿಲಿನ ಧಗೆಗೆ ಮರಗಳ ಎಲೆಗಳೆಲ್ಲ ಉದುರುತ್ತಿವೆ. ಕೆಲ ಮರಗಳು ಮತ್ತೆ ಹಸಿರು ಹೊದ್ದು ನಿಂತಿವೆ. ನಗರದಲ್ಲಿ ಭಾನುವಾರ ಸೂರ್ಯಾಸ್ತದ ವೇಳೆ ನೇಸರನ ಬೆಳಕಲ್ಲಿ ಮರವೊಂದು ಕ್ಯಾಮೆರಾ ಕಣ್ಣಿಗೆ ಕಂಡಿದ್ದು ಹೀಗೆ–ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಕೊಲೆ ಆರೋಪಿ ಫಿನಾಯಿಲ್ ಸೇವನೆ; ಆಸ್ಪತ್ರೆಯಲ್ಲಿ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ಕನಕಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಫಿನಾಯಿಲ್ ಕುಡಿದು ಆಸ್ಪತ್ರೆಗೆ ದಾಖಲಾಗಿದ್ದ ಕೊಲೆ ಆರೋಪಿ ಸೀಗೆಕೋಟೆ ವೀರಭದ್ರಾಚಾರಿ (50) ಚಿಕಿತ್ಸೆಗೆ ಸ್ಪಂದಿಸದೇ ಭಾನುವಾರ ಮೃತಪಟ್ಟಿದ್ದಾರೆ.

ವೀರಭದ್ರಾಚಾರಿ

ಈ ಪ್ರಕರಣ ಸಂಬಂಧ ಕನಕಪುರ ಗ್ರಾಮೀಣ ಠಾಣೆಯ ಮೂವರು ಪೊಲೀಸ್ ಸಿಬ್ಬಂದಿಯನ್ನು ಸೇವೆಯಿಂದ ಅಮಾನತುಗೊಳಿಸಲಾಗಿದ್ದು, ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ.

ಏನಿದು ಪ್ರಕರಣ?: ಈಚೆಗೆ ಕನಕಪುರ ತಾಲ್ಲೂಕಿನ ಹಳ್ಳಿಮಾರನಹಳ್ಳಿ ಜೆಡಿಎಸ್ ಮುಖಂಡ ನಾಗರಾಜು ಕೊಲೆಯಾಗಿತ್ತು. ಹತ್ಯೆಗೀಡಾದ ವ್ಯಕ್ತಿ ಜೊತೆ ವೀರಭದ್ರಾಚಾರಿ ಹಣಕಾಸು ವ್ಯವಹಾರ ಹೊಂದಿದ್ದು, ವೈಷಮ್ಯದಿಂದ ಹತ್ಯೆ ಮಾಡಿರಬಹುದು ಎಂದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿತ್ತು.

ಮೂರು ದಿನಗಳ ಹಿಂದೆ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ಯಲಾಗಿತ್ತು. ಆಗ ಆರೋಪಿ ಠಾಣೆಯಲ್ಲೇ ಫಿನಾಯಿಲ್ ಕುಡಿದ ಕಾರಣ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. 'ವೀರಭದ್ರಾಚಾರಿ ಅವರ ಸಾವಿಗೆ ಪೊಲಿಸರೇ ಕಾರಣ' ಎಂದು ಅವರ ಸಂಬಂಧಿಕರು ದೂರಿದ್ದಾರೆ.

ಸಿಐಡಿ ತನಿಖೆ: 'ಈ ಸಂಬಂಧ ಕರ್ತವ್ಯ ಲೋಪದ ಆರೋಪದ ಮೇಲೆ ಕನಕಪುರ ಗ್ರಾಮೀಣ ಠಾಣೆ ಸಬ್ ಇನ್‌ಸ್ಪೆಕ್ಟರ್, ಸಹಾಯಕ ಸಬ್ ಇನ್‌ಸ್ಪೆಕ್ಟರ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಗಂಭೀರ ಸ್ವರೂಪದ ಪ್ರಕರಣ ಆದ್ದರಿಂದ ಸಿಐಡಿ ತನಿಖೆಗೆ ವಹಿಸಲಾಗಿದೆ' ಎಂದು ರಾಮನಗರ ಎಸ್ಪಿ ಗಿರೀಶ್ ಮಾಹಿತಿ ನೀಡಿದ್ದಾರೆ.

ಅಪರಾಧ ಸುದ್ದಿ

ಬಿಬಿಎ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ಮೋಕ್ಷಗ್ನ ರೆಡ್ಡಿ (20) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಆಂಧ್ರಪ್ರದೇಶದ ಮೋಕ್ಷಗ್ನ ರೆಡ್ಡಿ, ನಗರದ ಕಾಲೇಜೊಂದರಲ್ಲಿ ಬಿಬಿಎ ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಲಾಕ್‌ಡೌನ್‌ನಿಂದ ಬಂದ್ ಆಗಿದ್ದ ಕಾಲೇಜು, 20 ದಿನಗಳ ಹಿಂದಷ್ಟೇ ಆರಂಭವಾಗಿತ್ತು. ತರಗತಿಗೆ ಹಾಜರಾಗುತ್ತಿದ್ದ ಮೋಕ್ಷಗ್ನ, ಕಾಲೇಜು ವಿದ್ಯಾರ್ಥಿನಿಲಯದ ಕೊಠಡಿ ಒಬ್ಬರೇ ಉಳಿದುಕೊಂಡಿದ್ದರು. ಮೂರು ದಿನಗಳಿಂದ ಕೊಠಡಿಯಿಂದ ಹೊರಗೆ ಬಂದಿರಲಿಲ್ಲ.'

'ಕೊಠಡಿಯಿಂದ ಭಾನುವಾರ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡ ವಿದ್ಯಾರ್ಥಿ ನಿಲಯದ ಸಿಬ್ಬಂದಿ, ಠಾಣೆಗೆ ಮಾಹಿತಿ ನೀಡಿದ್ದರು. ಕೊಠಡಿ ಬಾಗಿಲು ತೆರೆದು ನೋಡಿದಾಗ ಕೊಳೆತ ಸ್ಥಿತಿಯಲ್ಲಿ ಮೃತದೇಹ ಕಂಡಿತು' ಎಂದೂ ಪೊಲೀಸರು ತಿಳಿಸಿದರು. 'ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ. ಕೊಠಡಿಯಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ' ಎಂದೂ ಹೇಳಿದರು.

ಮಂತ್ರಾಲಯದ ಹೊರ ವಲಯದಲ್ಲಿರುವ ಏಕಶಿಲಾ ಅಭಯ ಆಂಜನೇಯ ಸ್ವಾಮಿ ಮೂರ್ತಿ

ಏಕಶಿಲಾ ಆಂಜನೇಯ ದೇವಸ್ಥಾನ ಉದ್ಘಾಟನೆ

ರಾಯಚೂರು: ರಾಘವೇಂದ್ರ ಸ್ವಾಮಿ ಗುರುವೈಭವೋತ್ಸವದಪ್ರಯುಕ್ತಮಂತ್ರಾಲಯದ ಹೊರವಲಯದಲ್ಲಿ ನಿರ್ಮಿಸಲಾಗಿರುವ 31 ಅಡಿ ಎತ್ತರದ ಏಕಶಿಲಾ ಅಭಯ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಭಾನುವಾರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಉದ್ಘಾಟಿಸಿದರು.

ಮಠದಲ್ಲಿ ಏಳು ದಿನ ಗುರುವೈಭವೋತ್ಸವ ಹಾಗೂ ಸಪ್ತರಾತ್ರೋತ್ಸವ ಕಾರ್ಯಕ್ರಮ ಜರುಗಲಿದೆ.

'ಯೂಟ್ಯೂಬ್' ನೋಡಿ ಕಳವು; ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಸೋಗಿನಲ್ಲಿ ಆಭರಣ ಮಳಿಗೆಗಳಿಗೆ ಹೋಗಿ ಕಳವು ಮಾಡುತ್ತಿದ್ದ ಆರೋಪದಡಿ ವಿ. ಸಂತೋಷ್‌ಕುಮಾರ್ (23) ಎಂಬುವವರನ್ನು ಮಲ್ಲೇಶ್ವರ ಪೊಲೀಸರು ಬಂಧಿಸಿದ್ದಾರೆ.

'ಮಾಗಡಿ ರಸ್ತೆಯ ಕೆಂಪಾಪುರ ಅಗ್ರಹಾರ ನಿವಾಸಿ ಸಂತೋಷ್, ಫೈನಾನ್ಸ್ ಸರ್ವೀಸ್ ಹಾಗೂ ಇನ್‌ವೆಸ್ಟ್‌ಮೆಂಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರಿಂದ ₹ 4.76 ಲಕ್ಷ ಮೌಲ್ಯದ 92 ಗ್ರಾಂ ಚಿನ್ನಾಭರಣ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಳಿಗೆಗಳಲ್ಲಿ ಚಿನ್ನಾಭರಣ ಕದಿಯುವುದು ಹೇಗೆ ಎಂಬುದನ್ನು ಆರೋಪಿ, ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿಕೊಂಡು ಕಲಿತಿದ್ದರು. ಅದರಂತೆ ಗ್ರಾಹಕರ ಸೋಗಿನಲ್ಲಿ ಮಳಿಗೆಗಳಿಗೆ ಹೋಗಿ ಕೆಲಸಗಾರರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಸಮೇತ ಪರಾರಿಯಾಗುತ್ತಿದ್ದರು' ಎಂದೂ ತಿಳಿಸಿದರು.

'ಮಲ್ಲೇಶ್ವರದ ಸಂಪಿಗೆ ರಸ್ತೆಯ ಮಳಿಗೆಯೊಂದರಲ್ಲಿ ಇತ್ತೀಚೆಗೆ ಆರೋಪಿ ಕಳ್ಳತನ ಮಾಡಿದ್ದರು.ಈ ಬಗ್ಗೆ ಮಳಿಗೆ ವ್ಯವಸ್ಥಾಪಕ ದೂರು ನೀಡಿದ್ದರು. ಆರೋಪಿಗಾಗಿ ಶೋಧ ನಡೆಸಲಾಗುತ್ತಿತ್ತು.'

'ಮಾ.11ರಂದು ಮಾರ್ಗೋಸಾ ರಸ್ತೆಯಲಿರುವ ಮಳಿಗೆಯೊಂದರಲಿ ಕಾಣಿಸಿಕೊಂಡಿದ್ದ ಆರೋಪಿ, ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡರು' ಎಂದೂ ಪೊಲೀಸರು ತಿಳಿಸಿದ್ದರು.

ಮನೆ ನಿರ್ವಹಣೆಗೆ ಕೃತ್ಯ: 'ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದ್ದ ಆರೋಪಿ, ನಷ್ಟ ಅನುಭವಿಸಿದ್ದರು. ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಕೆಲಸದಿಂದ ಬರುತ್ತಿದ್ದ ವೇತನ ಮನೆ ನಿರ್ವಹಣೆಗೆ ಸಾಲುತ್ತಿರಲಿಲ್ಲ. ಹೀಗಾಗಿ, ಮಳಿಗೆಗಳಲ್ಲಿ ಚಿನ್ನಾಭರಣ ಕದಿಯಲಾರಂಭಿಸಿದ್ದರು. ಅದರ ಮಾರಾಟದಿಂದ ಬಂದ ಹಣವನ್ನು ಮನೆ ನಿರ್ವಹಣೆಗೆ ಖರ್ಚು ಮಾಡುತ್ತಿದ್ದರು. ಈ ಬಗ್ಗೆ ಆರೋಪಿಯೇ ಹೇಳಿಕೆ ನೀಡಿದ್ದಾರೆ' ಎಂದೂ ಪೊಲೀಸರು ಹೇಳಿದರು.

ಆರೋಪಿ ಕಡೆಯಿಂದ ಜಪ್ತಿ ಮಾಡಲಾದ ಆಭರಣ ಹಾಗೂ ಬೈಕ್

ನಗರದಲ್ಲಿ ಇಂದು

ಜರ್ಮನ್ ರಾಯಭಾರಿ ಕಚೇರಿಯ ಪ್ರತಿನಿಧಿಗಳಿಂದ ಮಲ್ಲೇಶ್ವರದಲ್ಲಿ ಪುನರುಜ್ಜೀವನಗೊಳ್ಳುತ್ತಿರುವ 'ಜಿಜಿಎಚ್‌ಎಸ್ ಎಚ್‌ವಿಎನ್ ಪಾರಂಪರಿಕ ಕಟ್ಟಡದ ಪರಿವೀಕ್ಷಣೆ': ಗೌರವ ಅತಿಥಿಗಳು: ಯದುವೀರ್ ಒಡೆಯರ್, ಉಪಮುಖ್ಯಮಂತ್ರಿ ಡಾ.ಸಿ. ಎನ್. ಅಶ್ವತ್ಥ ನಾರಾಯಣ, ಆಯೋಜನೆ: ಎಸ್ಟಾಟಿಕ್ ಆರ್ಟಟೆಕ್ಟ್ಸ್‌ನ ಯಶಸ್ವಿನಿ ಶರ್ಮಾ, ಸ್ಥಳ: ಸರ್ಕಾರಿ ಬಾಲಕೀಯರ ಪ್ರೌಢಶಾಲೆ, ಎಚ್.ವಿ. ನಂಜುಂಡಯ್ಯ ಕಟ್ಟಡ, 4ನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9

ಇಂದಿರಾ ಸಂಚಾರಿ ಚಿಕಿತ್ಸಾಲಯ ಉದ್ಘಾಟನೆ: ರಾಮಲಿಂಗಾರೆಡ್ಡಿ, ಸೌಮ್ಯಾ ರೆಡ್ಡಿ, ಚಾಮುಂಡೇಶ್ವರಿ ಡಿ.ಸಿ., ಮಧುಸೂದನ್, ಸ್ಥಳ: ಶ್ರೀ ಕರುಮಾರಿಯಮ್ಮ ದೇವಿ ದೇವಸ್ಥಾನ, ರಾಜೇಂದ್ರ ನಗರ, ಆಡುಗೋಡಿ, ಬೆಳಿಗ್ಗೆ 9.30

ವಿಶ್ವ ಗ್ರಾಹಕ ಹಕ್ಕು ದಿನ ಮತ್ತು ಮಹಿಳಾ ದಿನ: ಮುಖ್ಯ ಅತಿಥಿಗಳು: ಆಹಾರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಬಿ.ಎಚ್. ಅನಿಲ್ ಕುಮಾರ್, ಎನ್. ರಾಜು, ಗೌರವ ಅತಿಥಿಗಳು: ಪ್ರಮಿಳಾ ನೇಸರ್ಗಿ, ಪೆರಿಕಲ್ ಎಂ. ಸುಂದರ್, ಹಬೀಬ್ ಸುಲ್ತಾನ್ ಅಲಿ, ಪಿ. ರತ್ನಾ ರಾಜು, ಆಯೋಜನೆ: ಆಸ್ರಾ, ಸ್ಥಳ: ಎಫ್‌ಕೆಸಿಸಿಐ, ಸಂಜೆ 4

ಪುಸ್ತಕ ಬಿಡುಗಡೆ: ಎಸ್.ಜಿ. ಮನಗೂಳಿ ಅವರ 'ಬ್ಯಾಂಕ್ ಬದುಕು–ಬಯಲು', ಕೃತಿ ಲೋಕಾರ್ಪಣೆ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಅಧ್ಯಕ್ಷತೆ: ಡಾ.ಎ.ಎಚ್. ಶಿವಯೋಗಿಸ್ವಾಮಿ, ಮುಖ್ಯ ಅತಿಥಿ: ಎಂ.ಜಿ. ಪಂಡಿತ್, ಕೃತಿ ಪರಿಚಯ: ಡಾ. ಬಾಳಾಸಾಹೇಬ ಲೋಕಾಪುರ, ಆಯೋಜನೆ: ಸ್ನೇಹಾ ಬುಕ್ ಹೌಸ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಸಂಜೆ 5

ಮನು ಬಳಿಗಾರ್

ಶಿಸ್ತುಕ್ರಮ: ಸುಪ್ರೀಂ ಲೋಕಾಯುಕ್ತ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ತವ್ಯಲೋಪ ಪ್ರಕರಣದಲ್ಲಿ ಸಂಬಂಧಿತ ಶಿಸ್ತು ಪ್ರಾಧಿಕಾರ ಕೈಗೊಂಡ ಶಿಸ್ತುಕ್ರಮ ಅಂತಿಮವೇ ಅಥವಾ ಹೆಚ್ಚಿನ ಶಿಕ್ಷೆಗೆ ಗುರಿಪಡಿಸಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಮತ್ತೆ ವಿಚಾರಣೆಗೆ ಒಳಪಡಿಸಬಹುದೇ ಎಂಬ ಪ್ರಶ್ನೆಗೆ ಸಂಬಂಧಿಸಿದ ಪ್ರಕರಣ ಈಗ ಸುಪ್ರೀಂ ಕೋರ್ಟ್ ಮುಂದಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಹೃಷಿಕೇಶ್ ರಾಯ್ ಅವರಿದ್ದ ನ್ಯಾಯಪೀಠವು ಪ್ರಕರಣ ಸಂಬಂಧ ಕರ್ನಾಟಕ ಸರ್ಕಾರ, ಬೆಂಗಳೂರು ಮಹಾನಗರಪಾಲಿಕೆ ಆಯುಕ್ತರಿಗೆ ನೋಟಿಸ್ ಜಾರಿ ಮಾಡಿದೆ. ಕರ್ನಾಟಕ ಲೋಕಾಯುಕ್ತ ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಲೋಕಾಯುಕ್ತ ಪರ ವಕೀಲ ನಿಶಾಂತ್ ಪಾಟೀಲ್ ಅವರು, ಅರ್ಜಿಯಲ್ಲಿ ಹೈಕೋರ್ಟ್ ಮೇ 5, 2020ರಂದು ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿದ್ದಾರೆ. ಲಂಚ ಪಡೆದ ಪ್ರಕರಣದಲ್ಲಿ ಬಿಬಿಎಂಪಿ ತಮಗೆ ಈಗಾಗಲೇ ಶಿಕ್ಷೆ ವಿಧಿಸಿದೆ ಎಂದು ದಿವಾಕರ್ ವಿ ಎಂಬುವರ ಮನವಿಯನ್ನು ಹೈಕೋರ್ಟ್ ಪುರಸ್ಕರಿಸಿತ್ತು.

ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಕರ್ನಾಟಕ ಲೋಕಾಯುಕ್ತ, ದೊಡ್ಡ ಪ್ರಮಾಣದ ದುರ್ವರ್ತನೆಗೆ ಸಣ್ಣ ಪ್ರಮಾಣದ ದಂಡ ವಿಧಿಸಲಾಗಿದೆ. ನಿಯಮಗಳ ಪ್ರಕಾರ, ನೌಕರನ ವಿರುದ್ಧ ಯಾವುದೇ ಹಂತದಲ್ಲಿ ಶಿಸ್ತುಸಮಿತಿಯಿಂದ ವಿಚಾರಣೆಯೂ ಆಗಿಲ್ಲ ಎಂದು ಪ್ರತಿಪಾದಿಸಿತ್ತು.

ಲಂಚ ಪಡೆಯುವಾಗ ಪ್ರತ್ಯಕ್ಷವಾಗಿ ಸಿಕ್ಕಿಬಿದ್ದ ಪ್ರಕರಣದಲ್ಲಿಯೂ ಸರ್ಕಾರಿ ನೌಕರನಿಗೆ ಸಣ್ಣ ಪ್ರಮಾಣದ ದಂಡ ವಿಧಿಸುವುದಾದರೆ ಸಾಂವಿಧಾನಿಕ ಮತ್ತು ಶಾಸನಬದ್ಧ ಸಂಸ್ಥೆಗಳ ಬಗ್ಗೆ ಸಾರ್ವಜನಿಕರ ದೃಷ್ಟಿಯಿಂದ ವಿಶ್ವಾಸಾರ್ಹತೆಗೆ ಧಕ್ಕೆ ಆಗಲಿದೆ ಎಂದು ವಕೀಲರು ಪ್ರತಿಪಾದಿಸಿದ್ದರು. ಉಲ್ಲೇಖಿತ ಪ್ರಕರಣದಲ್ಲಿ ಇಡೀ ವ್ಯವಸ್ಥೆಯೇ ನೌಕರನ ಪರವಾಗಿದೆ. ಅವರ ಕಾನೂನು ಬಾಹಿರ ಕ್ರಮಗಳ ಪರವಾಗಿ ಇದ್ದಂತಿದೆ ಎಂದು ಅರ್ಜಿಯಲ್ಲಿ ಅಭಿಪ್ರಾಯಪಡಲಾಗಿದೆ.

'ರಾಬರ್ಟ್' ಸಿನಿಮಾ ಪೈರಸಿ: ಯುವಕ ಬಂಧನ

ಬೆಂಗಳೂರು: ನಟ ದರ್ಶನ್ ಅಭಿನಯದ 'ರಾಬರ್ಟ್' ಸಿನಿಮಾ ಪೈರಸಿ ಮಾಡಿ ಮಾರಾಟ ಮಾಡಲು ಯತ್ನಿಸುತ್ತಿದ್ದರು ಎನ್ನಲಾದ ಆರೋಪಿ ವಿಶ್ವನಾಥ್ ಎಂಬುವವರನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

'ಪೈರಸಿ ಬಗ್ಗೆ ಉಮಾಪತಿ ಫಿಲ್ಮ್ಸ್ ವ್ಯವಸ್ಥಾಪಕ ಮಂಜುನಾಥ್ ದೂರು ನೀಡಿದ್ದಾರೆ. ಅದರನ್ವಯ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು.

'ಯಾದಗಿರಿಯ ವಿಶ್ವನಾಥ್, ಕೆ.ಆರ್. ರಸ್ತೆಯಲ್ಲಿ ವಾಸವಿದ್ದರು. ತಮ್ಮ ಬಳಿ ಸಿನಿಮಾ ಎಚ್.ಡಿ ಪ್ರಿಂಟ್ ಇರುವುದಾಗಿ ಹೇಳಿ, ₹ 5,000ಕ್ಕೆ ಮಾರಾಟ ಮಾಡಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದೂರುದಾರ ಮಂಜುನಾಥ್, ಗ್ರಾಹಕರ ಸೋಗಿನಲ್ಲಿ ಆರೋಪಿಗಳ ಬಳಿ ಹೋಗಿ ವಿಚಾರಿಸಿದ್ದರು. ಅವರ ಬಳಿಯೂ ಆರೋಪಿ ಹಣ ಕೇಳಿದ್ದರು. ಕೂಡಲೇ ಆತನನ್ನು ಹಿಡಿದುಕೊಂಡ ದೂರುದಾರ, ಪೊಲೀಸರಿಗೆ ಒಪ್ಪಿಸಿದ್ದಾರೆ' ಎಂದೂ ಹೇಳಿದರು.

ನಟ ದರ್ಶನ್

'ಆರೋಪಿ ಮೊಬೈಲ್‌ನಲ್ಲಿ ಸಿನಿಮಾ ಪೈರಸಿ ಪ್ರತಿ ಸಿಕ್ಕಿದೆ. ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ, ಜಾಲತಾಣಗಳಲ್ಲಿ ಸಿನಿಮಾ ಹಂಚಿಕೆ ಮಾಡಿರುವುದು ಗೊತ್ತಾಗಿದೆ' ಎಂದೂ ಪಾಟೀಲ ಹೇಳಿದರು.

ಪೈರಸಿ ಸಂಬಂಧ ಪುಟ್ಟೇನಹಳ್ಳಿ ಪೊಲೀಸರು ಸಹ ಯುವಕನೊಬ್ಬನನ್ನು ಶನಿವಾರ ವಶಕ್ಕೆ ಪಡೆದಿದ್ದರು.

ಶಾಲೆಗಳಿಗೆ ಅನುದಾನ: 23ರಂದು ಪ್ರತಿಭಟನೆ

ಬೆಂಗಳೂರು: 1995- 2005ರ ವರೆಗಿನ ಕನ್ನಡ ಮಾಧ್ಯಮ ಶಾಲೆಗಳನ್ನುಸರ್ಕಾರದಅನುದಾನಕ್ಕೆಒಳಪಡಿಸಲಾಗುವುದೆಂದು ನೀಡಿದ್ದ ಭರವಸೆಯನ್ನು ಈಡೇರಿಸಿಲ್ಲ ಎಂದು ಆರೋಪಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ವಿರುದ್ಧ ಇದೇ 23ರಂದು ಪ್ರತಿಭಟನೆ ನಡೆಸಲು ಖಾಸಗಿ ಶಾಲೆಗಳ ಆಡಳಿತ ಮಂಡಳಿ ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಮಾನ್ಯತೆ ಪಡೆದ ಅನುದಾನರಹಿತ ಖಾಸಗಿ ಶಾಲೆಗಳ ಸಂಘಟನೆ (ರೂಪ್ಸಾ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಶಿಕ್ಷಕರ ಕಲ್ಯಾಣ ನಿಧಿಯಿಂದ ಖಾಸಗಿ ಶಾಲಾ ಶಿಕ್ಷಕರಿಗೆ ನೆರವು ನೀಡಬೇಕೆಂಬ ಬೇಡಿಕೆಯೂ ಈಡೇರಿಲ್ಲ ಎಂದರು.

'ಕಟ್ಟಡಸುರಕ್ಷತೆಹಾಗೂಅಗ್ನಿಶಾಮಕ ದಿಂದ ಸುರಕ್ಷತಾ ಪ್ರಮಾಣಪತ್ರ ನೀಡುವ ವಿಷಯದಲ್ಲಿ ಶಾಲೆಗಳು ಶಿಕ್ಷಣ ಇಲಾಖೆಯಿಂದ ದೌರ್ಜನ್ಯಕ್ಕೆ ಒಳಗಾಗುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ವರದಿ ನೀಡಲು ರಾಜ್ಯ ಮಟ್ಟದ ಸಮಿತಿ ರಚಿಸಲಾಗಿದೆ. ಆದರೆ, ಈ ಸಮಿತಿಯಲ್ಲಿ ಶಾಲಾ ಆಡಳಿತ ಮಂಡಳಿಗಳ ಪ್ರತಿನಿಧಿಗಳಿಲ್ಲ. ಇಂಥ ಸಮಿತಿ ನೀಡುವ ವರದಿಯಿಂದ ಅನ್ಯಾಯ ಆಗಲಿದೆ' ಎಂದೂ ಅವರು ಹೇಳಿದರು.

ಮುಂದುವರಿದ ವಿಕ್ಟರ್ ಸೈಮನ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಬೆಂಗಳೂರು ಮಹಾನಗರ ಕಾರ್ಯಪಡೆ ಇನ್‌ಸ್ಪೆಕ್ಟರ್ ವಿಕ್ಟರ್ ಸೈಮನ್ ಅವರ ಪೊಲೀಸ್ ಕಸ್ಟಡಿಯನ್ನು ಎರಡು ದಿನಗಳ ಕಾಲ ವಿಸ್ತರಿಸಿದ್ದು, ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ.

ಮಾರ್ಚ್ 9ರಂದು ವಿಕ್ಟರ್ ಮನೆ ಮೇಲೆ ಎಸಿಬಿ ದಾಳಿ ನಡೆದಿತ್ತು. ವಿಚಾರಣೆಗೆ ಸಹಕರಿಸದ ಆರೋಪದ ಮೇಲೆ ಮಾ.10ರಂದು ಬಂಧಿಸಲಾಗಿತ್ತು. ಶನಿವಾರದವರೆಗೂ ತನಿಖಾ ತಂಡದ ವಶಕ್ಕೆ ನೀಡಿ ನ್ಯಾಯಾಲಯ ಆದೇಶ ಹೊರಡಿಸಿತ್ತು. ಆರೋಪಿಯು ಎಸಿಬಿ ವಶದಲ್ಲಿದ್ದಾಗ ತನಿಖೆಗೆ ಸಹಕರಿಸಿಲ್ಲ ಎಂದು ತನಿಖಾಧಿಕಾರಿ ಶನಿವಾರ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ಅವರ ಕೋರಿಕೆಯಂತೆ ಸೋಮವಾರದವರೆಗೂ ಆರೋಪಿಯನ್ನು ತನಿಖಾ ತಂಡದ ವಶಕ್ಕೆ ನೀಡಲಾಗಿದೆ.

'ದಾಳಿ ವೇಳೆ ಪತ್ತೆಯಾಗಿರುವ ಆಸ್ತಿ ಮತ್ತು ದಾಖಲೆಗಳ ಕುರಿತು ವಿಕ್ಟರ್ ಅವರ ವಿಚಾರಣೆ ನಡೆಯುತ್ತಿದೆ. ಸೋಮವಾರ ಮಧ್ಯಾಹ್ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಅಗತ್ಯ ಕಂಡುಬಂದಲ್ಲಿ ಮತ್ತೆ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಗುವುದು' ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

BANGALORE TURF CLUB LTD.
CIN:U99999KA1962PLC001449
POST BOX NO.5038, Race Course Road, Bangalore-560001
Phone: 22281763, EPABX:22262391/2/3, Extn:228/225
TENDER NOTICE Dt: 15.03.2021
Sealed Tenders, duly super-scribed are invited for Security Services at the club premises. For further information please visit: www.bangaloreraces.com. Last date for submitting tender 22nd March, 2021, 2.30 PM.
Joint Secretary
Bangalore Turf Club Ltd.

ಸಂಕ್ಷಿಪ್ತ ಸುದ್ದಿ

ಡಿ.ಸಿ ನಕಲಿ ಫೇಸ್‌ಬುಕ್ ಖಾತೆ

ಚಿಕ್ಕಬಳ್ಳಾಪುರ: ಫೇಸ್‌ಬುಕ್‌ನಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಆರ್. ಲತಾ ಹೆಸರಿನಲ್ಲಿ ನಕಲಿ ಖಾತೆ ತೆರೆಯಲಾಗಿದ್ದು, ಪರಿಚಿತರಿಗೆ ಮೆಸೆಂಜರ್ ಮೂಲಕ ಹಣ ಕಳಿಸುವಂತೆ ಸಂದೇಶ ಕಳುಹಿಸಲಾಗಿದೆ.

ಈ ಸಂಬಂಧ ಜಿಲ್ಲಾಧಿಕಾರಿಯು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದಾರೆ. ಜಿಲ್ಲಾಧಿಕಾರಿ ಫೇಸ್‌ಬುಕ್ ಖಾತೆಯ ಚಿತ್ರಗಳನ್ನು ಪ್ರೊಫೈಲ್ ಚಿತ್ರವಾಗಿ ಬಳಸಿ ಮತ್ತೊಂದು ಖಾತೆ ಸೃಷ್ಟಿಸಲಾಗಿದೆ. ಪರಿಚಿತರು ಮತ್ತು ಸ್ನೇಹಿತರಿಗೆ ಫ್ರೆಂಡ್ಸ್ ರಿಕ್ವೆಸ್ಟ್ ಕಳಿಸಲಾಗಿದೆ. ನಂತರ ತಮ್ಮ ಬ್ಯಾಂಕ್ ಖಾತೆಗೆ ಹಣ ಪಾವತಿಸುವಂತೆ ಫೇಸ್‌ಬುಕ್ ಮೆಸೆಂಜರ್ ಮೂಲಕ ಮನವಿ ಮಾಡಿಕೊಂಡಿದ್ದಾರೆ.

'ಡಿಸಿ ಚಿಕ್ಕಬಳ್ಳಾಪುರ (DC Chikkaballpur) ಎಂಬ ಹೆಸರಿನಿಂದ ನಕಲಿ ಫೇಸ್‌ಬುಕ್ ಖಾತೆ ತೆರೆಯಲಾಗಿದೆ. ಸ್ನೇಹಿತರಿಗೆ ಕೋರಿಕೆ ಕಳುಹಿಸಿ ನಂತರ ಹಣ ವಸೂಲಿ ಮಾಡಲು ಮುಂದಾಗಿದ್ದಾರೆ. ಇದು ಗಮನಕ್ಕೆ ಬಂದಿದೆ. ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದೇನೆ' ಎಂದು ಜಿಲ್ಲಾಧಿಕಾರಿ ಲತಾ ತಿಳಿಸಿದ್ದಾರೆ.

ದಾವಣಗೆರೆ ಎಸ್ಪಿ ಫೇಸ್‌ಬುಕ್ ಖಾತೆ ಹ್ಯಾಕ್

ದಾವಣಗೆರೆ: ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರ ಫೇಸ್‌ಬುಕ್ ಖಾತೆಯನ್ನು ಹ್ಯಾಕ್ ಮಾಡಲಾಗಿದೆ.

ಉತ್ತರಪ್ರದೇಶದ ವ್ಯಕ್ತಿಯೊಬ್ಬ 'ಹನುಮಂತರಾಯ ಹೊಸ್‌ಪೇಟ್' ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದಾನೆ. ಗೆಳೆಯರಿಂದ ವಿಷಯ ತಿಳಿದ ಎಸ್‌ಪಿಯವರು ನಕಲಿ ಖಾತೆಯನ್ನು ಬ್ಲಾಕ್ ಮಾಡಿಸಿ, ಡಿಲೀಟ್ ಮಾಡಿಸಿದ್ದಾರೆ.

'ನನ್ನ ಫೇಸ್‌ಬುಕ್ ಖಾತೆಯ ಮನವಿಗಳಿಗೆ ಯಾರೂ ಪ್ರತಿಕ್ರಿಯಿಸಬೇಡಿ. ನಕಲಿ ಖಾತೆ ಸೃಷ್ಟಿಸಿರುವ ವ್ಯಕ್ತಿಯ ನಂಬರ್ ಪತ್ತೆಯಾಗಿದ್ದು, ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ಎಸ್‌ಪಿ ಹನುಮಂತರಾಯ ಎಚ್ಚರಿಸಿದ್ದಾರೆ.

ದಾವಣಗೆರೆ ಎಸ್‌ಪಿ ಅವರ ಫೇಸ್‌ಬುಕ್‌ನ ನಕಲಿ ಖಾತೆ

MARUTI SUZUKI AUTHORISED DEALERS: BENGALURU: MANDOVI: LAVELLE ROAD, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: 99000 35822. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, PH: 8884442299. VARUN MOTORS: MALLESHWARAM, HEBBAL, 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS PH: 080-30693069. GARUDA: LALBAGH ROAD, PH: 87229 44444. KALYANI: MYSORE ROAD, BANNERGHATTA ROAD, NAGARBHAVI, BANASWADI, RAMANAGARAM, CHANNAPATNA, KANAKPURA, BANNERGATTA, BIDADI: 95909 90011. KATARIA: KANAKAPURA ROAD, PH: 78990 40000. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.
*Offer includes consumer offer, exchange bonus and corporate offer (Wherever Applicable) on selected models/variants. Corporate offer value is maximum offer value and same is applicable to selected corporates only. Terms and Conditions apply. The terms and conditions are subject to change without any prior notice. All offers are brought to you by Maruti Suzuki dealers only. Offers may vary from variant to variant. All offers shown are valid for limited period & for limited stock only. Accessories and features shown in the pictures may not be a part of the standard equipment and may vary according to the variant. Colors shown may vary from actual body colors due to printing on paper. Images used are for illustration purposes only. Maruti Suzuki India Limited reserves the right to discontinue offers without notice. Offers valid till 31st March, 2021.

ಉದ್ಯಾನನಗರಿಯ ಕೆಲ ವಾರ್ಡ್‌ಗಳಲ್ಲಿ ಆಟದ ಬಯಲುಗಳೇ ಇಲ್ಲ: ಹಲವು ಮೈದಾನಗಳು ಉದ್ಯಾನಗಳಾಗಿ ಬದಲು

ರಾಜಧಾನಿಯ ಅಂಗಳಗಳು ಲೆಕ್ಕಕ್ಕಷ್ಟೆ, ಆಟಕ್ಕಿಲ್ಲ

• ಜಿ.ಶಿವಕುಮಾರ

ಬೆಂಗಳೂರು: ಉದ್ಯಾನನಗರಿ, ಸಿಲಿಕಾನ್ ಸಿಟಿ ಎಂದೆಲ್ಲಾ ಕರೆಸಿಕೊಳ್ಳುವ ಬೆಂಗಳೂರು, ದಿನ ಕಳೆದಂತೆಲ್ಲಾ ತನ್ನ ವ್ಯಾಪ್ತಿಯನ್ನು ಹಿರಿದಾಗಿಸಿಕೊಳ್ಳುತ್ತಲೇ ಇದೆ. ಎಲ್ಲ ಜಾತಿ, ಧರ್ಮ, ಭಾಷೆಯವರ ಅಚ್ಚುಮೆಚ್ಚಿನ ತಾಣವಾಗಿರುವ ಈ ಮಹಾನಗರಿ ಸುಮಾರು 1.23 ಕೋಟಿ ಜನರಿಗೆ ತನ್ನೊಡಲಲ್ಲಿ ಆಶ್ರಯ ಕಲ್ಪಿಸಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳ ಮೂಲಕ ಇಡೀ ಜಗತ್ತಿನ ಗಮನ ಸೆಳೆದಿರುವ ಬೆಂಗಳೂರು, ಕ್ರೀಡಾ ಲೋಕಕ್ಕೂ ಅನೇಕ ದಿಗ್ಗಜರನ್ನು ಕೊಡುಗೆಯಾಗಿ ನೀಡಿದೆ. ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಬ್ರಿಜೇಶ್ ಪಟೇಲ್, ಪಂಕಜ್ ಆಡ್ವಾಣಿ, ನಿಶಾ ಮಿಲ್ಲೆಟ್ ಹೀಗೆ ಹಲವರು ಎತ್ತರದ ಸಾಧನೆಯ ಮೂಲಕ ಉದ್ಯಾನನಗರಿಯ ಕೀರ್ತಿ ಹೆಚ್ಚಿಸಿದ್ದಾರೆ. ಇಂತಹ ವಿಶಿಷ್ಟ ಕ್ರೀಡಾ ಪರಂಪರೆ ಹೊಂದಿರುವ ಈ ನಗರಿಯಲ್ಲಿ ಈಗ ಆಟದ ಮೈದಾನಗಳೇ ಮಾಯವಾಗುತ್ತಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 192 ಆಟದ ಮೈದಾನಗಳಿವೆ. ಈ ಪೈಕಿ ಶೇ 21ರಷ್ಟು ಮೈದಾನಗಳು ಸಾರ್ವಜನಿಕರ ಬಳಕೆಗೆ ಅಲಭ್ಯವಾಗಿವೆ. 82 ಅಂಗಳಗಳು ಬಳಕೆಗೆ ಯೋಗ್ಯವೇ ಅಲ್ಲ ಎಂಬ ಅಂಶ ಜನಾಗ್ರಹ ಸಂಸ್ಥೆಯು 2017ರಲ್ಲಿ ನಡೆಸಿದ್ದ ಸಮೀಕ್ಷೆಯಿಂದ ತಿಳಿದುಬಂದಿತ್ತು. ಹಿಂದಿನ ಮೂರು ವರ್ಷಗಳಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಅನೇಕ ಮೈದಾನಗಳು ಉದ್ಯಾನಗಳಾಗಿ ಮಾರ್ಪಟ್ಟಿವೆ. ಇನ್ನೂ ಕೆಲವು ಅಂಗಳಗಳು ನಿರ್ವಹಣೆಯ ಕೊರತೆಯಿಂದಾಗಿ ಶೋಚನೀಯ ಸ್ಥಿತಿಗೆ ತಲುಪಿವೆ. ಅಲ್ಲಿ ಬೀಡಾಡಿ ದನಗಳು ಹಾಗೂ ಬೀದಿ ನಾಯಿಗಳೂ ಆಶ್ರಯ ಪಡೆದಿವೆ.

ಮೈದಾನಗಳಲ್ಲಿ ಅತ್ಯಾಧುನಿಕ ಮೂಲ ಸೌಕರ್ಯಗಳನ್ನು ಕಲ್ಪಿಸಿ ಆ ಮೂಲಕ ಕ್ರೀಡಾಪಟುಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಬೇಕಿದ್ದ ಬಿಬಿಎಂಪಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಯ ನೆಪವೊಡ್ಡಿ ಅವುಗಳ ಅಸ್ತಿತ್ವವೇ ಇಲ್ಲದಂತಾಗಿಸುತ್ತಿವೆ.

ಹೀಗಾಗಿ ಹೊಸ ತಲೆಮಾರಿನ ಹುಡುಗರು ಮನೆಯ ಮುಂದಣ ಡಾಂಬರ್ ರಸ್ತೆಯಲ್ಲಿ ಕ್ರಿಕೆಟ್, ಬ್ಯಾಡ್ಮಿಂಟನ್, ವಾಲಿಬಾಲ್ ಆಡುವುದು ಸಾಮಾನ್ಯವಾಗಿಬಿಟ್ಟಿದೆ. ಇನ್ನೂ ಕೆಲವರು ಮೊಬೈಲ್ ಗೇಮಿಂಗ್ ಮೊರೆ ಹೋಗಿದ್ದಾರೆ.

ಮೈದಾನಗಳನ್ನೇ ಕಾಣದ ಬಡಾವಣೆಗಳು

ಹೊಸ ಬಡಾವಣೆ ಆರಂಭಿಸುವಾಗ ಮೈದಾನ ಹಾಗೂ ಉದ್ಯಾನಕ್ಕೆ ಪ್ರತ್ಯೇಕ ಜಾಗ ಮೀಸಲಿಡಬೇಕು ಎಂಬ ಕಾನೂನೇ ಇದೆ. ಆದರೆ, ಅದು ಕಡತಕ್ಕೆ ಸೀಮಿತವಾಗಿದೆ. ಅದನ್ನು ಯಾರೂ ಪಾಲಿಸುತ್ತಿಲ್ಲ. ಇದರ ಪರಿಣಾಮ ಬೆಂಗಳೂರಿನ ಕೆಲ ಬಡಾವಣೆಗಳು ಇದುವರೆಗೂ ಮೈದಾನಗಳನ್ನೇ ಕಂಡಿಲ್ಲ. ಚಂದ್ರಾ ಲೇಔಟ್ ಇದಕ್ಕೊಂದು ನಿದರ್ಶನ.

ಹೆಚ್ಚಿದ ಅತಿಕ್ರಮಣ..

ಬಿಡಿಎ ಹಾಗೂ ಬಿಬಿಎಂಪಿ, ಅಭಿವೃದ್ಧಿಯ ನೆಪ ಹೇಳಿ ಕೆಲ ಮೈದಾನಗಳನ್ನು ಖಾಸಗಿಯವರ ಸುಪರ್ದಿಗೆ ಒಪ್ಪಿಸಿವೆ. ಆ ಅಂಗಳಗಳಿಗೆ ಸ್ಥಳೀಯರೇ ಕಾಲಿಡುವಂತಿಲ್ಲ.

'ಬಹಳಷ್ಟು ಕಡೆ ಮೈದಾನಗಳನ್ನು ಒತ್ತುವರಿ ಮಾಡಲಾಗಿದೆ. ಇದರ ಅರಿವಿದ್ದರೂ ಬಿಡಿಎ ಹಾಗೂ ಬಿಬಿಎಂಪಿ ಅಧಿಕಾರಿಗಳು ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ. ಪ್ರಭಾವಿಗಳು ಹಾಗೂ ಗುತ್ತಿಗೆದಾರರ ಎದುರು ಸಂಪೂರ್ಣವಾಗಿ ಮಂಡಿಯೂರಿದ್ದಾರೆ. ಬಿಡಿಎ ತನ್ನ ವ್ಯಾಪ್ತಿಯ ಬಹುತೇಕ ಮೈದಾನಗಳನ್ನು ನಿವೇಶನಗಳನ್ನಾಗಿ ಮಾರ್ಪಡಿಸಿದೆ' ಎಂಬುದು ಸಾರ್ವಜನಿಕರ ದೂರು.

ಕ್ರೀಡಾಂಗಣದ ಅವ್ಯವಸ್ಥೆ ನೋಡಲು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವಿದ್ಯಾಪೀಠದಲ್ಲಿರುವ ಕೆಂಪೇಗೌಡ ಆಟದ ಮೈದಾನದಲ್ಲಿ ಕಂಡುಬಂದ ಕುರಿಗಾಹಿ– ಪ್ರಜಾವಾಣಿ ಚಿತ್ರ/ ಅನೂಪ್ ರಾಘ್ ಟಿ.

'ಅನ್ಯ ಉದ್ದೇಶಕ್ಕೆ ಅಧಿಕ ಬಳಕೆ'

'ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನಕ್ಕೆ ವಿಶಿಷ್ಟ ಇತಿಹಾಸವಿದೆ. ಜಿ.ಆರ್.ವಿಶ್ವನಾಥ್, ಬಿ.ಎಸ್.ಚಂದ್ರಶೇಖರ್, ಇಎಎಸ್ ಪ್ರಸನ್ನ ಅವರಂತಹ ವಿಶ್ವಶ್ರೇಷ್ಠ ಆಟಗಾರರು ಕ್ರಿಕೆಟ್ ಕಲಿತದ್ದು ಈ ಮೈದಾನದಲ್ಲಿ. ಇಂತಹ ಮೈದಾನ ಆಟಕ್ಕಿಂತಲೂ ಅನ್ಯ ಉದ್ದೇಶಕ್ಕೆ ಹೆಚ್ಚು ಬಳಕೆಯಾಗುತ್ತಿದೆ. ಇಲ್ಲಿ ಒಂದಿಲ್ಲೊಂದು ಕಾರ್ಯಕ್ರಮ ಆಯೋಜನೆಯಾಗುತ್ತಿರುವುದರಿಂದ ಕ್ರೀಡಾಪಟುಗಳು ಪರಿತಪಿಸುವಂತಾಗಿದೆ' ಎಂದು ಕ್ರಿಕೆಟ್ ಕೋಚ್ ಮುರಳೀಧರ ಹೇಳುತ್ತಾರೆ.

'ಬಿಬಿಎಂಪಿ ಈ ಮೈದಾನದ ನಿರ್ವಹಣೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿಲ್ಲ. ಸ್ಥಳೀಯ ಶಾಸಕರು ಹಾಗೂ ಸಂಸದರಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಹೀಗಾಗಿ ನಾವೇ ಹಣ ಹಾಕಿ ಇದನ್ನು ನಿರ್ವಹಣೆ ಮಾಡುತ್ತಿದ್ದೇವೆ. ಕ್ರಿಕೆಟ್ ಮಾತ್ರವಲ್ಲ ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಹ್ಯಾಂಡ್‌ಬಾಲ್ ಸೇರಿದಂತೆ ಇತರ ಕ್ರೀಡೆಗಳ ತರಬೇತಿಗೂ ಪೂರಕ ವಾತಾವರಣ ಮನಿರ್ಮಿಸಲಾಗಿದೆ. ಕಾರ್ಯಕ್ರಮಗಳಿಗೆ ಅಂಗಳ ಬಿಟ್ಟುಕೊಡುತ್ತಿರುವ ಬಿಬಿಎಂಪಿ ಕ್ರಮ ಪ್ರಶ್ನಿಸಿ ಶಂಕರಪುರ ಹಿತರಕ್ಷಣಾ ಸಂಸ್ಥೆ ವತಿಯಿಂದ ಸುಪ್ರೀಂಕೋರ್ಟ್ ಮೆಟ್ಟಿಲೂ ಏರಿದ್ದೆವು' ಎಂದರು.

ಬಿಡಿಎ ಮೈದಾನದಲ್ಲಿ ಸ್ಥಳೀಯರಿಗೇ ಪ್ರವೇಶವಿಲ್ಲ!

ವಸಂತನಗರದಲ್ಲಿರುವ ಬಿಡಿಎ ಮೈದಾನವನ್ನು (ಅಂಬೇಡ್ಕರ್ ಭವನದ ಎದುರಿರುವುದು) ಕಾಲೇಜೊಂದಕ್ಕೆ ಗುತ್ತಿಗೆ ನೀಡಲಾಗಿದೆ. ಈ ಮೈದಾನದಲ್ಲಿ ಈಗ ಸ್ಥಳೀಯರೇ ಕಾಲಿಡುವಂತಿಲ್ಲ.

'ಕಾಲೇಜು ಆಡಳಿತ ಮಂಡಳಿಯು ಈ ಮೈದಾನವನ್ನು 99 ವರ್ಷಕ್ಕೆ ಗುತ್ತಿಗೆ ಪಡೆದುಕೊಂಡಿದೆ. ವಿಸ್ತಾರವಾದ ಈ ಜಾಗದಲ್ಲಿ ಯಾವ ಚಟುವಟಿಕೆಗಳೂ ನಡೆಯುತ್ತಿಲ್ಲ. ಹೀಗಾಗಿ ಬೆಳಿಗ್ಗೆ ಮತ್ತು ಸಂಜೆ ವಾಯು ವಿಹಾರಕ್ಕೆ ಅವಕಾಶ ನೀಡುವಂತೆ ಆಡಳಿತ ಮಂಡಳಿಯವರಿಗೆ ಮನವಿ ಮಾಡಿದ್ದೆವು. ಅದಕ್ಕವರು ಒಪ್ಪಲಿಲ್ಲ. ಸರ್ಕಾರದ ಜಾಗದಲ್ಲಿ ಸಾರ್ವಜನಿಕರಿಗೇ ಅವಕಾಶವಿಲ್ಲದಿದ್ದರೆ ಹೇಗೆ' ಎಂದು ಸ್ಥಳೀಯರು ಕಿಡಿಕಾರಿದರು.

'ಯೋಗ್ಯ ಟ್ರ್ಯಾಕ್‌ಗಳನ್ನಾದರೂ ನಿರ್ಮಿಸಲಿ'



'ಅಥ್ಲೆಟಿಕ್ಸ್ ಹಾಗೂ ಇನ್ನಿತರ ಕ್ರೀಡಾ ಚಟುವಟಿಕೆಗಳಿಗಾಗಿ ಬೆಂಗಳೂರಿಗರು ಕಂಠೀರವ ಕ್ರೀಡಾಂಗಣವನ್ನೇ ಹೆಚ್ಚು ಅವಲಂಬಿಸಿದ್ದಾರೆ. ಕಂಠೀರವ ರೀತಿಯ ಕ್ರೀಡಾಂಗಣ ಅಲ್ಲದೇ ಹೋದರೂ ಆಯಾ ವಲಯದಲ್ಲಿ ತರಬೇತಿಗೆ ಯೋಗ್ಯವಾದ ಕೇಂದ್ರಗಳನ್ನು ನಿರ್ಮಾಣ ಮಾಡಬೇಕು. ಎಂಟು ಲೇನ್‌ಗಳ ಟ್ರ್ಯಾಕ್, ಶೌಚಾಲಯ, ಬಟ್ಟೆ ಬದಲಿಸುವ ಕೊಠಡಿ ಹಾಗೂ ಒಂದು ಉಗ್ರಾಣ ಇದ್ದರೆ ಸಾಕು. ಇದಕ್ಕೆ ಅಂದಾಜು ₹20 ಕೋಟಿ ವೆಚ್ಚವಾಗಬಹುದಷ್ಟೆ. ಹಿಂದಿನಿಂದಲೂ ನಾವು ಈ ಬೇಡಿಕೆ ಇಡುತ್ತಲೇ ಬಂದಿದ್ದೇವೆ. ಆದರೆ, ಯಾರೂ ಇದರತ್ತ ಗಮನ ಹರಿಸಿಲ್ಲ' ಎಂದು ಅಥ್ಲೆಟಿಕ್ಸ್‌ನ ಹಿರಿಯ ಕೋಚ್ ಲಕ್ಷ್ಮೀಶ ಹೇಳಿದರು.

'ಅಥ್ಲೆಟಿಕ್ಸ್‌ನಲ್ಲಿ ಎತ್ತರದ ಸಾಧನೆ ಮಾಡುವ ಕನಸು ಹೊತ್ತವರ ತರಬೇತಿಗೆ ಬೆಂಗಳೂರಿನಲ್ಲೇ ಸರಿಯಾದ ಮೂಲ ಸೌಕರ್ಯವಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸದ್ಯಕ್ಕೆ ಎರಡು ತರಬೇತಿ ಕೇಂದ್ರಗಳನ್ನಾದರೂ ಸರ್ಕಾರ ಆರಂಭಿಸಬೇಕು' ಎಂದು ಒತ್ತಾಯಿಸಿದರು.

'ಬೆಂಗಳೂರಿನಲ್ಲಿ ಉದ್ಯಾನ ಮತ್ತು ಮೈದಾನಕ್ಕೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಉದ್ಯಾನದೊಳಗೆ ಕ್ರೀಡಾಪಟುಗಳ ತರಬೇತಿಗೆ ಅವಕಾಶ ನೀಡುವುದು ತಪ್ಪು. ಅದರಿಂದ ಅಥ್ಲೀಟ್‌ಗಳು ಸರಿಯಾಗಿ ಅಭ್ಯಾಸ ಮಾಡಲು ಆಗುವುದಿಲ್ಲ. ಉಳ್ಳವರು ಬೇಕಾದಷ್ಟು ಹಣ ಖರ್ಚು ಮಾಡಿ ತಮ್ಮ ಮಕ್ಕಳಿಗೆ ಗುಣಮಟ್ಟದ ತರಬೇತಿ ಕೊಡಿಸುತ್ತಾರೆ. ಆದರೆ ಬಡವರು ಏನು ಮಾಡಬೇಕು' ಎಂದು ಪ್ರಶ್ನಿಸಿದರು.

ಸಾರ್ವಜನಿಕರು ಏನಂತಾರೆ?



ಇಲ್ಲಿ ದೊಡ್ಡ ಮೈದಾನವಿದೆ. ನಿರ್ವಹಣೆಯ ಕೊರತೆಯಿಂದಾಗಿ ಇದು ಶೋಚನೀಯ ಸ್ಥಿತಿಗೆ ತಲುಪಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಬೇಕು. ಇಲ್ಲಿ ಕ್ರಿಕೆಟ್ ಜೊತೆಗೆ ಇತರ ಆಟಗಳನ್ನೂ ಕಲಿಯಲು ಅಗತ್ಯವಿರುವ ಮೂಲ ಸೌಕರ್ಯ ಕಲ್ಪಿಸಿದರೆ ಸುತ್ತಲಿನ ಮಕ್ಕಳಿಗೆ ಅನುಕೂಲವಾಗುತ್ತದೆ. ಇದರಿಂದ ಪ್ರತಿಭೆಗಳನ್ನೂ ಪೋಷಿಸಿದಂತಾಗುತ್ತದೆ.

ಲಕ್ಷ್ಮೀಶ ಭಟ್, ವಿದ್ಯಾಪೀಠ ನಿವಾಸಿ

ಹಲವು ವರ್ಷಗಳಿಂದ ನಾನು ಈ ಮೈದಾನದಲ್ಲಿ ಆಡುತ್ತಾ ಬೆಳೆದಿದ್ದೇನೆ. ಇದರ ಸುತ್ತ ಇದ್ದ ಕಬ್ಬಿಣದ ಬೇಲಿಗಳೆಲ್ಲಾ ಕಿತ್ತು ಹೋಗಿವೆ. ಹೀಗಾಗಿ ದನಗಳು, ಕುರಿಗಳು ಹಾಗೂ ಬೀದಿ ನಾಯಿಗಳು ಮೈದಾನದೊಳಗೆ ಪ್ರವೇಶಿಸುತ್ತಿವೆ. ಇದರಿಂದ ವಾಯು ವಿಹಾರಿಗಳು ಹಾಗೂ ಕ್ರೀಡಾಸಕ್ತರಿಗೆ ತೊಂದರೆಯಾಗುತ್ತಿದೆ. ವಾಲಿಬಾಲ್, ಅಥ್ಲೆಟಿಕ್ಸ್‌ನಲ್ಲಿ ಆಸಕ್ತಿ ಇರುವ ಸಾಕಷ್ಟು ಮಕ್ಕಳು ಸುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ತರಬೇತಿಗಾಗಿ ಅವರೆಲ್ಲಾ ಕಂಠೀರವ ಕ್ರೀಡಾಂಗಣಕ್ಕೆ ಹೋಗಬೇಕು. ಈ ಕಾರಣಕ್ಕಾಗಿಯೇ ಅನೇಕರು ಕ್ರೀಡೆಯಿಂದ ವಿಮುಖರಾಗುತ್ತಿದ್ದಾರೆ.

ರಕ್ಷಿತ್, ನಾಗೇಂದ್ರ ಬ್ಲಾಕ್ ನಿವಾಸಿ

ಮಕ್ಕಳನ್ನು ಕ್ರೀಡಾಪಟುಗಳನ್ನಾಗಿ ರೂಪಿಸಬೇಕು. ಅವರಲ್ಲಿ ಕ್ರೀಡಾಸಕ್ತಿ ಬೆಳೆಸಬೇಕು ಎಂಬ ಹಂಬಲ ಎಲ್ಲ ತಂದೆ ತಾಯಿಗಳಿಗೂ ಇರುತ್ತದೆ. ಅದು ಈಡೇರಬೇಕಾದರೆ ಗುಣಮಟ್ಟದ ಮೈದಾನಗಳು ಇರಲೇಬೇಕು. ಆದರೆ, ನಮ್ಮ ಬಡಾವಣೆಯ ನಿವಾಸಿಗಳು ಅದರಿಂದ ವಂಚಿತರಾಗಿದ್ದಾರೆ. ನಮ್ಮ ಮಕ್ಕಳು ಆಟ ಆಡಬೇಕಾದರೆ ಇಲ್ಲಿಂದ ನಾಲ್ಕು ಕಿ.ಮೀ.ದೂರದಲ್ಲಿರುವ ಎಂ.ಸಿ.ಲೇಔಟ್‌ಗೆ ಹೋಗಬೇಕು. ಪ್ರತಿದಿನ ಕೆಲಸ ಬಿಟ್ಟು ಅಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗುವುದು ಕಷ್ಟ. ನಮ್ಮ ಬಡಾವಣೆಯಲ್ಲೇ ಸುಸಜ್ಜಿತ ಮೈದಾನ ಸ್ಥಾಪಿಸಿದರೆ ಅನುಕೂಲ.

ಮಹೇಶ್, ಚಂದ್ರಾ ಲೇಔಟ್ ನಿವಾಸಿ

ರಾಜಕಾಲುವೆಯ ಪಕ್ಕದಲ್ಲಿ ಮೈದಾನ ನಿರ್ಮಿಸಲಾಗಿದೆ. ಹೀಗಾಗಿ ಮಳೆಗಾಲದಲ್ಲಿ ಇಲ್ಲೆಲ್ಲಾ ತ್ಯಾಜ್ಯ ನೀರು ಸಂಗ್ರಹವಾಗಿ ಬಿಡುತ್ತದೆ. ಇಲ್ಲೇ ಘನ ತ್ಯಾಜ್ಯ ತಂದು ಸುರಿಯುತ್ತಿದ್ದಾರೆ. ಇದಕ್ಕೆಲ್ಲಾ ಕಡಿವಾಣ ಹಾಕಿ ಈ ಮೈದಾನವನ್ನು ಉನ್ನತೀಕರಿಸಲು ಪ್ರಯತ್ನಿಸಬೇಕು.

ಶಿವಾಜಿ ರಾವ್, ಬಸವೇಶ್ವರನಗರ 100ನೇ ವಾರ್ಡ್ ನಿವಾಸಿ

ಕ್ರೀಡೆ ಅಂದರೆ ಕೇವಲ ಕ್ರಿಕೆಟ್ ಅಲ್ಲ. ವಾಲಿಬಾಲ್, ಕೊಕ್ಕೊ, ಕಬಡ್ಡಿ, ಫುಟ್‌ಬಾಲ್‌ಗೂ ಆದ್ಯತೆ ನೀಡಬೇಕಿದೆ. ಬಿಬಿಎಂಪಿ ಹಾಗೂ ಬಿಡಿಎ ಇದನ್ನು ಗಮನದಲ್ಲಿಟ್ಟುಕೊಂಡು ಮೈದಾನಗಳನ್ನು ಅಭಿವೃದ್ಧಿಪಡಿಸಿದರೆ ಉತ್ತಮ.

ಸುಮನ್ ಚಂದ್ರಶೇಖರ್, ಉದ್ಯೋಗಿ, ಪೀಣ್ಯ

ನಗರದ ಬಹುತೇಕ ಮೈದಾನಗಳಿಗೆ ಗೇಟ್ ಇಲ್ಲ. ಅಂತಹ ಮೈದಾನಗಳು ಕಾರು ಮತ್ತು ಬೈಕ್ ಸವಾರರ ಚಾಲನಾ ತರಬೇತಿ ತಾಣಗಳಾಗಿವೆ. ಅನೇಕರು ವ್ಹೀಲಿಂಗ್ ಮಾಡುವುದನ್ನೂ ನೋಡಿದ್ದೇನೆ. ಇದರಿಂದ ಮೈದಾನಗಳು ಹಾಳಾಗುತ್ತಿವೆ. ಇದಕ್ಕೆ ಕಡಿವಾಣ ಬೀಳಬೇಕಿದೆ.

ಶಿವರಂಜನ್, ಚಾಮರಾಜಪೇಟೆ ನಿವಾಸಿ

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,11,439 ಒಟ್ಟು ಸೋಂಕಿತರು

4,00,812 ಗುಣಮುಖರಾದವರು

6,107 ಸಕ್ರಿಯ ಪ್ರಕರಣ

4,519 ಸಾವು

ಭಾನುವಾರದ ಏರಿಕೆ

628 ದೃಢಪಟ್ಟ ಪ್ರಕರಣ

371 ಗುಣಮುಖ | **03** ಸಾವು

'ಚೀಸ್ ಬಳಸಿ ರುಚಿಕರ ಅಡುಗೆ ಮಾಡುವುದು ಹೇಗೆ?' ಎಂಬ ಪುಸ್ತಕವನ್ನು ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿರವರು ವಿದ್ಯಾರ್ಥಿಯೊಬ್ಬರಿಗೆ ನೀಡಿದರು. ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳು ಇದ್ದಾರೆ

ನಂದಿನಿ ಚೀಸ್ ಈಗ ಎಲ್ಲೆಡೆ ಲಭ್ಯ: ನರಸಿಂಹಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ರಾಸಾಯನಿಕಗಳ ಮಿಶ್ರಣವಿಲ್ಲದ, ಶುದ್ಧ ಹಾಗೂ ಆರೋಗ್ಯಕ್ಕೆ ಯಾವುದೇ ರೀತಿಯಲ್ಲೂ ಹಾನಿಕಾರಕವಲ್ಲದ ನಂದಿನಿ ಚೀಸ್ ಸದ್ಯ ಎಲ್ಲ ನಂದಿನಿ ಬೂತ್‌ಗಳು ಸೇರಿದಂತೆ ಆಯ್ದ ಮಾಲ್‌ಗಳಲ್ಲೂ ಸಿಗಲಿದ್ದು, ನಂದಿನಿ ಚೀಸ್ ಬಳಸಿ ರೈತರನ್ನು ಉಳಿಸಿ ಎಂದು ಬಮೂಲ್ ಅಧ್ಯಕ್ಷ ನರಸಿಂಹ ಮೂರ್ತಿ ಗ್ರಾಹಕರಲ್ಲಿ ಮನವಿ ಮಾಡಿದ್ದಾರೆ.

ಮೌಂಟ್ ಕಾರ್ಮೆಲ್ ಕಾಲೇಜಿನ ಹೋಂ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ಹಾಗೂ ನಂದಿನಿ ಚಿಲ್ಲರೆ ವ್ಯಾಪಾರಿಗಳಿಗಾಗಿ ಬಮೂಲ್ ಆವರಣದಲ್ಲಿ ಆಯೋಜಿಸಿದ್ದ 'ದಿನ ಬಳಕೆ ಆಹಾರದಲ್ಲಿ ಚೀಸ್ ಬಳಕೆ ಹಾಗೂ ಅದರ ಉಪಯುಕ್ತತೆ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

'ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಕನಕಪುರದಲ್ಲಿ ₹270 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಚೀಸ್ ತಯಾರಿಕಾ ಘಟಕವನ್ನು ಸ್ಥಾಪಿಸಲಾಗಿದೆ. ಬಮೂಲ್ ಮತ್ತು ಕೆಎಂಎಫ್ ಇತ್ತೀಚೆಗೆ ರಫ್ತು ಪರವಾನಗಿಯನ್ನು ಪಡೆದಿವೆ. ನಂದಿನಿ ಉತ್ಪನ್ನಗಳು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಡುವ ದಿನಗಳು ಸಮೀಪವಾಗಿವೆ' ಎಂದರು.

ಮೌಂಟ್ ಕಾರ್ಮೆಲ್ ಕಾಲೇಜಿನ ಮುಖ್ಯಸ್ಥೆ ಸುಂದರವಲ್ಲಿ ಮಾತನಾಡಿದರು.ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್, ಬಮೂಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಕೆ. ಸ್ವಾಮಿ, ಕೆಎಂಎಫ್ ನಿರ್ದೇಶಕ ಎಂ.ಟಿ. ಕುಲಕರ್ಣಿ, ಮಾರುಕಟ್ಟೆ ವಿಭಾಗದ ಡಾ. ಬಿ.ಪಿ. ಸುರೇಶ್, ಡಾ. ರುದ್ರೇಶ್ ಇದ್ದರು.

ಕಮಲ ಹಾಸನ್ ಕಾರಿನ ಮೇಲೆ ದಾಳಿ

ಕಾಂಚೀಪರಂ (ತಮಿಳುನಾಡು) (ಪಿಟಿಐ): ನಟ ಹಾಗೂ ಮಕ್ಕಳ್ ನೀದಿ ಮಯ್ಯಂ (ಎಂಎನ್‌ಎಂ) ಪಕ್ಷದ ನಾಯಕ ಕಮಲ ಹಾಸನ್ ಅವರ ಕಾರಿನ ಮೇಲೆ ಭಾನುವಾರ ರಾತ್ರಿ ಇಲ್ಲಿ ಯುವಕನೊಬ್ಬ ದಾಳಿ ನಡೆಸಿದ್ದಾನೆ.

ಚುನಾವಣಾ ಪ್ರಚಾರ ಮುಗಿಸಿ ಇಲ್ಲಿನ ಹೋಟೆಲ್‌ನತ್ತ ಬರುತ್ತಿದ್ದಾಗ ಈ ಘಟನೆ ನಡೆದಿದೆ. ದಾಳಿಯಲ್ಲಿ ಕಮಲ ಹಾಸನ್ ಅವರಿಗೆ ಯಾವುದೇ ಗಾಯವಾಗಿಲ್ಲ. ಆದರೆ ಕಾರಿನ ಮುಂಭಾಗದ ಗಾಜು ಪುಡಿಪುಡಿಯಾಗಿದೆ.

ಈ ಬಗ್ಗೆ ಪಕ್ಷದ ನಾಯಕ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿ ಎ.ಜಿ. ಮೌರ್ಯ ಟ್ವೀಟ್ ಮಾಡಿದ್ದು, ಹಲ್ಲೆ ಯತ್ನವನ್ನು ಪೊಲೀಸರು ಯಶಸ್ವಿಯಾಗಿ ಹತ್ತಿಕ್ಕಿದ್ದಾರೆ, ಇಂತಹ ಶಕ್ತಿಗಳ ಬೆದರಿಕೆಗಳಿಗೆ ಪಕ್ಷ ಅಂಜುವುದಿಲ್ಲ ಎಂದು ಹೇಳಿದ್ದಾರೆ.

'ತ್ಯಾಜ್ಯ ಸಮಸ್ಯೆಗೆ ಶೀಘ್ರವೇ ಪರಿಹಾರ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಕಸ ವಿಲೇವಾರಿ ಪ್ರಕ್ರಿಯೆಯಲ್ಲಿ ಸರ್ಕಾರದೊಂದಿಗೆ ನಾಗರಿಕರು ಕೈ ಜೋಡಿಸಿದರೆ ತ್ಯಾಜ್ಯ ಸಮಸ್ಯೆಗೆ ಶೀಘ್ರ ಪರಿಹಾರ ದೊರಕುತ್ತದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉಲ್ಲಾಳು ವಾರ್ಡ್‌ನಲ್ಲಿ ಬಿಬಿಎಂಪಿ ಘನ ತ್ಯಾಜ್ಯ ಕೆಂಗೇರಿ ಉಪವಿಭಾಗ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ(1ರಿಂದ9) ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ನಮ್ಮ ಕಾಂಪೋಸ್ಟಿಂಗ್' ಸಾವಯವ ಗೊಬ್ಬರ ಸಂತೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ನಮ್ಮ ಕಾಂಪೋಸ್ಟಿಂಗ್' ಸಾವಯವ ಗೊಬ್ಬರ ಸಂತೆಗೆ ಭೇಟಿ ನೀಡಿದ ಸಚಿವ ಎಸ್.ಟಿ.ಸೋಮಶೇಖರ್ ಮಳಿಗೆಯಲ್ಲಿದ್ದ ಪರಿಕರಗಳನ್ನು ವೀಕ್ಷಿಸಿದರು. ಸ್ಥಳೀಯ ಮುಖಂಡ ಅನಿಲ್ ಕುಮಾರ್, ಎಇಇ ಪೂರ್ಣಿಮಾ ಇದ್ದಾರೆ

'ಬೆಂಗಳೂರಿಗೆ ಕಸದ ಸಮಸ್ಯೆಯೇ ಕಂಟಕವಾಗಿ ಪರಿಣಮಿಸಿದೆ. ಘನ ತ್ಯಾಜ್ಯ ವಿಲೇವಾರಿ ಪ್ರಕ್ರಿಯೆ ಸಮರ್ಪಕವಾಗಿ ನಡೆದರೆ ಯಾವುದೇ ರೀತಿಯ ತೊಂದರೆ ಎದುರಾಗುವುದಿಲ್ಲ. ಮನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ಹಂತ ಹಂತವಾಗಿ ವಿಂಗಡಿಸಿ ಗೊಬ್ಬರವನ್ನಾಗಿ ಪರಿವರ್ತಿಸಿಕೊಂಡರೆ ತ್ಯಾಜ್ಯ ಸಮಸ್ಯೆಗೆ ಪ್ರಾಥಮಿಕ ಹಂತದಲ್ಲೇ ಪರಿಹಾರ ದೊರಕಲಿದೆ' ಎಂದರು.

ಸರ್.ಎಂ. ವಿಶ್ವೇಶ್ವರಯ್ಯ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ಎಸ್.ಗೌಡ , 'ಬಿಡಿಎ ವತಿಯಿಂದ ಬಡಾವಣೆ ನಿರ್ಮಾಣಗೊಂಡಿದ್ದರೂ ಘನತ್ಯಾಜ್ಯ ವಿಲೇವಾರಿ ಸಮಸ್ಯೆಯಿಂದ ಬಡಾವಣೆಯ ಜನರು ಹೈರಾಣಾಗಿದ್ದರು. ಹಸಿರು ನ್ಯಾಯ ಮಂಡಳಿಯ ಮಧ್ಯಸ್ತಿಕೆಯಿಂದಾಗಿ ತ್ಯಾಜ್ಯ ವಿಲೇವಾರಿ ಮಾಡಲು ಬಿಬಿಎಂಪಿ ಮುಂದಾಗಿದ್ದು, ಸಮಸ್ಯೆಗೆ ಪರಿಹಾರ ದೊರಕಿದಂತಾಗಿದೆ' ಎಂದರು.

ಗೊಬ್ಬರ ಸಂತೆಯಲ್ಲಿ ಸಾವಯವ ಗೊಬ್ಬರ ತಯಾರಿಸುವ ವಿಧಾನದ ಪ್ರಾತ್ಯಕ್ಷಿಕೆ, ಸಾವಯವ ಗೊಬ್ಬರದಿಂದಾಗುವ ಅನುಕೂಲಗಳು, ಗೊಬ್ಬರ ಮಾರಾಟದ ಬಗ್ಗೆ ಮಾಹಿತಿ ನೀಡಲಾಯಿತು. ಕೈದೋಟ ಮಾಡಲು ಬೇಕಾದ ಪಾಟ್ ಗಿಡಗಳು, ಬೀಜ, ಗೊಬ್ಬರ, ಕಳೆ ಕೀಳುವ ಉಪಕರಣ, ಔಷಧ ಸಿಂಪಡಿಸುವ ಉಪಕರಣ ಮತ್ತು ನಾನಾ ಪರಿಕರಗಳ ಮಾರಾಟ ಮಳಿಗೆಗಳನ್ನು ತೆರೆಯಲಾಗಿತ್ತು.

ಬಿಬಿಎಂಪಿ ಘನತ್ಯಾಜ್ಯ ವಿಶೇಷ ಆಯುಕ್ತ ರಂದೀಪ್ ಸಂತೆಗೆ ಭೇಟಿ ನೀಡಿದ್ದರು.

ಘನತ್ಯಾಜ್ಯ ಮುಖ್ಯ ಎಂಜಿನಿಯರ್ ವಿಶ್ವನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರ ಪೂರ್ಣಿಮಾ, ಘನ ತ್ಯಾಜ್ಯ ಹಿರಿಯ ಆರೋಗ್ಯ ಪರಿವೀಕ್ಷಕ ನಾಗರಾಜ್, ಕಿರಿಯ ಆರೋಗ್ಯ ಪರಿವೀಕ್ಷಕ ವಿನಯ್, ಅನಿಲ್ ಚಳಗೇರಿ, ವಾರ್ಡ್ ಅಧ್ಯಕ್ಷ ಜಯರಾಮ್, ಮುಖಂಡರಾದ ಕದರಪ್ಪ, ಗಿರೀಶ್, ರಮೇಶ್‌ಗೌಡ ಉಪಸ್ಥಿತರಿದ್ದರು.

ವರ್ಣಚಿತ್ರಕಾರ ಲಕ್ಷ್ಮಣ್ ಪೈ ನಿಧನ

ಪಣಜಿ (ಪಿಟಿಐ): ಖ್ಯಾತ ವರ್ಣಚಿತ್ರಕಾರ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಲಕ್ಷ್ಮಣ್ ಪೈ (95) ಅವರು ಭಾನುವಾರ ಸಂಜೆ ಗೋವಾದ ತಮ್ಮ ನಿವಾಸದಲ್ಲಿ ನಿಧನರಾದರು.

1926ರಲ್ಲಿ ಗೋವಾದಲ್ಲಿ ಜನಿಸಿದ ಪೈ ಅವರಿಗೆ ಪದ್ಮಭೂಷಣ್, ಪದ್ಮಶ್ರೀ, ನೆಹರೂ ಪ್ರಶಸ್ತಿ, ಲಲಿತ ಕಲಾ ಅಕಾಡೆಮಿ ಪ್ರಶಸ್ತಿಗಳೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ.

ಲಕ್ಷ್ಮಣ್ ಪೈ ಅವರ ನಿಧನಕ್ಕೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಟ್ವೀಟ್ ಮೂಲಕ ಕಂಬನಿ ಮಿಡಿದಿದ್ದಾರೆ.

ಸದಾಶಿವ ಆಯೋಗ ವರದಿ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಒಳ ಮೀಸಲಾತಿಗಾಗಿ ಎರಡು ದಶಕದಿಂದ ಹೋರಾಟ ನಡೆಯುತ್ತಿದೆ. ಆದರೆ ನಮ್ಮನ್ನು ಆಳುವ ಸರ್ಕಾರಗಳು ಮೀಸಲಾತಿ ನೀಡದೆ ವಂಚಿಸುತ್ತ ಬಂದಿವೆ' ಎಂದು ಆದಿ ಜಾಂಬವ ಜನಸಂಘದ ರಾಜ್ಯ ಘಟಕದ ಅಧ್ಯಕ್ಷ ಮುನಿಕೃಷ್ಣಯ್ಯ ಹೇಳಿದರು.

ಮಹದೇವಪುರ ಕ್ಷೇತ್ರದ ಚೀಮಸಂದ್ರದಲ್ಲಿ ಆದಿ ಜಾಂಬವ ಜನಸಂಘದ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದರು.

'ಮಾದಿಗ ಸಮುದಾಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಒಳ ಮೀಸಲಾತಿ ಜಾರಿಗಾಗಿ ಬೆಂಗಳೂರಿನಲ್ಲಿ ಕಳೆದ 8ರಂದು ಎಂಟರಂದು ಚೈತನ್ಯ ರಥಯಾತ್ರೆ ಹೋರಾಟ ಹಮ್ಮಿಕೊಳ್ಳಲಾಗಿತ್ತು. ಸಚಿವ ಶ್ರೀರಾಮಲು ಹೋರಾಟದ ಸ್ಥಳಕ್ಕೆ ಬಂದು ಸದಾಶಿವ ಆಯೋಗದ ವರದಿ ಜಾರಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆ ಭರವಸೆ ನೀಡಿದ್ದರು. ಈ ಭರವಸೆ ಈಡೇರದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುತ್ತೇವೆ' ಎಂದರು.

ಆದಿ ಜಾಂಬವ ಜನಸಂಘದ ಪೂರ್ವ ತಾಲ್ಲೂಕು ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮುನಿಕೃಷ್ಣಯ್ಯ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಡಾ.ರಾಮಚಂದ್ರ, ಮುನಿಮಾರಪ್ಪ, ನರಸಿಂಹಯ್ಯ, ಬಿ.ಎನ್.ಮಂಜುನಾಥ್, ಕೃಷ್ಣಮೂರ್ತಿ, ಮಾದೇಶ್, ಸತೀಶ್ ಕುಮಾರ್ ಇದ್ದರು

'ಮೂಲಸೌಲಭ್ಯ ಕಲ್ಪಿಸಲು ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಡಿಯುವ ನೀರು, ರಸ್ತೆ, ವಸತಿ, ಶಿಕ್ಷಣದಂತಹ ಮೂಲಸೌಲಭ್ಯ ಕಲ್ಪಿಸಲು ಆದ್ಯತೆ ನೀಡುವ ಮೂಲಕ ಕ್ಷೇತ್ರವನ್ನು ಅಭಿವೃದ್ಧಿಯತ್ತ ಒಯ್ಯಲಾಗುತ್ತಿದೆ' ಎಂದು ಶಾಸಕ ಎಂ.ಕೃಷ್ಣಪ್ಪ ಹೇಳಿದರು.

ಕ್ಷೇತ್ರದಲ್ಲಿ ₹5 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಕ್ಷೇತ್ರವು ಸಂಪೂರ್ಣ ಗ್ರಾಮೀಣ ಮತ್ತು ಕಂದಾಯ ಬಡಾವಣೆಗಳನ್ನು ಹೊಂದಿದ್ದು, ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಶೇಷ ಅನುದಾನ ನೀಡುತ್ತಿರುವುದರಿಂದ ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ' ಎಂದರು.

ನಗರದ ಎಲ್ ಅಂಡ್ ಟಿ ಗೇಟ್ ಬಳಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಂ. ಕೃಷ್ಣಪ್ಪ ಚಾಲನೆ ನೀಡಿದರು. ಸ್ಥಳೀಯ ಬಿಜೆಪಿ ಮುಖಂಡರು ಹಾಜರಿದ್ದರು

ಆರ್.ಬಿ.ಐ ಬಡಾವಣೆ, ಗೌರವ ನಗರ, ರಾಘವೇಂದ್ರ ಬಡಾವಣೆ, ಎಲ್ ಅಂಡ್ ಟಿ ಸೌತ್ ಸಿಟಿ ಸೆಂಟರ್ ಮತ್ತು ಬೇಗೂರಿನ ವಿಶ್ವಪ್ರಿಯ ಲೇಔಟ್ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಯಿತು.

ಬಿಜೆಪಿ ಮುಖಂಡರಾದ ಶಶಿರೇಖಾ ಜಯರಾಮು, ರಮೇಶ್ ಆರಾಧ್ಯ, ಹನುಮಂತ ಭಜಂತ್ರಿ, ಜಯರಾಮು, ಲೋಕೇಶ್, ತ್ಯಾಗರಾಜು, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಶ್ರೀನಿವಾಸ್, ಸಹಾಯಕ ಎಂಜಿನಿಯರ್ ಚೆಲುವರಾಜು ಮತ್ತಿತರರು ಇದ್ದರು.

ಕಾಡು ಪ್ರಾಣಿಗಳಿಗೆ ಟ್ಯಾಂಕರ್ ನೀರು

ಕನಕಪುರ:ಬೇಸಿಗೆಯಲ್ಲಿ ಕುಡಿಯುವ ನೀರಿಲ್ಲದೆ ಪರದಾಡುತ್ತಿರುವ ಕಾಡು ಪ್ರಾಣಿ ಮತ್ತು ಪಕ್ಷಿಗಳ ದಾಹ ತೀರಿಸಲು ಟ್ಯಾಂಕರ್ ಮೂಲಕ ಕಾಡು ಪ್ರದೇಶದ ಕೆರೆ ಕುಂಟೆಗಳಿಗೆ ನೀರು ತುಂಬಿಸಲಾಗುತ್ತಿದೆ.

ಮುತ್ತತ್ತಿ ಅರಣ್ಯ ಪ್ರದೇಶದಲ್ಲಿ ಕೆರೆ ಕುಂಟೆಗಳಲ್ಲಿದ್ದ ನೀರು ಖಾಲಿಯಾಗಿ ಕಾಡು ಪ್ರಾಣಿಗಳು ಕುಡಿಯುವ ನೀರಿಗಾಗಿ ಪರದಾಡುತ್ತಿವೆ. ಇದನ್ನು ಅರಿತ ಬೂಹಳ್ಳಿ ಉಮೇಶ್ ಎಂಬುವರು ಸ್ವಂತ ಹಣದಿಂದ ಟ್ಯಾಂಕರ್‌ಗಳ ಮೂಲಕ ಕೆರೆ ಕುಂಟೆಗಳಿಗೆ ನೀರು ತುಂಬಿಸುತ್ತಿದ್ದಾರೆ.

ನಾಲ್ಕು ದಿನಗಳಿಂದ ಪ್ರತಿದಿನ ಎರಡು ಟ್ಯಾಂಕರ್ ನೀರು ಪೂರೈಕೆ ಮಾಡಲಾಗುತ್ತಿದೆ. ಬೇಸಿಗೆ ಮುಗಿಯುವ ತನಕ ಈ ಕಾರ್ಯ ಮುಂದುವರಿಸುವುದಾಗಿ ಅವರು ತಿಳಿಸಿದ್ದಾರೆ.

ಚಿತ್ರಾವಳಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆರಂಭಿಸಿರುವ ಎಕ್ಸ್‌ಪ್ರೆಸ್ ಕಾರ್ಗೊ ಟರ್ಮಿನಲ್ ಅನ್ನು ಭಾರತೀಯ ಎಕ್ಸ್‌ಪ್ರೆಸ್ ಇಂಡಸ್ಟ್ರಿ ಕೌನ್ಸಿಲ್‌ನ (ಇಐಸಿಐ) ಸಿಇಒ ವಿಜಯಕುಮಾರ್ ಉದ್ಘಾಟಿಸಿದರು. (ಎಡದಿಂದ) ಬಿಐಎಎಲ್‌ನ ಚೀಫ್ ಸ್ಟ್ರಾಟಜಿ ಆ್ಯಂಡ್ ಡೆವಲಪ್‌ಮೆಂಟ್ ಆಫಿಸರ್ ಸತ್ಯಕಿ ರಘುನಾಥ್, ಬಿಐಎಎಲ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹರಿ ಮರಾರ್, ಕಸ್ಟಮ್ಸ್, ಏರ್‌ಪೋರ್ಟ್ ಆ್ಯಂಡ್ ಏರ್ ಕಾರ್ಗೊ ಕಾಂಪ್ಲೆಕ್ಸ್‌ನ ಮುಖ್ಯ ಆಯುಕ್ತ ಅಶೋಕ್, ಕಸ್ಟಮ್ಸ್ ಬೆಂಗಳೂರು ವಲಯದ ಮುಖ್ಯ ಆಯುಕ್ತ ಎಂ.ಶ್ರೀನಿವಾಸ್ ಹಾಗೂ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಶಿವಕುಮಾರ್ ಮೊಹಾಂಕ ಇದ್ದಾರೆ



ದಿಶಾ ಭಾರತ್ ಸಂಸ್ಥೆಯ ಕಾರ್ಯಕರ್ತರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ಸುರೇಶ್ ಭಯ್ಯಾಜಿ ಜೋಶಿ ಪಾಲ್ಗೊಂಡರು. ಈ ವೇಳೆ ಅವರಿಗೆ 'ನನ್ನ ಭಾರತ' ಪುಸ್ತಕ ನೀಡಲಾಯಿತು. ದಿಶಾ ಭಾರತ್ ಸಂಸ್ಥೆಯ ಅಧ್ಯಕ್ಷ ಎನ್.ವಿ. ರಘುರಾಮ್, ಪ್ರಧಾನ ಕಾರ್ಯದರ್ಶಿ ರೇಖಾ ರಾಮಚಂದ್ರನ್ ಇದ್ದಾರೆ

ತುರಹಳ್ಳಿ ಅರಣ್ಯಪ್ರದೇಶದಲ್ಲಿನ ವೃಕ್ಷೋದ್ಯಾನದಲ್ಲಿ ಚಟುವಟಿಕೆ ಆರಂಭ

ಟ್ರೀ ಪಾರ್ಕ್ ಬದಲು ಮಕ್ಕಳೋದ್ಯಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಾಲ್ಕೈದು ದಿನಗಳಿಂದ ನಡೆಯುತ್ತಿರುವ ಕೆಲಸ
- ನಾಲ್ಕು ತಿಂಗಳಲ್ಲಿ ಕೆಲಸ ಪೂರ್ಣ
- ಸಾರ್ವಜನಿಕರನ್ನು ಆಕರ್ಷಿಸುವ ಉದ್ದೇಶ

ವರದಿ ಪರಿಣಾಮ

ಬೆಂಗಳೂರು: ನಗರದ ತುರಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಟ್ರೀ ಪಾರ್ಕ್ ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗುತ್ತಿದ್ದಂತೆ ಆ ನಿರ್ಧಾರದಿಂದ ಹಿಂದೆ ಸರಿದಿದ್ದ ಅರಣ್ಯ ಇಲಾಖೆಯು ಇದೇ ಅರಣ್ಯಪ್ರದೇಶದ ಮತ್ತೊಂದು ಭಾಗದಲ್ಲಿರುವ ವೃಕ್ಷೋದ್ಯಾನವನ್ನು ಅಭಿವೃದ್ಧಿಪಡಿಸಲು ಮುಂದಾಗಿದೆ.

ತುರಹಳ್ಳಿ ಅರಣ್ಯದ ಶೋಭಾ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್ ಇರುವ ಭಾಗದಲ್ಲಿ ಈಗ ಅಸ್ತಿತ್ವದಲ್ಲಿರುವ ಟ್ರೀ ಪಾರ್ಕ್‌ನಲ್ಲಿ ಚಿಲ್ಡ್ರನ್ ಪಾರ್ಕ್, ಬಯಲು ವ್ಯಾಯಾಮ ಶಾಲೆ ಹಾಗೂ ಕುಡಿಯುವ ನೀರಿನ ಘಟಕ ನಿರ್ಮಾಣ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸುವ ಕಾಮಗಾರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಪ್ರಾರಂಭಿಸಿದ್ದಾರೆ. ನಾಲ್ಕೈದು ದಿನಗಳಿಂದ ಈ ಕೆಲಸ ನಡೆಯುತ್ತಿದೆ.

'ಈ ವೃಕ್ಷೋದ್ಯಾನವನ್ನು ಸಕಲ ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಮೂರು–ನಾಲ್ಕು ತಿಂಗಳಲ್ಲಿ ಈ ಎಲ್ಲ ಸೌಲಭ್ಯ ಕಲ್ಪಿಸುವ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಅರಣ್ಯದ 38 ಎಕರೆ ಪ್ರದೇಶದಲ್ಲಿ ಈಗಾಗಲೇ ಇಲ್ಲಿ ಟ್ರೀ ಪಾರ್ಕ್ ನಿರ್ಮಾಣವಾಗಿದೆ. 2011ರಲ್ಲಿ ಪ್ರಾರಂಭವಾದ ಕಾಮಗಾರಿ 2018ರಲ್ಲಿ ಪೂರ್ಣಗೊಂಡಿತ್ತು. ಆದರೆ, ಸಮರ್ಪಕವಾಗಿ ನಿರ್ವಹಿಸದ ಕಾರಣ ಹಾಳು ಬಿದ್ದಂತಾಗಿತ್ತು. ಈ ನಡುವೆಯೇ, ಅರಣ್ಯ ಪ್ರದೇಶದ ಇನ್ನೊಂದು ಭಾಗದಲ್ಲಿ ಮತ್ತೊಂದು ಟ್ರೀ ಪಾರ್ಕ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾದಾಗ ಪರಿಸರ ಪ್ರೇಮಿಗಳು ವಿರೋಧ ವ್ಯಕ್ತಪಡಿಸಿದ್ದರು.

'ಈಗಾಗಲೇ ಇರುವ ವೃಕ್ಷೋದ್ಯಾನವನ್ನು ಅರಣ್ಯ ಇಲಾಖೆ ಅಭಿವೃದ್ಧಿ ಪಡಿಸಬೇಕು. ಸಾರ್ವಜನಿಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ಎಲ್ಲ ಸೌಲಭ್ಯ ಕಲ್ಪಿಸಬೇಕು. ಈ ಪ್ರದೇಶದ ರಕ್ಷಣೆಗೆ ಸುತ್ತ ತಂತಿ ಬೇಲಿ ನಿರ್ಮಿಸಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದರು.

'ತುರಹಳ್ಳಿ ಕಾಡು ಕೆಡಿಸಲು ತರಾತುರಿ' ಶೀರ್ಷಿಕೆಯಡಿ ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.



ತುರಹಳ್ಳಿ ಅರಣ್ಯಪ್ರದೇಶದಲ್ಲಿ ಈಗ ಅಸ್ತಿತ್ವದಲ್ಲಿರುವ ವೃಕ್ಷೋದ್ಯಾನದ ನೋಟ ಪ್ರಜಾವಾಣಿ ಚಿತ್ರ

'ಪ್ರಶಸ್ತಿ ಆಯ್ಕೆಯಲ್ಲಿ ಅನ್ಯಾಯ ಆಗಿಲ್ಲ'

ರಾಮನಗರ: 'ಜಾನಪದ ಲೋಕ ನೀಡುವ ಗೌರವ ಪ್ರಶಸ್ತಿ ವಿಚಾರದಲ್ಲಿ ಯಾವುದೇ ಲೋಪ ಆಗಿಲ್ಲ. ಈ ಬಗ್ಗೆ ಕೆಲವರು ಬೇಕಂತಲೇ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಹಿ.ಶಿ. ರಾಮಚಂದ್ರೇಗೌಡ ಸ್ಪಷ್ಟನೆ ನೀಡಿದರು.

'ನಿವೃತ್ತ ಐಎಎಸ್ ಅಧಿಕಾರಿ ಕೆ. ಅಮರನಾರಾಯಣ ಎಂಬುವರು ತಮ್ಮ ಪೋಷಕರ ಹೆಸರಿನಲ್ಲಿ ₹25 ಸಾವಿರ ದತ್ತಿ ನಿಧಿಯನ್ನು 2010ರಲ್ಲಿ ನೀಡಿದ್ದರು. ಮಹಿಳಾ ಕಲಾವಿದೆಗೆ ಪ್ರಶಸ್ತಿ ನೀಡಬೇಕು ಎಂದು ಸಲಹೆ ನೀಡಿದ್ದರು. ಆದರೆ ನಂತರದ ವರ್ಷದಲ್ಲಿ ಈ ವಿಭಾಗದಲ್ಲಿ ಅರ್ಹ ಕಲಾವಿದೆ ಸಿಗದೇ ಇದ್ದಾಗ ಪುರುಷರಿಗೂ ಪ್ರಶಸ್ತಿ ನೀಡಲಾಗಿತ್ತು. ಹೀಗಿರುವಾಗ ಈ ಬಾರಿ ಮಹಿಳಾ ಕಲಾವಿದೆಯನ್ನು ಪರಿಷತ್ತು ಆಯ್ಕೆ ಮಾಡಿಲ್ಲ ಎಂದು ಅವರು ಆಯ್ಕೆ ಸಮಿತಿ ವಿರುದ್ಧ ಆಕ್ಷೇಪಾರ್ಹ ಆರೋಪಗಳನ್ನು ಮಾಡಿರುವುದು ಸರಿಯಲ್ಲ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ದೂರಿದರು.

'ಇದೇ ತಿಂಗಳ 2ರಂದು ಆಹ್ವಾನಪತ್ರಿಕೆ ಸಹ ಮುದ್ರಣ ಆಗಿತ್ತು. 9ರಂದು ಪರಿಷತ್ತಿಗೆ ಪತ್ರ ಬರೆದ ಅಮರನಾರಾಯಣ, ಪ್ರಶಸ್ತಿಗೆ ಬೇರೊಬ್ಬ ಮಹಿಳೆಯನ್ನು ಪರಿಗಣಿಸುವಂತೆ ಒತ್ತಾಯಿಸಿದರು. ಕಡೆಗೆ ಅವರ ಒತ್ತಡಕ್ಕೆ ಮಣಿದು ಆ ಮಹಿಳೆಗೂ ಪ್ರಶಸ್ತಿ ನೀಡಲಾಯಿತು' ಎಂದು ಆಕ್ಷೇಪಿಸಿದರು.

ವೀರಶೈವ ಮಹಾಸಭಾದ ಬಿಬಿಎಂಪಿ ಯುವಘಟಕ ಉದ್ಘಾಟನೆ

'ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ ಲಿಂಗಾಯತದಲ್ಲಿ 112ಕ್ಕೂ ಒಳಪಂಗಡಗಳಿದ್ದು, ಇವುಗಳನ್ನು ಕೇಂದ್ರದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯಲ್ಲಿ ಸೇರಿಸಬೇಕು ಎಂದು ರಾಜ್ಯಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ರಾಜ್ಯಸರ್ಕಾರ ಈ ಕುರಿತು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಮಹಾಸಭಾದ ಬಿಬಿಎಂಪಿ ಯುವಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದ 3ಬಿ ಮೀಸಲಾತಿಯಲ್ಲಿ ನಾವು ಇದ್ದು, ಶೇ 5ರಷ್ಟು ಮೀಸಲಾತಿ ಸಿಗುತ್ತಿದೆ. ಆದರೆ, ನಮ್ಮ ಸಮುದಾಯದ ಸಂಖ್ಯೆ ಹೆಚ್ಚಿರುವುದರಿಂದ ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಿದರೆ, ಶೇ 27ರಷ್ಟು ಮೀಸಲಾತಿ ದೊರಕುತ್ತದೆ. ಇದರಿಂದ ಕೇಂದ್ರ ಸರ್ಕಾರದ ಉದ್ಯೋಗ ಪಡೆಯಲು ಅನುಕೂಲವಾಗುತ್ತದೆ' ಎಂದರು.

'ವೀರಶೈವ ಸಮುದಾಯ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟ ವರ್ಗ. ಈಗ ನಾವೇ ಸಾಮಾಜಿಕ ನ್ಯಾಯ ಕೇಳಬೇಕಾಗಿದೆ. ನಮಗಿಂತ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಬಲರಾಗಿರುವ ಸಮುದಾಯಗಳು ಕೇಂದ್ರದ ಒಬಿಸಿ ಪಟ್ಟಿಯಲ್ಲಿವೆ. ನಮ್ಮನ್ನೂ ಈ ವರ್ಗಕ್ಕೆ ಪರಿಗಣಿಸಬೇಕು' ಎಂದರು.

'ರಾಜ್ಯಸರ್ಕಾರ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ₹500 ಕೋಟಿ ನೀಡಿದೆ. ಇದು ಸದ್ಬಳಕೆಯಾಗಬೇಕು. ಎಲ್ಲ ಒಳಪಂಗಡಗಳಲ್ಲಿನ ಆರ್ಥಿಕವಾಗಿ ಹಿಂದುಳಿದವರಿಗೆ ಹೆಚ್ಚು ಸೌಲಭ್ಯ ದೊರಕಿಸಿಕೊಡಬೇಕು' ಎಂದರು.

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, 'ವೀರಶೈವ ಲಿಂಗಾಯತ ಧರ್ಮದ ಸ್ಥಾಪಕರು ಬಸವೇಶ್ವರರೋ, ರೇಣುಕಾಚಾರ್ಯರೋ ಎಂದು ಚರ್ಚೆ ಮಾಡುವುದಕ್ಕಿಂತ, ನಮ್ಮ ಧರ್ಮದಲ್ಲಿನ ತತ್ವಗಳನ್ನು ಪಾಲಿಸಲು ಮುಂದಾಗಬೇಕು. ಸಮುದಾಯದ ಯುವಕ–ಯುವತಿಯರು ಲಿಂಗ ಧರಿಸಬೇಕು. ಲಿಂಗಪೂಜೆ ಮಾಡುವುದನ್ನು ಮಕ್ಕಳಿಗೂ ಹೇಳಿಕೊಡಬೇಕು' ಎಂದು ಸಲಹೆ ನೀಡಿದರು.

ರಾಜ್ಯ ಕೊಕ್ಕೊ ಸಂಸ್ಥೆ ಅಧ್ಯಕ್ಷ ಟಿ.ಎಸ್. ಲೋಕೇಶ್, 'ಸಮುದಾಯದ ಸಂಘಟನೆಯ ವೇಳೆ ಸಂಖ್ಯೆಯೂ ಮುಖ್ಯವಾಗುತ್ತದೆ. ಸಮಾವೇಶಗಳಿಗೆ, ಪ್ರತಿಭಟನೆ ವೇಳೆ ಜನರನ್ನು ಒಗ್ಗೂಡಿಸುವುದು ಅವಶ್ಯವಾಗುತ್ತದೆ. ರಾಜ್ಯದ ವೀರಶೈವ ಹಾಸ್ಟೆಲ್‌ಗಳಲ್ಲಿ ಓದುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಮಹಾಸಭಾದ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಹಾಸ್ಟೆಲ್‌ಗೆ ಸೇರಿಸಿಕೊಳ್ಳುವ ಸಂದರ್ಭದಲ್ಲಿಯೇ ಮಹಾಸಭಾದ ಸದಸ್ಯತ್ವ ಅರ್ಜಿಯನ್ನೂ ನೀಡಿ ನೋಂದಣಿ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಮಹಾಸಭಾದ ಬಿಬಿಎಂಪಿ ಯುವಘಟಕದ ನೂತನ ಅಧ್ಯಕ್ಷ ಎಚ್.ಡಿ. ರೇಣುಕಾರಾಧ್ಯ, 'ಬಿಬಿಎಂಪಿಯ ಎಲ್ಲ ವಾರ್ಡ್‌ಗಳಲ್ಲಿ ಮಹಾಸಭಾದ ಪದಾಧಿಕಾರಿಗಳು ಇರುವಂತೆ ನೋಡಿಕೊಳ್ಳಲಾಗುವುದು. ಮುಂದಿನ ಬಿಬಿಎಂಪಿ ಚುನಾವಣೆ ವೇಳೆ ವೀರಶೈವ ಲಿಂಗಾಯತ ಸಮುದಾಯದ ಅಭ್ಯರ್ಥಿಗಳಿಗೆ ಹೆಚ್ಚು ಟಿಕೆಟ್ ನೀಡಿ ಅವರನ್ನು ಗೆಲ್ಲಿಸಿಕೊಂಡು ಬರುವಂತೆ ಸಮುದಾಯದ ರಾಜಕೀಯ ಮುಖಂಡರಿಗೆ ಮನವಿ ಮಾಡಿಕೊಳ್ಳಲಾಗುವುದು' ಎಂದರು.

ಬಿಬಿಎಂಪಿ ಯುವಘಟಕಕ್ಕೆ 29 ವಿಧಾನಸಭಾ ಕ್ಷೇತ್ರಗಳಲ್ಲಿ 33 ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಕಾರ್ಯಕ್ರಮವನ್ನು ಬಿ.ಎಸ್. ಪರಮಶಿವಯ್ಯ ಉದ್ಘಾಟಿಸಿದರು. ಟಿ.ಎಸ್. ಲೋಕೇಶ್, ಗುರುಸ್ವಾಮಿ, ಭಾರತಿ ಮಲ್ಲಿಕಾರ್ಜುನಪ್ಪ ಅಳವಂಡಿ ಇತರರು ಇದ್ದರು

ಸಚಿವ ಮುರುಗೇಶ ನಿರಾಣಿ ಹೇಳಿಕೆ

'ಮೀಸಲಾತಿ ಕಲ್ಪಿಸಲು ಸರ್ಕಾರ ಬದ್ಧ'

ಪ್ರಜಾವಾಣಿ ವಾರ್ತೆ

ಮುರುಗೇಶ ನಿರಾಣಿ

ಬೆಳಗಾವಿ: 'ಸಮಸ್ತ ವೀರಶೈವ ಲಿಂಗಾಯತ ಸಮಾಜಕ್ಕೆ ಕಾನೂನು ಚೌಕಟ್ಟಿನಲ್ಲಿ ಮೀಸಲಾತಿ ಸೌಲಭ್ಯ ಕಲ್ಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

ನಗರದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಲಿಂಗಾಯತ ಪಂಚಮಸಾಲಿ ಸಮುದಾಯ ಯಾವುದೇ ಜಾತಿ ಕಾಲಂನಲ್ಲಿ ಇರಲಿಲ್ಲ. ಈ ವಿಷಯವನ್ನು 2010ರಲ್ಲಿ ನಾನು ಕೈಗಾರಿಕಾ ಸಚಿವನಾಗಿದ್ದಾಗ ಆಗಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಗಮನಕ್ಕೆ ತಂದಿದ್ದೆ. ಆಗ, ಅವರು ಉಪಸಮಿತಿ ರಚಿಸಿದ್ದರು. ಅದರಲ್ಲಿ ನಾನೂ ಸದಸ್ಯನಿದ್ದೆ. ಯಡಿಯೂರಪ್ಪ ಅವರು ಪ್ರವರ್ಗ 2ಎ ಮೀಸಲಾತಿಗೆ ರೆಫರ್ ಮಾಡಿದ್ದರು. ಅಧಿವೇಶನದಲ್ಲಿ ಪ್ರಶ್ನೆ ಬಂದರೆ ವಿಳಂಬ ಆಗುತ್ತದೆ ಎಂಬ ಕಾರಣಕ್ಕೆ 3ಬಿಗೆ ಸೇರಿಸಿದರು. ಸಮಾಜವನ್ನು ಪ್ರವರ್ಗ 3ಬಿಗೆ ಸೇರ್ಪಡೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ' ಎಂದರು.

'ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ 2ಎ ಮೀಸಲಾತಿ ನೀಡಲು ಮುಖ್ಯಮಂತ್ರಿ ಒಲವು ತೋರಿಸಿದ್ದರು. ಆದರೆ, ಸಮಾಜದ ಕೆಲ ಶಾಸಕರು ಅವರ ದಾರಿ ತಪ್ಪಿಸಿದರು' ಎಂಬ ಕೂಡಲಸಂಗಮದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿಕೆಗೆ, 'ಅವರು ದೊಡ್ಡವರು. ಚಿಕ್ಕವನಾದ ನಾನು ಅವರ ಹೇಳಿಕೆಗಳಿಗೆ ಪ್ರತಿಕ್ರಿಯಿಸುವುದಿಲ್ಲ' ಎಂದು ತಿಳಿಸಿದರು.

'ಈಗ ಎಲ್ಲ ಸಮಾಜದವರೂ ಮೀಸಲಾತಿ ಅಥವಾ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಕೇಳುತ್ತಿದ್ದಾರೆ. ಇದು ಸರ್ಕಾರದ ಮುಂದಿರುವ ಬಹಳ ದೊಡ್ಡ ಬೇಡಿಕೆ. ಯಾವ ಸಮಾಜದವರು ಮೀಸಲಾತಿಗೆ ಅರ್ಹರಿದ್ದಾರೆ ಎನ್ನುವುದರ ಬಗ್ಗೆ ಹಿಂದುಳಿದ ವರ್ಗಗಳ ಆಯೋಗ ವರದಿ ನೀಡಲಿದೆ. ಸರ್ಕಾರವೂ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿ ರಚಿಸಿದೆ. ಈ ಸಮಿತಿ ವರದಿ ನೀಡಿದ ನಂತರ ಮುಖ್ಯಮಂತ್ರಿ ಮುಂದಿನ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ತಿಳಿಸಿದರು.

'ಸಿ.ಡಿ. ಪ್ರಕರಣದಲ್ಲಿ ಶಾಸಕ ರಮೇಶ ಜಾರಕಿಹೊಳಿ ನಿರಪರಾಧಿಯಾಗಿ ಹೊರಬರುತ್ತಾರೆಂಬ ವಿಶ್ವಾಸವಿದೆ' ಎಂದರು. 'ಪ್ರಕರಣದಲ್ಲಿ ನನ್ನನ್ನು ಸಿಲುಕಿಸುವ ಯತ್ನ ನಡೆಯುತ್ತಿದೆ' ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆಗೆ, 'ಆ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾಲ್ಕೈದು ದಿನಗಳಿಂದ ಟಿವಿಯನ್ನೂ ನೋಡಿಲ್ಲ. ಯಾರು ತಪ್ಪು ಮಾಡಿದ್ದಾರೆಯೋ ಅವರಿಗೆ ಶಿಕ್ಷೆಯಾಗುತ್ತದೆ. ರಮೇಶ ಜಾರಕಿಹೊಳಿ ತಪ್ಪು ಮಾಡಿಲ್ಲ ಎಂದು ನನಗನಿಸುತ್ತದೆ. ತನಿಖೆ ಬಳಿಕ ಎಲ್ಲವೂ ಸಂಪೂರ್ಣವಾಗಿ ಗೊತ್ತಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯ ವಿರುದ್ಧ ಘೋಷಣೆ: ವರದಿ ಕೇಳಿದ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಮೇಯರ್ ಚುನಾವಣೆ ಬಳಿಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದ ಪ್ರಕರಣದ ವರದಿ ನೀಡುವಂತೆ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.

ಫೆ. 24ರಂದು ನಡೆದ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್- ಜೆಡಿಎಸ್ ಮೈತ್ರಿ ಮಾಡಿಕೊಂಡಿತ್ತು. ಆದರೆ, ಮೇಯರ್ ಪಟ್ಟವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡುವ ಬದಲು ಜೆಡಿಎಸ್ ತನ್ನ ಬಳಿಯೇ ಉಳಿಸಿಕೊಂಡಿದೆ. ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯುವ ಉದ್ದೇಶದಿಂದ ಕಾಂಗ್ರೆಸ್ ಈ ಹೊಂದಾಣಿಕೆ ಮಾಡಿಕೊಂಡಿತ್ತು.

ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಕಾರ್ಯನಿರ್ವಹಿಸುವಂತೆ ಶಾಸಕ ತನ್ವೀರ್ ಸೇಠ್ ಅವರಿಗೆ ಉಸ್ತುವಾರಿ ನೀಡಲಾಗಿತ್ತು. ಅವರು ಸಿದ್ದರಾಮಯ್ಯ ವಿರುದ್ಧವಾಗಿ ಕಾರ್ಯನಿರ್ವಹಿಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಇದು ಪಕ್ಷದಲ್ಲಿ ಗೊಂದಲಕ್ಕೆ ಕಾರಣವಾಗಿತ್ತು. ಸಿದ್ದರಾಮಯ್ಯ ಅವರ ಗಮನಕ್ಕೆ ಬಾರದಂತೆ ಮೈತ್ರಿ ನಡೆದಿತ್ತು. ಅಲ್ಲದೆ, ಕೆಲವು ಕಾಂಗ್ರೆಸ್ ಕಾರ್ಯಕರ್ತರು ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಡಾ ಕೂಗಿದ್ದರು.

ಇದೀಗ ಸಿದ್ದರಾಮಯ್ಯ ವಿರುದ್ಧ ಧಿಕ್ಕಾರ ಕೂಗಿದವರ ಬಗ್ಗೆ ವರದಿ ನೀಡುವಂತೆ ಶಿವಕುಮಾರ್ ಸೂಚಿಸಿದ್ದಾರೆ.

'ಧರ್ಮವಿಲ್ಲದ ವಿಜ್ಞಾನ ಕುರುಡು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮವಿಲ್ಲದ ವಿಜ್ಞಾನ ಕುರುಡು. ವಿಜ್ಞಾನವಿಲ್ಲದ ಧರ್ಮ ಕುಂಟು' ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜು, ಐಎಸ್‌ಸಿಎ ಸಹಯೋಗದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ 'ಭವಿಷ್ಯದ ವಿಜ್ಞಾನ ತಂತ್ರಜ್ಞಾನ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿಜ್ಞಾನವಿಲ್ಲದೆ ಮಾನವನ ಬೆಳವಣಿಗೆ ಸಾಧ್ಯವಿಲ್ಲ. ತಾಂತ್ರಿಕ ಪ್ರಗತಿಯೂ ಆಗುವುದಿಲ್ಲ. ಒಟ್ಟಾರೆ ಜಗತ್ತು ಸ್ತಬ್ಧಗೊಳ್ಳುತ್ತದೆ' ಎಂದರು.

ಐಎಸ್‌ಸಿಎ ಸಮನ್ವಯಕಾರ ಗಂಗಾಧರ್ 'ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲಾ ಕೆಲಸ ಮಾಡಬೇಕು. ಅದನ್ನು ಮೈಗೂಡಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ಇದಕ್ಕಾಗಿ ಸಾಧ್ಯವಾದಷ್ಟು ಹೆಚ್ಚು ವಿಚಾರ ಸಂಕಿರಣಗಳನ್ನು ಆಯೋಜಿಸಬೇಕು' ಎಂದರು.

ದಿ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಎಸ್.ಎನ್.ವಿ.ಎಲ್. ನರಸಿಂಹರಾಜು, ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜಿನ ಪ್ರಾಂಶುಪಾಲೆ ಆರ್.ಕಾವ್ಯಶ್ರೀ ಭಾಗವಹಿಸಿದ್ದರು.

ಕೆ.ಎಸ್.ರಂಗಪ್ಪ ಅವರನ್ನು ಸನ್ಮಾನಿಸಲಾಯಿತು.

ರಥೋತ್ಸವ ಉತ್ತರ ಕನ್ನಡದ ಪುರಾಣ ಪ್ರಸಿದ್ಧ ಗೋಕರ್ಣದಲ್ಲಿ ಮಹಾಶಿವರಾತ್ರಿಯ ಅಂಗವಾಗಿ ಮಹಾಬಲೇಶ್ವರ ದೇವರ ಬ್ರಹ್ಮರಥೋತ್ಸವವು ಭಾನುವಾರ ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಭಕ್ತರು ಉತ್ಸವವನ್ನು ಕಣ್ತುಂಬಿಕೊಂಡರು

ವಿವೇಕಾನಂದ ಕಲಾಕೇಂದ್ರದ ವತಿಯಿಂದ ಗಣ್ಯರು ಹಾಗೂ ಕಲಾವಿದರನ್ನು ಸನ್ಮಾನಿಸಲಾಯಿತು

ವೃತ್ತಿಯಲ್ಲಿ ನಿಷ್ಠೆ ಇರಲಿ: ಬಾಬು ಹಿರಣ್ಣಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೃತ್ತಿಯಲ್ಲಿ ನಿಷ್ಠೆ ಇರಬೇಕು. ಆಗ ಮಾತ್ರ ನಟನೊಬ್ಬ ಯಶಸ್ವಿಯಾಗಲು ಸಾಧ್ಯ. ಲೌಕಿಕ ಜೀವನದಲ್ಲಿ ಯಶಸ್ಸು, ಕೀರ್ತಿ, ಪ್ರಶಸ್ತಿ ಬಂದ ಮಾತ್ರಕ್ಕೆ ಆತನದು ಸಾರ್ಥಕ ಬದುಕು ಎಂದು ಭಾವಿಸಬೇಕಿಲ್ಲ. ಪಾತ್ರಕ್ಕೆ ಜೀವಂತಿಕೆ ತುಂಬಿ ಕಲಾ ರಸಿಕರನ್ನು ರಂಜಿಸುವವನೇ ನಿಜವಾದ ನಟ' ಎಂದು ನಟ ಬಾಬು ಹಿರಣ್ಣಯ್ಯ ಹೇಳಿದರು.

ವಿವೇಕಾನಂದ ಕಲಾಕೇಂದ್ರ ಆಯೋಜಿಸಿದ್ದ 'ರಂಗ ಸಂಭ್ರಮ' ನಾಟಕೋತ್ಸವದಲ್ಲಿ ಅವರು ಮಾತನಾಡಿದರು.

ಒಂಬತ್ತು ದಿನ ನಡೆದ 'ರಂಗ ಸಂಭ್ರಮ'ದಲ್ಲಿ 'ಚಿತ್ರಪಟ', 'ಬೀ. ಚಿ.ರಸಾಯನ', 'ಶೋಕಚಕ್ರ' ಹಾಗೂ 'ಟೊಳ್ಳುಗಟ್ಟಿ' ಸೇರಿ ಒಂಬತ್ತು ನಾಟಕಗಳು ಪ್ರದರ್ಶನಗೊಂಡವು.

ಕೇಂದ್ರ ಸಂಸ್ಕೃತಿ ಸಚಿವಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಸಹಯೋಗದಲ್ಲಿ ನಡೆದ ನಾಟಕೋತ್ಸವದಲ್ಲಿ 400ಕ್ಕೂ ಹೆಚ್ಚು ಕಲಾವಿದರು ಪಾಲ್ಗೊಂಡಿದ್ದರು.

ನಿಧನವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ಜನಾರ್ದನ್



ಮೈಸೂರು: ಸ್ವಾತಂತ್ರ್ಯ ಹೋರಾಟಗಾರ ಹಾಗೂ ಇಲ್ಲಿನ ವಿ.ವಿ. ಮೊಹಲ್ಲಾ ನಿವಾಸಿ ಟಿ.ಎಸ್.ಜನಾರ್ದನ್ (99) ತಮ್ಮ ನಿವಾಸದಲ್ಲಿ ಶನಿವಾರ ನಿಧನರಾದರು. ಇವರಿಗೆ ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಇವರ ದೇಹವನ್ನು ಚಾಮರಾಜನಗರ ವೈದ್ಯಕೀಯ ಕಾಲೇಜಿಗೆ ದಾನವಾಗಿ ನೀಡಲಾಯಿತು.

ಇವರು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗಿಯಾಗಿದ್ದರು. 8 ತಿಂಗಳವರೆಗೆ ಸೆರೆಮನೆ ವಾಸವನ್ನೂ ಅನುಭವಿಸಿದ್ದರು. ನಂತರ, ಮೈಸೂರು ಚಲೋ ಚಳವಳಿಯಲ್ಲಿಯೂ ಮುಂಚೂಣಿಯಲ್ಲಿದ್ದರು.

ಚಿತ್ರಾವಳಿ

ಚಿಕ್ಕಬಾಣಾವರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಅಸಾದಿಕ್ ಉಲ್ ಮಜೀದ್ ಮಸೀದಿಯನ್ನು ಉದ್ಘಾಟಿಸಿ ಶಾಸಕ ಆರ್. ಮಂಜುನಾಥ್ ಮಾತನಾಡಿದರು. ಧರ್ಮಗುರುಗಳಾದ ಅಕ್ಬರ್ ಷರೀಫ್, ಮುಫ್ತಿ ಅಸ್ಲಾಮ್, ಸೈಯದ್ ಶಬ್ಬೀರ್ ಹಾಗೂ ಇತರರು ಇದ್ದರು

ನಗರದ ಶ್ರೀ ದಾರೀ ಆಂಜನೇಯಸ್ವಾಮಿ ಚಾರಿಟಬಲ್ ಟ್ರಸ್ಟ್ ಹಾಗೂ ಬಿ.ಪ್ಯಾಕ್ ಸಂಸ್ಥೆ ಸಹಯೋಗದಲ್ಲಿ ಮೊಳೆ ಮುಕ್ತ ಮರ ಅಭಿಯಾನಕ್ಕೆ ಯಶವಂತಪುರ ವೃತ್ತದಲ್ಲಿ ಚಾಲನೆ ನೀಡಲಾಯಿತು. ವಿನೋದ್ ಕರ್ತವ್ಯ, ಡಾ.ಜಿ. ಅಂಬರೀಷ್ ಇದ್ದರು

ಶಿವರಾತ್ರಿ ಪ್ರಯುಕ್ತ ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರೂಢಭಾರತೀ ಸ್ವಾಮೀಜಿ ಅವರ 'ಸಿದ್ಧಸೂಕ್ತಿ ಭಾಗ–1' ಕೃತಿಯನ್ನು ಆಯುರ್ವೇದ ವೈದ್ಯ ಆನಂದಸ್ವಾಮೀಜಿ ಬಿಡುಗಡೆ ಮಾಡಿದರು. ಎಸ್‌.ಎಮ್. ನಾಗಲಿಂಗ ಅವರ 'ವಿದ್ಯಾರ್ಥಿಮಿತ್ರಮ್' ಕೃತಿಯನ್ನು ಆತ್ಮಾನಂದಭಾರತೀ ಸ್ವಾಮೀಜಿ ಅವರು ಲೋಕಾರ್ಪಣೆ ಮಾಡಿದರು. ಸಿದ್ಧಾರೂಢ ಮಿಷನ್ ಕಾರ್ಯದರ್ಶಿ ಸಿ.ಎಚ್. ಕೃಷ್ಣಯ್ಯ, ಬಿಜೆಪಿ ಮುಖಂಡ ಕೆ.ಜಿ. ನರಸಿಂಹಮೂರ್ತಿ, ಕಲಾಜ್ಯೋತಿ ಮಕ್ಕಳ ಸೇವಾಶ್ರಮದ ಮುನಿರಾಜಗೌಡ, ಸ್ನೇಹಜ್ಯೋತಿ ಆಶ್ರಮದ ಟಿ.ಜಿ. ಮೂರ್ತಿ ಇದ್ದರು.

ತಾರುಣ್ಯಾಧಿತ್ಯ ಬ್ರಾಹ್ಮಣ ಸಂಘದ ಕಚೇರಿ ನಿರ್ಮಾಣಕ್ಕೆ ನಿವೇಶನ ದಾನ ನೀಡಿದ ಗೌರವಾಧ್ಯಕ್ಷ ಡಿ.ಆರ್.ವಾಸುದೇವಮೂರ್ತಿ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಚಿತ್ರದಲ್ಲಿ ಖಜಾಂಚಿ ಡಿ.ಎಸ್.ಸತ್ಯನಾರಾಯಣ, ತಾ.ಪಂ.ಮಾಜಿ ಅಧ್ಯಕ್ಷ ಎಚ್. ಜಯಶಂಕರ್, ಕೆ.ನಾಗಭೂಷಣರಾವ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಡಿಎಂಎಂ ಗೌಡ, ಬೆಂಗಳೂರು ಹಾಲು ಉತ್ಪಾದಕರ ಸಂಘದ ನಿರ್ದೇಶಕ ಕೇಶವಮೂರ್ತಿ, ಬಿ.ಆರ್.ಯೋಗೇಶ್ ಇದ್ದಾರೆ.

ಬ್ರಾಹ್ಮಣ ಸಂಘ ಉದ್ಘಾಟನೆ

ನೆಲಮಂಗಲ: ಎಲ್ಲ ಜನಾಂಗದವರಿಗೂ ಜಾಗ ಕೊಟ್ಟ ಬ್ರಾಹ್ಮಣರಿಗೆ ಇಂದು ದೇಹದಾನದ ಜಾಗಕ್ಕೆ ಅರ್ಜಿ ಹಾಕುವ ದಯನೀಯ ಸ್ಥಿತಿ ಎದುರಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ ವಿಷಾದಿಸಿದರು.

ಇಲ್ಲಿಗೆ ಸಮೀಪದ ಬೈಲಪ್ಪನಪಾಳ್ಯದಲ್ಲಿ 'ತಾರುಣ್ಯಾಧಿತ್ಯ ಬ್ರಾಹ್ಮಣ ಸಂಘ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ನಮ್ಮ ಜೀವನ ಪದ್ಧತಿಯಿಂದ ಮೇಲೆ ಬರಬೇಕೇ ವಿನಾ ಮೀಸಲಾತಿಯಿಂದಲ್ಲ. ಬ್ರಾಹ್ಮಣರು ಹೊಸ ವೈವಿಧ್ಯಕ್ಕೆ ಹೊಂದಿಕೊಂಡು ಜೀವನಮಟ್ಟ ಸುಧಾರಿಸಿಕೊಳ್ಳಬೇಕು' ಎಂದ ಹೇಳಿದರು.

ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಡಿಎಂಎಂ ಗೌಡ ಮಾತನಾಡಿ, 'ಸರ್ಕಾರದ ಯಾವುದೇ ಮೀಸಲಾತಿ ಪಡೆಯದಿರುವ ಏಕೈಕ ಸಮಾಜ ಬ್ರಾಹ್ಮಣ ಸಮಾಜ' ಎಂದರು.

ಬೆಂಗಳೂರು ಹಾಲು ಉತ್ಪಾದಕರ ಸಂಘದ ನಿರ್ದೇಶಕ ಕೇಶವಮೂರ್ತಿ ಮಾತನಾಡಿ, 'ಬ್ರಾಹ್ಮಣರು ಮೀಸಲಾತಿ ಬರೆದುಕೊಳ್ಳುವ ಅವಕಾಶ ಇತ್ತು, ಕನಿಷ್ಠ ಶೇ 2 ರಷ್ಟಾದರೂ ಸಿಗುತ್ತಿತ್ತು. ಜೋಡಿದಾರರಾಗಿದ್ದವರು ಇಂದು 30X40 ನಿವೇಶನ ಕೇಳುವ ಸ್ಥಿತಿಗೆ ಬಂದಿದ್ದೇವೆ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ಕೆ. ವಿಶ್ವನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಪಂಚಾಯಿತಿ ಸದಸ್ಯ ಬಿ.ಚಂದ್ರಪ್ಪ, ಸಂಘದ ಗೌರವಾಧ್ಯಕ್ಷ ಡಿ.ಆರ್. ವಾಸುದೇವಮೂರ್ತಿ, ಅಧ್ಯಕ್ಷ ನಾಗರಾಜ ಶರ್ಮ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಜಯಶಂಕರ್, ಮುಖಂಡರಾದ ಕೆ.ನಾಗಭೂಷಣರಾವ್, ಡಿ.ವಿ.ಗುರುದತ್, ಡಿ.ವಿ. ಗಿರೀಶ್‌ಕುಮಾರ್ ಇದ್ದರು.

'ಅನಗತ್ಯ ಖರ್ಚಿಗೆ ತಡೆ; ಇಲಾಖೆಗಳ ವಿಲೀನ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ರಾಜ್ಯದಲ್ಲಿ ಹಲವು ಇಲಾಖೆಗಳನ್ನು ವಿಲೀನಗೊಳಿಸಿ ಅನಗತ್ಯ ಖರ್ಚಿಗೆ ತಡೆಯೊಡ್ಡಲು ಚಿಂತನೆ ನಡೆದಿದೆ' ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

ನಗರದಲ್ಲಿ ಭಾನುವಾರ ಮಾತನಾಡಿದ ಅವರು, 'ಇಲಾಖೆಗಳನ್ನು ವಿಲೀನಗೊಳಿಸುವ ಉದ್ದೇಶದಿಂದ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ನೇತೃತ್ವದಲ್ಲಿ ಆಡಳಿತಸುಧಾರಣೆ ಸಮಿತಿ ನೇಮಿಸಲಾಗಿದೆ. ಕೆಲ ಕಚೇರಿಗಳಲ್ಲಿ ಒಬ್ಬರು ಮಾಡುವ ಕೆಲಸ ಮೂವರು ಮಾಡುತ್ತಿದ್ದಾರೆ. ಇಂತಹ ವ್ಯವಸ್ಥೆಯ ಬದಲು ಇಲಾಖೆಗಳನ್ನು ವಿಲೀನಗೊಳಿಸಲಾಗುತ್ತದೆ' ಎಂದು ವಿವರಿಸಿದರು.

'ಕಳೆದ ವರ್ಷ ₹2.32 ಲಕ್ಷ ಕೋಟಿ ಮೊತ್ತದ ಬಜೆಟ್‌ನಲ್ಲಿ ₹1.61 ಲಕ್ಷ ಕೋಟಿಯಲ್ಲಿ ಒಪ್ಪಿತ ವೆಚ್ಚ ಭರಿಸಲಾಗಿದೆ. ಸಂಬಳ, ಸಾರಿಗೆ, ಭತ್ಯೆ, ಮಾಸಾಶನ, ಆಹಾರ ಹಾಗೂ ಸಾಮಾಜಿಕ ಭದ್ರತೆಗೆ ಹಣ ಮೀಸಲಾಗುತ್ತದೆ. ಉಳಿದ ₹70 ಸಾವಿರ ಕೋಟಿಯನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಚೇರಿ, ಹುದ್ದೆ ಸೃಷ್ಟಿಸಿದರೆ ಕೆರೆಯ ನೀರನ್ನು ಬದು ಕುಡಿದಂತಾಗುತ್ತದೆ'ಎಂದರು.

'ಸಿ.ಡಿ ಪ್ರಕರಣದಲ್ಲಿ ಯಾರಿಗೂ ನಾನು ಹೆದರುವುದಿಲ್ಲ' ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಲು ಕಾರಜೋಳ ನಿರಾಕರಿಸಿದರು. 'ಇಂತಹ ವಿಷಯದ ಬಗ್ಗೆ 70 ವರ್ಷದ ರಾಜಕಾರಣದಲ್ಲಿ ನಾನೆಂದೂ ಮಾತಾಡಿಲ್ಲ, ಮಾತಾಡುವುದೂ ಇಲ್ಲ' ಎಂದರು.

ಕಾಂಗ್ರೆಸ್ ಮುಖಂಡ ಪಿ. ನಾಗರಾಜು ಟೀಕೆ

'ಸರ್ಕಾರಿ ಕಚೇರಿಗಳು ಬಿಜೆಪಿ ಕಾರ್ಯಾಲಯ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ರಾಜ್ಯದಲ್ಲಿ ಜನಸಾಮಾನ್ಯರಿಗೆ ಸರ್ಕಾರದ ಸವಲತ್ತುಗಳು ಸಿಗುತ್ತಿಲ್ಲ. ಶ್ರೀಮಂತರಿಗೆ, ಬಿಜೆಪಿ ಕಾರ್ಯಕರ್ತರಿಗೆ ಸಿಗುತ್ತಿವೆ. ಸರ್ಕಾರಿ ಕಚೇರಿಗಳು ಬಿಜೆಪಿ ಕಾರ್ಯಾಲಯಗಳಂತೆ ಕೆಲಸ ಮಾಡುತ್ತಿವೆ' ಎಂದು ಕಾಂಗ್ರೆಸ್ ಮುಖಂಡ ಪಿ. ನಾಗರಾಜು ದೂರಿದರು.

ಹೇರೋಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಕ್ಷದ ಅಧ್ಯಕ್ಷರುಗಳ ನೇಮಕಾತಿ ಆದೇಶ ಪತ್ರ ವಿತರಿಸಿ ಮಾತನಾಡಿದ ಅವರು, 'ಅಧಿಕಾರಿಗಳು ಅರ್ಹ ಫಲಾನುಭವಿಗಳಿಗೆ ಸೌಲಭ್ಯ ದೊರಕಿಸಿಕೊಡದಿದ್ದರೆ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಹೇರೋಹಳ್ಳಿ, ದೊಡ್ಡಬಿದರಕಲ್ಲು, ಉಲ್ಲಾಳು ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿದ್ದೇವೆ ಎಂದು ಲೆಕ್ಕ ತೋರಿಸಿ ಬಿಬಿಎಂಪಿ ಅಧಿಕಾರಿಗಳು ಹಣ ಲೂಟಿ ಮಾಡುತ್ತಿದ್ದಾರೆ' ಎಂದೂ ಅವರು ಆರೋಪಿಸಿದರು.

ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣಸಿದ್ದಯ್ಯ, 'ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಸಾವಿರಾರು ಕೋಟಿ ಹಣ ಲೂಟಿ ಮಾಡುವುದನ್ನೇ ಬಿಜೆಪಿಯವರು ದೊಡ್ಡ ಕಾಯಕ ಮಾಡಿಕೊಂಡಿದ್ದಾರೆ. ಮತದಾರರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಜಯಂತಿ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಸದಸ್ಯರಾದ ರಮೇಶ್, ತ್ಯಾಗರಾಜ, ಮಲ್ಲೇಶ ಇದ್ದರು.

ವಿವಿಧ ವಾರ್ಡ್ ಅಧ್ಯಕ್ಷರಾಗಿ ಕೆಂಪಣ್ಣ, ನಾಗರಾಜು, ಸುರೇಂದ್ರ, ವಿವಿಧ ಗ್ರಾಮಪಂಚಾಯತಿ ಕಾಂಗ್ರೆಸ್ ಅಧ್ಯಕ್ಷರಾಗಿ ಕೊಡಿಗೆಹಳ್ಳಿ-ಮಂಜುನಾಥ್, ತಾವರೆಕೆರೆ-ನರಸಿಂಹಯ್ಯ, ಚುಂಚನಕುಪ್ಪೆ-ಗಂಗಾಧರ, ಚಿಕ್ಕನಹಳ್ಳಿ-ಕಿರಣ್, ಅಜ್ಜನಹಳ್ಳಿ-ಭೀಮೇಶ್, ಚೋಳನಾಯಕನಹಳ್ಳಿ-ನಾಗೇಶ್, ಚನ್ನೇನಹಳ್ಳಿ-ಶ್ರೀನಿವಾಸ್‌ರಿಗೆ ನೇಮಕಾತಿ ಆದೇಶ ಪತ್ರ ವಿತರಿಸಲಾಯಿತು.

ಹೇರೋಹಳ್ಳಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಪಿ.ನಾಗರಾಜ್ ವಿವಿಧ ವಾರ್ಡ್ ಕಾಂಗ್ರೆಸ್ ಅಧ್ಯಕ್ಷರಾದ ಕೆಂಪಣ್ಣ, ಸುರೇಂದ್ರ, ನಾಗರಾಜ ನೇಮಕಾತಿ ಆದೇಶ ಪತ್ರವನ್ನು ವಿತರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣಸಿದ್ದಯ್ಯ ಇದ್ದಾರೆ

ದಲಿತ, ಹಿಂದುಳಿದ ಮತ್ತು ಪ್ರಗತಿಪರರ ಸಮಾಲೋಚನಾ ಸಭೆಯಲ್ಲಿ ಪ್ರೊ. ರವಿವರ್ಮ ಕುಮಾರ್ ಸಲಹೆ

‘ಮೀಸಲಾತಿ ಉಳಿವಿಗೆ ಕಾನೂನು ಹೋರಾಟ ಅಗತ್ಯ’

ಪ್ರಜಾವಾಣಿ ವಾರ್ತೆ

ಸಮಾಲೋಚನಾ ಸಭೆಯ ಚರ್ಚೆಯಲ್ಲಿ ನಿರತರಾಗಿದ್ದ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಮತ್ತು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಪ್ರೊ.ಎನ್. ನರಸಿಂಹಯ್ಯ. ದಲಿತ ಸಂಘರ್ಷ ಸಮಿತಿಗಳ ಪ್ರಮುಖರಾದ ಮಾವಳ್ಳಿ ಶಂಕರ್, ಎನ್. ವೆಂಕಟೇಶ್ ಮತ್ತು ಗುರುಪ್ರಸಾದ್ ಕೆರಗೋಡು ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಎಲ್ಲ ರೀತಿಯಿಂದಲೂ ಪ್ರಬಲವಾಗಿರುವ ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಪ್ರವರ್ಗದ ಪಟ್ಟಿಯಲ್ಲಿ ಮೀಸಲಾತಿ ನೀಡುವುದನ್ನು ವಿರೋಧಿಸಿ ಜನರ ಹೋರಾಟದ ಜತೆಗೆ ಕಾನೂನು ಹೋರಾಟವನ್ನೂ ಆರಂಭಿಸಬೇಕಿದೆ ಎಂದು ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಸಲಹೆ ನೀಡಿದರು.

‘ದಿಕ್ಕು ತಪ್ಪಿದ ಮೀಸಲಾತಿ ಹೋರಾಟ’ ಎಂಬ ವಿಷಯ ಕುರಿತು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ದಲಿತ, ಹಿಂದುಳಿದ ಮತ್ತು ಪ್ರಗತಿಪರರ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ‘ಬಲಾಢ್ಯರು ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಪ್ರತಿಯಾಗಿ ಹೋರಾಟ ಆರಂಭಿಸಲೇಬೇಕಿದೆ’ ಎಂದರು.

ಲಿಂಗಾಯತ ಸಮುದಾಯವು ಹಿಂದುಳಿದ ವರ್ಗಗಳ ಪ್ರವರ್ಗ ‘2ಎ’ ಪಟ್ಟಿಯಲ್ಲಿ ಮೀಸಲಾತಿಗೆ ಬೇಡಿಕೆ ಇಟ್ಟಿದೆ. ಇನ್ನೂ ಕೆಲವು ಸಮುದಾಯಗಳು ಇದೇ ಮಾದರಿಯ ಬೇಡಿಕೆ ಇಟ್ಟಿವೆ. ಇದು ಕೇವಲ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿಗಳಿಗೆ ಸೀಮಿತವಾಗಿ ಪರಿಣಾಮ ಬೀರುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೂ ಇದರಿಂದ ತೊಂದರೆ ಆಗಲಿದೆ ಎಂದು ಹೇಳಿದರು.

‘1962ರಲ್ಲಿ ಆಗಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ನೇತೃತ್ವದ ಸರ್ಕಾರ ಲಿಂಗಾಯತರಿಗೆ ಮೀಸಲಾತಿ ಕಲ್ಪಿಸಲು ಹಿಂದುಳಿದ ವರ್ಗಗಳ ಆಯೋಗದ ವರದಿಯ ಶಿಫಾರಸುಗಳನ್ನೇ ತಿರುಚಿತ್ತು. ಡಿ. ದೇವರಾಜ ಅರಸು ಅವರ ಸರ್ಕಾರ ಮುಖ್ಯಮಂತ್ರಿ ಹುದ್ದೆಗೇರುವವರೆಗೂ ಹಿಂದುಳಿದ ವರ್ಗಗಳ ಜನರು ಮೀಸಲಾತಿಯಿಂದ ವಂಚಿತರಾಗಿದ್ದರು. ಈಗಲೂ ಅದೇ ರೀತಿ ವಂಚಿಸುವ ಪ್ರಯತ್ನ ನಡೆಯುತ್ತಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮೇಲೆ ಒತ್ತಡ ಹೇರಿ ಆದೇಶ ಮಾಡಿಸುವುದಕ್ಕೆ ಯತ್ನಿಸಲಾಗುತ್ತಿದೆ’ ಎಂದು ರವಿವರ್ಮ ಕುಮಾರ್ ದೂರಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಮಾತನಾಡಿ, ‘ಮಂಡಲ್ ಆಯೋಗದ ವರದಿಯನ್ನು ವಿರೋಧಿಸಿದ್ದ ಶಕ್ತಿಗಳೇ ಈಗ ಮೀಸಲಾತಿ ಬೇಡಿಕೆಯ ಹೋರಾಟದ ಹಿಂದಿವೆ. ಹಿಂದುಳಿದ ಸಮುದಾಯಗಳ ಪಟ್ಟಿಯಲ್ಲಿ ಬಲಿಷ್ಠ ಸಮುದಾಯಗಳ ಸೇರ್ಪಡೆಯನ್ನು ಒಕ್ಕೊರಲಿನಿಂದ ವಿರೋಧಿಸಬೇಕಾದ ತುರ್ತು ಇದೆ’ ಎಂದರು.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಪ್ರೊ.ಎನ್. ನರಸಿಂಹಯ್ಯ, ಹಿಂದುಳಿದ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ವೆಂಕಟರಾಮಯ್ಯ, ಸಾಮಾಜಿಕ ಕಳಕಳಿ ವೇದಿಕೆ ಸಂಸ್ಥಾಪಕ ಡಾ. ರಾಜಾ ನಾಯ್ಕ್, ಲೇಖಕ ವಿಕಾಸ್ ಆರ್. ಮೌರ್ಯ ವಿಚಾರ ಮಂಡಿಸಿದರು.

ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳ ಪ್ರಮುಖರಾದ ಮಾವಳ್ಳಿ ಶಂಕರ್, ವಿ. ನಾಗರಾಜ್, ಲಕ್ಷ್ಮೀನಾರಾಯಣ ನಾಗವಾರ, ಎನ್. ಮುನಿಸ್ವಾಮಿ, ಎನ್. ವೆಂಕಟೇಶ್, ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ, ಮಾಜಿ ಮೇಯರ್ ರಾಮಚಂದ್ರಪ್ಪ ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯದಾದ್ಯಂತ ಹೋರಾಟಕ್ಕೆ ನಿರ್ಧಾರ

ಈಗ ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟದ ವಿರುದ್ಧ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು ಜಂಟಿಯಾಗಿ ರಾಜ್ಯದಾದ್ಯಂತ ಐಕ್ಯ ಹೋರಾಟ ರೂಪಿಸಬೇಕೆಂಬ ನಿರ್ಣಯವನ್ನು ಭಾನುವಾರದ ಸಮಾಲೋಚನಾ ಸಭೆಯಲ್ಲಿ ಕೈಗೊಳ್ಳಲಾಗಿದೆ.

‘ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ, ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗಗಳ ವರದಿಯನ್ನು ಬಿಡುಗಡೆ ಮಾಡಬೇಕು. ನ್ಯಾಯಾಂಗದಲ್ಲೂ ಉನ್ನತ ಹುದ್ದೆಗಳಲ್ಲಿ ಮೀಸಲಾತಿ ನೀಡಬೇಕು. ಮೇಲ್ಜಾತಿಗಳಿಗೆ ನೀಡಿರುವ ಶೇಕಡ 10ರ ಮೀಸಲಾತಿಯನ್ನು ರದ್ದುಗೊಳಿಸಬೇಕು’ ಎಂದು ಒತ್ತಾಯಿಸುವ ನಿರ್ಣಯಗಳನ್ನೂ ತೆಗೆದುಕೊಳ್ಳಲಾಗಿದೆ.

ಸುದ್ದಿ 2 ನಿಮಿಷ

‘ಜೆಡಿಎಸ್ ಜತೆ ಮೈತ್ರಿಯೇ ಇಲ್ಲ’

ಮೈಸೂರು: ‘ಭವಿಷ್ಯದಲ್ಲಿ ನಡೆಯುವ ಯಾವುದೇ ಚುನಾವಣೆಯಲ್ಲಿ ಜೆಡಿಎಸ್ ಜತೆ ಮೈತ್ರಿಯ ಮಾತೇ ಇಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಹೇಳಿದರು.

ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟದ (ಮೈಮುಲ್) ಚುನಾವಣೆಯಲ್ಲಿ ಕಾಂಗ್ರೆಸ್–ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಹೊಂದಾಣಿಕೆ ಮಾಡಿಕೊಂಡಿದ್ದರ ಬಗ್ಗೆ ಪ್ರತಿಕ್ರಿಯಿಸಿ, ‘ಸಹಕಾರಿ ಕ್ಷೇತ್ರದ ಚುನಾವಣೆ ಪಕ್ಷದ ಚಿಹ್ನೆಯಡಿ ನಡೆಯುವುದಿಲ್ಲ. ಪಕ್ಷಕ್ಕೂ ಅದಕ್ಕೂ ಯಾವುದೇ ಸಂಬಂಧ ಇಲ್ಲ. ಕೆಲವರು ಸ್ಥಳೀಯವಾಗಿ ಹೊಂದಾಣಿಕೆ ಮಾಡಿಕೊಂಡಿರಬಹುದು. ನಾನು ಅದನ್ನು ಬೆಂಬಲಿಸುವುದಿಲ್ಲ’ ಎಂದರು.

ಸುಳ್ಳು ಸುತ್ತೋಲೆ ಸೃಷ್ಟಿಸಿದವರ ವಿರುದ್ಧ ಕ್ರಿಮಿನಲ್ ಕೇಸ್: ಡಿಸಿಎಂ

ಹುಬ್ಬಳ್ಳಿ: ಕೋವಿಡ್–19 ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಸೋಮವಾರದಿಂದ 15 ದಿನಗಳ ಕಾಲ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ ಎಂಬ ಸುಳ್ಳು ಸುದ್ದಿ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದ್ದು, ಈ ಸುಳ್ಳು ಸುದ್ದಿ ಹರಡಿಸಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು ತಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಭಾನುವಾರ ಇಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ಸರ್ಕಾರ ಯಾವುದೇ ಕಾರಣಕ್ಕೂ ಕಾಲೇಜುಗಳಿಗೆ ರಜೆ ನೀಡುವ ನಿರ್ಧಾರ ಕೈಗೊಂಡಿಲ್ಲ’ ಎಂದು ಸ್ಪಷ್ಟಪಡಿಸಿದರು.

ಮತಾಂತರ ನಿಯಂತ್ರಿಸಲು ಆಗ್ರಹ

ಹೊನ್ನಾಳಿ: ‘ರಾಜ್ಯದಲ್ಲಿ ಮತಾಂತರ ಎಗ್ಗಿಲ್ಲದೇ ನಡೆಯುತ್ತಿದೆ. ಇದು ಬಿಜೆಪಿ ಶಾಸಕರ ತಾಯಿಯನ್ನೂ ಬಿಟ್ಟಿಲ್ಲ. ಮತಾಂತರ ತಡೆಗೆ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರವನ್ನು ಆಗ್ರಹಿಸಲಾಗುವುದು’ ಎಂದು ಕಾಳಿಮಠದ ಋಷಿಕುಮಾರ ಸ್ವಾಮೀಜಿ ಹೇಳಿದರು.

ಪಟ್ಟಣದಲ್ಲಿರುವ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಅಲ್ಪಸಂಖ್ಯಾತರಿಗೆ ಹಾಗೂ ಕ್ರೈಸ್ತ ಮಿಷನರಿಗಳಿಗೆ ನೀಡುತ್ತಿರುವ ಅನುದಾನವನ್ನು ತಕ್ಷಣ ನಿಲ್ಲಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಒತ್ತಾಯಿಸಲಾಗುವುದು’ ಎಂದರು.

‘ದೇಶದಲ್ಲಿ ಎಲ್ಲರಿಗೂ ಒಂದೇ ಕಾನೂನು ಇರಬೇಕು. ಅಲ್ಪಸಂಖ್ಯಾತರು ಅದರಲ್ಲೂ ಮುಸ್ಲಿಮರು ಎರಡು ಮಕ್ಕಳನ್ನು ಮಾತ್ರ ಹೊಂದಬೇಕು. ಪ್ರತಿನಿತ್ಯ ಹುಟ್ಟುವ ಮಕ್ಕಳಲ್ಲಿ ಶೇ 80ರಷ್ಟು ಮಕ್ಕಳು ಮುಸ್ಲಿಮರ ಕುಟುಂಬಗಳಲ್ಲಿ ಹುಟ್ಟುತ್ತಿವೆ. ಇದು ಹೀಗೆಯೇ ಮುಂದುವರಿದರೆ ಒಂದಲ್ಲಾ ಒಂದು ದಿನ ಭಾರತ ಮುಸ್ಲಿಂ ರಾಷ್ಟ್ರ ಆಗುವುದರಲ್ಲಿ ಅನುಮಾನ ಇಲ್ಲ’ ಎಂದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಹಿತರಕ್ಷಣಾ ಸಂಘದ ಎಚ್ಚರಿಕೆ

‘ಪ್ರವರ್ಗ 2ಎಗೆ ಪಂಚಮಸಾಲಿ ಸೇರಿಸಿದರೆ ಹೋರಾಟ’

ಪ್ರಜಾವಾಣಿ ವಾರ್ತೆ

ಸಭೆಯಲ್ಲಿ (ಎಡದಿಂದ) ಅಖಿಲ ಕರ್ನಾಟಕ ಯುವಜನ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಯಶವಂತ ಕಂಚಿ, ದೇವಾಡಿಗ ಸಂಘದ ಅಧ್ಯಕ್ಷ ಚಂದ್ರಶೇಖರ್, ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ರಾಣಿಪ್ರಭ, ಎಂ.ಡಿ ಲಕ್ಷ್ಮೀನಾರಾಯಣ, ಜೆ.ಡಿ. ನಾಯ್ಕ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಹಿತರಕ್ಷಣಾ ಸಂಘದ ಅಧ್ಯಕ್ಷ ಮಂಜುನಾಥ್ ಲಕ್ಷ್ಮಣ್ ನಾಯ್ಕ್ ಇದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪ್ರವರ್ಗ 2ಎ’ ಮೀಸಲಾತಿ ನೀಡಬೇಕೆಂಬ ಪಂಚಮಸಾಲಿ ಸಮುದಾಯದ ಬೇಡಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಹಿತರಕ್ಷಣಾ ಸಂಘ, ಈಗಿರುವ 2 ಎ ಮೀಸಲಾತಿ ಯಥಾಸ್ಥಿತಿ ಕಾಪಾಡುವಂತೆ ಆಗ್ರಹಿಸಿದೆ.

2ಎ ಮೀಸಲಾತಿ ಯಥಾಸ್ಥಿತಿ ಕಾಪಾಡುವಂತೆ ಆಗ್ರಹಿಸಿ ಸಂಘದ ಪ್ರಮುಖರ ಸಭೆ ಗಾಂಧಿಭವನದಲ್ಲಿ ಭಾನುವಾರ ನಡೆಯಿತು.

‘ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ಬೇಡಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಈಗಾಗಲೇ ತೆಗೆದುಕೊಂಡಿರುವ ತೀರ್ಮಾನದ ವಿರುದ್ಧ ವಿಧಾನ ಮಂಡಲ ಅಧಿವೇಶನ ಮುಗಿಯುವುದರೊಳಗೆ ಹಿಂದುಳಿದ ಸಮುದಾಯಗಳು ಒಟ್ಟಾಗಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕು’ ಎಂದು ರಾಜ್ಯ ನೇಕಾರರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಎಂ.ಡಿ ಲಕ್ಷ್ಮೀನಾರಾಯಣ ಹೇಳಿದರು.

‘ರಾಜ್ಯದಲ್ಲಿ ಪಂಚಮಸಾಲಿ ಸಮುದಾಯ ಶೈಕ್ಷಣಿಕ, ಆರ್ಥಿಕ, ಸಾಮಾಜಿಕವಾಗಿ ಮುಂದುವರಿದಿದೆ. ಆದರೂ, ಕುಲಶಾಸ್ತ್ರೀಯ ಅಧ್ಯಯನ ಮಾಡಿ ವರದಿ ನೀಡುವಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಇದು ಸರಿಯಲ್ಲ. ವಾಸ್ತವದಲ್ಲಿ ಈ ಸಮುದಾಯಕ್ಕೆ 2ಎ ಮೀಸಲಾತಿ ನೀಡಲು ಸಾಧ್ಯವೇ ಇಲ್ಲ’ ಎಂದೂ ಪ್ರತಿಪಾದಿಸಿದರು.

‘ರಾಜ್ಯದಲ್ಲಿ 43 ಮುಂದುವರಿದ ಸಮುದಾಯಗಳು ಮೀಸಲಾತಿ ಆಗ್ರಹಿಸಿ ಅರ್ಜಿ ಸಲ್ಲಿಸಿವೆ. ಈ ಸಮುದಾಯಗಳ ಬೇಡಿಕೆಗೆ ಸ್ಪಂದಿಸದ ಮುಖ್ಯಮಂತ್ರಿ, ಜಾತಿ– ಪ್ರೇಮದಿಂದ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಮುಖ್ಯಮಂತ್ರಿ ಶಿಫಾರಸು ಮಾಡಿದರೆ, ಆ ನಿಲುವನ್ನು ರಾಜ್ಯದ ಹಿಂದುಳಿದ ಸಮುದಾಯಗಳು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ’ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

‘ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಮುಂದುವರಿದ ಸಮುದಾಯಗಳಿಗೆ ಅಭಿವೃದ್ಧಿ ನಿಗಮದ ಅಗತ್ಯವಿಲ್ಲ. ಆದರೂ ಬಜೆಟ್‌ನಲ್ಲಿ ಎರಡು ಪ್ರಮುಖ ಸಮುದಾಯಗಳ ಅಭಿವೃದ್ಧಿ ನಿಗಮಗಳಿಗೆ ತಲಾ ₹500 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಯಡಿಯೂರಪ್ಪ ಅವರಿಗೆ ಮಾನ-ಮರ್ಯಾದೆ ಇದ್ದರೆ ಹೊತ್ತಿನ ಊಟ ಸಿಗದೆ ನರಳುತ್ತಿರುವ ಸಮುದಾಯಗಳ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಲಿ’ ಎಂದು ಅವರು ಆಗ್ರಹಿಸಿದರು.

ಹಿಂದುಳಿದ ವರ್ಗಗಳ 2ಎ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಜೆ.ಡಿ. ನಾಯ್ಕ್ ಮಾತನಾಡಿ, ‘ಪ್ರಬಲ ಸಮುದಾಯವನ್ನು ಪ್ರವರ್ಗ 2ಎ ಪಟ್ಟಿಗೆ ಸೇರಿಸಿದರೆ, ಇತರ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗುತ್ತದೆ. ರಾಜಕೀಯ ಒತ್ತಡದಿಂದ ಶಿಫಾರಸು ಮಾಡುವ ಸಾಧ್ಯತೆಯೂ ಇದೆ. ಹೀಗಾಗಿ, 2ಎ ಮೀಸಲಾತಿ ನೀಡದಂತೆ ತಡೆಯುವ ಕೆಲಸ ಆಗಬೇಕು’ ಎಂದು ಮನವಿ ಮಾಡಿದರು.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ರಾಜ್ಯದಲ್ಲಿ ಮತ್ತೆ ಪ್ರಬಲ ರೈತ ಚಳವಳಿ ತಲೆ ಎತ್ತುತ್ತಿದೆಯೆ? 20 ರಂದು ಶಿವಮೊಗ್ಗದಲ್ಲಿ ರಾಕೇಶ್ ಟಿಕಾಯತ್ ಸಮ್ಮುಖದಲ್ಲಿ ನಡೆಯಲಿರುವ ಕಿಸಾನ್ ಮಹಾ ಪಂಚಾಯತ್ ಅದಕ್ಕೆ ಮುನ್ನುಡಿ ಆಗಲಿದೆಯೆ?
ಪಾಲ್ಗೊಳ್ಳುವವರು

ಕೆ.ಟಿ.ಗಂಗಾಧರ
ವರಿಷ್ಠರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ
ನೀವೂ ಪಾಲ್ಗೊಳ್ಳಿ

ಎಚ್.ವಿ.ವಾಸು
ಸಾಮಾಜಿಕ ಹೋರಾಟಗಾರರು
ಇಂದು ಬೆಳಿಗ್ಗೆ 11 ರಿಂದ 12
fb.com/prajavani.net

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ

ಯುವತಿ ಜತೆ ರಮೇಶ ಜಾರಕಿಹೊಳಿ ಇರುವ ಸಿ.ಡಿ ನೋಡಿಲ್ಲ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಮೇಶ ಜಾರಕಿಹೊಳಿ ಸಿಡಿ ವಿಚಾರವನ್ನು ಪತ್ರಿಕೆಯಲ್ಲಿ ಓದಿ ಸ್ವಲ್ಪ ತಿಳಿದುಕೊಂಡಿದ್ದೇನೆ. ಅದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಪೂರ್ಣ ವಿಷಯ ತಿಳಿದುಕೊಂಡು ಮಾತನಾಡುತ್ತೇನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ ಶಿವಮೊಗ್ಗದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ರಮೇಶ ಜಾರಕಿಹೊಳಿ ಜೊತೆ ಯುವತಿ ಕಾಣಿಸಿಕೊಂಡಿದ್ದಾಳೆ ಎಂದು ಹೇಳಲಾಗುತ್ತಿರುವ ಸಿ.ಡಿಯನ್ನು ನಾನು ನೋಡಿಲ್ಲ. ಸಿ.ಡಿ ವಿಚಾರವಾಗಿ ಬಿಜೆಪಿಯ ಹಲವರು ಮಾತನಾಡಿದ್ದಾರೆ. ಯತ್ನಾಳ್, ವಿಶ್ವನಾಥ್ ಅವರು ಕೂಡ ಪ್ರತಿಕ್ರಿಯೆ ನೀಡಿದ್ದಾರೆ. ಅದೆಲ್ಲವನ್ನು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು, ತನಿಖೆ ನಡೆಸಬಹುದಿತ್ತು’ ಎಂದರು.

‘ರಮೇಶ ಜಾರಕಿಹೊಳಿ ಸಿ.ಡಿ ವಿಚಾರವಾಗಿ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಲು ಆಗುವುದಿಲ್ಲ ಎಂದರೆ ನಾವೇ ದೂರು ಕೊಡಿಸುತ್ತೇವೆ. ಅದು ಯಾವ ಸಿ.ಡಿ ನೋಡೋಣ. ಮುಖ್ಯಮಂತ್ರಿ ಅಧಿಕೃತವಾಗಿ ಸಿ.ಡಿ ವಿಚಾರ ಮಾತನಾಡಿದ್ದಾರೆ. ಆದರೆ, ಯಾವುದೇ ತನಿಖೆಯಾಗಿಲ್ಲ’ ಎಂದು ಕುಟುಕಿದರು.

ನನ್ನ ಮೇಲೆ ಷಡ್ಯಂತ್ರ: ‘ನಮ್ಮ ಮೇಲೆ ಹಿಂದಿನಿಂದ ಷಡ್ಯಂತ್ರಗಳು ನಡೆದುಕೊಂಡು ಬಂದಿವೆ. ಅವು ಈಗಲೂ ಮುಂದುವರಿದಿವೆ. ರಮೇಶ ಜಾರಕಿಹೊಳಿ ಅವರು ಸಿ.ಡಿಯಲ್ಲಿ ಇರುವುದು ತಾವಲ್ಲ ಎಂದು ಒಮ್ಮೆ ಹೇಳಿದರು. ನಂಗೆ ಗೊತ್ತೇ ಇಲ್ಲ ಎಂದಿದ್ದರು. ಈಗ ಅವರೇ ಎಲ್ಲವನ್ನೂ ಹೇಳುತ್ತಿದ್ದಾರೆ’ ಎಂದು ಅವರು ಆರೋಪಿಸಿದರು.

ಅವಕಾಶ ನೀಡಬೇಕಿತ್ತು: ‘ಸದನದಲ್ಲಿ ತಮಗೆ ಮಾತನಾಡಲು ಅವಕಾಶ ಸಿಗದೆ ತಮ್ಮ ನೋವನ್ನು ತೋಡಿಕೊಳ್ಳುವ ಭರದಲ್ಲಿ ಶಾಸಕ ಬಿ.ಕೆ. ಸಂಗಮೇಶ ಅವರು ತಮ್ಮ ಶರ್ಟ್ ತೆಗೆದು ಆ ರೀತಿ ನಡೆದುಕೊಂಡಿದ್ದಾರೆ. ಅದನ್ನು ಬಿಜೆಪಿಯವರು ದ್ವೇಷ ರಾಜಕಾರಣಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಸದನದಲ್ಲಿ ಮಾತನಾಡಲು ಅವಕಾಶ ನೀಡಬೇಕಿತ್ತು’ ಎಂದು ಖಾರವಾಗಿ ಹೇಳಿದರು.

‘ಸಿ.ಡಿ ಪ್ರಕರಣ ವಿಧಾನಸಭೆಯಲ್ಲಿ ಪ್ರಸ್ತಾಪ’

ಬೆಂಗಳೂರು: ‘ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ವಿಚಾರವನ್ನು ವಿಧಾನಸಭೆಯಲ್ಲಿ ಮಾತನಾಡುತ್ತೇನೆ. ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಯುವತಿ ವಿಡಿಯೊ ಬಿಡುಗಡೆ ಮಾಡಿರುವ ವಿಚಾರದ ಬಗ್ಗೆಯೂ ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತೇನೆ’ ಎಂದರು.

ಸಿ.ಡಿ ಪ್ರಕರಣದ ಹಿಂದೆ ಕಾಂಗ್ರೆಸ್‌ನವರಿದ್ದಾರೆ ಎಂಬ ಆರೋಪದ ಕುರಿತು ಕೇಳಿದಾಗ, ‘ಯಾರು ತಪ್ಪು ಮಾಡಿದ್ದಾರೊ ಅವರಿಗೆ ಶಿಕ್ಷೆ ಆಗುತ್ತದೆ’ ಎಂದಷ್ಟೇ ಹೇಳಿದರು.

‘ಡಿಕೆಶಿ ಮಾಡಿದ್ದಾರೆ ಅಂತ ಯಾರಾದರೂ ಹೇಳಿದ್ದಾರಾ?’

ಮೈಸೂರು: ‘ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದಲ್ಲಿ ಡಿ.ಕೆ.ಶಿವಕುಮಾರ್ ಹೆಸರನ್ನು ಯಾರು ಹೇಳಿದ್ದಾರೆ? ಅವರ ಹೆಸರನ್ನು ಅವರೇ ಏಕೆ ಮುಂದೆ ಬಿಟ್ಟುಕೊಂಡಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಭಾನುವಾರ ಇಲ್ಲಿ ಪ್ರಶ್ನಿಸಿದರು.

ಸಿ.ಡಿ ಪ್ರಕರಣದಲ್ಲಿ ಬಿಜೆಪಿಯವರು ತಮ್ಮನ್ನು ಸಿಲುಕಿಸಲು ಪ್ರಯತ್ನಿಸಿದ್ದಾರೆ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಅವರೇ ಮಾಡಿದ್ದಾರೆ ಅಂತ ಯಾರಾದರೂ ಹೇಳಿದರೇ? ಇದರ ಹಿಂದೆ ‘ಮಹಾನ್ ನಾಯಕನೊಬ್ಬ’ ಇದ್ದಾನೆ ಎಂದಷ್ಟೇ ಹೇಳಿದ್ದರು. ಆ ಮಹಾನ್ ನಾಯಕ ಇವರೇ ಅಂತ ಏಕೆ ಅಂದುಕೊಂಡುಬಿಟ್ರು? ಈ ರಾಜ್ಯದಲ್ಲಿ ಮಹಾನ್ ನಾಯಕರು ತುಂಬಾ ಜನ ಇದ್ದಾರೆ. ಬಿಜೆಪಿಯಲ್ಲೇ ಒಬ್ಬ ಮಹಾನ್ ನಾಯಕ ಬೆಳೆಯುತ್ತಿದ್ದಾರೆ’ ಎಂದರು.

‘ಡಿ.ಕೆ.ಶಿವಕುಮಾರ್ ಬಹಳ ಪ್ರಬುದ್ಧ ರಾಜಕಾರಣಿ. ಅವರಿಗೆ ಇರುವಷ್ಟು ಅನುಭವ ನಮಗೂ ಇಲ್ಲ. ದುಡುಕಿನಿಂದ ಅವರ ಹೆಸರನ್ನು ಅವರೇ ಹೇಳಿದ್ದಾರೆ. ಈ ಪ್ರಕರಣದಲ್ಲಿ ಏಕೆ ತಮ್ಮ ಹೆಸರನ್ನು ಸಿಲುಕಿಸಿಕೊಳ್ಳಲು ಹೊರಟಿದ್ದಾರೋ ಗೊತ್ತಿಲ್ಲ’ ಎಂದು ನುಡಿದರು.

‘ಎಸ್‌ಐಟಿ ಅಧಿಕಾರಿಗಳು ಯಾವುದೇ ಒತ್ತಡಕ್ಕೂ ಮಣಿಯದೆ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಮೆಸ್ಕಾಂ MESCOM
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಪ್ರಧಾನ ಕಛೇರಿ, ‘ಮೆಸ್ಕಾಂ ಭವನ’, ಬಿಜೈ, ಮಂಗಳೂರು-575 004
ದೂರವಾಣಿ ಸಂ(ಕ): 0824-2885795 ಇಮೈಲ್: sepmescom@gmail.com
ಸಂಖ್ಯೆ: ಮಂ.ವಿ.ಸ.ಕಂ./ಅ.ಇಂ(ಖ)/ ಕಾನಿಇಂ(ಕಾ)/ 13586 ದಿನಾಂಕ: 05.03.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾತ್ರ)
ಮಂ.ವಿ.ಸ.ಕಂ.ಯು ಮಂಗಳೂರು ವಿಭಾಗದ ಅತ್ತಾವರ ಉಪವಿಭಾಗ ವ್ಯಾಪ್ತಿಯಲ್ಲಿನ 33/11 ಕೆ.ವಿ. ಕಂಕನಾಡಿ ಉಪಕೇಂದ್ರದ ಮೂಲಕ 33/11 ಕೆ.ವಿ. ಕದ್ರಿ ಉಪಕೇಂದ್ರ ಮತ್ತು 33/11 ಕೆ.ವಿ. ನಂದಿಗುಡ್ಡ ಉಪಕೇಂದ್ರದ ನಡುವೆ ಸುಮಾರು 6 ಕಿ.ಮೀ. ದೂರದವರೆಗೆ ಹೊಸ 33 ಕೆ.ವಿ. ಲಿಂಕ್ ಲೈನನ್ನು 3*400 sq.mm XLPE ಯು.ಜಿ. ಕೇಬಲ್ ಅಳವಡಿಸುವ ಮೂಲಕ ನಿರ್ವಹಿಸುವ ಕಾಮಗಾರಿಗೆ ಪೂರ್ಣ ಗುತ್ತಿಗೆ ಆಧಾರದಡಿ ಬಿಡ್ ವಿಚಾರಣಾ ಸಂಖ್ಯೆ: MESCOM/ 2020-21/ EL/ WORK_INDENT1649 ರನ್ವಯ ಟೆಂಡರನ್ನು ಆಹ್ವಾನಿಸುತ್ತಿದೆ.
ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ವೆಬ್‌ಸೈಟ್: www.eproc.karnataka.gov.in ಗೆ ದಿನಾಂಕ 16.03.2021 ಅಥವಾ ನಂತರ ಲಾಗ್ ಆನ್ ಮಾಡಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್(ವಿ), (ಖರೀದಿ), ಮೆಸ್ಕಾಂ, ಮಂಗಳೂರು
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಯುವತಿಯು ದೂರು ನೀಡಲಿ: ಸತೀಶ

ಬೆಳಗಾವಿ: ‘ಸಿ.ಡಿ ವಿಚಾರದಲ್ಲಿ ಸಂತ್ರಸ್ತೆ ಎನ್ನಲಾಗುತ್ತಿರುವ ಯುವತಿಯು ಕೇವಲ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದರೆ ಆಗುವುದಿಲ್ಲ. ಸಂಬಂಧಿಸಿದ ಪೊಲೀಸ್ ಠಾಣೆಗೆ ಬಂದು, ದೂರು ನೀಡಬೇಕು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಯುವತಿಯು ಕಾನೂನಾತ್ಮಕವಾಗಿ ಮುಂದೆ ಬರಬೇಕು. ಪೊಲೀಸರು ತನಿಖೆ ನಡೆಸಿ ಸತ್ಯಾಂಶ ಬಹಿರಂಗಪಡಿಸಬೇಕು’ ಎಂದರು.

ಫೇಸ್‌ಬುಕ್ ಖಾತೆ ಅಳಿಸಿ ನಾಪತ್ತೆ: ಲಕ್ಷಗಟ್ಟಲೆ ಹಣ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ ಎನ್ನಲಾದ ಯುವಕ, ತನ್ನ ಫೇಸ್‌ಬುಕ್ ಖಾತೆಯನ್ನು ಅಳಿಸಿ ನಾಪತ್ತೆಯಾಗಿದ್ದಾನೆ. ಆತ ಹಾಗೂ ಆತನ ಪರಿಚಯಸ್ಥರ ಖಾತೆಗೆ ಲಕ್ಷಗಟ್ಟಲೆ ಹಣ ವರ್ಗಾವಣೆ ಆಗಿದೆ. ಆತನ ಪತ್ನಿ ಹೆಸರಿನಲ್ಲಿ ಫಾರ್ಚ್ಯೂನರ್ ಕಾರು ಸಹ ಬುಕ್ ಆಗಿರುವುದು ಎಸ್‌ಐಟಿ ವಿಚಾರಣೆಯಿಂದ ಗೊತ್ತಾಗಿದೆ.

ಸುದ್ದಿವಾಹಿನಿಗಳಲ್ಲಿ ವರದಿಗಾರನಾಗಿ ಕೆಲಸ ಮಾಡಿದ್ದ ಆತ, ಕಳೆದ ವರ್ಷ ಕೆಲಸ ಬಿಟ್ಟಿದ್ದ. ಪ್ರಭಾವಿ ರಾಜಕಾರಣಿಯೊಬ್ಬರ ಆಪ್ತನಾಗಿ ಗುರುತಿಸಿಕೊಂಡಿದ್ದ. ಇದೀಗ ಆತನಿಗಾಗಿ ಎಸ್‌ಐಟಿ ಅಧಿಕಾರಿಗಳು ಹುಡುಕಾಟ ನಡೆಸುತ್ತಿದ್ದಾರೆ.

‘ದಿನೇಶ್ ಕಲ್ಲಹಳ್ಳಿ ದೂರು ನೀಡುವುದಕ್ಕೂ ಮುನ್ನವೇ, ಸಿ.ಡಿಯಲ್ಲಿದ್ದ ದೃಶ್ಯಗಳು ಯುವಕನ ಬಳಿ ಇದ್ದವು. ಆತನೇ ಇತರೆ ಸುದ್ದಿವಾಹಿನಿಗಳ ವರದಿಗಾರರಿಗೆ ವಿಡಿಯೊಗಳನ್ನು ಕಳುಹಿಸಿದ್ದ. ಜೊತೆಗೆ, ಸಿ.ಡಿ ಬಗ್ಗೆ ದಿನೇಶ್ ಎಂಬುವರು ದೂರು ನೀಡಲಿರುವುದಾಗಿಯೂ ವರದಿಗಾರರಿಗೆ ತಿಳಿಸಿದ್ದ’ ಎಂಬುದು ಎಸ್‌ಐಟಿ ವಿಚಾರಣೆಯಿಂದ ಗೊತ್ತಾಗಿದೆ.

‘ಸಿ.ಡಿ ಚಿತ್ರೀಕರಣ ಹಾಗೂ ಇತರೆ ಕೃತ್ಯಗಳಲ್ಲಿ ಯುವಕನ ಪಾತ್ರವಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆತನ ಜೊತೆ, ಸುದ್ದಿವಾಹಿನಿಯೊಂದರ ವರದಿಗಾರ ಸಹ ಭಾಗಿಯಾಗಿರುವ ಮಾಹಿತಿ ಇದೆ. ಇದೀಗ, ಅವರಿಬ್ಬರೂ ನಾಪತ್ತೆಯಾಗಿದ್ದಾರೆ. ಅವರು ಸಿಕ್ಕ ಬಳಿಕವೇ ಮತ್ತಷ್ಟು ಮಾಹಿತಿ ಸಿಗಲಿದೆ’ ಎಂದು ಮೂಲಗಳು ಹೇಳಿವೆ.

‘ಆರೋಪಿ ಜೊತೆ ಒಡನಾಟವಿಟ್ಟುಕೊಂಡಿದ್ದ ಎಲ್ಲರನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ಪ್ರತಿಯೊಬ್ಬರು ಯುವಕನ ಮೇಲೆಯೇ ಅನುಮಾನ ವ್ಯಕ್ತಪಡಿಸಿದ್ದಾರೆ. ಕೃತ್ಯದಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಹಾಗೂ ಸಿ.ಡಿ.ಯನ್ನು ಯಾವೆಲ್ಲ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂಬುದು ವಿಚಾರಣೆಯಿಂದಲೇ ಗೊತ್ತಾಗಬೇಕಿದೆ’ ಎಂದೂ ಮೂಲಗಳು ತಿಳಿಸಿವೆ.

ಜಮೀನು ಖರೀದಿಗೆ ಮಾತುಕತೆ: ‘ನಾಪತ್ತೆಯಾಗಿರುವ ಯುವಕ, ಮೈಸೂರು ಬಳಿ ಜಮೀನು ಖರೀದಿಸಿರುವ ಬಗ್ಗೆ ಸ್ನೇಹಿತನ ಜೊತೆ ಮಾತುಕತೆ ನಡೆಸಿದ್ದ. ಹಲವೆಡೆ ಜಮೀನುಗಳನ್ನೂ ನೋಡಿಕೊಂಡು ಬಂದಿದ್ದ. ಕೆಲವೇ ದಿನಗಳಲ್ಲಿ ಮುಂಗಡ ಹಣ ನೀಡುವುದಾಗಿ ಮಾಲೀಕರಿಗೆ ಹೇಳಿದ್ದ’ ಎಂದು ಮೂಲಗಳು ಹೇಳಿವೆ.

‘ಯುವಕನೇ ಫಾರ್ಚ್ಯೂನರ್ ಕಾರು ಖರೀದಿಸಲು ಮಳಿಗೆಗೆ ಹೋಗಿ ಮುಂಗಡ ಹಣವನ್ನೂ ಕೊಟ್ಟು ಬಂದಿದ್ದ. ಸಿ.ಡಿ ಪ್ರಕರಣ ಸಂಬಂಧ ದಿನೇಶ್ ದೂರು ನೀಡುತ್ತಿದ್ದಂತೆ ನಾಪತ್ತೆಯಾಗಿರುವ ಯುವಕ, ಕಾರಿನ ಉಳಿದ ಮೊತ್ತವನ್ನೂ ಪಾವತಿ ಮಾಡಿಲ್ಲ’ ಎಂದೂ ಮೂಲಗಳು ತಿಳಿಸಿವೆ.

ಮನೆ ಮಾಲೀಕರಿಗೆ ಕರೆ: ‘ಯುವತಿ, ಬೆಂಗಳೂರಿನ ಆರ್.ಟಿ.ನಗರದ ಮನೆಯೊಂದರಲ್ಲಿ ಬಾಡಿಗೆಗೆ ಇದ್ದರು. ಸಿ.ಡಿ ಪ್ರಕರಣ ಸದ್ದು ಮಾಡುತ್ತಿದ್ದಂತೆ ನಾಪತ್ತೆಯಾಗಿದ್ದ ಯುವತಿ, ಇತ್ತೀಚೆಗೆ ಮನೆ ಮಾಲೀಕರಿಗೆ ಕರೆ ಮಾಡಿ ಮಾತನಾಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ನನ್ನಿಂದ ನಿಮಗೆ ತೊಂದರೆ ಆಗಿದೆ. ಕ್ಷಮಿಸಿ. ಕೆಲವೇ ದಿನಗಳಲ್ಲಿ ಮನೆಗೆ ಬಂದು ಬಾಡಿಗೆ ಹಣ ನೀಡುತ್ತೇನೆ. ನಂತರವೇ, ಮನೆ ಖಾಲಿ ಮಾಡಿ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತೇನೆ’ ಎಂದು ಯುವತಿ ಹೇಳಿರುವುದಾಗಿ ಗೊತ್ತಾಗಿದೆ.

‘ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ’

ಬೆಂಗಳೂರು: ‘ರಾಜ್ಯ ಚುನಾವಣಾ ಆಯುಕ್ತರನ್ನಾಗಿ (ಎಸ್‌ಇಸಿ) ಸರ್ಕಾರಿ ಅಧಿಕಾರಿಗಳನ್ನು ನೇಮಿಸುವಂತಿಲ್ಲವೆಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಸಂವಿಧಾನದ ಪ್ರಕಾರ ರಾಜ್ಯ ಚುನಾವಣಾ ಆಯೋಗದ ಕಾರ್ಯ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ನಡೆಸದೇ ಇರುವುದು ರಾಜ್ಯ ಸರ್ಕಾರದ ಕರ್ತವ್ಯ ಎಂದೂ ಪೀಠ ಹೇಳಿರುವುದು ಸ್ವಾಗತಾರ್ಹ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಹೇಳಿದ್ದಾರೆ.

ಟ್ವೀಟ್ ಮಾಡಿರುವ ಅವರು, ‘ರಾಜ್ಯ ಚುನಾವಣಾ ಆಯುಕ್ತರು ಸ್ವತಂತ್ರ ವ್ಯಕ್ತಿಯಾಗಿರಬೇಕು. ರಾಜ್ಯ ಸರ್ಕಾರದ ಅಧೀನದ ಯಾವುದೇ ಹುದ್ದೆಯಲ್ಲಿ ಇರಬಾರದು. ಸರ್ಕಾರದ ಹುದ್ದೆಯಲ್ಲಿರುವ ವ್ಯಕ್ತಿ ನೇಮಕವಾದರೆ, ಅಧಿಕಾರ ವಹಿಸಿಕೊಳ್ಳುವುದಕ್ಕೆ ಮೊದಲೇ ಸರ್ಕಾರಿ ಹುದ್ದೆಗೆ ರಾಜೀನಾಮೆ ನೀಡಬೇಕೆಂದು ದ್ವಿಸದಸ್ಯ ಪೀಠ ಆದೇಶಿಸಿದೆ’ ಎಂದಿದ್ದಾರೆ.

ಒಳನೋಟ
ನೀಗದ ನೀರಿನ ಬವಣೆ

ಬೆಂಗಳೂರು: ‘ದಾಹ ಇಂಗಿಸದ ಯೋಜನೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಮಾ.14) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ಸಮಗ್ರ ಯೋಜನೆಯನ್ನು ರೂಪಿಸಬೇಕು’

ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಶಾಶ್ವತವಾದ ಯೋಜನೆಯೊಂದನ್ನು ರೂಪಿಸಿ, ಆ ಯೋಜನೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡ ಬಳಿಕವೇ ಬೇರೆ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಇಲ್ಲವಾದಲ್ಲಿ ಎಲ್ಲ ಯೋಜನೆಗಳೂ ಅಧ್ವಾನವಾಗಲಿವೆ. ಬರದ ನಾಡಾದ ಕೊಪ್ಪಳದ ಗ್ರಾಮೀಣ ಭಾಗಗಳಲ್ಲಿ 4–5 ಕಿ.ಮೀ ತೆರಳಿ, ನೀರನ್ನು ತರಬೇಕಾದ ಪರಿಸ್ಥಿತಿಯಿದೆ. ಜಿಲ್ಲೆಯಲ್ಲಿ ಸಿಂಗಟಾಲೂರು, ಕೃಷ್ಣಾ ಎಡದಂಡೆ ಸೇರಿದಂತೆ ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಅದರ ಸೌಲಭ್ಯವನ್ನು ಪಡೆದುಕೊಳ್ಳಲು ಇಂದಿಗೂ ಸಾಧ್ಯವಾಗಿಲ್ಲ. ಕುಷ್ಟಗಿ ತಾಲ್ಲೂಕಿನ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಜನರು ಪಡುತ್ತಿರುವ ಕಷ್ಟವನ್ನು ಕೇಳುವವರಿಲ್ಲ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು, ಸಮಗ್ರ ಯೋಜನೆಯೊಂದನ್ನು ರೂಪಿಸಿ, ಜನರ ನೀರಿನ ಬವಣೆಯನ್ನು ತೀರಿಸಬೇಕು.



ಶಿವನಗೌಡ ಪೊಲೀಸ್ ಪಾಟೀಲ, ಕೊಪ್ಪಳ

‘ಹಳೆ ಯೋಜನೆಗಳನ್ನು ಪೂರ್ಣಗೊಳಿಸಿ’

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳಲಿದ್ದು, ಹನಿ ನೀರಿಗೂ ತತ್ವಾರ ಉಂಟಾಗಲಿದೆ. ತುಮಕೂರು ತಾಲ್ಲೂಕಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆ ಈವರೆಗೂ ಸಾಕಾರಗೊಂಡಿಲ್ಲ. ಹೆಬ್ಬೂರು, ನಾಗವಲ್ಲಿ ಸೇರಿದಂತೆ ಹಲವಾರು ಗ್ರಾಮಗಳ ಕೆರೆಗಳಿಗೆ ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡುವ ಏತ ನೀರಾವರಿಯ ಯೋಜನೆಗೆ ಸಂಬಂಧಿಸಿದಂತೆ ಕೋಟ್ಯಾಂತರ ರೂಪಾಯಿಯನ್ನು ವ್ಯಯ ಮಾಡಲಾಗಿದೆ. ಆದರೆ, ಕೆರೆಗಳಿಗೆ ಮಾತ್ರ ನೀರು ಬಂದಿಲ್ಲ. ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು. ಹೊಸ ಯೋಜನೆಗಳನ್ನು ಜಾರಿ ಮಾಡುವ ಮೊದಲು ಈಗಾಗಲೇ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸಬೇಕು.

ಎಚ್.ಜಿ. ಬಸವರಾಜು, ತುಮಕೂರು

‘ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಲಿ’

ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯು ಸಮರ್ಪಕವಾಗಿ ಜನರನ್ನು ತಲುಪಬೇಕಾದಲ್ಲಿ ಆಯಾ ಗ್ರಾಮ ಮಟ್ಟದ ಅಧಿಕಾರಿಗಳ ಶ್ರಮ ಮುಖ್ಯ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೂ ಅದು ಕಾರ್ಯರೂಪಕ್ಕೆ ಬಂದು ಯಶಸ್ವಿಯಾಗುತ್ತಿಲ್ಲ. ಇದಕ್ಕೆ ಪ್ರಮುಖವಾಗಿ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯೇ ಕಾರಣ. ಗ್ರಾಮೀಣ ಮಟ್ಟದ ಅಧಿಕಾರಿಗಳು ಯಾವುದೆ ಫಲಾಪೇಕ್ಷೆಯನ್ನು ಬಯಸದೇ, ನಿಷ್ಪಕ್ಷಪಾತವಾಗಿ ತಮ್ಮ ತಮ್ಮ ಕೆಲಸದಲ್ಲಿ ಕಾರ್ಯ ಪ್ರವೃತ್ತರಾದರೆ ಎಲ್ಲ ಯೋಜನೆಗಳು ಅರ್ಹ ಫಲಾನುಭವಿಗಳನ್ನು ತಲುಪುತ್ತವೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಎಲ್ಲ ಜನರಿಗೆ ಕುಡಿಯುವ ನೀರು ಪೂರೈಸಲು ಪಂಚಾಯಿತಿಯ ಅಧಿಕಾರಿಗಳು ಮುಂದಾಗಬೇಕು.

ನಾಡಿಗರ ವೆಂಕಟೇಶ, ಬಳ್ಳಾರಿ

‘ಕ್ರಿಯಾಯೋಜನೆ ರೂಪಿಸಬೇಕಿದೆ’

ಸ್ವಾತಂತ್ರ್ಯ ಬಂದು 73 ವರ್ಷಗಳು ಕಳೆದರೂ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರಗಳಿಗೆ ಸಾಧ್ಯವಾಗಲಿಲ್ಲ. ಇದಕ್ಕೆ ಏನೆನ್ನಬೇಕು? ವಿದ್ಯಾವಂತರು, ಬುದ್ಧಿಜೀವಿಗಳು, ಜ್ಞಾನಿಗಳು ಸುಮ್ಮನೆ ನೋಡುತ್ತಿದ್ದಾರೆ. ಅವರು ಕೆರಳುವ ಮುನ್ನ ಇಲಾಖಾವಾರು ಕೆಲಸಗಳನ್ನು ನಿರ್ವಹಿಸುವ ಹೊಣೆ ಮತ್ತು ಜವಾಬ್ದಾರಿ ಹೊಂದಿರುವ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕಾರ್ಯಪ್ರವೃತರಾಗಬೇಕು. ಕೆರೆಗಳು, ನೀರಿನ ಹೊಂಡ, ಹಳ್ಳ ಮತ್ತು ನೀರಿನ ಮೂಲವನ್ನು ರಕ್ಷಿಸುವ ಕೆಲಸ ತುರ್ತಾಗಿ ಆಗಬೇಕು. ರಾಜ್ಯದಲ್ಲಿರುವ ಕೆರೆಗಳು ಹಾಗೂ ಅವುಗಳ ವಿಸ್ತರಣೆಯ ಬಗೆಗಿನ ಸಮರ್ಪಕ ಮಾಹಿತಿ ಸಣ್ಣ ನೀರಾವರಿ ಇಲಾಖೆಯ ಬಳಿಯೇ ಸಿಗುವುದಿಲ್ಲ. ಸರ್ಕಾರವು ರಾಜ್ಯದ ಎಲ್ಲ ಹಳ್ಳಿಗಳ ಕೆರೆಗಳು ಅಭಿವೃದ್ಧಿಯಾಗಲು ಒಂದು ಕ್ರಿಯಾಯೋಜನೆ ರೂಪಿಸಿ, ಅದನ್ನು ಜಾರಿಗೆ ತಂದಲ್ಲಿ ಭವಿಷ್ಯದಲ್ಲಿ ಅನುಕೂಲವಾಗುತ್ತದೆ.

ಸಿ. ಶಿವಾನಂದಪ್ಪ, ಶಿವಮೊಗ್ಗ

‘ಹನಿ ನೀರಿಗೂ ಪರದಾಟ’

ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಈಗಿನಿಂದಲೇ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಕಲಬುರ್ಗಿ, ಯಾದಗಿರಿ, ವಿಜಯಪುರ ಸೇರಿದಂತೆ ಹಲವೆಡೆ ಸರ್ಕಾರಿ ಕೆಲಸ ಸಿಕ್ಕರೂ ಅಲ್ಲಿ ಕೆಲಸ ಮಾಡಲು ಹಿಂದೇಟು ಹಾಕುವ ಪರಿಸ್ಥಿತಿ ಇದೆ. ಇದಕ್ಕೆ ಪ್ರಮುಖ ಕಾರಣ ನೀರಿನ ಸಮಸ್ಯೆ. ಶುದ್ಧವಾದ ಕುಡಿಯುವ ನೀರು ಕೂಡ ಕೆಲವೆಡೆ ದೊರೆಯುವುದಿಲ್ಲ. ಇದರಿಂದ ಸರ್ಕಾರಿ ಉದ್ಯೋಗದಲ್ಲಿರುವವರು ವರ್ಗಾವಣೆಗೆ ಹರಸಾಹಸ ಮಾಡುತ್ತಾರೆ. ಗ್ರಾಮೀಣ ಭಾಗದ ಜನತೆ ಹನಿ ನೀರಿಗೂ ಪರದಾಟ ನಡೆಸಬೇಕಾಗಿದೆ. ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ, ಶುದ್ಧ ಕುಡಿಯುವ ನೀರನ್ನು ಒದಗಿಸಲು ಆದ್ಯತೆ ನೀಡಬೇಕು.

ಮಂಜುನಾಥ್ ಜಿ., ವಿಜಯನಗರ

ರಥೋತ್ಸವ ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಸಮೀಪದ ಉಕ್ಕಡಗಾತ್ರಿ ಕರಿಬಸವೇಶ್ವರ ರಥೋತ್ಸವ ಭಾನುವಾರ ವೈಭವದಿಂದ ಜರುಗಿತು.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ

5 ದಿನಗಳಲ್ಲಿ 4,231 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು ಕೊಂಡಿದ್ದು, ಭಾನುವಾರ 934 ಪ್ರಕರಣಗಳು ವರದಿಯಾಗಿವೆ. ಎರಡು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಎರಡು ವಾರಗಳಿಂದ ಪ್ರತಿನಿತ್ಯ 500ಕ್ಕೂ ಅಧಿಕ ಪ್ರಕರಣಗಳು ದೃಢಪಡುತ್ತಿದ್ದು, 48 ಗಂಟೆಗಳ ಅವಧಿಯಲ್ಲಿ 1,855 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಐದು ದಿನಗಳ ಅವಧಿಯಲ್ಲಿ 4,231 ಪ್ರಕರಣಗಳು ವರದಿಯಾಗಿವೆ. ಈ ತಿಂಗಳು 9,021 ಮಂದಿ ಕೊರೊನಾ ಸೋಂಕಿತರಾಗಿರುವುದು ಪರೀಕ್ಷಾ ವರದಿಯಿಂದ ಖಚಿತಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 644 ಪ್ರಕರಣಗಳು ದೃಢಪಟ್ಟಿವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂವರು ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,390ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 609 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.39 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆಯಾಗಿದ್ದು, 8,364 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. 125 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಒಂದು ದಿನದ ಅವಧಿಯಲ್ಲಿ 73 ಸಾವಿರ ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಈವರೆಗೆ 1.97 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿದೆ.

ಬೆಂಗಳೂರಿನಲ್ಲಿ ಹೆಚ್ಚಳ: ಬ್ರಿಟನ್‌ನಿಂದ ಇಲ್ಲಿಗೆ ಭಾನುವಾರ 257 ಮಂದಿ ಬಂದಿದ್ದಾರೆ. ಕಳೆದ ನ.25ರ ಬಳಿಕ ಬಂದವರ ಸಂಖ್ಯೆ 14,383ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಳವಾಗಿದ್ದು, 628 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ಸೋಂಕಿತರ ಸಂಖ್ಯೆ 4.11 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 31 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,445ಕ್ಕೆ ತಲುಪಿದೆ. ಕಲಬುರ್ಗಿಯಲ್ಲಿ 43, ದಕ್ಷಿಣ ಕನ್ನಡದಲ್ಲಿ 40, ಬೆಳಗಾವಿಯಲ್ಲಿ 27, ಧಾರವಾಡದಲ್ಲಿ 20 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ಒಂದೇ ಕುಟುಂಬದ 16 ಮಂದಿಗೆ ಕೋವಿಡ್ ದೃಢ

ರಾಯಬಾಗ (ಬೆಳಗಾವಿ): ತಾಲ್ಲೂಕಿನ ಬಾವನಸೌಂದತ್ತಿಯಲ್ಲಿ ಒಂದೇ ಕುಟುಂಬದ 16 ಮಂದಿಗೆ ಕೋವಿಡ್–19 ಶನಿವಾರ ದೃಢಪಟ್ಟಿದೆ.

'ಆ ಕುಟುಂಬದ ವೃದ್ಧರೊಬ್ಬರು ಕೋವಿಡ್–19 ಕಾರಣದಿಂದ ಈಚೆಗೆ ನಿಧನರಾಗಿದ್ದರು. ಹೀಗಾಗಿ, ಕುಟುಂಬದವರನ್ನು ಆರೋಗ್ಯ ಇಲಾಖೆಯವರು ತಪಾಸಣೆಗೆ ಒಳಪಡಿಸಿದ್ದರು. ಅವರಲ್ಲಿ 16 ಮಂದಿಗೆ ಸೋಂಕು ದೃಢಪಟ್ಟಿದೆ. ಅವರನ್ನು ಹೋಂ ಕ್ವಾರಂಟೈನ್‌ನಲ್ಲಿ ಇರುವಂತೆ ಸೂಚಿಸಲಾಗಿದೆ. ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಇತರ ಒಟ್ಟು 415 ಮಂದಿಯನ್ನೂ ತಪಾಸಣೆಗೆ ಒಳಪಡಿಸಲಾಗಿದೆ. ವರದಿ ಇನ್ನೂ ಬಂದಿಲ್ಲ' ಎಂದು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಆರ್.ಎಚ್. ರಂಗಣ್ಣವರ 'ಪ್ರಜಾವಾಣಿ'ಗೆ ತಿಳಿಸಿದರು.

'ಆ ಕುಟುಂಬದಲ್ಲಿ ಒಟ್ಟು 45 ಮಂದಿ ಇದ್ದಾರೆ. ಉಳಿದ ಎಲ್ಲರಿಂದಲೂ ಗಂಟಲಿನ ದ್ರವದ ಮಾದರಿ ಸಂಗ್ರಹಿಸಲಾಗಿದೆ. ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿಯನ್ನು ನಿರೀಕ್ಷಿಸಲಾಗಿದೆ. ಆ ಮನೆಯ ಸುತ್ತಮುತ್ತ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗಿದೆ' ಎಂದು ಮಾಹಿತಿ ನೀಡಿದರು.

ದೇಶದಲ್ಲಿ ಒಂದೇ ದಿನ 25 ಸಾವಿರಕ್ಕೂ ಹೆಚ್ಚು ಪ್ರಕರಣಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಭಾನುವಾರ ಒಂದೇ ದಿನದಲ್ಲಿ 25,320 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ.

ಇದು ಕಳೆದ 84 ದಿನಗಳಲ್ಲೇ ದಾಖಲಾದ ಗರಿಷ್ಠ ಪ್ರಕರಣಗಳಾಗಿವೆ. ಮಹಾರಾಷ್ಟ್ರದಲ್ಲೇ 15,602 ಮತ್ತು ಕೇರಳದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪ್ರಕರಣಗಳು ದೃಢಪಟ್ಟಿವೆ. ಇದರಿಂದ, ಒಟ್ಟು ಪ್ರಕರಣಗಳ ಸಂಖ್ಯೆ 1.13 ಕೋಟಿ ದಾಟಿದೆ.

ಭಾನುವಾರ 161 ಸೋಂಕಿತರು ಸಾವಿಗೀಡಾಗಿದ್ದಾರೆ. ಇವರಲ್ಲಿ ಮಹಾರಾಷ್ಟ್ರದಲ್ಲಿ 88, ಪಂಜಾಬ್‌ನಲ್ಲಿ 22 ಮತ್ತು ಕೇರಳದ 12 ಮಂದಿ ಸೇರಿದ್ದಾರೆ. ಇದರಿಂದಾಗಿ ಸಾವಿಗೀಡಾದವರ ಸಂಖ್ಯೆ 1.58 ಲಕ್ಷ ದಾಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

'ಬೆಂಗಳೂರು, ಚೆನ್ನೈ ಮತ್ತು ಮುಂಬೈ ಮಹಾನಗರಗಳಲ್ಲಿಯೂ ಅತಿ ಹೆಚ್ಚು ಪ್ರಕರಣಗಳು ದೃಢಪಟ್ಟಿವೆ. ಕಳೆದ ಕೆಲವು ವಾರಗಳಿಂದ 16 ರಾಜ್ಯಗಳ ಪೈಕಿ 11 ರಾಜ್ಯಗಳಲ್ಲಿ ಅತಿ ಹೆಚ್ಚು ಸಕ್ರಿಯ ಪ್ರಕರಣಗಳಿವೆ' ಎಂದು ಚೆನ್ನೈನಲ್ಲಿರುವ ಗಣಿತ ವಿಜ್ಞಾನಗಳ ಸಂಸ್ಥೆಯ ವಿಜ್ಞಾನಿ ಸೀತಾಭ್ರಾ ಸಿನ್ಹಾ ತಿಳಿಸಿದ್ದಾರೆ.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತವೆ ಎಂದು ಸಿನ್ಹಾ ಎರಡು ವಾರಗಳ ಹಿಂದೆ ಮಾಹಿತಿ ನೀಡಿದ್ದರು. ಮುಂದಿನ ದಿನಗಳಲ್ಲಿ ಮಹಾರಾಷ್ಟ್ರ ಮತ್ತು ಪಂಜಾಬ್ ಜತೆಯಲ್ಲಿ ಗುಜರಾತ್, ಛತ್ತೀಸಗಡ, ಹರಿಯಾಣ, ರಾಜಸ್ಥಾನ, ದೆಹಲಿ ಮತ್ತು ಉತ್ತರಾಖಂಡದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಗಳಿವೆ.

ದೇಶದಲ್ಲಿ ಪತ್ತೆಯಾದ ಕೋವಿಡ್ ಪ್ರಕರಣಗಳು	
ಮಾರ್ಚ್ 13	24,882
ಮಾರ್ಚ್ 12	23,848
ಮಾರ್ಚ್ 11	22,851
ಮಾರ್ಚ್ 10	17,873
ಮಾರ್ಚ್ 9	15,353

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	12.02 ಕೋಟಿ ▲	1.138 ಕೋಟಿ ▲	9,60,272 ▲
ಸಕ್ರಿಯ ಪ್ರಕರಣ	2.07 ಕೋಟಿ ▲	2.15 ಲಕ್ಷ ▲	8,364 ▲
ಗುಣಮುಖ	9.68 ಕೋಟಿ ▲	1.00 ಕೋಟಿ ▼	9,39,499 ▲
ಸಾವು	26.62 ಲಕ್ಷ ▲	1.58 ಲಕ್ಷ ▲	12,390 ▲
ದಿನದ ಏರಿಕೆ: ಹೊಸ ಪ್ರಕರಣ	4.90 ಲಕ್ಷ ▲	25,154 ▲	943 ▲
ದಿನದ ಏರಿಕೆ: ಗುಣಮುಖ	3.51 ಲಕ್ಷ ▼	16,508 ▲	609 ▼
ದಿನದ ಏರಿಕೆ: ಸಾವು	9,477 ▼	159 ▲	03 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 48,808 ▼ ಅಮೆರಿಕ; 70,934 ▼ ಬ್ರೆಜಿಲ್; 29,759 ▲ ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 73.88 ▲ ಅಮೆರಿಕ; 36.82 ▲ ಫ್ರಾನ್ಸ್; 11.25 ▲ ಬ್ರಿಟನ್

ಎಲ್ಲಿ ಹೆಚ್ಚು ಸಾವು: 52,861 ಮಹಾರಾಷ್ಟ್ರ; 12,547 ತಮಿಳುನಾಡು; 10,941 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 23.14 ಮಹಾರಾಷ್ಟ್ರ; 10.91 ಕೇರಳ; 8.91 ಆಂಧ್ರಪ್ರದೇಶ

125 ಐಸಿಯುನಲ್ಲಿ ಇರುವವರು

ಪ್ರಜಾವಾಣಿ ಗ್ರಾಫಿಕ್ಸ್

ಆನ್‌ಲೈನೇ ಭವಿಷ್ಯದ ಮೈದಾನ

ಕೌಶಲ ಆಧಾರಿತ ಮೊಬೈಲ್ ಮತ್ತು ಗೇಮಿಂಗ್ ಉದ್ಯಮವು ಸಾಕಷ್ಟು ವೇಗವಾಗಿ ಬೆಳೆಯುತ್ತಿದೆ. ವ್ಯವಸ್ಥಿತ ನೀತಿಯು ಈ ಉದ್ಯಮದ ನಿಯಂತ್ರಣ ಹಾಗೂ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಎಬಿಎಐಅಧ್ಯಕ್ಷ ಹಾಗೂ ಸಿಐಐ ರಾಷ್ಟ್ರೀಯ ಅನಿಮೇಷನ್ ಆಟಗಳು ಮತ್ತು ವಿಷುಯಲ್ ಎಫೆಕ್ಟ್ಸ್ ಸಮಿತಿಯ ಅಧ್ಯಕ್ಷ ಬಿರೆನ್ ಘೋಷ್ ಅವರು ಈ ಉದ್ಯಮದ ಭವಿಷ್ಯದ ಮೇಲೆ ಇಲ್ಲಿ ಬೆಳಕು ಚೆಲ್ಲಿದ್ದಾರೆ.

- **ಇ-ಕ್ರೀಡೆಗಳ ಹೊಸ ಆಯಾಮವಾಗಿ ಮೊಬೈಲ್ ಗೇಮಿಂಗ್ ಹೊರಹೊಮ್ಮಲಿದೆಯೇ?**

ಜಗತ್ತಿನಾದ್ಯಂತ ಇ-ಕ್ರೀಡೆಯಲ್ಲಿ ತೀವ್ರತರವಾದ ಬೆಳವಣಿಗೆ ಕಂಡುಬರುತ್ತಿದೆ. ವಿದ್ಯುನ್ಮಾನ ವಿಧಾನದ ಮೂಲಕ ವೈಯಕ್ತಿಕವಾಗಿ ಅಥವಾ ಗುಂಪುಗಳ ಜೊತೆ ಈ ಆಟಗಳನ್ನು ಆಡಬೇಕಿದೆ. ಭಾರತದಲ್ಲಿ 1.7 ಕೋಟಿಯಿಂದ 2 ಕೋಟಿ ಇ-ಕ್ರೀಡಾ ಬಳಕೆದಾರರು ಇದ್ದಾರೆ.

ಜಾಗತಿಕವಾಗಿ ಇ-ಗೇಮಿಂಗ್‌ನಿಂದ ಸುಮಾರು ₹11,52,000 ಕೋಟಿ ಆದಾಯ ಬರುತ್ತಿದೆ. ಇದರಲ್ಲಿ ಭಾರತದ ಪಾಲು ಅತ್ಯಲ್ಪ (0.5%-0.7%). ಭಾರತದಲ್ಲಿ ಮಾಧ್ಯಮ ಮತ್ತು ಮನರಂಜನಾ ಕ್ರೀಡಾ ವಲಯದಲ್ಲಿ ಭಾರಿ ಬೆಳವಣಿಗೆ ಕಂಡುಬರಲಿದೆ. ಒಟ್ಟಾರೆ ಆದಾಯದಲ್ಲಿ ಶೇ 8ರಿಂದ ಶೇ 10ರಷ್ಟು ಏರಿಕೆಯಾಗಲಿದೆ. ಮುಂದಿನ 3-5 ವರ್ಷಗಳಲ್ಲಿ 50 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳು ಸೃಷ್ಟಿಯಾಗಲಿದ್ದಾರೆ.

- **ಕರ್ನಾಟಕವು ಇದರ ನಾಯಕತ್ವ ವಹಿಸಬಹುದೇ?**

ಮೊಬೈಲ್ ಗೇಮಿಂಗ್‌ನಲ್ಲಿ ಬೆಳವಣಿಗೆ ಸಾಧಿಸಲು ಕರ್ನಾಟಕಕ್ಕೆ ಸಾಕಷ್ಟು ಅವಕಾಶಗಳಿವೆ. ಈ ವ್ಯವಸ್ಥೆಯಲ್ಲಿ ಸುಮಾರು 10,000 ಜನರು ತರಬೇತಿ ಪಡೆದು ಉದ್ಯೋಗಿಗಳಾಗಿದ್ದಾರೆ.

- **ಯಾವ ನಿಯಂತ್ರಕ ಮಾದರಿಯನ್ನು ಕರ್ನಾಟಕ ಅಳವಡಿಸಿಕೊಳ್ಳಬೇಕು?**

ಉದ್ಯೋಗಾವಕಾಶ, ಕೌಶಲಾಭಿವೃದ್ಧಿಯನ್ನು ಹೆಚ್ಚಿಸುವ ದೃಷ್ಟಿಕೋನವನ್ನು ನೀತಿ ಒಳಗೊಂಡಿರಬೇಕು. ಕೌಶಲ ಆಧಾರಿತ ಆಟಗಳು ಹಾಗೂ ಜೂಜಿನ ಆಟಗಳನ್ನು ಪ್ರತ್ಯೇಕಿಸುವ ಮಾರ್ಗಸೂಚಿಯನ್ನು ಅದು ಒಳಗೊಂಡಿರಬೇಕಾಗುತ್ತದೆ. ಉದ್ದಿಮೆಯನ್ನು ಪಾರದರ್ಶಕವಾಗಿ ಇಟ್ಟುಕೊಳ್ಳಲು ನಿಯಮಾವಳಿಗಳು ಬೇಕಿವೆ. ಕೇಂದ್ರ ಮತ್ತು ರಾಜ್ಯಗಳ ಸಂಸ್ಥೆಗಳು ಮಾರ್ಗದರ್ಶನ ಹಾಗೂ ಕಣ್ಗಾವಲು ಕೆಲಸವನ್ನು ಮಾಡಬಹುದು. ಕರ್ನಾಟಕವು ಸಂಬಂಧಪಟ್ಟವರ ಜೊತೆ ಮಾತುಕತೆ ನಡೆಸಿದೆ. ಉದ್ದಿಮೆಯ ಮೇಲೆ ಬೆಳಕು ಚೆಲ್ಲುವ 'ಬೆಂಗಳೂರು ಜಿಎಎಫ್‌ಎಕ್ಸ್' ಕಾರ್ಯಕ್ರಮ ಆಯೋಜಿಸಲಿದೆ.

- **'ಇ-ಸ್ಪೋರ್ಟ್' ಪರಿಕಲ್ಪನೆಯನ್ನು ಎಲ್ಲರೂ ಅರಿಯುವುದು ಅಗತ್ಯವೇ? ಸಮಗ್ರವಾದ ನೀತಿಯು ಸಹಕಾರಿಯಾಗಬಲ್ಲದೇ?**

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜತೆ, ವಿಶೇಷವಾಗಿ ಕರ್ನಾಟಕದಲ್ಲಿ ನಾನು ಇದರ ಪರವಾಗಿ ವಾದಿಸುತ್ತಾ ಬಂದಿದ್ದೇನೆ. ಇಲ್ಲಿ ಆ್ಯನಿಮೇಷನ್, ವಿಷುಯಲ್ ಎಫೆಕ್ಟ್ ಮುಂತಾದ ವಿಚಾರಗಳನ್ನು ಕುರಿತ ನೀತಿ ನಿರೂಪಣೆಯಲ್ಲಿ ನಾನೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದೇನೆ.

ದತ್ತಾಂಶಗಳನ್ನು ನಾವು ಸೇತುವೆ ನಿರ್ಮಿಸಲು ಬಳಸಬೇಕೇ ವಿನಾ ಗೋಡೆಗಳನ್ನು ನಿರ್ಮಿಸಲು ಅಲ್ಲ. ನಾಗರಿಕರ ಲಾಭಕ್ಕಾಗಿ ಡಿಜಿಟಲ್ ತಂತ್ರಜ್ಞಾನ ಬಳಕೆಯನ್ನು ನಾವು ಪ್ರೋತ್ಸಾಹಿಸಬೇಕು. ಉದಯಿಸುತ್ತಿರುವ ಈ ತಂತ್ರಜ್ಞಾನಕ್ಕೆ ಉಜ್ವಲ ಭವಿಷ್ಯವಿದೆ ಮತ್ತು ಅತ್ಯಂತ ಪರಿಣಾಮಕಾರಿಯೂ ಆಗಿದೆ. ಈ ಮಾಧ್ಯಮ ಕ್ರಾಂತಿಯ ಸಾಮರ್ಥ್ಯವನ್ನು ನಿರ್ಬಂಧಿಸುವ ಬದಲು ಅದನ್ನು ಅರ್ಥ ಮಾಡಿಕೊಂಡು, ಸುರಕ್ಷತಾ ಕ್ರಮಗಳೊಂದಿಗೆ ಅದರ ಲಾಭ ಪಡೆಯಲು ಮುಂದಾಗಬೇಕು.

- **ಸಾಂಪ್ರದಾಯಿಕ ಕ್ರೀಡೆಗಳಿಂದ ಆಗುವ ಲಾಭಗಳ ಬಗ್ಗೆ ತಿಳಿದಿದೆ. ಆದರೆ, ಮೊಬೈಲ್ ಗೇಮಿಂಗ್‌ನಿಂದ ಆಗುವ ಲಾಭಗಳೇನು?**

89 ವರ್ಷ ವಯಸ್ಸಿನ ನನ್ನ ಅತ್ತೆ, ತಮ್ಮ ತಿಳಿವಳಿಕೆಯ ಸಾಮರ್ಥ್ಯವನ್ನು ಸುಸ್ಥಿತಿಯಲ್ಲಿಡಲು ಐ-ಪ್ಯಾಡ್‌ನಲ್ಲಿ ಪೇಷಿಯನ್ಸ್ ಹಾಗೂ ಇತರ ಆಟಗಳನ್ನು ಆಡುತ್ತಾ ಗಂಟೆಗಟ್ಟಲೆ ಕಳೆಯುತ್ತಾರೆ. ಇಳಿವಯಸ್ಸಿನಲ್ಲಿ ಚುರುಕುತನವನ್ನು ಕಾಪಾಡಿಕೊಳ್ಳಲು ಮಿದುಳಿಗೆ ಪ್ರಚೋದನೆ ನೀಡುವುದು ಅಗತ್ಯ. ವಯಸ್ಕರಿಗೆ ಎದುರಾಗುವ ಕಾಯಿಲೆಗಳನ್ನು ತಡೆಯುವುದು ಇದರ ಉದ್ದೇಶ.

- **ಗೇಮಿಂಗ್ ಉದ್ಯಮವು ಭವಿಷ್ಯದಲ್ಲಿ ದೊಡ್ಡ ಉದ್ಯೋಗದಾತ ಹಾಗೂ ಆದಾಯದ ಕೇಂದ್ರವಾಗಿ ರೂಪುಗೊಳ್ಳುವ ಸಾಧ್ಯತೆ ಇದೆಯೇ?**

ಡೆವಲಪರ್‌ಗಳು ಒಂದು ಗೇಮಿಂಗ್ ಸೈಟ್ ಆರಂಭಿಸುವುದು ಮತ್ತು ಜನರು ಅದರಲ್ಲಿ ಆಟವಾಡುವಷ್ಟಕ್ಕೇ ಗೇಮಿಂಗ್ ಎಂಬುದು ಸೀಮಿತವಲ್ಲ. ಅದರ ಸುತ್ತ ಅನೇಕ ವ್ಯವಸ್ಥೆಗಳು ರೂಪುಗೊಳ್ಳುತ್ತವೆ. ಉತ್ಪನ್ನಗಳನ್ನು ತಯಾರಿಸುವವರು, ಈ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡುವಂಥ ವೇದಿಕೆಗಳನ್ನು ಸೃಷ್ಟಿಸುವವರು ಇರುತ್ತಾರೆ. ಅವರು ಆದಾಯ ಹಂಚಿಕೆಯ ವಿಧಾನಗಳನ್ನು ರೂಪಿಸಿಕೊಳ್ಳುತ್ತಾರೆ. ಪ್ರಕಾಶಕರು ಕೋಡಿಂಗ್‌ನಲ್ಲಿ ಪರಿಣತಿ ಹೊಂದಿರುವ ಅನೇಕ ಡೆವಲಪರ್‌ಗಳು, ಅವುಗಳ ಪರೀಕ್ಷೆ ನಡೆಸುವವರ ಜತೆಗೆ ಕೆಲಸ ಮಾಡುತ್ತಾರೆ. ಇಂಥ ಡೆವಲಪರ್‌ಗಳು, ಪ್ರಕಾಶಕರು ಹಾಗೂ ವೇದಿಕೆ ರೂಪಿಸುವರ ಮಧ್ಯೆ ಆದಾಯ ಹಂಚಿಕೆಯು ಸಹ ಮೊಬೈಲ್ ಹಾಗೂ ಟೆಲಿಕಾಂ ಸೇವಾ ಮಾಧ್ಯಮದಲ್ಲಿ ನಡೆಯುತ್ತದೆ. ಈ ವ್ಯವಹಾರ ಮಾದರಿಯು ಜಾಹೀರಾತನ್ನು ಒಳಗೊಂಡಿದೆ, ಪಾವತಿ ಗೇಟ್‌ವೇಗಳು ಮತ್ತು ಇತರ ವಹಿವಾಟು ಕಾರ್ಯವಿಧಾನಗಳೂ ಇಲ್ಲಿ ಬಳಕೆಯಾಗುತ್ತವೆ.

2019ರಲ್ಲಿ ಭಾರತದಲ್ಲಿ ಸುಮಾರು 560 ಕೋಟಿ ಮೊಬೈಲ್ ಗೇಮ್ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಲಾಗಿವೆ. ಇದರಿಂದ ಪರೋಕ್ಷವಾಗಿ ಆಗಿರುವ ಲಾಭಗಳನ್ನು ನಾವು ಇನ್ನು ಲೆಕ್ಕಹಾಕಬೇಕಾಗಿದೆ. 2025ರ ವೇಳೆಗೆ ಈ ಉದ್ದಿಮೆಯ ವ್ಯವಹಾರವು ₹ 15,000 ಕೋಟಿಗೆ ತಲುಪುವ ಸಾಧ್ಯತೆ ಇದೆ.

ಅಭಿವೃದ್ಧಿಯ ಅವಕಾಶಗಳು

- ಭಾರತದಲ್ಲಿ 400 ನವೋದ್ಯಮಗಳು, ಆನ್‌ಲೈನ್ ಗೇಮಿಂಗ್ ಉದ್ದಿಮೆಯ ಒಟ್ಟು ಮೌಲ್ಯ ₹ 6,600 ಕೋಟಿ. ಇವುಗಳಲ್ಲಿ 71 ನವೋದ್ಯಮಗಳು ಕರ್ನಾಟಕದಲ್ಲಿ ನೋಂದಾಯಿತ
- ಉದ್ಯಮವು ವಾರ್ಷಿಕ ಶೇ 41.60 ಅಭಿವೃದ್ಧಿ ಸಾಧಿಸುವ ನಿರೀಕ್ಷೆ
- ಭಾರತೀಯ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ಬಳಕೆದಾರರ ಸಂಖ್ಯೆ ಸುಮಾರು 36.5 ಕೋಟಿ
- 2019ರಲ್ಲಿ ನಡೆದ ವಹಿವಾಟಿನ ಮೊತ್ತ ₹ 6500 ಕೋಟಿ
- 2021–22ರ ವೇಳೆಗೆ ಆನ್‌ಲೈನ್ ಆಟಗಳ ಮಾರುಕಟ್ಟೆಯ ನಿರೀಕ್ಷಿತ ವಹಿವಾಟು ₹ 18,700 ಕೋಟಿ
- 2022ರ ವೇಳೆಗೆ ಈ ಕ್ಷೇತ್ರ ಸೃಜಿಸಲಿರುವ ಹೊಸ ಉದ್ಯೋಗಗಳು 40,000, 2019ರಲ್ಲಿ ಪರೋಕ್ಷ ತೆರಿಗೆ ಆದಾಯ ₹ 9800 ಕೋಟಿ, 2022ರ ವೇಳೆಗೆ ಇದು ₹28,600 ಕೋಟಿಗೆ ತಲುಪುವ ನಿರೀಕ್ಷೆ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಗಡಿ ದಾಟಿ ಬಂದ ಪಾಕ್‌ನ ಡ್ರೋನ್

ಚಂಡೀಗಡ: ಪಾಕಿಸ್ತಾನದ ಡ್ರೋನ್ ಭಾನುವಾರ ಭಾರತ ಗಡಿಯನ್ನು ಪ್ರವೇಶಿಸಿದ್ದು, ಇದನ್ನು ಗುರುತಿಸುತ್ತಿದ್ದಂತೆ ಬಿಎಸ್‌ಎಫ್ ಯೋಧರು ಅದರತ್ತ ಗುಂಡು ಹಾರಿಸಿದ್ದಾರೆ. ಗುಂಡಿನ ದಾಳಿ ಹಿಂದೆಯೇ ಡ್ರೋನ್ ಪಾಕ್‌ನ ಪಠಾಣ್‌ಕೋಟ್ ಜಿಲ್ಲೆಯತ್ತ ತೆರಳಿದೆ. ಈ ಕುರಿತು ಮಾಹಿತಿ ನೀಡಿರುವ ಪೊಲೀಸ್ ಅಧಿಕಾರಿಗಳು, ಪಾಕ್ ಗಡಿಯಿಂದ ಬಂದ ಡ್ರೋನ್ ಅನ್ನು ಭಾರತ ಮತ್ತು ಪಾಕ್ ಗಡಿಯ ಬಳಿ ಡಿಂಡಾ ಪೋಸ್ಟ್ ಬಳಿ ಭದ್ರತಾ ಸಿಬ್ಬಂದಿ ಗುರುತಿಸಿದರು ಎಂದು ತಿಳಿಸಿದ್ದಾರೆ.

ಸೈದಾಪುರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಯುವ ವಿಜ್ಞಾನಿಗಳ ಸಮಾವೇಶದಲ್ಲಿ ಯಶಸ್ವಿ ಶೆಟ್ಟಿ, ವೈ.ಹಿ.ಯೋಗಪ್ರಿಯ, ಸುಮೇಧ ಎಸ್‌.ಎಸ್ ಮತ್ತು ಕಾರ್ತಿಕ ಮೋಹನಲಾಲ್ ಅವರಿಗೆ ಯುವ ವಿಜ್ಞಾನಿ ಪ್ರಶಸ್ತಿ ಪ್ರದಾನ ಮಾಡಲಾಯಿತು

ನಾಲ್ವರಿಗೆ ಯುವ ವಿಜ್ಞಾನಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಸೈದಾಪುರ (ಯಾದಗಿರಿ ಜಿಲ್ಲೆ): ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವತಿಯಿಂದ ಭಾನುವಾರ ಇಲ್ಲಿ ನಡೆದ ರಾಜ್ಯಮಟ್ಟದ ಯುವ ವಿಜ್ಞಾನಿಗಳ ಸಮಾವೇಶದಲ್ಲಿ ನಾಲ್ವರು ವಿದ್ಯಾರ್ಥಿಗಳಿಗೆ 2020–21ನೇ ಸಾಲಿನ ಯುವ ವಿಜ್ಞಾನಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಾವಣಗೆರೆಯ ಕೇಂದ್ರೀಯ ವಿದ್ಯಾಲಯದ ವೈ.ಹಿ.ಯೋಗಪ್ರಿಯ, ದಕ್ಷಿಣ ಕನ್ನಡ ಜಿಲ್ಲೆಯ ವಿವೇಕಾನಂದ ಇಂಗ್ಲಿಷ್ ಮಾಧ್ಯಮ ಶಾಲೆಯ ಯಶಸ್ವಿ ಶೆಟ್ಟಿ, ಬಳ್ಳಾರಿಯ ಜಿಂದಾಲ್ ವಿದ್ಯಾಮಂದಿರದ ಸುಮೇಧ ಎಸ್.ಎಸ್ ಮತ್ತು ಗದಗ್‌ನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಾರ್ತಿಕ ಮೋಹನಲಾಲ್ ಅವರು ಪ್ರಶಸ್ತಿ ಸ್ವೀಕರಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳ 66 ವಿದ್ಯಾರ್ಥಿಗಳು ವಿಜ್ಞಾನ ಅನ್ವೇಷಣೆಯ ಮಾದರಿಗಳನ್ನು ಪ್ರದರ್ಶಿಸಿದರು. ಅಂತಿಮ ಹಂತಕ್ಕೆ ಆಯ್ಕೆಯಾದ 12 ವಿದ್ಯಾರ್ಥಿಗಳ ಮಾದರಿಗಳನ್ನು 8 ಮಂದಿ ತಜ್ಞರು ಪರಿಶೀಲಿಸಿದರು. ಲಿಖಿತ ಪರೀಕ್ಷೆ ಜೊತೆ ಸಂದರ್ಶನ ನಡೆಸಿ ನಾಲ್ವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದರು. ಅವರಿಗೆ ತಲಾ ₹10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರವನ್ನು ಭಾರತೀಯ ವಿಜ್ಞಾನ ಸಂಸ್ಥೆ ನಿವೃತ್ತ ವಿಜ್ಞಾನಿ ಡಾ.ಎಚ್.ಎಲ್.ಭಟ್ ವಿತರಿಸಿದರು.

2ನೇ ದಿನವೂ ಬಸ್ ಸಂಚಾರ ಸ್ಥಗಿತ

ಬೆಳಗಾವಿ: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶಿವಸೇನಾ ಕಾರ್ಯಕರ್ತರು ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿದಿದ್ದರಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಗಿರುವುದರಿಂದಾಗಿ ಇಲ್ಲಿಂದ ಆ ರಾಜ್ಯಕ್ಕೆ ಸಾರಿಗೆ ಬಸ್‌ಗಳ ಕಾರ್ಯಾಚರಣೆಯನ್ನು 2ನೇ ದಿನವಾದ ಭಾನುವಾರವೂ ಸ್ಥಗಿತಗೊಳಿಸಲಾಗಿದೆ. ಅಲ್ಲಿಂದಲೂ ಇಲ್ಲಿಗೆ ಬಸ್‌ಗಳು ಬರುತ್ತಿಲ್ಲ. ಪರಿಣಾಮ, ಪ್ರಯಾಣಿಕರಿಗೆ ತೊಂದರೆ ಆಗುತ್ತಿರುವುದು ಕಂಡುಬಂದಿದೆ.

'ಮೊದಲ ದಿನವಾದ ಶನಿವಾರ ಇಲ್ಲಿಂದ ಕೊಲ್ಹಾಪುರಕ್ಕೆ ಮಾತ್ರ ಬಸ್‌ಗಳ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಭಾನುವಾರ ಮಹಾರಾಷ್ಟ್ರದ ಯಾವುದೇ ನಗರಗಳಿಗೂ ಬಸ್‌ಗಳನ್ನು ಬಿಟ್ಟಿಲ್ಲ. ಭದ್ರತೆ ಒದಗಿಸುವುದು ಕಷ್ಟವಾಗುತ್ತದೆ ಎಂದು ಆ ರಾಜ್ಯದ ಅಧಿಕಾರಿಗಳು ತಿಳಿಸಿದ್ದಾರೆ. ಹೀಗಾಗಿ, ಮಹಾರಾಷ್ಟ್ರಕ್ಕೆ ಬಸ್‌ಗಳ ಕಾರ್ಯಾಚರಣೆಯನ್ನು ಮುಂಜಾಗ್ರತಾ ಕ್ರಮವಾಗಿ ಸ್ಥಗಿತಗೊಳಿಸಲಾಗಿದೆ' ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಆರ್. ಮುಂಜಿ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಚೋದನೆ– 4 ಪ್ರಕರಣ ದಾಖಲು: ಈ ನಡುವೆ, ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಪ್ರಚೋದನಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಕ್ಕೆ ಸಂಬಂಧಿಸಿದಂತೆ ಇಲ್ಲಿನ ಪೊಲೀಸರು ನಾಲ್ಕು ಪ್ರಕರಣ ದಾಖಲಿಸಿದ್ದಾರೆ.

'ನಾಲ್ಕು ವಿವಿಧ ಫೇಸ್‌ಬುಕ್ ಖಾತೆಗಳು ಹಾಗೂ ವಾಟ್ಸ್‌ಆ್ಯಪ್ ಗ್ರೂಪ್‌ಗಳ ಅಡ್ಮಿನ್‌ಗಳ ವಿರುದ್ಧ ಮಾರ್ಕೆಟ್, ತಿಲಕವಾಡಿ, ಗ್ರಾಮೀಣ ಹಾಗೂ ಶಹಾಪುರ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ವಹಿಸಿದ್ದೇವೆ. ಪ್ರಚೋದನಾತ್ಮಕ ಪೋಸ್ಟ್‌ಗಳನ್ನು ಹಾಕಿ ಶಾಂತಿ, ಸುವ್ಯವಸ್ಥೆ ಕೆಡಿಸಲು ಹುನ್ನಾರ ನಡೆಸುವ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು' ಎಂದು ಡಿಸಿಪಿ ವಿಕ್ರಂ ಅಮಟೆ ಎಚ್ಚರಿಕೆ ನೀಡಿದ್ದಾರೆ.

ಚಿತ್ರದುರ್ಗದ ಮುರುಘಾ ಮಠದಲ್ಲಿ 'ಶರಣ ಸೇನೆ'ಗೆ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಭಾನುವಾರ ಚಾಲನೆ ನೀಡಿದರು. ಸೇನೆಯ ನೂತನ ಅಧ್ಯಕ್ಷ ಮರುಳಾರಾಧ್ಯ, ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಲಿಂಗಮೂರ್ತಿ, ಶಿವಮೂರ್ತಿ ಮುರುಘಾ ಶರಣರು, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶಾಸಕರಾದ ಜಿ.ಎಚ್. ತಿಪ್ಪಾರೆಡ್ಡಿ, ಟಿ. ರಘುಮೂರ್ತಿ ಇದ್ದಾರೆ.

'ಶರಣ ಸೇನೆ'ಗೆ ಚಾಲನೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ನೇತೃತ್ವದಲ್ಲಿ ರಚನೆಯಾಗಿರುವ 'ಶರಣ ಸೇನೆ'ಗೆ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಭಾನುವಾರ ಚಾಲನೆ ನೀಡಿದರು. ಜಾತ್ಯತೀತ ನಿಲುವಿನೊಂದಿಗೆ ಆರಂಭವಾದ ಸೇನೆ, ಯುವ ಸಮೂಹ ಸಂಘಟಿಸುವ ವಾಗ್ದಾನ ಮಾಡಿತು.

'ಸಾಮಾಜಿಕ ಅವಮಾನ ಉಂಟು ಮಾಡುವ ದುಷ್ಟಶಕ್ತಿಗಳ ವಿರುದ್ಧ ಹೋರಾಡುತ್ತೇವೆ. ಶಿವಮೂರ್ತಿ ಮುರುಘಾ ಶರಣರ ತತ್ವಾದರ್ಶಗಳನ್ನು ಬೆಂಬಲಿಸುತ್ತೇವೆ. ಸಮೃದ್ಧ ಸಮಾಜ ರಚನೆಗೆ ಸಹಕರಿಸುತ್ತೇವೆ' ಎಂದು ಶರಣ ಸೇನೆಯ ಪದಾಧಿಕಾರಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಬಿ.ವೈ. ವಿಜಯೇಂದ್ರ ಮಾತನಾಡಿ, 'ಎಲ್ಲ ಸಮುದಾಯದ ಯುವಕರನ್ನು ಸೇರಿಸಿ ರಚಿಸಿದ ಜಾತ್ಯತೀತ ಸಂಘಟನೆ ಶರಣ ಸೇನೆ. ರಾಜ್ಯದ ಸವಾಲುಗಳನ್ನು ಎದುರಿಸಲು ಇದರ ಅಗತ್ಯವಿದೆ. ಇದು ಚಿತ್ರದುರ್ಗಕ್ಕೆ ಸೀಮಿತವಾಗದೇ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಬೇಕು' ಎಂದರು.

ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, 'ಶರಣ ಎಂಬ ಪದಕ್ಕೆ ಜಾತಿಯ ಹಂಗಿಲ್ಲ. ಧಾರ್ಮಿಕ ತಳಹದಿಯ ಮೇಲೆ ಸೇನೆ ರಚನೆಗೊಂಡಿದ್ದು, ಮೌಲ್ಯ ಹಾಗೂ ಚಿಂತನೆಗಳನ್ನು ಮೈಗೂಡಿಸಿಕೊಳ್ಳಲಿದೆ' ಎಂದರು.

'ಗೂಂಡಾ ವರ್ತನೆ ಸಹಿಸಲ್ಲ'

ಭದ್ರಾವತಿಯಲ್ಲಿ ಶಾಸಕ ಬಿ.ಕೆ. ಸಂಗಮೇಶ್ವರ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಇದನ್ನು ಬೆಂಬಲಿಸುವ ಮೂಲಕ ಕಾಂಗ್ರೆಸ್ ಪಕ್ಷ ಅಸ್ತಿತ್ವದ ಹುಡುಕಾಟಕ್ಕೆ ಮುಂದಾಗಿದೆ. ಗೂಂಡಾ ವರ್ತನೆಗೆ ಅವಕಾಶ ನೀಡುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮಠದಲ್ಲಿದ್ದು ಅನ್ನ, ಜ್ಞಾನ ದಾಸೋಹ ಮಾಡಬೇಕಾದ ಮಠಾಧೀಶರು ಬೀದಿಗೆ ಇಳಿದಿದ್ದಾರೆ. ಎಲ್ಲರೂ ಮೀಸಲಾತಿ ಕೇಳುತ್ತಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಯಾರಿಗೆ ಮೀಸಲಾತಿ ಕೊಡಲು ಸಾಧ್ಯ?
ಶಿವಮೂರ್ತಿ ಮುರುಘಾ ಶರಣರು

ಗಡಿ, ನುಡಿಗೆ ಅನುದಾನ ಕತ್ತರಿ

ಒಂದನೇ ಪುಟದಿಂದ

ಕನ್ನಡ ಸಾಹಿತ್ಯವನ್ನು ಇತರ ಭಾಷೆಗಳಿಗೆ ಅನುವಾದ ಮಾಡಲು 2019–20ರಲ್ಲಿ ₹ 50 ಲಕ್ಷ ತೆಗೆದಿರಿಸಲಾಗಿತ್ತು. ಅದನ್ನು ಕಳೆದ ಸಾಲಿನಲ್ಲಿ ₹ 30 ಲಕ್ಷಕ್ಕೆ ಇಳಿಸಲಾಗಿದೆ. ಈ ಮೊತ್ತವನ್ನು ಹೆಚ್ಚಿಸಬೇಕೆಂಬ ಬೇಡಿಕೆ ಇತ್ತಾದರೂ ಈ ಬಾರಿಯೂ ಅಷ್ಟೇ ಮೊತ್ತ ಹಂಚಿಕೆ ಮಾಡಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ ಸಾಲಿನಲ್ಲಿ ₹ 2 ಕೋಟಿ ಮಾತ್ರ ನೀಡಲಾಗಿತ್ತು. ಆ ನಂತರ ಹೆಚ್ಚುವರಿಯಾಗಿ ₹ 3 ಕೋಟಿ ಹಂಚಿಕೆ ಮಾಡಲಾಗಿದೆ. ಆದರೆ, ಅದರಲ್ಲಿ ₹ 1.25 ಕೋಟಿ ಮಾತ್ರ ಬಿಡುಗಡೆಯಾಗಿದೆ.

'ಕನ್ನಡ ಕಾಯಕ'ಕ್ಕೂ ಹಣ ಇಲ್ಲ: 'ಹೊರ ರಾಜ್ಯ, ಗಡಿಭಾಗದ ವಿದ್ಯಾರ್ಥಿಗಳಿಗೆ ಸೇರಿದಂತೆ ಕನ್ನಡ ಮಕ್ಕಳಿಗೆ ಪ್ರೋತ್ಸಾಹಧನ ನೀಡಲು ತಕ್ಷಣಕ್ಕೆ ₹ 8 ಕೋಟಿ ಬೇಕು. ಅನುದಾನ ಲಭ್ಯವಿಲ್ಲದೆ ಆ ಕಾರ್ಯಕ್ರಮವನ್ನೇ ಸ್ಥಗಿತಗೊಳಿಸಬೇಕಾದ ಸ್ಥಿತಿಯಿದೆ. ₹ 40 ಲಕ್ಷ ಸಂಬಳಕ್ಕೇ ಬೇಕು, ₹ 20 ಲಕ್ಷ ಕೊಟ್ಟರೆ ಸಂಬಳ ಕೊಡುವುದು ಬೇಡವೇ? 'ಕನ್ನಡ ಕಾಯಕ' ವರ್ಷವೆಂದು ಘೋಷಿಸಿ ಸರ್ಕಾರ ₹ 10 ಕೋಟಿಗೆ ಆದೇಶ ಮಾಡಿದರೂ, ತಾಂತ್ರಿಕ ನೆಪ ಹೇಳಿ ಆರ್ಥಿಕ ಇಲಾಖೆ ಅಡ್ಡಗಾಲಿಟ್ಟಿದೆ. ಕನ್ನಡ ಕಾಯಕ ವರ್ಷದ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಚಟುವಟಿಕೆ ಆಧಾರಿತ ಕಾರ್ಯಕ್ರಮ ಹಮ್ಮಿಕೊಳ್ಳುವ ಚಿಂತನೆ ಇತ್ತು, ಅನುದಾನವೇ ಕೊಡದಿದ್ದರೆ ಹೇಗೆ?' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್. ನಾಗಾಭರಣ ಅಸಮಾಧಾನ ವ್ಯಕ್ತಪಡಿಸಿದರು.

'ಗಡಿ'ಗೆ ಕೇವಲ ₹ 5 ಕೋಟಿ: 'ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ 2019–20 ರಲ್ಲಿ ₹ 50 ಕೋಟಿ ನೀಡಲಾಗಿತ್ತು. ಅದನ್ನು ಕಳೆದ ಸಾಲಿನಲ್ಲಿ ₹25 ಕೋಟಿಗೆ ಇಳಿಸಲಾಗಿತ್ತು. ಈ ಬಾರಿ ಕಟ್ಟಡಗಳ ಕಾಮಗಾರಿಗೆಂದು ₹5 ಕೋಟಿ ಮಾತ್ರ ನೀಡಲಾಗಿದೆ. 2019–20 ರಲ್ಲಿ ಸರ್ಕಾರಿ ಆದೇಶ ಹೊರಡಿಸಿರುವ ಕಾಮಗಾರಿಯೂ ಸೇರಿ ಮುಂದುವರಿದ ಕಾಮಗಾರಿಗಳಿಗೆ ₹39 ಕೋಟಿ ಬೇಕಾಗಿದೆ. 2020–21 ನೇ ಸಾಲಿನಲ್ಲಿ ಅನುದಾನ ಕೊರತೆಯಿಂದ ಯಾವುದೇ ಹೊಸ ಯೋಜನೆಯನ್ನು ಪ್ರಾಧಿಕಾರ ಕೈಗೊಂಡಿಲ್ಲ' ಎಂದೂ ಇಲಾಖೆಯ ಮೂಲಗಳು ಹೇಳಿವೆ.

ಈ ಬಗ್ಗೆ ಪ್ರತಿಕ್ರಿಯೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರನ್ನು ಸಂಪರ್ಕಿಸಲು ಹಲವು ಬಾರಿ ಯತ್ನಿಸಿದರೂ, ಅವರು ಲಭ್ಯರಾಗಲಿಲ್ಲ.

ಆಯವ್ಯಯದಲ್ಲಿ ಅನುದಾನ ಹಂಚಿಕೆ (₹ ಕೋಟಿಗಳಲ್ಲಿ)

ಕಾರ್ಯಕ್ರಮ	2020–21	2021–22
ಕಲೆ, ಸಂಸ್ಕೃತಿಗೆ ಪ್ರೋತ್ಸಾಹ	2.50	2.00
ಸಂಘ, ಸಂಸ್ಥೆಗಳು	4.39	3.66
ಪರಿಶಿಷ್ಟ ಜಾತಿ ವಿಶೇಷ ಘಟಕ (ಎಸ್‌ಸಿಎಸ್‌ಪಿ)	15.00	10.00
ಪರಿಶಿಷ್ಟ ವರ್ಗದ ವಿಶೇಷ ಘಟಕ (ಟಿಎಸ್‌ಪಿ)	5.00	3.00
ವೃತ್ತಿ ನಾಟಕ ಕಂಪನಿಗಳು	2.00	1.50
ರಾಜ್ಯ, ರಾಷ್ಟ್ರೀಯ ಉತ್ಸವ	9.00	7.00
ವಿವಿಧ 16 ಅಕಾಡೆಮಿಗಳು	8.00	7.00

ಅಡುಗೆ ಮನೆಯಲ್ಲಿ ಹಾನಿಕಾರಿ ಹೊಗೆಯಿಂದ ಬಚಾವಾಗುವುದು ಹೇಗೆ?

ಪ್ರೆಶರ್ ಕುಕ್ಕರ್ ಬಳಸಿ. ಸಾಂಪ್ರದಾಯಿಕ ಒಲೆಯಿಂದ ದೂರ ಸರಿಯಿರಿ.

ಮುಚ್ಚಿದ ಅಡುಗೆಮನೆಯಲ್ಲಿ ತೆರೆದ ಪಾತ್ರೆಗಳಲ್ಲಿ ಅಡುಗೆಕಾರ್ಯ

- ಹೆಚ್ಚು ಸಮಯ ಬೇಕಾಗುತ್ತದೆ
- ಹಾನಿಕಾರಿ ಹೊಗೆಯ ಸಾಮೀಪ್ಯದಲ್ಲಿ ಕುಳಿತು ಆಗಾಗ ಮಗುಚುತ್ತಲೇ ಇರಬೇಕಾಗುತ್ತದೆ
- ಹಾನಿಕಾರಿ ಹೊಗೆಯಿಂದ ಕ್ಷಯ, ಶ್ವಾಸಕೋಶದ ಕ್ಯಾನ್ಸರ್, ಲ್ಯುಕೇಮಿಯಾ, ಹೃದಯ ರೋಗ, ಅವಧಿಪೂರ್ವದ ಶಿಶುಗಳ ಜನನ, ಕ್ಯಾಟರಾಕ್ಟ್, ಅಸ್ತಮಾ ಮತ್ತು ಉಸಿರಾಟದ ಇತರ ತೊಂದರೆಗಳು ಉಂಟಾಗಬಹುದು

ಪ್ರೆಶರ್ ಕುಕ್ಕರ್ ಬಳಸಿ.

- ಪ್ರೆಶರ್ ಕುಕ್ಕರ್‌ನಿಂದ ಅಡುಗೆಯ ಸಮಯ 50%ರಷ್ಟು ಇಳಿಯುತ್ತದೆ
- ಮುಚ್ಚಳ ಹಾಕಿದ ಮೇಲೆ, ಮಗುಚುವ ಅಗತ್ಯವಿಲ್ಲ. ಒಲೆಯಿಂದ ದೂರ ಸರಿಯಿರಿ. ಸಂಪರ್ಕವನ್ನು ಇನ್ನೂ 25% ರಷ್ಟು ಕಡಿಮೆ ಮಾಡುತ್ತದೆ
- ಇದ್ದಲು ಅಥವಾ ಕಟ್ಟಿಗೆಗೂ ಪ್ರೆಶರ್ ಕುಕರ್‌ಗೂ 2.5 ಸೆಂ.ಮೀ. (ಎರಡು ಬೆರಳುಗಳಷ್ಟು) ಅಂತರವಿರಲಿ
- ಉರಿ ಕುಕ್ಕರ್‌ನ ಬದಿಗಳನ್ನು ತಲುಪದಿರಲಿ

ಹಾಕಿನ್ಸ್ ಟೆಸ್ಟ್ ಕಿಚನ್‌ನಿಂದ ಉತ್ತಮ ಪ್ರೆಶರ್ ಕುಕ್ಕಿಂಗ್‌ಗಾಗಿ ಸಲಹೆಗಳು

ವಿಶೇಷವಾಗಿ ಗ್ರಾಮೀಣ ಮಹಿಳೆಯರಲ್ಲಿ, ಹದಗೆಟ್ಟ ಆರೋಗ್ಯಕ್ಕೆ ದ್ವಿತೀಯ ಮುಖ್ಯ ಕಾರಣವೆಂದರೆ ಹಾನಿಕಾರಿ ಹೊಗೆಯ ಸಂಪರ್ಕ.

ನೀವು ಸಾಂಪ್ರದಾಯಿಕ ಒಲೆಯಲ್ಲಿ ಅಡುಗೆ ಮಾಡುವುದಾದರೆ, ಮೇಲೆ ತೋರಿಸಿದಂತೆ ಹೊಗೆಯ ಸಂಪರ್ಕವನ್ನು 75%ರಷ್ಟು ಕಡಿಮೆ ಮಾಡಲು ಪ್ರೆಶರ್ ಕುಕ್ಕರ್ ಉಪಯೋಗಿಸಿ.

ಉಜ್ವಲಾ ಸ್ಕೀಮ್‌ನಡಿಯಲ್ಲಿ ನೀಡಲ್ಪಡುವ ಗ್ಯಾಸ್ ಕನೆಕ್ಷನ್‌ಗಳ ಲಾಭ ಪಡೆಯಿರಿ. ಸಾಧ್ಯವಾದರೆ ಕಟ್ಟಿಗೆ ಅಥವಾ ಇದ್ದಿಲನ್ನು ಬಳಸಲೇ ಬೇಡಿ.

ಗ್ಯಾಸ್‌ನಲ್ಲಿ ಪ್ರೆಶರ್ ಕುಕರ್ ಬಳಸುವುದರಿಂದ 50%ರಷ್ಟು ಗ್ಯಾಸ್ ಖರ್ಚು ಇಳಿಯುತ್ತದೆ, ನಿಮ್ಮ ಹಣ ಉಳಿಯುತ್ತದೆ ಮತ್ತು ನಿಮ್ಮ ಆರೋಗ್ಯಕ್ಕೂ ಹಾನಿ ಇಲ್ಲ.

ಸಲಹೆ ಮತ್ತು ವಿವರಗಳಿಗಾಗಿ www.savewithpressurecookers.comನ್ನು ನೋಡಿ.

ಬಳಸಿ – ಪ್ರೆಶರ್ ಕುಕ್ಕರ್ | ಉಳಿಸಿ – ಇಂಧನ • ಮರಗಳು • ಪರಿಸರ | ಗಳಿಸಿ – ಪೋಷಣೆ • ಆರೋಗ್ಯ

ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಕಿನ್ಸ್ ಕುಕ್ಕರ್ಸ್ ಲಿಮಿಟೆಡ್‌ನಿಂದ ಪ್ರಕಟಿತ



ಅಭ್ಯರ್ಥಿ ಪಟ್ಟಿ ಪ್ರಕಟಿಸಿದ ಬಿಜೆಪಿ, ಕಾಂಗ್ರೆಸ್: ಖುಷ್ಬೂ, ಸುರೇಶ್ ಗೋಪಿ, ಬಾಬುಲ್ ಸುಪ್ರಿಯೊ, ಲಾಕೆಟ್ ಚಟರ್ಜಿ ಕಣಕ್ಕೆ

ಚುನಾವಣಾ ರಂಗಕ್ಕೆ ತಾರೆಯರ ರಂಗು

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ವಿಧಾನಸಭೆ ಚುನಾವಣೆಯ ಕಾವು ಏರತೊಡಗಿದೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂ ವಿಧಾನಸಭೆಯ ಹಲವು ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಭಾನುವಾರ ಪ್ರಕಟಿಸಿದೆ. ಕೇಂದ್ರದ ಒಬ್ಬ ಸಚಿವ, ಹಲವು ಸಂಸದರು ಮತ್ತು ಸಿನಿಮಾ ತಾರೆಯರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಕಾಂಗ್ರೆಸ್ ಪಕ್ಷವು ಕೂಡ ಕೇರಳ ಮತ್ತು ತಮಿಳುನಾಡು ವಿಧಾನಸಭೆಯ ಕೆಲವು ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಕಾಂಗ್ರೆಸ್‌ನ ಪಟ್ಟಿಯಲ್ಲಿಯೂ ಒಬ್ಬ ಸಂಸದ ಮತ್ತು ಸಿನಿಮಾ ನಟರು ಇದ್ದಾರೆ.

ಕೇರಳದ 112, ಅಸ್ಸಾಂನ 17, ಪಶ್ಚಿಮ ಬಂಗಾಳದ 63 ಮತ್ತು ತಮಿಳುನಾಡಿನ ಕೆಲವು ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದೆ.

ಕೇಂದ್ರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಅಶೋಕ್ ಲಾಹಿರಿ ಅವರು ಅಲಿಪುರ್‌ದೌರ್ ಕ್ಷೇತ್ರದಿಂದ, ಕೇಂದ್ರ ಸಚಿವ ಬಾಬುಲ್ ಸುಪ್ರಿಯೊ ಅವರು ಟಾಲಿಗುಂಗೆ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ. ಸ್ವಪನ್ ದಾಸ್‌ಗುಪ್ತಾ ಅವರು ತಾರಕೇಶ್ವರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ನಟಿ ಮತ್ತು ಸಂಸದೆ ಲಾಕೆಟ್ ಚಟರ್ಜಿ (ಚುಂಚುರ), ಸಂಸದ ನಿಶಿತ್ ಪ್ರಮಾಣಿಕ್ (ದಿನ್‌ಹಟ) ಅವರು ಪಶ್ಚಿಮ ಬಂಗಾಳ ವಿಧಾನಸಭೆಗೆ ಸ್ಪರ್ಧಿಸಲಿದ್ದಾರೆ. ಕೇರಳದಿಂದಲೂ ಹಲವು ಗಣ್ಯರನ್ನು ಕಣಕ್ಕೆ ಇಳಿಸಲು ಬಿಜೆಪಿ ನಿರ್ಧರಿಸಿದೆ. 'ಮೆಟ್ರೊಮ್ಯಾನ್' ಎಂದೇ ಖ್ಯಾತರಾಗಿರುವ ಮೆಟ್ರೊ ತಂತ್ರಜ್ಞ ಇ. ಶ್ರೀಧರನ್ ಅವರು ಪಾಲಕ್ಕಾಡ್‌ನಿಂದ ಮತ್ತು ಕೇಂದ್ರದ ಮಾಜಿ ಸಚಿವ ಕೆ.ಜೆ. ಅಲ್ಫೋನ್ಸ್ ಅವರು ಕಾಂಜಿರಪಳ್ಳಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ರಾಜ್ಯಸಭಾ ಸದಸ್ಯ ಮತ್ತು ನಟ ಸುರೇಶ್ ಗೋಪಿ ಅವರು ತ್ರಿಶ್ಶೂರ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಸುರೇಶ್ ಗೋಪಿ ಅವರು ತ್ರಿಶ್ಶೂರ್ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು.

ಕ್ರೈಸ್ತ ಸಮುದಾಯದ ಎಂಟು, ಮುಸ್ಲಿಂ ಸಮುದಾಯದ ಇಬ್ಬರಿಗೆ ಬಿಜೆಪಿ ಟಿಕೆಟ್ ನೀಡಿದೆ. ಕಲ್ಲಿಕೋಟೆ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಅಬ್ದುಲ್ ಸಲಾಂ ಅವರು ಮಲಪ್ಪುರದ ತಿರೂರ್‌ನಿಂದ ಮತ್ತು ಮಾಜಿ ಐಪಿಎಸ್ ಅಧಿಕಾರಿ ಜೇಕಬ್ ಥಾಮಸ್ ಅವರಿಗೆ ಇರಿಞ್ಞಾಲ್‌ಕುಡದಿಂದ ಟಿಕೆಟ್ ಕೊಡಲಾಗಿದೆ.

ಬಿಜೆಪಿ ಕೇರಳ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಅವರು ಮಂಜೇಶ್ವರ ಮತ್ತು ಪತ್ತನಂತಿಟ್ಟದ ಕೊನ್ನಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಕಳೆದ ಚುನಾವಣೆಯಲ್ಲಿ ಸುರೇಂದ್ರನ್ ಅವರು ಮಂಜೇಶ್ವರದಲ್ಲಿ 89 ಮತಗಳ ಅಂತರದಿಂದ ಸೋತಿದ್ದರು. ಶಬರಿಮಲೆಗೆ ಮಹಿಳಾ ಪ್ರವೇಶದ ವಿರುದ್ಧ ಬಿಜೆಪಿ ನಡೆಸಿದ ಚಳವಳಿಯಿಂದಾಗಿ ಕೊನ್ನಿ ಕ್ಷೇತ್ರದಲ್ಲಿ ಆ ಪಕ್ಷಕ್ಕೆ ಹೆಚ್ಚು ಮತಗಳು ಬರಬಹುದು ಎಂಬ ನಿರೀಕ್ಷೆ ಇದೆ. 2019ರಲ್ಲಿ ಈ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿತ್ತು. ಆ ಚುನಾವಣೆಯಲ್ಲಿ ಸುರೇಂದ್ರನ್ ಅವರಿಗೆ 39,786 ಮತಗಳು ಸಿಕ್ಕಿದ್ದವು.

ರಾಜ್ಯದ ನಾಯಕರ ಜತೆಗೆ ಉತ್ತಮ ಸಂಬಂಧ ಇಟ್ಟುಕೊಂಡಿಲ್ಲದ ಹಿರಿಯ ನಾಯಕಿ ಶೋಭಾ ಸುರೇಂದ್ರನ್ ಅವರಿಗೆ ಟಿಕೆಟ್ ನೀಡಿಲ್ಲ.

ನಟಿ ಮತ್ತು ರಾಜಕಾರಣಿ ಖುಷ್ಬೂ ಸುಂದರ್ ಅವರು ತಮಿಳುನಾಡಿನ ಥೌಸಂಡ್ ಲೈಟ್ಸ್ ಕೇತ್ರದಿಂದ ಸ್ಪರ್ಧಿಸಲಿದ್ದಾರೆ. ತಮಿಳುನಾಡು ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ವನತಿ ಶ್ರೀನಿವಾಸನ್ ಅವರು ಕೊಯಮತ್ತೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಮಕ್ಕಳ್ ನೀಧಿ ಮಯ್ಯಂ ಅಧ್ಯಕ್ಷ ಮತ್ತು ಸಿನಿಮಾ ತಾರೆ ಕಮಲ್ ಹಾಸನ್ ಇಲ್ಲಿಂದಲೇ ಸ್ಪರ್ಧಿಸುತ್ತಿದ್ದಾರೆ.

ಕೇರಳದಲ್ಲಿ ಬಿಜೆಪಿ ಹೊಂದಿರುವ ಏಕೈಕ ಕ್ಷೇತ್ರ ನೇಮಮ್‌ನಿಂದ ಪ್ರಭಾವಿ ಮುಖಂಡ ಮತ್ತು ಸಂಸದ ಕೆ. ಮುರಳೀಧರನ್ ಅವರನ್ನು ಕಣಕ್ಕೆ ಇಳಿಸುವುದಾಗಿ ಕಾಂಗ್ರೆಸ್ ಪ್ರಕಟಿಸಿದೆ. ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರು ಪುದುಪಳ್ಳಿಯಿಂದ, ವಿರೋಧ ಪಕ್ಷದ ನಾಯಕ ರಮೇಶ್ ಚೆನ್ನಿತ್ತಲ ಅವರು ಹರಿಪಾಡ್‌ನಿಂದ ಸ್ಪರ್ಧಿಸಲಿದ್ದಾರೆ.

ಕಾಂಗ್ರೆಸ್ ಪಕ್ಷವು ಕೇರಳದ 92 ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು 86 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹೆಸರಿಸಲಾಗಿದೆ. ಸಿನಿಮಾ ನಟ ಧರ್ಮಜನ್ ಅವರು ಕೋಯಿಕ್ಕೋಡ್‌ನ ಬಾಲುಶ್ಶೇರಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಯುವ ಮುಖಂಡರರದ ಶಫಿ ಪರಂಬಿಲ್, ವಿ.ಟಿ. ಬಲರಾಂ, ಎ.ಎಂ. ರೋಹಿತ್, ಡಾ. ಸರಿನ್ ಪಿ. ಮುಂತಾದವರಿಗೆ ಟಿಕೆಟ್ ನೀಡಲಾಗಿದೆ.

ಪಶ್ಚಿಮ ಬಂಗಾಳದ ಪಶ್ಚಿಮ ಖರಗಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಿರಾನ್ ಚಟರ್ಜಿ ಪ್ರವಾಗಿ ಅಮಿತ್ ಶಾ ಅವರು ಪ್ರಚಾರ ನಡೆಸಿದರು

ಖುಷ್ಬೂ

ಸುರೇಶ್ ಗೋಪಿ

ಬಾಬುಲ್ ಸುಪ್ರಿಯೊ

ಲಾಕೆಟ್ ಚಟರ್ಜಿ

ಅಣ್ಣಾಮಲೈಗೆ ಟಿಕೆಟ್

ಏಳು ತಿಂಗಳ ಹಿಂದೆ ಬಿಜೆಪಿ ಸೇರಿದ ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರಿಗೆ ಅರವಕುರಿಚಿ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ.

2019ರಲ್ಲಿ ಐಪಿಎಸ್‌ಗೆ ರಾಜೀನಾಮೆ ನೀಡಿದ್ದ ಅಣ್ಣಾಮಲೈ ಅವರು 2020ರ ಆಗಸ್ಟ್‌ನಲ್ಲಿ ಬಿಜೆಪಿ ಸೇರಿದ್ದರು. ಅವರನ್ನು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರಲ್ಲಿ ಒಬ್ಬರಾಗಿ ನೇಮಿಸಲಾಗಿತ್ತು. ಪೊಲೀಸ್ ಅಧಿಕಾರಿಯಾಗಿದ್ದ ಅವಧಿಯಲ್ಲಿ ಅವರ ಕೆಲಸದ ಶೈಲಿಯಿಂದಾಗಿ 'ಸಿಂಘಂ' ಎಂದು ಕರೆಸಿಕೊಳ್ಳುತ್ತಿದ್ದರು. ಅವರ ಹುಟ್ಟೂರು ಅರವಕುರಿಚಿ ಕ್ಷೇತ್ರದಲ್ಲಿಯೇ ಇದೆ.

'ಅರವಕುರಿಚಿಯು ಬಿಜೆಪಿ ಬಲವಾಗಿರುವ ಕ್ಷೇತ್ರ ಅಲ್ಲ. ಆದರೆ, ಇಲ್ಲಿನ ಜನರು ನನ್ನನ್ನು ಶಾಸಕನಾಗಿ ಆಯ್ಕೆ ಮಾಡಲಿದ್ದಾರೆ ಎಂಬ ಬಲವಾದ ನಂಬಿಕೆ ನನ್ನಲ್ಲಿದೆ. ನನ್ನ ಪ್ರತಿಷ್ಠಾನವು ಇಲ್ಲಿ ಸಕ್ರಿಯವಾಗಿದೆ. ಈಗ ಕೆಟ್ಟ ಕಾರಣಗಳಿಗಾಗಿಯೇ ಸುದ್ದಿಯಲ್ಲಿರುವ ಈ ಊರನ್ನು ಅದರ ಹಿಂದಿನ ವೈಭವಕ್ಕೆ ಮರಳಿಸುವುದು ನನ್ನ ಗುರಿ' ಎಂದು ಅಣ್ಣಾಮಲೈ ಅವರು 'ಪ್ರಜಾವಾಣಿ'ಗೆ ಹೇಳಿದ್ದಾರೆ.



ಭಾರಿ ಪ್ರಮಾಣದ ಹಣ ಹಂಚಿಕೆಯಾಗಿದೆ ಎಂಬ ಕಾರಣಕ್ಕೆ 2016ರಲ್ಲಿ ಈ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು. 2019ರಲ್ಲಿ ಈ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿತ್ತು. ಅದರಲ್ಲಿ ಡಿಎಂಕೆಯ ವಿ.ಸೆಂಥಿಲ್ ಬಾಲಾಜಿ ಅವರು ಗೆದ್ದಿದ್ದರು.

ಗಾಲಿಕುರ್ಚಿಯಲ್ಲೇ ಪ್ರಚಾರಕ್ಕೆ ಮರಳಿದ ಮಮತಾ

ಕೋಲ್ಕತ್ತ (ಪಿಟಿಐ): 'ಬೀದಿ ಹೋರಾಟಗಾರ್ತಿ' ಎಂಬ ಹೆಸರಿಗೆ ತಕ್ಕ ಹಾಗೆಯೇ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತದಲ್ಲಿ ಭಾನುವಾರ ಮತ್ತೆ ಚುನಾವಣಾ ಪ್ರಚಾರಕ್ಕೆ ಇಳಿದಿದ್ದಾರೆ. ಅವರು ಸ್ಪರ್ಧಿಸುತ್ತಿರುವ ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ 'ಹಲ್ಲೆಗೆ ಒಳಗಾಗಿ ಗಾಯಗೊಂಡ' ನಾಲ್ಕೇ ದಿನದಲ್ಲಿ ಅವರು ಪ್ರಚಾರಕ್ಕೆ ಮರಳಿದ್ದಾರೆ. ಗಾಲಿಕುರ್ಚಿಯಲ್ಲಿ ಬಂದ ಮಮತಾ ಅವರು ರೋಡ್‌ಶೋದಲ್ಲಿ ಪಾಲ್ಗೊಂಡು 'ಗಾಯಗೊಂಡ ಹುಲಿ ಹೆಚ್ಚು ಅಪಾಯಕಾರಿ' ಎಂದು ಹೇಳಿದರು.

ಪಕ್ಷದ ಹಿರಿಯ ಮುಖಂಡರೊಂದಿಗೆ ಬಂದ ಮಮತಾ ಅವರು ಜನರಿಗೆ ಕೈಮುಗಿದು ಮತ ಯಾಚಿಸಿದರು. ಭದ್ರತಾ ಸಿಬ್ಬಂದಿಯು ಮಮತಾ ಅವರ ಗಾಲಿಕುರ್ಚಿಯನ್ನು ತಳ್ಳಿಕೊಂಡು ಹೋದರು. ಭೂ ಸ್ವಾಧೀನ ವಿರೋಧಿಸಿ ನಂದಿಗ್ರಾಮದಲ್ಲಿ 2007ರಲ್ಲಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸ್ ಗೋಲಿಬಾರ್‌ಗೆ 14 ಗ್ರಾಮಸ್ಥರು ಬಲಿಯಾಗಿದ್ದರು. ಅದರ ನೆನಪಿಗೆ ಹಮ್ಮಿಕೊಂಡ 'ನಂದಿಗ್ರಾಮ ದಿನ'ದ ಭಾಗವಾಗಿ ಐದು ಕಿ.ಮೀ. ರೋಡ್‌ಶೋದಲ್ಲಿ ಮಮತಾ ಭಾಗಿಯಾದರು.

ತಮ್ಮನ್ನು ಗಾಯಗೊಳಿಸಿ, ಪ್ರಚಾರದಿಂದ ದೂರ ಇರಿಸುವ ತಂತ್ರ ವಿಫಲವಾಗಿದೆ ಎಂದು ಮಮತಾ ಹೇಳಿದರು. ಇಡೀ ರಾಜ್ಯದಲ್ಲಿ ಗಾಲಿಕುರ್ಚಿಯಲ್ಲಿ ಸಂಚರಿಸಿ ಟಿಎಂಸಿಯ ಎಲ್ಲ ಅಭ್ಯರ್ಥಿಗಳ ಪರವಾಗಿ ಮತ ಯಾಚಿಸುವುದಾಗಿ ಅವರು ಘೋಷಿಸಿದರು.

'ಇಂದು (ಭಾನುವಾರ) ಪ್ರಚಾರಕ್ಕೆ ಹೋಗುವುದು ಬೇಡ ಎಂದು ವೈದ್ಯರು ಹೇಳಿದ್ದಾರೆ. ಆದರೆ, ಗಾಯದಿಂದಾಗಿ ಈಗಾಗಲೇ ಕೆಲವು ದಿನಗಳು ನಷ್ಟವಾಗಿವೆ. ಹಾಗಾಗಿ ಭಾನುವಾರವೇ ಪ್ರಚಾರ ಪುನರಾರಂಭಿಸಿದೆ' ಎಂದು ಮಮತಾ ಹೇಳಿದ್ದಾರೆ.

ನಿರುಂಕುಶಾಧಿಕಾರದ ಮೂಲಕ ಪ್ರಜಾಪ್ರಭುತ್ವವೇ ದಮನವಾಗಿ ಜನರು ಅನುಭವಿಸುವ ವೇದನೆಗಿಂತ ನನ್ನ ನೋವು ದೊಡ್ಡದಲ್ಲ ಎಂದು ಮಮತಾ ಹೇಳಿದ್ದಾರೆ.

'ಮಮತಾ ಬ್ಯಾನರ್ಜಿ ಬಂಗಾಳದ ಮಗಳು' ಮತ್ತು 'ಹೊರಗಿನವರನ್ನು ಸೋಲಿಸೋಣ' ಎಂದು ಬರೆದಿದ್ದ ಫಲಕಗಳನ್ನು ಟಿಎಂಸಿ ಕಾರ್ಯಕರ್ತರು ಪ್ರದರ್ಶಿಸಿರು.

ಗಾಲಿ ಕುರ್ಚಿಯಲ್ಲಿ ಪ್ರಚಾರಕ್ಕೆ ಬಂದ ಮಮತಾ ಬ್ಯಾನರ್ಜಿ ಪಿಟಿಐ ಚಿತ್ರ

ಪೂರ್ವಯೋಜಿತ ಹಲ್ಲೆ ನಡೆದಿಲ್ಲ: ಆಯೋಗ

ನವದೆಹಲಿ (ಪಿಟಿಐ): ಮಮತಾ ಬ್ಯಾನರ್ಜಿ ಅವರ ಮೇಲೆ ನಂದಿಗ್ರಾಮದಲ್ಲಿ ಪೂರ್ವಯೋಜಿತ ಹಲ್ಲೆ ನಡೆದಿಲ್ಲ. ಮಮತಾ ಅವರು ಗಾಯಗೊಳ್ಳಲು ಕಾರಣ ಭದ್ರತೆಯಲ್ಲಿನ ಲೋಪ ಎಂಬ ನಿರ್ಧಾರಕ್ಕೆ ಚುನಾವಣಾ ಆಯೋಗವು ಬಂದಿದೆ. ಆಯೋಗವು ಪಶ್ಚಿಮ ಬಂಗಾಳಕ್ಕೆ ಕಳುಹಿಸಿದ್ದ ಇಬ್ಬರು ವಿಶೇಷ ವೀಕ್ಷಕರ ವರದಿಯನ್ನು ಪರಿಶೀಲಿಸಿ ಈ ತೀರ್ಮಾನಕ್ಕೆ ಬರಲಾಗಿದೆ.

ಭದ್ರತಾ ವಿಭಾಗದ ನಿರ್ದೇಶಕ, ಐಪಿಎಸ್ ಅಧಿಕಾರಿ ವಿವೇಕ್ ಸಹಾಯ್ ಅವರನ್ನು ತಕ್ಷಣವೇ ಆ ಹುದ್ದೆಯಿಂದ ತೆರವು ಮಾಡಬೇಕು ಮತ್ತು ಅಮಾನತಿನಲ್ಲಿ ಇರಿಸಬೇಕು ಎಂದು ಆಯೋಗವು ಸೂಚಿಸಿದೆ.

'ಝಡ್ + ಭದ್ರತೆಯುಳ್ಳ ವ್ಯಕ್ತಿಯ ಭದ್ರತೆಯನ್ನು ನೋಡಿಕೊಳ್ಳುವ ಪ್ರಾಥಮಿಕ ಕರ್ತವ್ಯ ನಿರ್ವಹಣೆಯಲ್ಲಿ ಭದ್ರತಾ ವಿಭಾಗದ ನಿರ್ದೇಶಕರು ವಿಫಲರಾಗಿದ್ದಾರೆ. ಅವರ ವಿರುದ್ಧ ಒಂದು ವಾರದಲ್ಲಿ ಆರೋಪ ನಿಗದಿ ಮಾಡಬೇಕು' ಎಂದು ಆಯೋಗದ ಹೇಳಿಕೆಯು ತಿಳಿಸಿದೆ.

ಭದ್ರತಾ ವಿಭಾಗದ ಮುಖ್ಯಸ್ಥರಾಗಿ ಸೂಕ್ತ ಅಧಿಕಾರಿಯನ್ನು ನೇಮಿಸುವ ಹೊಣೆಯನ್ನು ಮುಖ್ಯ ಕಾರ್ಯದರ್ಶಿಗೆ ನೀಡಲಾಗಿದೆ. ರಾಜ್ಯದ ಪೊಲೀಸ್ ಮುಖ್ಯಸ್ಥರ ಜತೆಗೆ ಸಮಾಲೋಚನೆ ನಡೆಸಿ ನೇಮಕ ಮಾಡುವಂತೆ ಹೇಳಲಾಗಿದೆ.

ಲೋಪಕ್ಕೆ ಕಾರಣರಾದ ಇತರ ಅಧಿಕಾರಿಗಳನ್ನು ಮುಂದಿನ ಮೂರು ದಿನಗಳಲ್ಲಿ ಗುರುತಿಸುವಂತೆ ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿಯ ಸಮಿತಿಗೆ ಸೂಚಿಸಲಾಗಿದೆ. ಪುರ್ಬಾ ಮೇದಿನಿಪುರದ ಜಿಲ್ಲಾಧಿಕಾರಿ ವಿಭು ಗೋಯಲ್ ಅವರನ್ನು ತಕ್ಷಣವೇ ವರ್ಗಾಯಿಸಬೇಕು. ಈ ಸ್ಥಾನಕ್ಕೆ ಐಎಎಸ್ ಅಧಿಕಾರಿ ಸ್ಮಿತಾ ಪಾಂಡೆ ಅವರನ್ನು ನೇಮಿಸಬೇಕು. ಗೋಯಲ್ ಅವರಿಗೆ ಚುನಾವಣೆ ಹೊಣೆ ಇಲ್ಲದ ಹುದ್ದೆ ನೀಡಬೇಕು ಎಂದು ಆಯೋಗವು ಸೂಚಿಸಿದೆ.

ಬಂದೋಬಸ್ತ್ ವೈಫಲ್ಯದ ಕಾರಣಕ್ಕೆ ಪುರ್ಬಾ ಮೇದಿನಿಪುರದ ಎಸ್‌ಪಿ ಪ್ರವೀಣ್ ಪ್ರಕಾಶ್ ಅವರನ್ನು ಅಮಾನತು ಮಾಡಬೇಕು. ಅವರ ಸ್ಥಾನಕ್ಕೆ ಸುನಿಲ್ ಕುಮಾರ್ ಯಾದವ್ ಅವರನ್ನು ನೇಮಿಸಬೇಕು ಎಂದು ಆಯೋಗ ನಿರ್ದೇಶನ ನೀಡಿದೆ. ವಿಶೇಷ ವೀಕ್ಷಕರಾದ ಅಜಯ್ ನಾಯಕ್ ಮತ್ತು ವಿವೇಕ್ ದುಬೆ ಅವರು ನೀಡಿದ ವರದಿಯನ್ನು ಪರಿಶೀಲಿಸಿದ ಬಳಿಕ ಆಯೋಗವು ಈ ನಿರ್ಧಾರಕ್ಕೆ ಬಂದಿದೆ.

ಮಮತಾ ಅವರು ಕೆಳಗೆ ಬಿದ್ದು ಎಡಗಾಲು ಹಾಗೂ ಸೊಂಟಕ್ಕೆ ಏಟಾಗಿತ್ತು. ಇದೇ ಹತ್ತರಂದು ನಂದಿಗ್ರಾಮದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದಾಗ ಅಪರಿಚಿತ ವ್ಯಕ್ತಿಗಳು ಅವರನ್ನು ತಳ್ಳಿದ್ದಾರೆ ಎಂದು ಆರೋಪಿಸಲಾಗಿತ್ತು.

ಚುನಾವಣಾ ಕಣದಲ್ಲಿ...

● ಡಿಎಂಕಿ ಹಾಲಿ ಶಾಸಕ ಸರವಣನ್ ಅವರು ಭಾನುವಾರ ಬಿಜೆಪಿ ಸೇರಿದ್ದಾರೆ. 'ಜಿಲ್ಲಾಮಟ್ಟದ ಡಿಎಂಕೆ ಪದಾಧಿಕಾರಿಗಳು ಕಿರುಕುಳ ನೀಡುತ್ತಾರೆ. ಹೀಗಾಗಿ ಪಕ್ಷ ಬಿಡುತ್ತಿದ್ದೇನೆ' ಎಂದು ಅವರು ಹೇಳಿದ್ದಾರೆ. ಮಧುರೈ ಉತ್ತರ ಕ್ಷೇತ್ರದಿಂದ ಸರವಣನ್ ಅವರನ್ನು ಬಿಜೆಪಿ ಕಣಕ್ಕೆ ಇಳಿಸಿದೆ

● ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟದಲ್ಲಿರುವ ಸಿಪಿಐ ತನ್ನ ಪಾಲಿನ ಆರು ಕ್ಷೇತ್ರಗಳಿಗೆ ಭಾನುವಾರ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ

● ಅಸ್ಸಾಂ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧೆಗೆ ಇಳಿದಿರುವ ರಾಯ್ಜೋರ್ ದಳದ ಅಧ್ಯಕ್ಷ ಅಖಿಲ್ ಗೊಗೊಯಿ ಅವರನ್ನು ಸ್ವರಾಜ್ ಇಂಡಿಯಾದ ಮುಂದಾಳು ಯೋಗೇಂದ್ರ ಯಾದವ್ ಅವರು ಭಾನುವಾರ ಭೇಟಿಯಾದರು. ರಾಯ್ಜೋರ್ ದಳ ಕಣಕ್ಕೆ ಇಳಿದಿರುವ ಕ್ಷೇತ್ರಗಳಲ್ಲಿ ಬಿಜೆಪಿ ಸೋಲಬೇಕು ಎಂದು ಯೋಗೇಂದ್ರ ಯಾದವ್ ಹೇಳಿದ್ದಾರೆ

ತಿರುವನಂತಪುರದಲ್ಲಿರುವ ಕೇರಳ ಪ್ರದೇಶ ಕಾಂಗ್ರೆಸ್ ಕಚೇರಿ ಎದುರು ಲತಿಕಾ ಸುಭಾಷ್ ಅವರು ಪ್ರತಿಭಟನೆಯ ಭಾಗವಾಗಿ ತಮ್ಮ ತಲೆಯ ಕೂದಲನ್ನು ತೆಗೆಸಿಕೊಂಡರು ಪಿಟಿಐ ಚಿತ್ರ

ತಲೆಗೂದಲು ತೆಗಿಸಿದ ಕಾಂಗ್ರೆಸ್ ನಾಯಕಿ

ತಿರುವನಂತಪುರ (ಪಿಟಿಐ): ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದಿಂದ ಟಿಕೆಟ್ ದೊರೆಯದ ಕಾರಣ ಕೇರಳ ಕಾಂಗ್ರೆಸ್‌ನ ಮಹಿಳಾ ಘಟಕದ ಅಧ್ಯಕ್ಷೆ ಲತಿಕಾ ಸುಭಾಷ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷದ ಇಲ್ಲಿನ ಕೇಂದ್ರ ಕಚೇರಿ ಎದುರು ತಮ್ಮ ತಲೆಯ ಕೂದಲನ್ನು ತೆಗೆಸಿಕೊಂಡು ಅವರು ಪ್ರತಿಭಟನೆ ನಡೆಸಿದ್ದಾರೆ.

ಏಪ್ರಿಲ್ 6ರಂದು ನಡೆಯುವ ಚುನಾವಣೆಗೆ ಕೇರಳ ಕಾಂಗ್ರೆಸ್ ಘಟಕವು 86 ಅಭ್ಯರ್ಥಿಗಳ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ. ಇದರಲ್ಲಿರುವ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 9 ಮಾತ್ರ. ಲತಿಕಾ ಅವರು, ಏಟ್ಟುಮಾನೂರು ಕ್ಷೇತ್ರದಿಂದ ಟಿಕೆಟ್ ಬಯಸಿದ್ದರು. ಆದರೆ ಅಭ್ಯರ್ಥಿಗಳ ಪಟ್ಟಿಯಲ್ಲಿ ಲತಿಕಾ ಅವರ ಹೆಸರು ಇಲ್ಲ. ಪಟ್ಟಿ ಬಿಡುಗೆಯಾದ ಕೆಲವೇ ಗಂಟೆಗಳಲ್ಲಿ ಅವರು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

'ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಿಂದ ಅಸಮಾಧಾನವಾಗಿದೆ. ಮಹಿಳೆಯರಿಗೆ ಶೇ 20ರಷ್ಟು ಸೀಟುಗಳನ್ನು ಕೇಳಿದ್ದೆವು. ಕನಿಷ್ಠಪಕ್ಷ ಪ್ರತಿ ಜಿಲ್ಲೆಯಲ್ಲಿ ಒಂದು ಕ್ಷೇತ್ರ ಮಹಿಳೆಯರಿಗೆ ನೀಡಿ ಎಂದು ಕೇಳಿದ್ದವು. ಆದರೆ ಪಕ್ಷಕ್ಕಾಗಿ ದುಡಿದ ಮಹಿಳೆಯರನ್ನು ಕಡೆಗಣಿಸಿ, ಬೇರೆಯವರಿಗೆ ಟಿಕೆಟ್ ನೀಡಲಾಗಿದೆ. ಒಂದು ಟಿಕೆಟ್ ಪಡೆಯಲೂ ಸಾಧ್ಯವಿಲ್ಲದ ಈ ಹುದ್ದೆಯಲ್ಲಿ ಇದ್ದು, ಏನು ಮಾಡುವುದು? ಹೀಗಾಗಿ ರಾಜೀನಾಮೆ ನೀಡಿದ್ದೇನೆ. ಮಹಿಳೆಯರನ್ನು ಕಡೆಗಣಿಸಿದ್ದನ್ನು ಪ್ರತಿಭಟಿಸಿ, ತಲೆಯ ಕೂದಲು ತೆಗೆಸಿಕೊಂಡಿದ್ದೇನೆ' ಎಂದು ಅವರು ಹೇಳಿದ್ದಾರೆ.

ಪುದುಚೇರಿ: ಕಾಂಗ್ರೆಸ್ ಪ್ರತಿಭಟನೆ

ಪುದುಚೇರಿ (ಪಿಟಿಐ): ಪುದುಚೇರಿಯಲ್ಲಿ ಕಾಂಗ್ರೆಸ್ ಪ್ರಾಬಲ್ಯವಿರುವ ಕ್ಷೇತ್ರಗಳನ್ನು ಮಿತ್ರಪಕ್ಷ ಡಿಎಂಕೆಗೆ ಬಿಟ್ಟುಕೊಟ್ಟಿರುವುದಕ್ಕೆ ಪಕ್ಷದ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದ್ದಾರೆ. ಸೀಟು ಹಂಚಿಕೆ ಸಂಬಂಧ ಭಾನುವಾರ ನಡೆದ ವೀಕ್ಷಕರ ಸಭೆಯಲ್ಲಿ ಸೀಟು ಹಂಚಿಕೆಯನ್ನು ಅಂತಿಮಗೊಳಿಸಲಾಯಿತು.

2016ರಲ್ಲಿ ಕಾಂಗ್ರೆಸ್ 21 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಈ ಚುನಾವಣೆಯಲ್ಲಿ 15 ಕ್ಷೇತ್ರಗಳಲ್ಲಷ್ಟೇ ಕಾಂಗ್ರೆಸ್ ಕಣಕ್ಕೆ ಇಳಿಯಲಿದೆ. ಡಿಎಂಕೆ 13 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲಿದೆ. ಕಾಂಗ್ರೆಸ್ ಕಳೆದ ಬಾರಿಗಿಂತ ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಕಾಂಗ್ರೆಸ್‌ನ ಕೆಲವು ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರು ಇದನ್ನು ವಿರೋಧಿಸಿದ್ದಾರೆ. ಕಾಂಗ್ರೆಸ್ ಪ್ರಾಬಲ್ಯದ ಸೀಟುಗಳನ್ನು ಡಿಎಂಕೆಗೆ ಬಿಟ್ಟುಕೊಟ್ಟ ಕಾರಣಕ್ಕೆ ಮತ್ತು ಹೆಚ್ಚಿನ ಸೀಟುಗಳನ್ನು ಬಿಟ್ಟುಕೊಟ್ಟದ್ದನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಕಚೇರಿ ಮುಂದೆ ದಿಢೀರ್ ಪ್ರತಿಭಟನೆ ನಡೆಸಿದರು.

ನುಡಿ–ಕಿಡಿ

ನನ್ನ ಮೇಲೆ ಬಹಳ ದಾಳಿಗಳಾಗಿವೆ. ಆದರೆ ನಾನು ಯಾರಿಗೂ ಶರಣಾಗಿಲ್ಲ. ಎಂದೂ ತಲೆ ಬಾಗಿಸುವುದಿಲ್ಲ. ಗಾಯಗೊಂಡ ಹುಲಿ ಹೆಚ್ಚು ಅಪಾಯಕಾರಿ

ಮಮತಾ ಬ್ಯಾನರ್ಜಿ, ಟಿಎಂಸಿ ಮುಖ್ಯಸ್ಥೆ

ಅಸ್ಸಾಂನಲ್ಲಿ ಕಾಂಗ್ರೆಸ್ ಪಕ್ಷವು ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದೆ. ಬಿಜೆಪಿ ಎಂದೂ ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿಲ್ಲ. ನಾವು ಮನುಷ್ಯರಿಗಾಗಿ ಮನುಷ್ಯತ್ವದ ರಾಜಕಾರಣ ಮಾಡುತ್ತೇವೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

'ಪ್ರಜಾಪ್ರಭುತ್ವ ಉಳಿಯಲು ಬಿಜೆಪಿ ಸೋಲು ಅಗತ್ಯ'

• ಶೆಮಿನ್ ಜಾಯ್

ಪ್ರಜಾವಾಣಿ ಸಂದರ್ಶನ

ಸೀತಾರಾಂ ಯೆಚೂರಿ

'ಪ್ರಜಾಪ್ರಭುತ್ವದ ಮೇಲೆ ನಡೆಸುತ್ತಿರುವ ದಾಳಿಯನ್ನು ಸಮರ್ಥಿಸಿಕೊಳ್ಳಲು ತನಗೆ ಚುನಾವಣೆಗಳಲ್ಲಿ ಲಭಿಸುತ್ತಿರುವ ಗೆಲುವನ್ನು ಬಿಜೆಪಿಯು ಬಳಸಿಕೊಳ್ಳುತ್ತಿದೆ. ಆದ್ದರಿಂದ ಬಿಜೆಪಿಯನ್ನು ಸೋಲಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿದೆ' ಎಂದು ಸಿಪಿಎಂ ಮುಖಂಡ ಸೀತಾರಾಂ ಯೆಚೂರಿ ಹೇಳಿದ್ದಾರೆ. ಅವರ ಜತೆ 'ಪ್ರಜಾವಾಣಿ' ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ...

● ಈ ಚುನಾವಣೆಗಳ ಮಹತ್ವ ಏನು?

ಭಾರತದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಚುನಾಯಿತ ನಿರಂಕುಶಾಧಿಪತ್ಯವಾಗುತ್ತಿದೆ ಎಂಬುದನ್ನು ಜಗತ್ತು ಈಗ ಗುರುತಿಸುತ್ತಿದೆ. ಭಾರತದ ಜಾತ್ಯತೀತ ಪ್ರಜಾತಂತ್ರವನ್ನು ರಕ್ಷಿಸಬೇಕಾದರೆ, ಬಿಜೆಪಿ ಚುನಾವಣೆ ಗೆಲ್ಲುವುದನ್ನು ತಡೆಯುವುದು ಅತ್ಯಗತ್ಯ.

● ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಅನ್ನು ವಿರೋಧಿಸುವ ಮೂಲಕ, ಬಿಜೆಪಿ ವಿರುದ್ಧದ ಹೋರಾಟವನ್ನು ಎಡಪಕ್ಷಗಳು ದುರ್ಬಲಗೊಳಿಸುತ್ತಿವೆ ಎಂಬ ಆರೋಪವಿದೆಯಲ್ಲಾ?

ಅದು ಹುರುಳಿಲ್ಲದ ಆರೋಪ. 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಇದರಿಂದಾಗಿ ಟಿಎಂಸಿಯನ್ನು ವಿರೋಧಿಸುವ ಮತ್ತು ಜಾತ್ಯತೀತ ಸಿದ್ಧಾಂತವನ್ನು ನಂಬಿರುವವರಿಗೆ, ಟಿಎಂಸಿಯನ್ನು ಸೋಲಿಸ ಬಲ್ಲಂಥ ಒಂದು ಆಯ್ಕೆ ಇಲ್ಲದಂತಾಗಿತ್ತು. ಅವರೆಲ್ಲರೂ ಬಿಜೆಪಿಗೆ ಮತಹಾಕಿದರು. ಈ ಬಾರಿ ಕಾಂಗ್ರೆಸ್ ಹಾಗೂ ಇಂಡಿಯನ್ ಸೆಕ್ಯುಲರ್ ಫ್ರಂಟ್ ಎಡಪಕ್ಷಗಳ ಜತೆ ಚುನಾವಣಾ ಮೈತ್ರಿ ಮಾಡಿಕೊಂಡಿದ್ದರಿಂದ ಟಿಎಂಸಿಗೆ ಬಲವಾದ ಪರ್ಯಾಯ ಸೃಷ್ಟಿಯಾಗಿದೆ. ಟಿಎಂಸಿ ಜತೆಗೆ ನಾವು ಸೇರಿಕೊಂಡಿದ್ದರೆ ಟಿಎಂಸಿ ವಿರೋಧಿ ಮತಗಳೆಲ್ಲಾ ಈ ಬಾರಿಯೂ ಬಿಜೆಪಿಗೆ ಹೋಗಿ, ಅವರಿಗೆ ಗೆಲುವು ಸುಲಭವಾಗುತ್ತಿತ್ತು. ಈಗ ಹೇಳಿ ಬಿಜೆಪಿ ವಿರುದ್ಧದ ಹೋರಾಟವನ್ನು ನಾವು ದುರ್ಬಲಗೊಳಿಸುತ್ತಿದ್ದೇವೆಯೇ?

● ಪಶ್ಚಿಮ ಬಂಗಾಳದಲ್ಲಿ ಒಂದುವೇಳೆ ಅತಂತ್ರ ಸ್ಥಿತಿ ನಿರ್ಮಾಣವಾದರೆ ಎಡಪಕ್ಷಗಳು ಟಿಎಂಸಿಯನ್ನು ಬೆಂಬಲಿಸುವವೇ?

ಟಿಎಂಸಿಯು ಬಿಜೆಪಿಯ ಜತೆಗೆ ಹೆಚ್ಚು ಸುಖವಾಗಿರಬಲ್ಲದು. ಮೈತ್ರಿಯ ಮೂಲಕ ಬಂಗಾಳಕ್ಕೆ ಬಿಜೆಪಿಯನ್ನು ತಂದವರೇ ಅವರು. ಬಿಜೆಪಿಯ ಪ್ರಧಾನಿಯ ಜತೆಗೆ ಅವರು ಕೆಲಸವನ್ನೂ ಮಾಡಿದ್ದಾರೆ...

● ಪ್ರತಿ ಐದು ವರ್ಷಕ್ಕೊಮ್ಮೆ ಅಧಿಕಾರ ಬದಲಾವಣೆ ಕಾಣುತ್ತಾ ಬಂದಿರುವ ಕೇರಳದಲ್ಲಿ ಈ ಬಾರಿ ಈ ಸಂಪ್ರದಾಯವನ್ನು ಮುರಿದು, ಎಡಪಕ್ಷಗಳು ಪುನಃ ಅಧಿಕಾರ ಹಿಡಿಯುತ್ತವೆ ಎಂಬ ವಿಶ್ವಾಸವಿದೆಯೇ?

ನಾಲ್ಕು ದಶಕಗಳಿಂದ ನಡೆದುಬರುತ್ತಿರುವ ಈ ವ್ಯವಸ್ಥೆಯನ್ನು ನಾವು ಕೊನೆಗೊಳಿಸಲು ಸಜ್ಜಾಗಿದ್ದೇವೆ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ನಮಗೆ ಲಭಿಸಿದ ಪ್ರತಿಕ್ರಿಯೆ ಇದರ ಮುನ್ಸೂಚನೆ. ಕೋವಿಡ್ ಹೊರತಾಗಿ, ಕಳೆದ ಐದು ವರ್ಷಗಳಲ್ಲಿ ಕೇರಳ ಅನೇಕ ಪ್ರಕೃತಿ ವಿಕೋಪಗಳನ್ನು ಕಂಡಿದೆ. ಸರ್ಕಾರವು ಸಕಾಲದಲ್ಲಿ ಸ್ಪಂದಿಸುವ ಮೂಲಕ ಜನರ ವಿಶ್ವಾಸ ಗಳಿಸಿಕೊಂಡಿದೆ.

● ಚಿನ್ನದ ಕಳ್ಳಸಾಗಾಣಿಕೆ ಪ್ರಕರಣ ಸರ್ಕಾರವನ್ನು ಸುತ್ತಿಕೊಂಡಿದೆಯಲ್ಲಾ, ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತೀರಿ?

ಬಿಜೆಪಿ ಅಧಿಕಾರಕ್ಕೆ ಬಂದ ನಂತರವೇ ಇಂಥ ಪ್ರಕರಣಗಳು ಬೆಳಕಿಗೆ ಬರುತ್ತಿವೆಯಲ್ಲಾ ಏಕೆ? ತಿರುವನಂತಪುರದಲ್ಲೇ ಏಕೆ ನಡೆಯುತ್ತಿವೆ? ಕೊರತೆ ಇರುವುದೆಲ್ಲಿ... ಈ ಎಲ್ಲಾ ಪ್ರಶ್ನೆಗಳನ್ನು ಜನರು ಕೇಳುತ್ತಿದ್ದಾರೆ. ರಾಜಕೀಯ ವಿರೋಧಿಗಳನ್ನು ಗುರಿಯಾಗಿಸಲು ಸಿಬಿಐ, ಜಾರಿ ನಿರ್ದೇಶನಾಲಯ (ಇಡಿ) ಹಾಗೂ ಧನ ಬಲವೆಂಬ 'ತ್ರಿಶೂಲ'ವನ್ನು ಬಿಜೆಪಿ ಹೇಗೆ ಬಳಸುತ್ತಿದೆ ಎಂಬುದನ್ನು ಜನರು ಗಮನಿಸುತ್ತಿದ್ದಾರೆ.

ಉಚಿತ ವಾಷಿಂಗ್ ಮಷಿನ್: ಎಐಎಡಿಎಂಕೆ ಭರವಸೆ

ಚೆನ್ನೈ: ಎಐಎಡಿಎಂಕೆಯ ಪ್ರಣಾಳಿಕೆಯು ಈ ಬಾರಿಯೂ ಜನಪ್ರಿಯ ಘೋಷಣೆಗಳ ಹಾದಿಯನ್ನು ಬಿಟ್ಟು ಹೋಗಿಲ್ಲ. ಬಡತನ ರೇಖೆಗಿಂತ ಕೆಳಗಿನ ಪಡಿತರ ಚೀಟಿ ಇರುವ ಎಲ್ಲರಿಗೂ ವಾಷಿಂಗ್ ಮಷಿನ್ ಮತ್ತು ಸೋಲಾರ್ ಅನಿಲ ಸ್ಟೌಗಳನ್ನು ಉಚಿತವಾಗಿ ನೀಡುವುದಾಗಿ ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಸರ್ಕಾರಿ ಉದ್ಯೋಗಿಗಳು ಇಲ್ಲದ ಬಡ ಕುಟುಂಬಗಳಲ್ಲಿ ಒಬ್ಬರಿಗೆ ಸರ್ಕಾರಿ ನೌಕರಿ ಕೊಡುವ ಭರವಸೆಯನ್ನೂ ನೀಡಲಾಗಿದೆ.

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಹಿಂದಕ್ಕೆ ಪಡೆಯುವಂತೆ, ಪೆಟ್ರೋಲ್, ಡೀಸೆಲ್ ದರ ಇಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಹೇಳಲಾಗಿದೆ. 2019ರ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ಸಿಎಎ ಮಂಡನೆಯಾದಾಗ ಎಐಎಡಿಎಂಕೆ ಅದನ್ನು ಬೆಂಬಲಿಸಿತ್ತು.

ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ಮತ್ತು ಉಪ ಮುಖ್ಯಮಂತ್ರಿ ಒ.ಪನ್ನೀರಸೆಲ್ವಂ ಅವರು ಪಕ್ಷದ ಕೇಂದ್ರ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು.

ಡಿಎಂಕೆಯ ಪ್ರಣಾಳಿಕೆಯಲ್ಲಿ ಇರುವ ಕೆಲವು ಭರವಸೆಗಳು ಎಐಎಡಿಎಂಕೆ ಪ್ರಣಾಳಿಕೆಯಲ್ಲಿಯೂ ಇವೆ. ತಮ್ಮ ಯೋಚನೆಗಳನ್ನು ಡಿಎಂಕೆ 'ಕದ್ದಿದೆ' ಎಂದು ಕಮಲಹಾಸನ್ ನೇತೃತ್ವದ ಮಕ್ಕಳ್ ನೀಧಿ ಮಯ್ಯಂ ಕೂಡ ಟೀಕಿಸಿತ್ತು.

ಪ್ರಣಾಳಿಕೆಯಲ್ಲಿ ಏನಿದೆ?

- ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಆರು ಎಲ್‌ಪಿಜಿ ಸಿಲಿಂಡರ್ ಉಚಿತ
- ಮಹಿಳಾ ಮುಖ್ಯಸ್ಥರು ಇರುವ ಕುಟುಂಬಕ್ಕೆ ತಿಂಗಳಿಗೆ ₹1,500 ನೆರವು
- ಜಯಲಲಿತಾ ಹೆಸರಿನಲ್ಲಿ ವಸತಿ ಯೋಜನೆ: ಗ್ರಾಮೀಣ ಪ್ರದೇಶದ ವಸತಿರಹಿತರಿಗೆ ಕಾಂಕ್ರೀಟ್ ಮನೆ
- ಸರ್ಕಾರಿ ಬಸ್‌ಗಳ ಟಿಕೆಟ್ ದರದಲ್ಲಿ ಮಹಿಳೆಯರಿಗೆ ರಿಯಾಯಿತಿ

'ಧರ್ಮದ ಹೆಸರಿನಲ್ಲಿ ಜನರ ವಿಭಜನೆ'

ಘೋಪುರ (ಪಿಟಿಐ): 'ಕಾಂಗ್ರೆಸ್‌ನ ತರುಣ್ ಗೊಗೊಯಿ ಅವರು ಅಸ್ಸಾಂನಲ್ಲಿ 15 ವರ್ಷ ಆಳ್ವಿಕೆ ನಡೆಸಿದರು. ಆದರೆ ಅವರು ಎಂದೂ ಎಐಯುಡಿಎಫ್ ಜತೆಗೆ ಮೈತ್ರಿ ಮಾಡಿಕೊಂಡಿರಲಿಲ್ಲ. ಈಗಿನ ಕಾಂಗ್ರೆಸ್ ನಾಯಕರು ಎಐಯುಡಿಎಫ್ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ಅಧಿಕಾರಿ ಕಸಿಯುವ ಏಕೈಕ ಕಾರಣದಿಂದ ಈ ಮೈತ್ರಿಮಾಡಿಕೊಂಡು ಜನರನ್ನು ವಿಭಜಿಸುತ್ತಿದ್ದಾರೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆರೋಪಿಸಿದ್ದಾರೆ. 'ಈಚೆಗೆ ಇಲ್ಲಿಗೆ ಕಾಂಗ್ರೆಸ್ ನಾಯಕಿಯೊಬ್ಬರು ಬಂದಿದ್ದರು. ಚಹಾತೋಟಕ್ಕೆ ಹೋಗಿ ಚಹಾ ಎಲೆ ಬಿಡಿಸಿದರು. ಇಂತಹ ಗಿಮಿಕ್‌ಗಳ ಅವಶ್ಯಕತೆ ಇದೆಯೇ' ಎಂದು ಅವರು, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಲೇವಡಿ ಮಾಡಿದ್ದಾರೆ.

ಅಮಿತ್ ಶಾ ಟೀಕೆ: ಅಸ್ಸಾಂನಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಹ ಕಾಂಗ್ರೆಸ್, ಎಐಯುಡಿಎಫ್ ಜತೆಗೆ ಮೈತ್ರಿ ಮಾಡಿಕೊಂಡಿರುವುದನ್ನು ಟೀಕಿಸಿದ್ದಾರೆ. 'ಎಐಯುಡಿಎಫ್ ಅಕ್ರಮ ವಲಸೆಯನ್ನು ಬೆಂಬಲಿಸುತ್ತದೆ. ಕಾಂಗ್ರೆಸ್‌ಗೆ ಮತ ನೀಡಿದರೆ, ಅದು ಎಐಯುಡಿಎಫ್‌ಗೆ ಹೋಗುತ್ತದೆ. ಎಂದು ಶಾ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಜೆಪಿ ತ್ಯಜಿಸಿದ ಸೋವನ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಬಿಜೆಪಿ 63 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಬೆನ್ನಲ್ಲೇ ಪಕ್ಷದಲ್ಲಿ ಭಿನ್ನ ಮತ ಸ್ಫೋಟವಾಗಿದೆ. ಟಿಎಂಸಿ ತ್ಯಜಿಸಿ ಬಿಜೆಪಿ ಸೇರ್ಪಡೆಯಾಗಿದ್ದ ಕೆಲವರಿಗೆ ಟಿಕೆಟ್ ನೀಡದಿರುವುದು ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಇದರ ಪರಿಣಾಮ ಇಬ್ಬರು ನಾಯಕರು ಬಿಜೆಪಿ ತ್ಯಜಿಸಿದ್ದು, ಅವರ ಬೆಂಬಲಿಗರು ರಾಜ್ಯದ ಕೆಲವೆಡೆ ಬಿಜೆಪಿ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ.

ಟಿಎಂಸಿ ತ್ಯಜಿಸಿ ಬಿಜೆಪಿ ಸೇರಿದ್ದ ನಾಯಕ ಸೋವನ್ ಚಟರ್ಜಿ ಮತ್ತು ಅವರ ಸ್ನೇಹಿತ ಬೈಸಾಖಿ ಬಂಡೋಪಾಧ್ಯಾಯ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿದ ಕಾರಣ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಸೋವನ್ ಅವರು ಪ್ರತಿನಿಧಿಸುತ್ತಿದ್ದ ಬೆಹಲಾ ಪುರ್ಬಾ ಕ್ಷೇತ್ರದ ಟಿಕೆಟ್ ಅನ್ನು ಇತ್ತೀಚೆಗೆ ಬಿಜೆಪಿ ಸೇರಿದ್ದ ನಟ ಪಾಯೆಲ್ ಸರ್ಕಾರ್ ಅವರಿಗೆ ನೀಡಲಾಗಿದೆ.

'ಡಿಸೆಂಬರ್‌ವರೆಗೂ ರೈತರ ಪ್ರತಿಭಟನೆ'

ಅಲಹಾಬಾದ್: ಕೇಂದ್ರ ಸರ್ಕಾರ ರೂಪಿಸಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಒತ್ತಾಯಿಸಿ ನಡೆಸುತ್ತಿರುವ ಹೋರಾಟವನ್ನು ಡಿಸೆಂಬರ್‌ವರೆಗೂ ಮುಂದುವರಿಸುವ ಸಾಧ್ಯತೆ ಇದೆ ಎಂದು ಭಾರತೀಯ ಕಿಸಾನ್ ಸಂಯುಕ್ತ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ತಿಳಿಸಿದ್ದಾರೆ.

'ವಿವಿಧ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕಾನೂನು ರೂಪಿಸುವಂತೆ ಒತ್ತಾಯಿಸಿ ವಿವಿಧ ರಾಜ್ಯಗಳಿಗೆ ಭೇಟಿ ನೀಡಲಾಗುವುದು. ಈಗಾಗಲೇ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದೆ. ಪ್ರತಿ ಕ್ವಿಂಟಲ್ ಭತ್ತಕ್ಕೆ ₹1850 ದರ ನಿಗದಿಪಡಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಎಂದು ಪಶ್ಚಿಮ ಬಂಗಾಳ ರೈತರಿಗೆ ತಿಳಿಸಿರುವೆ' ಎಂದರು.

'ವಿವಿಧ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕಾನೂನು ಅತ್ಯಗತ್ಯವಾಗಿದೆ' ಎಂದು ಪ್ರತಿಪಾದಿಸಿದ್ದಾರೆ.

ಅಪಘಾತ: 6 ಮಂದಿ ಸಾವು

ಅಮರಾವತಿ: ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ನುಜಿವಿಡು ಬಳಿ ಭಾನುವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ, ಆಟೊದಲ್ಲಿ ಇದ್ದ ಆರು ಕೃಷಿ ಕಾರ್ಮಿಕರು ಮೃತಪಟ್ಟಿದ್ದು, 8 ಮಂದಿ ಗಾಯಗೊಂಡಿದ್ದಾರೆ.

ಸಂತ್ರಸ್ತರು ವಿಜಯವಾಡದಿಂದ ಸುಮಾರು 55 ಕಿ.ಮೀ ದೂರದಲ್ಲಿರುವ ನುಜಿವಿಡು ಬಳಿಯ ಬುಡಕಟ್ಟು ಲಿಯಾನ್ ತಾಂಡಾಗೆ ಸೇರಿದವರು. ಅವರು ಆಟೋರಿಕ್ಷಾದಲ್ಲಿ ಹತ್ತಿರದ ಹಳ್ಳಿಗೆ ತೆರಳುತ್ತಿದ್ದಾಗ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಟ್ಟಡ ನಕ್ಷೆ : ಶುಲ್ಕ ಇಳಿಕೆಗೆ ಪ್ರಸ್ತಾವ

ಒಂದನೇ ಪುಟದಿಂದ

ಬಹುಮಹಡಿ ಕಟ್ಟಡಗಳಿಗೆ ವಸತಿ ಉದ್ದೇಶಕ್ಕೆ ಪ್ರತಿ ಚದರ ಮೀಟರ್‌ಗೆ ₹ 20, ಕೈಗಾರಿಕಾ ಕಟ್ಟಡಗಳಿಗೆ ಚ.ಮೀ.ಗೆ ₹ 40, ವಾಣಿಜ್ಯ ಕಟ್ಟಡಗಳಿಗೆ ಚ.ಮೀ.ಗೆ ₹ 100 ಮತ್ತು ಇತರ ಕಟ್ಟಡಗಳಿಗೆ ಚ.ಮೀ.ಗೆ ₹ 20 ವಿಧಿಸಲಾಗಿತ್ತು.

ನಕ್ಷೆ ಮಂಜೂರಾತಿ ದರದಲ್ಲಿ ವಸತಿ ಕಟ್ಟಡಗಳಿಗೆ ಶೇ 25, ವಾಣಿಜ್ಯ ಕಟ್ಟಡಗಳಿಗೆ ಶೇ 37.5, ವಾಣಿಜ್ಯ ಕಟ್ಟಡಗಳಿಗೆ ಶೇ 62.5 ಮತ್ತು ಇತರ ಕಟ್ಟಡಗಳಿಗೆ ಶೇ 25ರಷ್ಟು ಹೆಚ್ಚಿಸಲಾಗಿತ್ತು. ದೊಡ್ಡ ಪ್ರಮಾಣದಲ್ಲಿ ದರ ಹೆಚ್ಚಳ ಮಾಡಿರುವುದಕ್ಕೆ ರಿಯಲ್ ಎಸ್ಟೇಟ್ ಉದ್ಯಮವೂ ಸೇರಿದಂತೆ ವಿವಿಧ ವಲಯಗಳಿಂದ ವಿರೋಧ ವ್ಯಕ್ತವಾಗಿತ್ತು. ಆ ಬಳಿಕ ಮತ್ತೆ ದರ ಪರಿಷ್ಕರಣೆ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿತ್ತು.

'ಕೋವಿಡ್ ನಂತರದಲ್ಲಿ ಎಲ್ಲ ಕ್ಷೇತ್ರಗಳೂ ಸಂಕಷ್ಟಕ್ಕೆ ಸಿಲುಕಿವೆ. ನಕ್ಷೆ ಮಂಜೂರಾತಿ ದರದಲ್ಲಿ ದೊಡ್ಡ ಪ್ರಮಾಣದ ಏರಿಕೆ ಮಾಡಿದರೆ ರಿಯಲ್ ಎಸ್ಟೇಟ್ ಉದ್ಯಮಿಗಳು ಅದನ್ನು ಗ್ರಾಹಕರ ಮೇಲೆ ವರ್ಗಾಯಿಸುತ್ತಾರೆ. ಅಂತಿಮವಾಗಿ ಸಾಮಾನ್ಯ ಜನರಿಗೆ ಹೊರೆಯಾಗುತ್ತದೆ. ಈ ಅಂಶವನ್ನು ಆಧರಿಸಿ ನಕ್ಷೆ ಮಂಜೂರಾತಿ ದರ ಇಳಿಕೆ ಮಾಡಲು ಸರ್ಕಾರ ನಿರ್ಧರಿಸಿದೆ' ಎಂದು ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕಟ್ಟಡ ನಕ್ಷೆ ಮಂಜೂರಾತಿ ಪರಿಷ್ಕೃತ ದರ ವಿವರ: (ಚ.ಮೀ.ಗಳಲ್ಲಿ ಮಾರುಕಟ್ಟೆ ದರ ಆಧರಿಸಿ)

ಸ್ಥಳೀಯ ಯೋಜನಾ ಪ್ರಾಧಿಕಾರ ಮತ್ತು ಜನಸಂಖ್ಯೆ	ವಸತಿ	ವಾಣಿಜ್ಯ	ಕೈಗಾರಿಕೆ	ಇತರ
ಬೆಂಗಳೂರು ಮಹಾನಗರ	0.2% (ಚ.ಮೀ.ಗೆ ₹100)	0.3% (ಚ.ಮೀ.ಗೆ ₹ 200)	0.5% (ಚ.ಮೀ.ಗೆ ₹350)	0.2% (ಚ.ಮೀ.ಗೆ ₹100)
ಹತ್ತು ಲಕ್ಷ ಮತ್ತು ಹೆಚ್ಚಿನ ಜನಸಂಖ್ಯೆಯ ಪ್ರದೇಶ	0.2% (ಚ.ಮೀ.ಗೆ ₹100)	0.3% (ಚ.ಮೀ.ಗೆ ₹ 200)	0.5% (ಚ.ಮೀ.ಗೆ ₹350)	0.2% (ಚ.ಮೀ.ಗೆ ₹100)
ಒಂದರಿಂದ ಹತ್ತು ಲಕ್ಷ ಜನಸಂಖ್ಯೆಯ ಪ್ರದೇಶ	0.1% (ಚ.ಮೀ.ಗೆ ₹20)	0.3% (ಚ.ಮೀ.ಗೆ ₹ 40)	0.5% (ಚ.ಮೀ.ಗೆ ₹60)	0.1% (ಚ.ಮೀ.ಗೆ ₹20)
50 ಸಾವಿರದಿಂದ ಒಂದು ಲಕ್ಷ ಜನಸಂಖ್ಯೆಯ ಪ್ರದೇಶ	0.1% (ಚ.ಮೀ.ಗೆ ₹15)	0.3% (ಚ.ಮೀ.ಗೆ ₹ 25)	0.5% (ಚ.ಮೀ.ಗೆ ₹30)	0.1% (ಚ.ಮೀ.ಗೆ ₹15)
20 ಸಾವಿರದಿಂದ 50 ಸಾವಿರದ ಜನಸಂಖ್ಯೆಯ ಪ್ರದೇಶ	0.1% (ಚ.ಮೀ.ಗೆ ₹10)	0.3% (ಚ.ಮೀ.ಗೆ ₹ 15)	0.5% (ಚ.ಮೀ.ಗೆ ₹20)	0.1% (ಚ.ಮೀ.ಗೆ ₹10)
20 ಸಾವಿರದೊಳಗಿನ ಜನಸಂಖ್ಯೆಯ ಪ್ರದೇಶ	0.1% (ಚ.ಮೀ.ಗೆ ₹5)	0.3% (ಚ.ಮೀ.ಗೆ ₹ 10)	0.5% (ಚ.ಮೀ.ಗೆ ₹15)	0.1% (ಚ.ಮೀ.ಗೆ ₹5)

ಪಿಎಫ್‌ಐ 'ತರಬೇತಿ ಕಮಾಂಡರ್' ಬಂಧನ

ಗೋರಖ್‌ಪುರ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ(ಪಿಎಫ್‌ಐ) 'ತರಬೇತಿ ಕಮಾಂಡರ್' ಎಂದು ಆರೋಪಿಸಿ, ವ್ಯಕ್ತಿಯೊಬ್ಬನನ್ನು ಉತ್ತರ ಪ್ರದೇಶ ಪೊಲೀಸರು ಬಂಧಿಸಿದ್ದಾರೆ.

'ಮೊಹಮ್ಮದ್ ರಶೀದ್ ಎಂಬಾತನನ್ನು ಬಸ್ತಿ ರೈಲು ನಿಲ್ದಾಣದ ಬಳಿಯಿಂದ ಶನಿವಾರ ರಾತ್ರಿ ಬಂಧಿಸಲಾಗಿದೆ. ಪಿಎಫ್‌ಐನ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುಂಬೈಗೆ ತೆರಳುವ ಸಲುವಾಗಿ ಈತ ರೈಲು ನಿಲ್ದಾಣಕ್ಕೆ ತೆರಳುತ್ತಿದ್ದ' ಎಂದು ಉತ್ತರ ಪ್ರದೇಶ ಪೊಲೀಸರ ವಿಶೇಷ ಕಾರ್ಯಪಡೆ(ಎಸ್‌ಟಿಎಫ್) ಅಧಿಕಾರಿಗಳು ತಿಳಿಸಿದ್ದಾರೆ.

'ರಶೀದ್ ಬಳಿಯಿಂದ ದೇಶ ವಿರೋಧಿ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುವ ಬರಹಗಳು, ಸಿ.ಡಿ, ನಕಲಿ ಆಧಾರ್ ಕಾರ್ಡ್ ಮತ್ತು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ. ಈತನ ವಿರುದ್ಧ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.



ಭವಿಷ್ಯದ ಕೋರ್ಸ್‌ಗೆ ಎಸ್ಸೆಸ್ಸೆಲ್ಸಿಯಲ್ಲೇ ಬುನಾದಿ

ಆಫ್‌ಬೀಟ್ ವೃತ್ತಿಗೆ ಬೇಡಿಕೆ

ಸಿದ್ಧಾಂತ್ ಎಂ.ಜೆ.

ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ವೃತ್ತಿ ಭವಿಷ್ಯದ ಬಗ್ಗೆ ಹೆಚ್ಚು ಆತಂಕವಿರುವುದು ಸಹಜ. ಎಸ್ಸೆಸ್ಸೆಲ್ಸಿಯಲ್ಲಿರುವಾಗಲೇ ಮುಂದೆ ಯಾವ ಕೋರ್ಸ್ ಆಯ್ಕೆ ಮಾಡಿಕೊಂಡರೆ ಕನಸಿನ ಉದ್ಯೋಗವನ್ನು ತಮ್ಮದಾಗಿಸಿಕೊಳ್ಳಬಹುದು ಎಂಬ ತಹತಹವಿರುತ್ತದೆ. ಪರೀಕ್ಷೆ ಮುಗಿದು ಫಲಿತಾಂಶ ಬರುತ್ತಿದ್ದ ಹಾಗೆ ನಿರ್ಧಾರವನ್ನು ಗಟ್ಟಿ ಮಾಡಿಕೊಂಡಿರಬೇಕು. ಸುಲಭ ಮಾರ್ಗವೆಂದರೆ ಪರೀಕ್ಷೆಯ ಓದಿನ ಜೊತೆಜೊತೆಗೇ ಆ ಕನಸನ್ನು ಗುರುತಿಸಿ ಆಯ್ಕೆಗೆ ಮುಕ್ತ ಅವಕಾಶ ಇಟ್ಟುಕೊಳ್ಳುವುದು.

ಸಾಂಪ್ರದಾಯಿಕ ಕೋರ್ಸ್‌ಗಳಾದ ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು ಮೊದಲಾದವುಗಳ ಮೇಲೆ ಆಸಕ್ತಿ ಇಲ್ಲದಿದ್ದರೆ ಹತಾಶೆ ಬೇಡ. ಬೇರೆ ಕೆಲವು ಆಫ್‌ಬೀಟ್ ವೃತ್ತಿಗಳಲ್ಲಿ ಕೂಡ ಒಳ್ಳೆಯ ಭವಿಷ್ಯವಿದೆ. ಇವು ಕೇವಲ ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿ ಕೂಡ ಪ್ರವರ್ಧಮಾನಕ್ಕೆ ಬರುತ್ತಿವೆ. ಸದ್ಯಕ್ಕೆ ವಿದ್ಯಾರ್ಥಿಗಳನ್ನು ಸೆಳೆಯುತ್ತಿರುವ ಇಂತಹ ಕೆಲವು ಉದ್ಯೋಗಗಳನ್ನು ಪಟ್ಟಿ ಮಾಡಬಹುದು.

> ಭವಿಷ್ಯದಲ್ಲಿ ಏನಾಗಬೇಕು ಎಂಬುದಕ್ಕೆ ಎಸ್ಸೆಸ್ಸೆಲ್ಸಿಯಲ್ಲಿದ್ದಾಗಲೇ ಭದ್ರ ಬುನಾದಿ ಹಾಕಿಕೊಳ್ಳುವುದು ಸೂಕ್ತ. ಅಂದರೆ ಮುಂದೆ ಓದಬೇಕಾದ ವಿಷಯವನ್ನು ಪಕ್ಕಾ ಮಾಡಿಕೊಂಡು ಪಿಯುಸಿಯಿಂದ ಅಧ್ಯಯನಕ್ಕೆ ತೊಡಗಬೇಕಾಗುತ್ತದೆ.

ಜೈವಿಕ ತಂತ್ರಜ್ಞಾನ

ಕಳೆದ ಕೆಲವು ವರ್ಷಗಳಿಂದ ವಿಪುಲ ಉದ್ಯೋಗಗಳು ಹಾಗೂ ಜೊತೆಗೆ ಸಂಶೋಧನೆಗೆ ಅವಕಾಶಗಳನ್ನು ನೀಡುತ್ತಿರುವ ಈ ಕ್ಷೇತ್ರ ಜೀವಶಾಸ್ತ್ರದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಹೇಳಿ ಮಾಡಿಸಿರುವಂತಹದ್ದು. ಜೀವಶಾಸ್ತ್ರದ ಒಂದು ವಿಭಾಗವಾಗಿರುವ ಇದು ಜೀವಕೋಶಗಳ ಬೆಳವಣಿಗೆ ಮತ್ತಿತರ ವಿಷಯಗಳನ್ನು ಒಳಗೊಂಡಿದೆ. ಇದಲ್ಲದೇ ಬಹುತೇಕ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸ್ ಇದೆ. ಉನ್ನತ ಅಧ್ಯಯನ ನಡೆಸುವ ಆಸಕ್ತಿ ಉಳ್ಳವರಿಗೂ ಸಹ ಇದು ಹೇಳಿ ಮಾಡಿಸಿದಂತಹ ವಿಷಯ.



ಇದರ ಬಗ್ಗೆ ಆಸಕ್ತಿ ಇರುವ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಜೀವಶಾಸ್ತ್ರ ಓದಿದರೂ ಪದವಿ ತರಗತಿಯಲ್ಲಿ ಜೈವಿಕ ತಂತ್ರಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು. ಅದರಲ್ಲೇ ಸ್ನಾತಕೋತ್ತರ ಪದವಿ ಕೂಡ ಪಡೆಯಬಹುದು.

ಪಿಆರ್ ಮತ್ತು ಜಾಹೀರಾತು

ಸಂವಹನ ಉದ್ಯಮದ ಒಂದು ಶಾಖೆಯಾಗಿರುವ ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು ಕ್ಷೇತ್ರವು ಕಳೆದ ಕೆಲವು ವರ್ಷಗಳಿಂದ ಭರಪೂರು ಅವಕಾಶಗಳನ್ನು ಸೃಷ್ಟಿಸುತ್ತಿದೆ. ಬಹು ಆಯ್ಕೆಗಳು ಇದರಲ್ಲಿರುವುದರಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಕೋರ್ಸ್ ಕಲಿಕೆಗೆ ಮುಂದಾಗುತ್ತಿದ್ದಾರೆ. ಭಾರತದಲ್ಲಿ ಮಾತ್ರವಲ್ಲ, ವಿದೇಶಿ ಕಂಪನಿಗಳಲ್ಲೂ ವೃತ್ತಿಗೆ ಅವಕಾಶಗಳಿವೆ. ಹೀಗಾಗಿ ಆಸಕ್ತರು ಈ ಕೋರ್ಸ್‌ಗಳ ಬಗ್ಗೆ ಈಗಿನಿಂದಲೇ ಮಾಹಿತಿ ಸಂಗ್ರಹಿಸಿ ಪ್ರವೇಶಕ್ಕಾಗಿ ಸಿದ್ಧತೆ ನಡೆಸಬಹುದು.

ಪದವಿ ತರಗತಿಯಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮವನ್ನು ಒಂದು ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು. ಸಾರ್ವಜನಿಕ ಸಂಪರ್ಕ ಅಥವಾ ಜಾಹೀರಾತು ವಿಷಯದಲ್ಲಿ ಡಿಪ್ಲೊಮಾ ಪದವಿ ಪಡೆದರೂ ಅವಕಾಶಗಳಿಗೆ ಕೊರತೆಯಿಲ್ಲ. ಹಾಗೆಯೇ ಮುಂದೆ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆಯುವಾಗ ಈ ಎರಡೂ ವಿಷಯಗಳನ್ನು ಓದಬಹುದು. ಕೆಲವು ವಿಶ್ವವಿದ್ಯಾಲಯಗಳಲ್ಲಿ ಜಾಹೀರಾತು ವಿಷಯವೊಂದನ್ನೇ ಆಯ್ಕೆ ಮಾಡಿಕೊಂಡು ಉನ್ನತ ಅಧ್ಯಯನ ನಡೆಸುವ ಅವಕಾಶಗಳಿವೆ.

ರಂಗ ತರಬೇತಿ

ಸಮೂಹ ಸಂವಹನವೆಂಬುದು ಈಗ ದೊಡ್ಡ ಅಧ್ಯಯನ ವಿಭಾಗವಾಗಿ ಹೊರ ಹೊಮ್ಮಿದೆ. ಇದರ ಅಡಿಯಲ್ಲಿ ಬರುವ ರಂಗ ಅಧ್ಯಯನ ನಟನೆಯ ಬಗ್ಗೆ ಸಂಪೂರ್ಣ ಶಿಕ್ಷಣವನ್ನು ನೀಡುವಂತಹದ್ದು. ವೇದಿಕೆಯಲ್ಲಿ ನಟನಾ ಕೌಶಲ ತೋರಿಸುವ ಆಸಕ್ತಿ ಇದ್ದರೆ ಈ ಕೋರ್ಸ್‌ಗೆ ಸೇರಿಕೊಳ್ಳಬಹುದು. ಈ ಬಗ್ಗೆ ಹಲವಾರು ಸಂಸ್ಥೆಗಳಿದ್ದು, ವಿದ್ಯಾರ್ಥಿಗಳು ಮಾಹಿತಿ ಪಡೆದುಕೊಳ್ಳಬಹುದು.

ಮುಖ್ಯ ವಾಹಿನಿಯಲ್ಲಿ ಪಟ್ಟಿ ಮಾಡಲಾಗಿರುವ ಉದ್ಯೋಗಗಳನ್ನು ಬಿಟ್ಟು ಬೇರೆ ವೃತ್ತಿಗಳನ್ನು ಅಂದರೆ ನಿಮಗಿಷ್ಟದ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳಲು ಇದು ಸುಸಂದರ್ಭ. ಮೇಲೆ ಕೊಡಲಾಗಿರುವ ಮಾಹಿತಿ ಕೆಲವು ಉದಾಹರಣೆಗಳಷ್ಟೆ. ಆಸಕ್ತ ವಿದ್ಯಾರ್ಥಿಗಳು ಸೂಕ್ತ ಮಾಹಿತಿ ಪಡೆದು ಇಷ್ಟದ ಕೋರ್ಸ್ ಆಯ್ಕೆ ಮಾಡಿಕೊಂಡರೆ ಉತ್ತಮವಾದ ವೃತ್ತಿ ಭವಿಷ್ಯ ಕಟ್ಟಿಕೊಳ್ಳಬಹುದು. ಈಗ ಯಾವ ಕೋರ್ಸ್, ಉದ್ಯೋಗ ಟ್ರೆಂಡ್‌ನಲ್ಲಿದೆ ಎಂಬುದನ್ನು ತಿಳಿದುಕೊಂಡು ಅವುಗಳಿರುವ ಉತ್ತಮ ಶೈಕ್ಷಣಿಕ ಸಂಸ್ಥೆಯನ್ನೂ ಹುಡುಕಿಕೊಳ್ಳುವುದು ಮುಖ್ಯ. ಎಲ್ಲವೂ ನಿಮಗೆ ಅನುಕೂಲವಾಗಿದೆ ಎಂದರೆ ಮಾತ್ರ ಪ್ರವೇಶ ಪಡೆದು ಮುಂದಿನ ಹಾದಿಯನ್ನು ಸುಗಮಗೊಳಿಸಿಕೊಳ್ಳಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಐಐಎಂ ಬೆಂಗಳೂರು ಡಾಕ್ಟರಲ್ ರಿಸರ್ಚ್ ಫೆಲೋಶಿಪ್ 2021

ವಿವರ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು ಪಿಎಚ್‌ಡಿ ಪದವಿ ಪಡೆದ ವಿದ್ಯಾರ್ಥಿಗಳಿಂದ ಡಾಕ್ಟರಲ್ ರೀಸರ್ಚ್ ಫೆಲೋಶಿಪ್‌ಗೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಹಣಕಾಸು, ಬ್ಯಾಂಕಿಂಗ್, ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ ಪಿಎಚ್‌ಡಿ ಮುಗಿಸಿದ ಅಥವಾ ಮುಗಿಸುತ್ತಿರುವ 45 ವರ್ಷದ ಒಳಗಿನವರು ಈ ಫೆಲೋಶಿಪ್‌ಗೆ ಅರ್ಹರು.

ಆರ್ಥಿಕ ನೆರವು: ತಿಂಗಳಿಗೆ ₹ 90000

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 21, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/MBP7

ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಎಂಐ ಸ್ಕಾಲರ್‌ಶಿಪ್

ವಿವರ: ಶಿಯೋಮಿ ಇಂಡಿಯಾ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು.

ಅರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು. ಈ ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 70 ಅಂಕ ಗಳಿಸಿರಬೇಕು.

ಆರ್ಥಿಕ ನೆರವು: ₹ 5800

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆನ್‌ಲೈನ್ ಮೂಲಕ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 31, 2021

ಹೆಚ್ಚಿನ ಮಾಹಿತಿಗೆ: www.b4s.in/praja/MISC1

ಕೃಪೆ: buddy4study.com

ಕ್ಲಿನಿಕಲ್ ವಿಷಯದ ಅಧ್ಯಯನಕ್ಕೆ ಒತ್ತು

ನೀಟ್- ಪಿಜಿ ಪ್ರವೇಶ ಪರೀಕ್ಷೆ

ಡಾ. ಅನಿಲ್ ತಿಮ್ಮನಾಯಕ

ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ಯು ಭಾರತದ ಸರ್ಕಾರಿ ಅಥವಾ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಡಾಕ್ಟರ್ ಆಫ್ ಮೆಡಿಸಿನ್ (ಎಂ.ಡಿ), ಮಾಸ್ಟರ್ ಆಫ್ ಸರ್ಜರಿ (ಎಂ.ಎಸ್), ಡಿಪ್ಲೊಮಾ ಕೋರ್ಸ್‌ಗಳು ಹಾಗೂ ಇತರ ಸ್ನಾತಕೋತ್ತರ ವಿಶೇಷ ಪರಿಣತಿಯನ್ನು ಪಡೆಯಲು ಇರುವ ಪ್ರವೇಶ ಪರೀಕ್ಷೆ. ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇ) ನೀಟ್-ಪಿಜಿ 2021 ಪರೀಕ್ಷಾ ವಿಧಾನದಲ್ಲಿ ಕೆಲವು ಬದಲಾವಣೆ ತಂದಿದೆ. ಹಿಂದಿನ ವರ್ಷ ಇದ್ದ 300 ಪ್ರಶ್ನೆಗಳಿಗೆ ಬದಲಾಗಿ ಈಗಿನ ಪರೀಕ್ಷೆಯು 200 ಪ್ರಶ್ನೆಗಳನ್ನು ಒಳಗೊಂಡಿದೆ. ಇದಕ್ಕೆ ಮೂರುವರೆ ಗಂಟೆಗಳ ಕಾಲಾವಕಾಶ ನಿಗದಿಪಡಿಸಲಾಗಿದೆ.

ವಿಕಿರಣ ಶಾಸ್ತ್ರ ಮತ್ತು ಮಕ್ಕಳ ಚಿಕಿತ್ಸೆಗೆ ವಿಶೇಷ ಪರಿಣತಿಗಾಗಿ ಇರುವ ಎಂಬಿಬಿಎಸ್ ಬಳಿಕದ ಎರಡು ವರ್ಷಗಳ ಡಿಪ್ಲೊಮಾ ಕೋರ್ಸ್‌ಗಳಿಗೆ ಕೂಡಾ ಇದೇ ಪ್ರವೇಶ ಪರೀಕ್ಷೆ ಅನ್ವಯವಾಗುತ್ತದೆ ಎಂದು ಎನ್‌ಬಿಇ ಹೇಳಿಕೆ ನೀಡಿದೆ. ರಾಷ್ಟ್ರೀಯ ಪರೀಕ್ಷಾ ಮಂಡಳಿಯು ಈ ಪರೀಕ್ಷೆಗಳನ್ನು ನಡೆಸುವುದಲ್ಲದೇ ಜನರಲ್ ಆಫ್ ಹೆಲ್ತ್ ಸರ್ವೀಸಸ್, ಕೌನ್ಸೆಲಿಂಗ್ ಮತ್ತು ಸೀಟು ಹಂಚಿಕೆ ಹೊಣೆಗಾರಿಕೆಯನ್ನು ನಿರ್ವಹಿಸುತ್ತದೆ. ಈ ವರ್ಷ ಪರೀಕ್ಷೆಯು ಏಪ್ರಿಲ್ 18ರಂದು ನಡೆಯಲಿದೆ.

ನೀಟ್-ಪಿಜಿ ದೇಶದಲ್ಲಿ ವೈದ್ಯಕೀಯ ಪರೀಕ್ಷೆಗಾಗಿ ಇರುವ ಅತ್ಯಂತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದಾಗಿರುವ ಹಿನ್ನೆಲೆಯಲ್ಲಿ ಅದರಲ್ಲಿ ಯಶಸ್ಸು ಸಾಧಿಸುವ ಕೆಲ ಸಲಹೆಗಳು ಇಲ್ಲಿವೆ.

1. ಕ್ಲಿನಿಕಲ್ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಿ

ಸುಮಾರು 100-120 ಅಂದರೆ ಬಹುತೇಕ ಪ್ರಶ್ನೆಗಳು, ಕ್ಲಿನಿಕಲ್ ವಿಷಯಗಳಿಗೆ ಸಂಬಂಧಿಸಿದ್ದಾಗಿರುತ್ತವೆ. ಐದು ಪ್ರಮುಖ ವಿಭಾಗಗಳೆಂದರೆ, ಮೆಡಿಸಿನ್, ಸರ್ಜರಿ, ಒಬಿಜಿ, ಮಕ್ಕಳ ಚಿಕಿತ್ಸೆ ಮತ್ತು ಆರ್ಥೊಪೆಡಿಕ್ಸ್ ಆಗಿದ್ದು, ಇದಕ್ಕೆ ಸಂಬಂಧಿಸಿದಂತೆ ರೋಗಿಗಳ ತಪಾಸಣೆ ಹಾಗೂ ನಿರ್ವಹಣೆ ಶಿಷ್ಟಾಚಾರಕ್ಕೆ ಸಂಬಂಧಿಸಿದ ವಿಷಯಗಳೂ ಒಳಗೊಂಡಿರುತ್ತವೆ.

2. ಮೂಲ ವಿಜ್ಞಾನ ವಿಷಯಗಳ ಕ್ಲಿನಿಕಲ್ ಆಯಾಮಗಳು

ಅನಾಟಮಿ, ಮನಶ್ಶಾಸ್ತ್ರ, ಜೀವ ರಸಾಯನ ಶಾಸ್ತ್ರ, ರೋಗ ನಿರ್ಣಯ ಶಾಸ್ತ್ರ ಮತ್ತು ಸೂಕ್ಷ್ಮ ಜೀವಶಾಸ್ತ್ರ ಮುಂತಾದ ಮೂಲ ವಿಜ್ಞಾನ ವಿಷಯಗಳ ಕ್ಲಿನಿಕಲ್ ಆಯಾಮಗಳ ಬಗ್ಗೆ ಅಧ್ಯಯನ ಮಾಡುವುದು ಕೂಡಾ ಮುಖ್ಯ. ಇವುಗಳನ್ನು ಕ್ಲಿನಿಕಲ್ ವಿಷಯಗಳ ಜತೆ ಸಮನ್ವಯ ಮಾಡಬೇಕಾಗುತ್ತದೆ.

3. ಪುನರ್‌ಮನನ ಮಾಡಿ

ಪ್ರತಿಯೊಂದನ್ನೂ ಪುನರ್ ಮನನ ಮಾಡುವ ಪ್ರಯತ್ನ ಮಾಡಿ. ನಿಮ್ಮ ತಯಾರಿಯ ಆರಂಭಿಕ ದಿನಗಳಲ್ಲಿ ನೀವು ಸ್ವತಃ ಸಿದ್ಧಪಡಿಸಿದ ವಿಷಯಗಳು/ ನೋಟ್ಸ್‌ಗಳನ್ನು ಪುನರ್ ಮನನ ಮಾಡಿ.

4. ಪರೀಕ್ಷಾಪೂರ್ವ ಕಾರ್ಯತಂತ್ರ

ಯಾವುದೇ ಹೊಸ ಪುಸ್ತಕಗಳನ್ನು ಹುಡುಕುವ ಪ್ರಯತ್ನ ಮಾಡಬೇಡಿ ಹಾಗೂ ಪರೀಕ್ಷೆಗೆ 30 ದಿನ ಮುಂಚಿತವಾಗಿ ಯಾವುದೇ ಹೊಸ ವಿಷಯವನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡಬೇಡಿ. ಪರೀಕ್ಷೆಗಾಗಿ ಹೊಸ ಅಧ್ಯಯನ ವಿಷಯಗಳನ್ನು ಪರಿಚಯ ಮಾಡಿಕೊಳ್ಳುವುದು ನಿಮ್ಮ ಸಿದ್ಧತಾ ಕಾರ್ಯತಂತ್ರದಿಂದ ನಿಮ್ಮ ಮನಸ್ಸನ್ನು ವಿಮುಖವಾಗಿಸುವ ಸಾಧ್ಯತೆ ಇರುತ್ತದೆ. ಇದರಿಂದ ನೀವು ಖಿನ್ನತೆಗೆ ಅಥವಾ ನಿರುತ್ಸಾಹಕ್ಕೆ ಒಳಗಾಗುವ ಸಾಧ್ಯತೆ ಇದೆ.

5. ಕೊನೆಯ ಕ್ಷಣಗಳ ಅಧ್ಯಯನ

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಕೊನೆಯ ಹತ್ತು ದಿನಗಳ ಸಿದ್ಧತೆ ಅತ್ಯಂತ ಮುಖ್ಯವಾದದ್ದು. ನೀವು ಎಲ್ಲ ಕ್ಲಿನಿಕಲ್ ಸ್ಕೋರಿಂಗ್ ಸಿಸ್ಟಂಗಳನ್ನು ತಿಳಿದುಕೊಂಡಿದ್ದೀರಾ ಮತ್ತು ರೋಗಿಗಳ ನಿರ್ವಹಣೆ ಶಿಷ್ಟಾಚಾರಕ್ಕೆ ಅನ್ವಯಿಸುವ ಎಲ್ಲ ಕ್ಲಿನಿಕಲ್ ಮಾನದಂಡಗಳನ್ನು ಮನನ ಮಾಡಿಕೊಂಡಿದ್ದೀರಾ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ.

6. ಪರಿಕಲ್ಪನೆಗಳು

ಅಂಕಿ- ಅಂಶ ಆಧರಿತ ವಿಷಯಗಳಿಗೆ ನಿಮ್ಮ ಸಮಯವನ್ನು ವ್ಯರ್ಥ ಮಾಡಬೇಡಿ. ಪ್ರತಿಯೊಂದು ವಿಷಯವನ್ನೂ ನೀವು ಆಳವಾಗಿ ಅಧ್ಯಯನ ಮಾಡಿದ್ದೀರಿ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ. ಪರಿಕಲ್ಪನೆಗಳನ್ನು ಕೇವಲ ನೆನಪು ಮಾಡಿಕೊಳ್ಳದೆ ಅವುಗಳನ್ನು ಅರ್ಥ ಮಾಡಿಕೊಳ್ಳಿ ಹಾಗೂ ಅವುಗಳನ್ನು ಕ್ಲಿನಿಕಲ್ ಆಗಿ ಅನ್ವಯಿಸುವ ಪ್ರಯತ್ನ ಮಾಡಿ.

ಸ್ನಾತಕೋತ್ತರ ಪದವಿ ಸೀಟುಗಳಿಗೆ ಮೀಸಲಾತಿಗಳನ್ನು ಭಾರತ ಸರ್ಕಾರ ಮತ್ತು ಆಯಾ ರಾಜ್ಯ ಸರ್ಕಾರಗಳ ನಿಯಮಾನುಸಾರ ಮಾಡಲಾಗುತ್ತದೆ. ಮೀಸಲಾತಿ ಮತ್ತು ಕೌನ್ಸಿಲಿಂಗ್‌ಗೆ ಸಂಬಂಧಪಟ್ಟ ಮಾಹಿತಿಯ ವಿವರಗಳನ್ನು ಒಳಗೊಂಡ ವಿವರವಾದ ಕೈಪಿಡಿಯನ್ನು ನಿಯೋಜಿತ ಪ್ರಾಧಿಕಾರವು ನೀಟ್-ಪಿಜಿ-2021ಗಾಗಿ ಬಿಡುಗಡೆ ಮಾಡಲಿದೆ. 2021ರ ಮೇ 31ರಂದು ಫಲಿತಾಂಶಗಳನ್ನು ಪ್ರಕಟಿಸಲಾಗುತ್ತದೆ.

(ಲೇಖಕರು: ನೀಟ್ ಪಿಜಿ- ಒಬಿಜಿ ಉಪನ್ಯಾಸಕರು, ಅನ್‌ಅಕಾಡೆಮಿ)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎರಡು ಚರಾಕ್ಷಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿ

(ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

ಸಮೀಕರಣಗಳನ್ನು ನಕ್ಷಾ ರೂಪದಲ್ಲಿ ನಾವು R (0,2) ಮತ್ತು S (4,0) ಬಿಂದುಗಳನ್ನು ಗುರುತಿಸಿ RS ಸರಳ ರೇಖೆಯನ್ನು P(0,3) ಹಾಗೂ Q (6,0) ಮತ್ತು ಬಿಂದುಗಳನ್ನು ಗುರುತಿಸಿ PQ ಸರಳ ರೇಖೆಯನ್ನು ಪಡೆಯುತ್ತೇವೆ.



ಎರಡು ಸಮಾನಾಂತರ ಸರಳ ರೇಖೆಗಳ ಮೂಲಕ ರೇಖಾಗಣಿತೀಯವಾಗಿ ಈ ಸಂದರ್ಭದಲ್ಲಿ ಪ್ರತಿನಿಧಿಸಲಾಗಿದೆ. ಸರಳ ರೇಖೆಗಳು ಎಂದಿಗೂ ಛೇದಿಸದೇ ಇರುವುದರಿಂದ ಸಮೀಕರಣಗಳಿಗೆ ಯಾವುದೇ ಸಾಮಾನ್ಯ ಪರಿಹಾರವಿಲ್ಲ.

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳ ವರ್ತನೆ ಮತ್ತು ಪರಿಹಾರಗಳ ಇರುವಿಕೆಯನ್ನು ನಾವೀಗ ಸಾರಾಂಶೀಕರಿಸಬಹುದು.

1) ಎರಡು ಸರಳ ರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸಬಹುದು. ಇಂತಹ ಪ್ರಕರಣದಲ್ಲಿ ಸಮೀಕರಣಗಳ ಜೋಡಿಗೆ ಅನನ್ಯ ಪರಿಹಾರವಿರುತ್ತದೆ.

2) ರೇಖೆಗಳು ಸಮಾನಾಂತರವಾಗಿರಬಹುದು. ಇಂತಹ ಪ್ರಕರಣದಲ್ಲಿ ಸಮೀಕರಣಗಳಿಗೆ ಪರಿಹಾರವಿಲ್ಲ.

3) ಈ ರೇಖೆಗಳು ಐಕ್ಯಗೊಳ್ಳಬಹುದು. ಇಂತಹ ಪ್ರಕರಣದಲ್ಲಿ ಸಮೀಕರಣಗಳಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿರುತ್ತವೆ.

ಇಲ್ಲಿ $a_1x + b_1 + c_1 = 0$

$$a_2x + b_2y + c_2 = 0$$

ಎಂಬ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳು

ಛೇದಿಸಿದರೆ $\frac{a_1}{a_2} \neq \frac{b_1}{b_2}$

'ಐಕ್ಯಗೊಂಡರೆ

$$\frac{a_1}{a_2} \neq \frac{b_1}{b_2} = \frac{c}{c}$$

ಸಮಾಂತರವಾದರೆ

$$\frac{a_1}{a_2} \neq \frac{b_1}{b_2} = \frac{c_1}{c_2}$$

ಎಂಬುದನ್ನು ಗಮನಿಸಿ

ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸುವ ಬೀಜಗಣಿತೀಯ ವಿಧಾನಗಳು

ವರ್ಜಿಸುವ ವಿಧಾನ: ಒಂದು ಚರಾಕ್ಷರವನ್ನು ಮೊದಲು ವರ್ಜಿಸಿ ಒಂದೇ ಚರಾಕ್ಷರದ ರೇಖಾತ್ಮಕ ಸಮೀಕರಣವನ್ನು ನಾವು ಪಡೆಯುತ್ತೇವೆ. ಚರಾಕ್ಷರಗಳಲ್ಲಿ x ಅದು ಸಹಗುಣಕಗಳು ಸಮವಾಗುವ ಹಾಗೆ ಎರಡು ಸಮೀಕರಣಗಳಿಗೂ ಸೂಕ್ತವಾದ ಒಂದು ಸ್ಥಿರಾಂಕದಿಂದ ಗುಣಿಸಿ ಆ ಬಳಿಕ ಒಂದು ಚರಾಕ್ಷರವು ವರ್ಜಿಸಲ್ಪಡುವಂತೆ ಒಂದು ಸಮೀಕರಣಕ್ಕೆ ಮತ್ತೊಂದನ್ನು ಕೂಡಿಸಿ ಅಥವಾ ಕಳೆಯಿರಿ. ಯಾವುದೇ ಚರಾಕ್ಷರಗಳಿಲ್ಲದ ಒಂದು ನೈಜ ಹೇಳಿಕೆ ನಮಗೆ ದೊರೆತರೆ ಆಗ ಸಮೀಕರಣಗಳ ಮೂಲ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಾಗಿರುತ್ತವೆ. ಒಂದು ಅಸಂಬದ್ಧ ಹೇಳಿಕೆ ನಮಗೆ ದೊರೆತರೆ ಆಗ ಸಮೀಕರಣಗಳ ಮೂಲ ಜೋಡಿಗೆ ಯಾವುದೇ ಪರಿಹಾರವಿಲ್ಲ. ಅಂದರೆ ಅಸ್ಥಿರ ಹೀಗೆ ದೊರೆತ ಒಂದು ಚರಾಕ್ಷರದ (x or y) ಸಮೀಕರಣವನ್ನು ಬಿಡಿಸಿ ಅದರ ಬೆಲೆ ಕಂಡುಹಿಡಿಯಿರಿ. ಈಗ ಒಂದರ ಬೆಲೆಯನ್ನು ಮೂಲ ಸಮೀಕರಣವೊಂದರಲ್ಲಿ ಆದೇಶಿಸಿ ಇನ್ನೊಂದು ಚರಾಕ್ಷರದ ಬೆಲೆಯನ್ನು ಪಡೆಯಿರಿ.

ಉದಾಹರಣೆ:

$$2x + 3y = 8, 4x + 6y = 7$$

ಈ ರೇಖಾತ್ಮಕ ಸಮೀಕರಣಗಳ ಜೋಡಿಗೆ ಸಾಧ್ಯವಿರುವ ಎಲ್ಲಾ ಪರಿಹಾರಗಳನ್ನು ಕಂಡುಹಿಡಿಯಿರಿ.

ಹಂತ 1: ಸಮೀಕರಣಗಳ ಸಹಗಣಗಳನ್ನು ಸಮಗೊಳಿಸುವುದು.

2x + 3y = 8x2
4x + 6y = 7x1

ಈಗ ನಮಗೆ ಸಿಗುವ ಸಮೀಕರಣಗಳು

4x + 6y = 8x2
4x + 6y + 7x1

ಹಂತ 2: ಸಮೀಕರಣಗಳನ್ನು ಕಳೆದಾಗ

4x-4x + 6y-6y = 16-7
0 = 9

ಇದು ಅಸಂಬದ್ಧ ಹೇಳಿಕೆ ಆದ್ದರಿಂದ ಸಮೀಕರಣಗಳ ಜೋಡಿಗೆ ಪರಿಹಾರವಿಲ್ಲ.

ಉದಾಹರಣೆ: ಎರಡಂಕೆಗಳ ಒಂದು ಸಂಖ್ಯೆಗೆ ಅದರ ಅಂಕೆಗಳನ್ನು ಪರಸ್ಪರ ಬದಲಾಯಿಸಿದಾಗ ಸಿಗುವ ಇನ್ನೊಂದು ಸಂಖ್ಯೆಯನ್ನು ಕೂಡಿದಾಗ ದೊರೆಯುವ ಮೊತ್ತ 66. ಆ ಸಂಖ್ಯೆಗಳ ಅಂಕೆಗಳಿರುವ ವ್ಯತ್ಯಾಸವು ಆಗಿದ್ದರೆ ಆ ಸಂಖ್ಯೆಯನ್ನು ಕಂಡು ಹಿಡಿಯಿರಿ.

ಪರಿಹಾರ: ಮೊದಲನೇ ಸಂಖ್ಯೆಯಲ್ಲಿ ಹತ್ತರ ಸ್ಥಾನ ಮತ್ತು ಬಿಡಿ ಸ್ಥಾನದಲ್ಲಿರುವ ಅಂಕೆಗಳು ಕ್ರಮವಾಗಿ x ಮತ್ತು y ಎಂದಿರಲಿ. ಆದ್ದರಿಂದ ಮೊದಲನೇ ಸಂಖ್ಯೆಯನ್ನು ವಿಸ್ತಾರ ರೂಪದಲ್ಲಿ 10 + y ಎಂದು ಬರೆಯಬಹುದು.

ಅಂಕೆಗಳನ್ನು ಅದಲು ಬದಲು ಮಾಡಿದಾಗ x ಬಿಡಿ ಸ್ಥಾನದ ಅಂಕೆಯಾಗುತ್ತದೆ. ಮತ್ತು y ಹತ್ತರ ಸ್ಥಾನದ ಅಂಕೆಯಾಗುತ್ತದೆ. ಈ ಸಂಖ್ಯೆಯ ವಿಸ್ತಾರ ರೂಪದಲ್ಲಿ 10 y + x ಆಗುತ್ತದೆ.

ದತ್ತ ಅನುಸಾರವಾಗಿ

(10x + y) + (10x + y) = 66
11 (x + y) = 66
x + y = 6.....(1)

ಅಂಕೆಗಳ ನಡುವೆ ವ್ಯತ್ಯಾಸವು 2 ಎನ್ನಲಾಗಿದೆ

ಆದ್ದರಿಂದ

x-y = 2....(2)

ವರ್ಜಿಸುವ ವಿಧಾನದಿಂದ ಬಿಡಿಸಿದಾಗ

x + y + x-y = 6 + 2
2x = 8
x = 4, y = 2

ಸಿಗುತ್ತದೆ.

ಇಲ್ಲಿ ಸಿಗುವ ಸಂಖ್ಯೆಯ 42

ಮತ್ತೆ ವರ್ಜಿಸುವ ವಿಧಾನದಿಂದ ಬಿಡಿಸಿದಾಗ x + y + y-x = 6 + 2 ಆದರೆ 2y = 8 y = 4, x = 2 ಆಗುತ್ತದೆ.

ಇಲ್ಲಿ ಸಿಗುವ ಸಂಖ್ಯೆಯು 24

ಆ ಸಂಖ್ಯೆಗಳು 24 ಮತ್ತು 42 ಆಗುತ್ತದೆ.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಜೀವಶಾಸ್ತ್ರ ವಿಭಾಗದ 'ಹೆರಿಡಿಟಿ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/3eBMYa3

ಮಾತೃಕೆಯ ಪರಿವರ್ತಿತ

(ಮುಂದುವರಿದ ಭಾಗ)

ಗಣಿತ

ದ್ವಿತೀಯ ಪಿಯುಸಿ

ಪರಿಹಾರ: ಇಲ್ಲಿ $B' = \begin{bmatrix} 2 & -1 & 1 \\ -2 & 3 & -2 \\ -4 & 4 & -3 \end{bmatrix}$

$$P = {}^1/_2\,(B + B') = {}^1/_2 \begin{bmatrix} 2 & -3 & -3 \\ -3 & 6 & 2 \\ -3 & 2 & -6 \end{bmatrix}$$

$$= \begin{bmatrix} 2 & -{}^3/_2 & -{}^3/_2 \\ -{}^3/_2 & 3 & 1 \\ -{}^3/_2 & 1 & -3 \end{bmatrix}$$

$P = P'$ ಆಗುವುದು, ಆದ್ದರಿಂದ

$P = \frac{1}{2}(B + B')$ ಸಮಾಂಗ ಮಾತೃಕೆ

$$Q = \frac{1}{2}(B - B') = \frac{1}{2}\begin{bmatrix} 0 & -1 & -5 \\ 1 & 0 & 6 \\ 5 & -6 & 0 \end{bmatrix}$$

$$Q = \begin{bmatrix} 0 & {}^1/_2 & {}^5/_2 \\ -{}^1/_2 & 0 & -3 \\ -{}^5/_2 & 3 & 0 \end{bmatrix}$$

Q' = - Q ಆಗುವುದು, ಆದ್ದರಿಂದ

$$Q = \frac{1}{2}(B - B')$$

ಅಸಮಾಂಗ ಮಾತೃಕೆಯಾಗಿರುತ್ತದೆ.

$$P + Q = \begin{bmatrix} 2 & -{}^3/_2 & -{}^3/_2 \\ -{}^3/_2 & 3 & 1 \\ -{}^3/_2 & 1 & -3 \end{bmatrix} + \begin{bmatrix} 0 & {}^1/_2 & -{}^5/_2 \\ {}^1/_2 & 0 & 3 \\ -{}^5/_2 & -3 & 0 \end{bmatrix}$$

$$= \begin{bmatrix} 2 & -2 & -4 \\ -1 & 3 & 4 \\ 1 & -2 & -3 \end{bmatrix}$$

ಪ್ರತಿಲೋಮವನ್ನು ಹೊಂದಿರುವ ಮಾತೃಕೆಗಳು

A ಒಂದು m ದರ್ಜೆಯ ವರ್ಗ ಮಾತೃಕೆಯಾಗಿದ್ದು, AB = BA = I ಆಗುವಂತೆ ಅದೇ m ದರ್ಜೆಯ ಮಾತೃಕೆ B ಅಸ್ತಿತ್ವದಲ್ಲಿದ್ದರೆ B ಯನ್ನು Aನ ಪ್ರತಿಲೋಮ ಮಾತೃಕೆ ಎಂದು ಕರೆಯುತ್ತೇವೆ.

B ಯು A ನ ಪ್ರತಿಲೋಮ ಅಥವಾ B = A-1 ಮತ್ತು A ಯು B ನ ಪ್ರತಿಲೋಮ ಅಥವಾ A = b-1 ವರ್ಗ ಮಾತೃಕೆಯ ಪ್ರತಿಲೋಮ ಅಸ್ತಿತ್ವದಲ್ಲಿದ್ದರೆ ಅದು ಏಕೈಕವಾಗಿರುತ್ತದೆ. A ಮತ್ತು B ಮಾತೃಕೆಗಳು ಒಂದೇ ದರ್ಜೆಯ ಪ್ರತಿಲೋಮ ಹೊಂದಿರುವ ಮಾತೃಕೆಗಳಾದರೆ ಆಗ (AB)-1 = B-1 A-1 ಆಗುತ್ತದೆ.

ಉದಾಹರಣೆ: $A = \begin{bmatrix} 2 & 3 \\ 1 & 2 \end{bmatrix}$ ಮತ್ತು

$$B = \begin{bmatrix} 2 & -3 \\ -1 & 2 \end{bmatrix}$$

ಎರಡು ಮಾತೃಕೆಗಳಾಗಿರಲಿ

$$A = \begin{bmatrix} 2 & 3 \\ 1 & 2 \end{bmatrix} \begin{bmatrix} 2 & -3 \\ -1 & 2 \end{bmatrix}$$

$$AB = \begin{bmatrix} 4-3 & -6+6 \\ 2-2 & -3+4 \end{bmatrix}, \begin{bmatrix} 1 & 0 \\ 0 & 1 \end{bmatrix} = R$$

ಹಾಗೆಯೇ $BA = \begin{bmatrix} 1 & 0 \\ 0 & 1 \end{bmatrix} = I$

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಆಟಂ: ಎಮಿಷನ್ ಸ್ಪೆಕ್ಟ್ರಮ್ ಆಫ್ ಹೈಡ್ರೋಜನ್ ಆಟಂ' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/30JxVmh

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಿ. ಅದರಿಂದ ತಾನೇತಾನಾಗಿ ಮನಸ್ಸು ಆಹ್ಲಾದಕರವಾಗಿ ಇರುತ್ತದೆ ಮತ್ತು ಚೈತನ್ಯ ಪುಟಿಯುತ್ತದೆ.

–ಬಿ.ಕೆ.ಎಸ್. ಅಯ್ಯಂಗಾರ್

ಸ್ಮಶಾನದ ಕೊರತೆ ನೀಗಲು ತುರ್ತು ಸ್ಪಂದನ ಬೇಕಿದೆ

2011ರ ಜನಗಣತಿ ಪ್ರಕಾರ, ರಾಜ್ಯದಲ್ಲಿ 29,340 ಗ್ರಾಮಗಳಿವೆ. ಈ ಪೈಕಿ 7,069 ಗ್ರಾಮಗಳಲ್ಲಿ ಅಂತ್ಯಸಂಸ್ಕಾರಕ್ಕೆ ಅಧಿಕೃತವಾಗಿ ಕಾಯ್ದಿರಿಸಿದ ಸ್ಮಶಾನದ ಸೌಲಭ್ಯವೇ ಇಲ್ಲ ಎಂದು ರಾಜ್ಯ ಸರ್ಕಾರವು ವಿಧಾನ ಪರಿಷತ್‌ಗೆ ತಿಳಿಸಿದೆ. ಸ್ಮಶಾನದ ಕೊರತೆ ಹೊಸ ಸಮಸ್ಯೆಯೇನೂ ಅಲ್ಲ. ಕೆಲವು ಗ್ರಾಮಗಳ ಜನರು ದಶಕಗಳಿಂದಲೂ ಸ್ಮಶಾನಕ್ಕಾಗಿ ಹೋರಾಟ ನಡೆಸುತ್ತಲೇ ಇದ್ದಾರೆ. 'ವ್ಯಕ್ತಿಯೊಬ್ಬ ಮೃತಪಟ್ಟಾಗ ಗೌರವಯುತ ಅಂತ್ಯಸಂಸ್ಕಾರಕ್ಕೆ ಅವಕಾಶ ದೊರಕಿಸುವುದು ಕೂಡ ಮೂಲಭೂತ ಹಕ್ಕುಗಳ ವ್ಯಾಪ್ತಿಗೆ ಸೇರುತ್ತದೆ' ಎಂದು ನ್ಯಾಯಾಲಯಗಳು ಹಲವು ಬಾರಿ ಹೇಳಿವೆ. ಸ್ಮಶಾನದ ಕೊರತೆಯು ರಾಜ್ಯದ ಗ್ರಾಮೀಣ ಪ್ರದೇಶದ ಜನರು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ. ಜಮೀನು ಹೊಂದಿರುವ ಕುಟುಂಬಗಳು ಅನಿವಾರ್ಯವಾಗಿ ತಮ್ಮ ಜಮೀನಿನಲ್ಲೇ ಅಂತ್ಯಕ್ರಿಯೆ ನೆರವೇರಿಸುತ್ತವೆ. ಆದರೆ, ಸಾರ್ವಜನಿಕ ಸ್ಮಶಾನಗಳೇ ಇಲ್ಲದ ಹಳ್ಳಿಗಳಲ್ಲಿ ಭೂರಹಿತ ಕುಟುಂಬಗಳಲ್ಲಿ ಸಾವು ಸಂಭವಿಸಿದಾಗ ಆ ಕುಟುಂಬಗಳು ಅನುಭವಿಸುವ ಪಡಿಪಾಟಲು ಹೇಳತೀರದು. ಈ ವಿಚಾರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲೆಮಾರಿ ಸಮುದಾಯಗಳ ಸ್ಥಿತಿ ಇನ್ನೂ ಶೋಚನೀಯ. ಸಾರ್ವಜನಿಕ ಸ್ಮಶಾನಗಳನ್ನು ಹೊಂದಿರುವ ಹಳ್ಳಿಗಳಲ್ಲೂ ಸಮಸ್ಯೆಗಳಿಗೆ ಕೊನೆ ಇಲ್ಲ. ಹಲವೆಡೆ ಬಲಾಢ್ಯರು ಸ್ಮಶಾನದ ಜಮೀನುಗಳನ್ನೇ ಒತ್ತುವರಿ ಮಾಡಿಕೊಂಡಿರುವ ಉದಾಹರಣೆಗಳಿವೆ. ಸ್ಮಶಾನಗಳನ್ನು ಎಲ್ಲರೂ ಮುಕ್ತವಾಗಿ ಬಳಸಲು ಅವಕಾಶ ಇಲ್ಲದಂತಹ ಸ್ಥಿತಿ ಕೆಲವು ಹಳ್ಳಿಗಳಲ್ಲಿ ಈಗಲೂ ಇದೆ. ಸ್ಮಶಾನಗಳ ಕೊರತೆ ಸಮಸ್ಯೆಯ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ, ತಾಲ್ಲೂಕು ಕಚೇರಿಗಳ ಮುಂದೆ ಧರಣಿ ನಡೆಸುವುದು ಸಾಮಾನ್ಯ ಸಂಗತಿಯಾಗಿದೆ. ಇದೇ ಉದ್ದೇಶದಿಂದ ಚುನಾವಣಾ ಬಹಿಷ್ಕಾರ, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಘೇರಾವ್ ಹಾಕುವ ಪ್ರಕರಣಗಳು ಆಗಾಗ ನಡೆಯುತ್ತಲೇ ಇವೆ. ಆದರೆ, ಪ್ರತಿಫಲ ದೊರೆತದ್ದು ಕಡಿಮೆ. ಇದೇ ವಿಷಯ ಹಳ್ಳಿಗಳಲ್ಲಿ ಆಗಾಗ ಸಂಘರ್ಷಕ್ಕೂ ಎಡೆಮಾಡುತ್ತಿದೆ. ರೋಸಿ ಹೋದ ಜನರು ಮೃತದೇಹಗಳನ್ನು ಇರಿಸಿಕೊಂಡೇ ಧರಣಿ ನಡೆಸುವುದು, ರಸ್ತೆಯ ಬದಿಗಳಲ್ಲೇ ಅಂತ್ಯಸಂಸ್ಕಾರ ನಡೆಸುವ ಮೂಲಕ ಆಕ್ರೋಶ ಹೊರಹಾಕುವುದೂ ನಡೆಯುತ್ತಿದೆ.

ಪ್ರತೀ ಹಳ್ಳಿಗೆ ಕನಿಷ್ಠ ಒಂದಾದರೂ ಸಾರ್ವಜನಿಕ ಸ್ಮಶಾನವನ್ನು ಒದಗಿಸುವ ಕೆಲಸವನ್ನು ಸರ್ಕಾರ ತಡಮಾಡದೇ ಕಾರ್ಯರೂಪಕ್ಕೆ ತರಬೇಕಿದೆ

ಎಲ್ಲ ಹಳ್ಳಿಗಳು, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಸ್ಮಶಾನಗಳನ್ನು ಒದಗಿಸುವ ದಿಸೆಯಲ್ಲಿ ರಾಜ್ಯ ಸರ್ಕಾರದಿಂದ ಆಗಾಗ ಆದೇಶ, ಸುತ್ತೋಲೆಗಳು ಹೊರಬೀಳುತ್ತಲೇ ಇವೆ. ಪ್ರತೀ ವ್ಯಕ್ತಿಯ ಅಂತ್ಯಸಂಸ್ಕಾರಕ್ಕೆ 60 ಚದರ ಅಡಿಗಳಷ್ಟು ಜಾಗವನ್ನು ಕಾಯ್ದಿರಿಸಬೇಕು ಎಂದು ರಾಜ್ಯ ಸರ್ಕಾರವು 2014ರ ನವೆಂಬರ್ 11ರಂದು ಅಧಿಸೂಚನೆ ಹೊರಡಿಸಿತ್ತು. ಆದರೆ, ನಿರೀಕ್ಷಿತ ಪ್ರಗತಿ ಕಾಣದ ಕಾರಣದಿಂದ 2019ರಲ್ಲಿ ಮತ್ತೊಮ್ಮೆ ಸುತ್ತೋಲೆಯೊಂದನ್ನು ಹೊರಡಿಸಿದ್ದ ಕಂದಾಯ ಇಲಾಖೆ, 'ಕರ್ನಾಟಕ ಭೂ ಕಂದಾಯ ಕಾಯ್ದೆಯ ಸೆಕ್ಷನ್ 71'ರ ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಬಳಸಿ ಸ್ಮಶಾನಕ್ಕಾಗಿ ಜಮೀನು ಕಾಯ್ದಿರಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್‌ಗಳಿಗೆ ನಿರ್ದೇಶನ ನೀಡಿತ್ತು. ಮಾರ್ಗಸೂಚಿ ದರದ ಮೂರು ಪಟ್ಟು ದರ ನೀಡಿ ಸ್ಮಶಾನಕ್ಕಾಗಿ ಜಮೀನು ಖರೀದಿಸುವುದಕ್ಕೂ ಈ ಸುತ್ತೋಲೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಅನಿವಾರ್ಯ ಆದಲ್ಲಿ ಧರ್ಮಾಧಾರಿತ ಸ್ಮಶಾನಗಳ ನಿರ್ಮಾಣಕ್ಕೂ ಒಪ್ಪಿಗೆ ನೀಡಲಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗಾಗಿ ಸ್ಮಶಾನ ಒದಗಿಸಲು ಅಗತ್ಯ ಇರುವ ಕಡೆಗಳಲ್ಲಿ ಜಮೀನು ಖರೀದಿಸಲು ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಯ ಅನುದಾನ ಬಳಕೆ ಮಾಡಲು ಅವಕಾಶ ಕಲ್ಪಿಸಿ 2015ರ ಅಕ್ಟೋಬರ್‌ನಲ್ಲಿ ಆದೇಶ ಹೊರಡಿಸಲಾಗಿತ್ತು. ಇಷ್ಟೆಲ್ಲ ನಿರ್ಧಾರಗಳನ್ನು ಕೈಗೊಂಡಿದ್ದರೂ ರಾಜ್ಯದ 7,069 ಗ್ರಾಮಗಳಲ್ಲಿ ಇನ್ನೂ ಸಾರ್ವಜನಿಕ ಸ್ಮಶಾನ ಇಲ್ಲ ಎಂಬ ಸಂಗತಿಯು ಜನರ ಸಮಸ್ಯೆಗಳಿಗೆ ಸ್ಪಂದಿಸುವ ವಿಚಾರದಲ್ಲಿ ಆಡಳಿತ ವ್ಯವಸ್ಥೆಯ ಬದ್ಧತೆ ಹಾಗೂ ಕಾರ್ಯನಿರ್ವಹಣೆಗೆ ಕನ್ನಡಿ ಹಿಡಿಯುವಂತಿದೆ. ರಾಜ್ಯ ಮಟ್ಟದಲ್ಲಿ ಆದೇಶ, ಸುತ್ತೋಲೆ ಹೊರಡಿಸಿ, ಅನುದಾನ ಒದಗಿಸಿದರೂ ಕೆಳಹಂತದ ಅಧಿಕಾರಿಗಳು ಸ್ಮಶಾನಕ್ಕೆ ಜಮೀನು ಕಾಯ್ದಿರಿಸುವ ವಿಚಾರದಲ್ಲಿ ಮುತುವರ್ಜಿ ವಹಿಸುತ್ತಿಲ್ಲ ಎಂಬುದನ್ನು ಈ ಅಂಕಿಅಂಶಗಳು ರುಜುವಾತುಪಡಿಸುವಂತಿವೆ. ಎಲ್ಲ ಗ್ರಾಮಗಳಿಗೆ ಸ್ಮಶಾನಗಳನ್ನು ಒದಗಿಸುವ ವಿಚಾರದಲ್ಲಿ ಸರ್ಕಾರದ ನಿರ್ಲಕ್ಷ್ಯ ಧೋರಣೆ ಸಮರ್ಥನೀಯವಲ್ಲ. ಪ್ರತೀ ಹಳ್ಳಿಗೆ ಕನಿಷ್ಠ ಒಂದಾದರೂ ಸಾರ್ವಜನಿಕ ಸ್ಮಶಾನವನ್ನು ಒದಗಿಸುವ ಕೆಲಸವನ್ನು ಸರ್ಕಾರ ತಡಮಾಡದೇ ಕಾರ್ಯರೂಪಕ್ಕೆ ತರಬೇಕಿದೆ. ಆ ಮೂಲಕ ಮೃತ ವ್ಯಕ್ತಿಗಳಿಗೆ ಗೌರವಪೂರ್ಣ ವಿದಾಯ ಹೇಳಲು ಅವಕಾಶ ಕಲ್ಪಿಸುವ ಗುರುತರವಾದ ಹೊಣೆಗಾರಿಕೆ ಸರ್ಕಾರದ ಮೇಲಿದೆ.

ರೈತರು ಮತ್ತು ಗ್ರಾಹಕರ ಹಿತದೃಷ್ಟಿಗಿಂತ ಹೂಡಿಕೆಗಳೇ ಪ್ರಾಮುಖ್ಯ ಪಡೆಯಬೇಕೇ?

ದಾಸ್ತಾನು ನಿಯಂತ್ರಣ: ಗಮ್ಮತ್ತಿನ ತಿದ್ದುಪಡಿ

ವಿಶ್ಲೇಷಣೆ

ಎಂ.ಎಸ್.ಶ್ರೀರಾಮ್

ಕೃಷಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ತಂದಿರುವ ಮೂರು ಕಾಯ್ದೆಗಳ ಪೈಕಿ ಒಂದು ನಿಜಕ್ಕೂ ಹೊಸ ಕಾಯ್ದೆಯಲ್ಲ. ಬದಲಿಗೆ 1955ರಿಂದ ಇರುವ ಅತ್ಯವಶ್ಯಕ ವಸ್ತುಗಳ ಕಾಯ್ದೆಯ ತಿದ್ದುಪಡಿಯಷ್ಟೇ. ಸರ್ಕಾರ ಮಾಡಿರುವ ತಿದ್ದುಪಡಿ ಗಮ್ಮತ್ತಿನದ್ದು. ಸಂವಿಧಾನದ 370ನೇ ಕಲಮನ್ನೇ ಉಪಯೋಗಿಸಿ ಅದನ್ನೇ ನಿರ್ವೀರ್ಯಗೊಳಿಸಿದ ಸ್ವ-ವಿನಾಶಕಾರಿ ತಿದ್ದುಪಡಿಯಂತೆ, ಈ ತಿದ್ದುಪಡಿಯೂ ಅತ್ಯವಶ್ಯಕ ವಸ್ತುಗಳ ಕಾನೂನನ್ನು ನಿರ್ವೀರ್ಯಗೊಳಿಸುತ್ತದೆ.

ಮೂಲ ಕಾನೂನನ್ನೇ ರದ್ದುಪಡಿಸಬಹುದಾದ ಸಾಧ್ಯತೆಯನ್ನು ಸರ್ಕಾರ ಪರಿಗಣಿಸದೇ ಇರುವುದು ಆಶ್ಚರ್ಯದ ಮಾತು. ಆದರೆ ಈ ನಿರ್ವೀರ್ಯಗೊಳಿಸುವ ಪ್ರಕ್ರಿಯೆಯಲ್ಲೂ ಒಂದು ನ್ಯೂಕ್ಲಿಯರ್ ಬಟನ್– ಅತಿ ಅಸಾಮಾನ್ಯ ಪರಿಸ್ಥಿತಿಯಲ್ಲಿ ಅತ್ಯವಶ್ಯಕ ವಸ್ತುಗಳ ದಾಸ್ತಾನು- ಸಾಗಣೆಯನ್ನು ನಿಯಂತ್ರಿಸುವ ಸಾಧ್ಯತೆಯನ್ನು ಸರ್ಕಾರ ತನ್ನ ಕೈಯಲ್ಲಿಟ್ಟುಕೊಂಡಿದೆ. ಆದರೆ ಈ ಅತಿ ಅಸಾಮಾನ್ಯ ಸಂದರ್ಭದಲ್ಲೂ ಮಾರುಕಟ್ಟೆಯ ಸರಪಳಿಯಲ್ಲಿ ಭಾಗಿಗಳಾಗಿರುವ ವ್ಯಾಪಾರಿಗಳಲ್ಲದವರಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ. ಈ ಬದಲಾವಣೆಯಿಂದ ರೈತರಿಗೆ ಮಾರಾಟ ಪ್ರಕ್ರಿಯೆಯಲ್ಲಿ ಅಥವಾ ಗ್ರಾಹಕರಿಗೆ ಅವರ ಖರೀದಿ ಮತ್ತು ಅದಕ್ಕೆ ಪಾವತಿಸುವ ಬೆಲೆಯ ವಿಷಯದಲ್ಲಿ ಒಂದು ಮುಕ್ತಿಯನ್ನು ಸರ್ಕಾರ ಕೊಟ್ಟಿದೆಯೇ?

ಮುಕ್ತ ಸಾಗಣೆಯಿಂದಾಗಿ ಅನಿಯಮಿತ ದಾಸ್ತಾನು ಮಾಡುವ ಸಾಧ್ಯತೆಯಿಂದಾಗಿ ಹೆಚ್ಚಿನ ದಾಸ್ತಾನು, ಶೀತಲೀಕರಣ ಕೇಂದ್ರಗಳ ನಿರ್ಮಾಣಕ್ಕೆ ಖಾಸಗಿ ಹೂಡಿಕೆಗಳು ಬರುವ ಒಟ್ಟಾರೆ ಸಂದರ್ಭ ನಿರ್ಮಾಣವಾಗಿದೆಯೇ? ಇವುಗಳು ಯಕ್ಷಪ್ರಶ್ನೆಗಳಾಗಿಯೇ ಉಳಿಯುತ್ತವೆ. ಒಟ್ಟಾರೆ ರೈತರು ಮತ್ತು ಗ್ರಾಹಕರ ಹಿತದೃಷ್ಟಿಗಿಂತ ಹೂಡಿಕೆಗಳೇ ಪ್ರಾಮುಖ್ಯವನ್ನು ಪಡೆಯಬೇಕೇ ಎನ್ನುವ ಪ್ರಶ್ನೆಯೂ ಇದೆ. ಮಾರುಕಟ್ಟೆಗಳ ಆಧುನೀಕರಣದತ್ತ ಸರ್ಕಾರ ಗಮನಹರಿಸಿದರೆ, ರೈತರು- ಗ್ರಾಹಕರ ಹಿತವನ್ನು ಕಾಪಾಡುವ ಜನಪರ ನಿಯಮಾವಳಿಯನ್ನು ಕಾನೂನಿನಲ್ಲಿ ಸೇರಿಸಬೇಕಾಗಬಹುದು. ಈಗ ಮಾಡಿರುವ ಬದಲಾವಣೆಯಿಂದಾಗಿ ವ್ಯಾಪಾರಿಗಳಿಗೆ ಮಾತ್ರ ಲಾಭವಾಗುತ್ತದೆ.

ದೇಶದ ಅತ್ಯಧಿಕ ಜನರ ದೈನಂದಿನ ಆಹಾರಕ್ಕೆ ಬೇಕಾದ ಅತ್ಯವಶ್ಯಕ ವಸ್ತುಗಳನ್ನು ಈ ಕಾನೂನು ಗುರುತಿಸಿದೆ. ಅಕ್ಕಿ, ಬೇಳೆ, ಗೋಧಿ, ಎಣ್ಣೆ, ಸಕ್ಕರೆ, ಈರುಳ್ಳಿ, ಆಲೂಗಡ್ಡೆಯಂತಹ ವಸ್ತುಗಳ ದಾಸ್ತಾನು ಮತ್ತು ಸಾಗಣೆಯ ಮೇಲಿನ ನಿಯಂತ್ರಣವನ್ನು ಕಿತ್ತೊಗೆದಾಗ ವ್ಯಾಪಾರಿಗಳ ಕೈಯಲ್ಲಿ ಅನಿಯಮಿತ ದಾಸ್ತಾನನ್ನಿರಿಸಿ ಮಾರುಕಟ್ಟೆಯ ಬೆಲೆಗಳನ್ನು ನಿಯಂತ್ರಿಸುವುದಕ್ಕೆ ಸರ್ಕಾರ ಅನುವು ಮಾಡಿಕೊಡುತ್ತಿದೆ. ಹೀಗಾಗಿ ಕಟಾವಿನ ಕಾಲಕ್ಕೆ ದಾಸ್ತಾನನ್ನು ಮಾರುಕಟ್ಟೆಗೆ ಬಿಟ್ಟು ಖರೀದಿಯ ದರಗಳನ್ನೂ ಮಿಕ್ಕ ಸಮಯದಲ್ಲಿ ಮಾರುಕಟ್ಟೆಗೆ ಸರಬರಾಜು ಮಾಡುತ್ತಿರುವ ಉತ್ಪನ್ನಗಳ ಪ್ರಮಾಣವನ್ನು ನಿಯಂತ್ರಿಸಿ ಬೆಲೆಗಳನ್ನು ಹೆಚ್ಚಿಸಿ ಗ್ರಾಹಕರಿಂದಲೂ ಲಾಭ ಪಡೆಯುವ ಸಾಧ್ಯತೆ ವ್ಯಾಪಾರಿಗಳಿಗೆ ಇರುತ್ತದೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ಅತ್ಯವಶ್ಯಕ ಅಲ್ಲದ ವಸ್ತುಗಳ ವಿಷಯದಲ್ಲಿ ಮಾರುಕಟ್ಟೆಯ ಬೇಡಿಕೆ- ಸರಬರಾಜಿನ ಸಮತೋಲನವು ಬೆಲೆಗಳಲ್ಲಿ ಕಾಣಿಸುತ್ತದೆ. ಆದರೆ ಈ ಉತ್ಪನ್ನಗಳು ಪ್ರತಿದಿನದ ಅತ್ಯವಶ್ಯಕ ವಸ್ತುಗಳಾದ್ದರಿಂದ ಮಾರುಕಟ್ಟೆಯೇ ಇದಕ್ಕೆ ಸಮತೋಲನ ಒದಗಿಸುತ್ತದೆ ಎಂದು ನಂಬುವುದು ಸರಿಯಲ್ಲ. ಹೀಗಾಗಿ ಒಂದು ಬಲವಾದ ನಿಯಂತ್ರಣಾ ಚೌಕಟ್ಟು ಅತ್ಯವಶ್ಯಕವಾಗಿದೆ.

ಸದರಿ ಕಾಯ್ದೆಯು ಮಾರುಕಟ್ಟೆಯ ಸ್ಥಿರತೆಯನ್ನು ಏರುಪೇರು ಮಾಡುತ್ತದೆ. ಸಾಂಪ್ರದಾಯಿಕವಾಗಿ ಈ ವ್ಯವಹಾರದ ಸರಣಿಯನ್ನು ಪರಿಶೀಲಿಸಿದರೆ, ದಾಸ್ತಾನು ಮಾಡುವ ಗೋದಾಮು ಮತ್ತು ಗೋದಾಮಿನಲ್ಲಿರುವ ಮಾಲಿನ ಮಾಲೀಕತ್ವ ಎರಡೂ ಒಬ್ಬರಲ್ಲೇ ಇರುತ್ತವೆ. ಸೈಲೋಗಳಂತಹ ಆಧುನಿಕ ದಾಸ್ತಾನು ಸವಲತ್ತುಗಳನ್ನು ಕಟ್ಟಲು ಹೆಚ್ಚಿನ ಹೂಡಿಕೆ ಬೇಕು. ಈ ಮೂಲಸೌಕರ್ಯದ ಹೂಡಿಕೆ ನಿಜಕ್ಕೂ ಸರ್ಕಾರಿ ಕ್ಷೇತ್ರದಲ್ಲಿ ಬರಬೇಕು. ಆದರೆ ಸರ್ಕಾರದ ಆರ್ಥಿಕತೆಯನ್ನು ಗಮನಿಸಿದಾಗ, ಅದಕ್ಕಾಗಿ ಕಾಯುತ್ತ ಕುಳಿತರೆ ನಮ್ಮ ಮೂಲಸೌಕರ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ. ಖಾಸಗಿ ಕ್ಷೇತ್ರದಿಂದಲೂ ಹೂಡಿಕೆಗಳು ಬರಬಹುದು.

ದಾಸ್ತಾನು ಕೇಂದ್ರಗಳಲ್ಲಿ ಇಡಬಹುದಾದ ಮಾಲನ್ನು ಖರೀದಿಸಲೂ ಸಾಕಷ್ಟು ದುಡ್ಡಿರಬೇಕು. ಸೈಲೋ ಅಥವಾ ಆಧುನಿಕ ಗೋದಾಮು, ಅದರಲ್ಲಿನ ಮಾಲು ಎರಡರ ಮಾಲೀಕತ್ವವೂ ಒಂದೇ ಸಂಸ್ಥೆಯಲ್ಲಿರಬಹುದು ಅಥವಾ ಗೋದಾಮು ಮಾಲೀಕರಿಂದ ಈ ವ್ಯವಸ್ಥೆಯನ್ನು ಬಾಡಿಗೆಗಾಗಿ ವ್ಯಾಪಾರಿಗಳು ಪಡೆದಿರಬಹುದು. ಯಾವುದೇನೇ ಆದರೂ ಈ ವ್ಯವಸ್ಥೆಯಿಂದ ದಾಸ್ತಾನು ಮತ್ತು ಮಾಲಿನ ನಿರ್ವಹಣೆ ಹೂಡಿಕೆಯಿಟ್ಟವರಲ್ಲಿ ಕೇಂದ್ರೀಕೃತವಾಗುತ್ತದೆ. ಇದನ್ನು ನಾವು ಅರ್ಥ ಮಾಡಿಕೊಂಡರೆ ಈ ಕಾನೂನಿನ ತಿದ್ದುಪಡಿಯ ಉದ್ದೇಶವು- ದಾಸ್ತಾನು ಮತ್ತು ನಿರ್ವಹಣೆಯನ್ನು ಸರ್ಕಾರದ ವ್ಯಾಪ್ತಿಯ ಹೊರಗಡೆಗೆ ವರ್ಗಾಯಿಸುವುದೇ ಆಗಿದೆ ಎನ್ನುವುದು ಮನವರಿಕೆಯಾಗುತ್ತದೆ. ಖಾಸಗಿ ಕ್ಷೇತ್ರದಲ್ಲಿ ಮಾಡುತ್ತಿರುವ ಈ ದಾಸ್ತಾನು ಆಪತ್ಕಾಲಕ್ಕಾಗಿ ಅಥವಾ ಸಾರ್ವಜನಿಕ ವಿತರಣೆಗಾಗಿ ಮಾಡುತ್ತಿರುವ ದಾಸ್ತಾನಲ್ಲ ಎನ್ನುವುದನ್ನು ಗಮನಿಸಬೇಕು.

ಕೇಂದ್ರೀಕೃತ ದಾಸ್ತಾನಿನ ಸವಲತ್ತಿನಲ್ಲಿರುವ ಉತ್ಪನ್ನವು ವಿಕೇಂದ್ರೀಕೃತ ಮಾಲೀಕತ್ವದೊಂದಿಗೆ ಇರುವುದು ಸಾಧ್ಯವೇ? ವೇರ್‌ಹೌಸ್ ರಸೀತಿ ಎನ್ನುವ ಕಾಗದದ ಪರಿಕರದ ಮೂಲಕ ಇದನ್ನು ಸಾಧಿಸಬಹುದು.



ಎಲೆಕ್ಟ್ರಾನಿಕ್ ವಿನಿಮಯ ಕೇಂದ್ರಗಳಲ್ಲಿ ಇದನ್ನು ನಾವು ವ್ಯವಹಾರಕ್ಕೂ ಒಡ್ಡಬಹುದು. ಹೀಗಾದರೂ ಈ ಪತ್ರಗಳ ವಿಕೇಂದ್ರೀಕೃತ ಮಾಲೀಕತ್ವವು ರೈತರ ಬಳಿ ಇರುವ ಸಾಧ್ಯತೆ ತೀರಾ ಕಡಿಮೆ. ಇದಕ್ಕೆ ಕಾರಣ– ಮುಂದಿನ ಬೆಳೆಗಾಗಿ ರೈತರಿಗೆ ತಕ್ಷಣ ದುಡ್ಡಿನ ಅವಶ್ಯಕತೆಯಿರುತ್ತದೆ. ಹೀಗಾಗಿ ಈ ವಿಕೇಂದ್ರೀಕೃತ ಮಾಲೀಕತ್ವ ರೈತರಲ್ಲಿ ಉಳಿಯದೆ ಸಟ್ಟಾ ವ್ಯಾಪಾರಿಗಳು ಮತ್ತು ದೊಡ್ಡ ವರ್ತಕರ ಕೈಯಲ್ಲಿರಬಹುದಾದದ್ದು ಸಹಜ.

ವರ್ಗಾವಣೆ, ದಂಶಕಗಳಿಂದಾಗಿ ನಷ್ಟ, ತೇವಾಂಶ, ಕಳ್ಳತನ ಮತ್ತು ಕೊಳೆತು ಹಾಳಾಗುವುದರಿಂದ ದಾಸ್ತಾನು ಮಾಡಿದ ಮಾಲು ನಾಶವಾಗದಂತೆ ಕೇಂದ್ರಗಳಲ್ಲಿ ಉತ್ಪನ್ನಗಳನ್ನು ಕಾಪಿಡುವುದರಲ್ಲಿ ಒಂದು ಅರ್ಥವಿದೆ. ಈ ವಿಷಯದಲ್ಲಿ ಹೇಗೆ ಮಾರುಕಟ್ಟೆಯನ್ನು ನಿಭಾಯಿಸಬೇಕೆನ್ನುವುದಕ್ಕೆ ನಮಗೆ ಷೇರು ಮಾರುಕಟ್ಟೆಯಿಂದ ಒಳನೋಟಗಳು ಸಿಗುತ್ತವೆ. ಅಲ್ಲಿ ಎಷ್ಟರಮಟ್ಟಿಗಿನ ಕೇಂದ್ರೀಕರಣವಿರಬೇಕು, ಪಾರದರ್ಶಕತೆ ಹೇಗಿರಬೇಕು, ಮಾಲೀಕತ್ವದ ನಿಯಮಗಳೇನು ಎನ್ನುವುದರ ಬಗ್ಗೆ ಬಹಳಷ್ಟು ನೀತಿ ನಿಯಮಾವಳಿಗಳಿವೆ. ಆ ಸೂತ್ರಗಳನ್ನು ಉತ್ಪನ್ನದ ಮಾರುಕಟ್ಟೆಗಳಿಗೂ ಅಳವಡಿಸಬಹುದು. ದಾಸ್ತಾನಿನ ಸವಲತ್ತುಗಳನ್ನು ಡಿಪಾಸಿಟರಿಗಳ ಹಾಗೆ ನೋಡಬಹುದು. ವೇರ್‌ಹೌಸ್ ರಸೀತಿಗಳನ್ನು ಷೇರುಗಳ ರೀತಿಯಲ್ಲಿ ಕಾಣಬಹುದು. ಅವುಗಳ ದಾಸ್ತಾನಿನ ಮೇಲೆ, ಮಾಲೀಕತ್ವದ ಮೇಲೆ, ಭವಿಷ್ಯದ ಬೆಲೆಗಳನ್ನು ಊಹಿಸುವ ಮತ್ತು ಆ ಬಗ್ಗೆ ಮೊದಲೇ ಕರಾರು ಮಾಡಿಕೊಳ್ಳುವ ಬಗ್ಗೆ ನೀತಿ-ನಿಯಮಾವಳಿಯನ್ನು ರೂಪಿಸಬೇಕಾಗುತ್ತದೆ. ರೈತರು ಈ ಜೂಜಿನಲ್ಲಿ ತೊಡಗಬೇಕೋ ಬೇಡವೋ ಅನ್ನುವುದರ ಬಗ್ಗೆ ನಾವು ಯಾವ ನಿಲುವನ್ನೂ ತೆಗೆದುಕೊಳ್ಳದೆ ಆಯಾ ವ್ಯಕ್ತಿಗಳಿಗೆ ಬಿಟ್ಟುಬಿಡೋಣ.

ನೀತಿ ರೂಪಿಸುವ ಕಾಲಕ್ಕೆ ಮಾರುಕಟ್ಟೆಯ ಏರುಪೇರಿನ ಜೂಜು ಪ್ರಾರಂಭವಾಗುವುದಕ್ಕೆ ಮೊದಲೇ ರೈತರ ಮಾರಾಟದ ವ್ಯವಹಾರ ಮುಗಿದಿರುತ್ತದೆಂದು ಭಾವಿಸಬೇಕಾಗುತ್ತದೆ. ಅರ್ಥಾತ್– ರೈತರಿಗೆ ಕನಿಷ್ಠ ಬೆಂಬಲ ಬೆಲೆ ಮತ್ತು ಮಾರುಕಟ್ಟೆಯ ಬೆಲೆಯೇರಿದರೆ ಅದರ ಲಾಭವಷ್ಟೇ ಉಂಟಾಗುತ್ತದೆಂದು ನಾವು ನಂಬಬೇಕು. ರೈತರ ಹಿತಾಸಕ್ತಿಯ ಪ್ರಾಥಮಿಕತೆಯನ್ನು ನಾವು ಗುರುತಿಸಿ ಅವರನ್ನು ಕಾಪಾಡಿದರೆ, ಮಿಕ್ಕ ಏರುಪೇರಿನಿಂದ ಪ್ರಭಾವಿತರಾಗುವವರು ವ್ಯಾಪಾರಿಗಳು ಮತ್ತು ಗ್ರಾಹಕರು. ಏನೇ ಆಗಲಿ ಈ ವಿಚಾರದಲ್ಲಿ ಸರ್ಕಾರ ಜಾಗರೂಕವಾಗಿ ಮುಂದುವರಿಯಬೇಕು. ಈ ಏರ್ಪಾಟು ಸ್ಥಿರವಾಗುವುದಕ್ಕೆ ಮುನ್ನ ಒಂದೆರಡು ಹಗರಣಗಳು ನಡೆಯಲಿಕ್ಕೂ ಸಾಕು. ಆ ನಂತರವೇ ನಮ್ಮ ಕಾನೂನು ಕಾಯ್ದೆ ಗಟ್ಟಿಯಾಗುತ್ತದೆ.

ಸರ್ಕಾರವು ಭೌತಿಕ ಮೂಲಸೌಕರ್ಯಗಳನ್ನು ಕಲ್ಪಿಸುವುದರತ್ತ ಗಮನವಿರಿಸಿ, ಅದರ ಸುತ್ತಲೂ ಕಾನೂನು ಕಾಯ್ದೆಗಳನ್ನು ರೂಪಿಸಬೇಕು. ದಾಸ್ತಾನು ಮತ್ತು ಸರಬರಾಜಿನ ಮಿತಿಗಳನ್ನು ತೆಗೆದೊಗೆಯುವುದರಿಂದ ಬಹುಜನ ಹಿತ ಸಾಧಿಸುವುದು ಕಷ್ಟವಾಗುತ್ತದೆ. ಏನೇ ಆದರೂ ಸರ್ಕಾರ ತನ್ನ ಹೆಜ್ಜೆಗಳನ್ನು ಅಳೆದೂ ಸುರಿದೂ ಇಡಬೇಕಾಗುತ್ತದೆ. ಸದರಿ ಕಾನೂನಿನಲ್ಲಿ ತರಲು ಪ್ರಯತ್ನಿಸುವ ಈ ಬದಲಾವಣೆಯ ಅವಶ್ಯಕತೆ ನಮಗೆ ಕಾಣುತ್ತಿಲ್ಲ. ಈ ರೀತಿಯ ಬದಲಾವಣೆಯನ್ನು ಆಲೋಚಿಸಲು ತಕ್ಕ ಪರಿಸ್ಥಿತಿ ಉಂಟಾಗುವುದರಲ್ಲಿ ಒಂದು ದಶಕವೇ ಹಿಡಿಯಬಹುದು.

ಚುರುಮುರಿ

ರೊಕ್ಕದ ಬೆಳೆ ತರಬೇಕು

● ಸುಮಂಗಲಾ

'ಹೊಸಾ ವರ್ಷಕ್ಕೆ ನನಗ ಕ್ಯಾಲ್ಕುಲೇಟರ್ ಕೊಡಿಸು ಅಂತ ಅವತ್ತಿಂದ ಕೇಳಿದೆ, ನೀ ಕೊಡಿಸಲಿಲ್ಲ. ಲೆಕ್ಕ ಮಾಡಕ್ಕೆ ನನಗೆ ಎಷ್ಟ್ ತ್ರಾಸ್ ಆಗ್ತೈತಿ' ಬೆಕ್ಕಣ್ಣ ಗುರುಗುಡುತ್ತಲೇ ಇತ್ತು.

'ನಿನ್ನದೇನ್ ಲೆಕ್ಕ ಅದಾವ್ ಹೇಳಲೇ... ನಾನೇ ಮಾಡ್ತೀನಿ' ಎಂದೆ. 'ಹಂಗಾರೆ ಒಂದೇ ಸೆಕೆಂಡಿನಾಗೆ ಹೇಳು... ಹನ್ನೆರಡು ಲಕ್ಷ ಕೋಟಿ ರೂಪಾಯಿ ಅಂದರ ಹನ್ನೆರಡರ ಮುಂದೆ ಎಷ್ಟ್ ಸೊನ್ನೆ ಬರೀಬಕು' ಎಂದು ಕ್ವಿಜ್ ಪ್ರಶ್ನೆ ಹಾಕಿತು.

ನಾನು ಗಾಬರಿಗೊಂಡು ಹಾರಿಬಿದ್ದೆ. ತಿಂಗಳ ಕೊನೆಯಲ್ಲಿ ಅಕೌಂಟಿನಲ್ಲಿ ಹನ್ನೆರಡು ನೂರು ರೂಪಾಯಿ ಉಳಿದರೆ ಹೆಚ್ಚು, ಅಂತಾದ್ರಲ್ಲಿ ಹನ್ನೆರಡು ಲಕ್ಷ ಕೋಟಿ ರೂಪಾಯಿ ಎಂದರೆ... 'ಮೆತ್ತಗೆ ಮಾತಾಡಲೇ... ಐಟಿ ಮಂದಿ ಕಿವಿಗೆ ಬಿತ್ತು ಅಂದರ ನಾ ಅಷ್ಟಕೊಂದ್ ರೊಕ್ಕ ಇಟ್ಟೀನಂತ ಮನಿ ಮ್ಯಾಲ ರೈಡ್ ಮಾಡ್ತಾರ' ಎಂದೆ.

ಬೆಕ್ಕಣ್ಣ ಪಕ್ಕೆ ಹಿಡಿದುಕೊಂಡು ಪಕಪಕನೆ ನಕ್ಕಿತು. 'ಹನ್ನೆರಡು ಲಕ್ಷ ಕೋಟಿ ಅಂದ್ರ ಹನ್ನೆರಡರ ಮುಂದೆ ಎಷ್ಟ್ ಸೊನ್ನಿ ಅಂತ್ಲೇ ನಿನಗ ಗೊತ್ತಿಲ್ಲ... ಹಳೇ ಪಾಪರ್ಚೀಟಿ ನೀನು. ನಿನ್ನಂಥೋರ ಮನಿ ಮ್ಯಾಗ ಎದಕ್ಕ ದಾಳಿ ಮಾಡತಾರ. ಹೋದ ವರ್ಷ ಕೊರೊನಾ ಕಾಲದಾಗೆ ಎಲ್ಲಾರೂ ದಿವಾಳಿ ಎದ್ದಾರ. ಅಂಥದ್ರಾಗೆ ನಮ್ಮ ಅದಾನಿ ಮಾಮನ ಆಸ್ತಿ ಐವತ್ತು ಪರ್ಸೆಂಟ್ ಹೆಚ್ಚಾಗೈತಂತ. ಹನ್ನೆರಡು ಲಕ್ಷ ಕೋಟಿ ರೂಪಾಯಿ ರೊಕ್ಕ ಗಳಿಸ್ಯಾನಂತ. ಹಿಂಗ ರೊಕ್ಕದ ಬೆಳಿ ಡಬ್ಬಲ್, ಟ್ರಿಪ್ಪಲ್ ಆಗತದ ಅಂದ್ರ ಅದು ನಾಟಿ ಬೆಳಿ ಅಂತ್ಲೂ ಅಲ್ಲ... ಹೈಬ್ರಿಡ್ ಇರಬಕು'.

'ನಮ್ ರೈತ್ರು ಯಾವ ಬೆಳೀನೂ ಕೈಗೇ ಹತ್ತಂಗಿಲ್ಲಂತ ಸುಮ್ನೇ ಕುಂತು ಅಳತಾರ. ದಿಲ್ಲೀವಳಗ ಕೂತು ಪ್ರತಿಭಟಿಸೂದು ಕೈಬಿಟ್ಟು, ಕೃಷಿ ಕಾಯಿದೆ ಒಪ್ಪಿಗೊಂಡು, ರೊಕ್ಕದ ಬೆಳಿ ಹೆಂಗ ಡಬ್ಬಲ್ ಮಾಡಬಕು ಅಂತ ಅದಾನಿ ಮಾಮನ ಹತ್ರ ಟ್ರೈನಿಂಗ್ ತಗಳೂದು ಭಾಳ ಚಲೋ ಅನ್ನಿಸ್ತದ' ಎಂದು ಘನಗಂಭೀರವಾಗಿ ವಾದ ಮಂಡಿಸಿತು!

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಬೇಕಿದೆ



ಸ್ವಯಂ ಅಭಿನಂದನೆ ಅಪಾಯಕರ. ಜ. 18ರಂದು ಎರಡು ಲಕ್ಷ ಸಕ್ರಿಯ ಕೋವಿಡ್ ಪ್ರಕರಣಗಳನ್ನು ಹೊಂದಿದ್ದೆವು ಮತ್ತು ಈ ಸಂಖ್ಯೆ ಕುಸಿಯತೊಡಗಿತು. ಇದೀಗ ಪ್ರಕರಣಗಳ ಸಂಖ್ಯೆ ಮತ್ತೆ ಏರುತ್ತಿದೆ. ಜ. 16ರಂದು ಲಸಿಕೆ ನೀಡಿಕೆ ಅಭಿಯಾನ ಆರಂಭವಾದ 60 ದಿನಗಳ ನಂತರವೂ 3 ಕೋಟಿ ಜನರಿಗಷ್ಟೇ ನೀಡಲು ಸಾಧ್ಯವಾಗಿದೆ. ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುವುದರಲ್ಲಿ ನಿರತರಾಗದಿದ್ದರಷ್ಟೇ ಮತ್ತೊಮ್ಮೆ ಅಪಾಯಕ್ಕೆ ಆಹ್ವಾನ ನೀಡದಿರಲು ಸಾಧ್ಯ.

ಶೇಖರ್ ಗುಪ್ತಾ, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 15-3-1996

● **'ತವರಿಗೆ' ಮರಳಿದ ಆಳ್ವ– ಬಾಗಿಲಿಗೆ ಬೀಗ**

ಬೆಂಗಳೂರು, ಮಾರ್ಚ್ 14– ಬಿಜೆಪಿ ತೊರೆದು 'ಮರಳಿ ತವರಿಗೆ' ಹಿಂತಿರುಗಲು ಮಾಜಿ ಸಚಿವ ಡಾ. ಜೀವರಾಜ ಆಳ್ವ ಜನತಾದಳ ಕಚೇರಿಗೆ ಬಂದಾಗ ಅಲ್ಲಿಯ ಬಾಗಿಲಿಗೆ ಬೀಗ ಹಾಕಿದ್ದರಿಂದಾಗಿ ಕಾದು ಅರ್ಜಿ ಸಲ್ಲಿಸುವಂತಹ ಪರಿಸ್ಥಿತಿ ಇಂದು ಇಲ್ಲಿ ಎದುರಾಯಿತು.

ಡಾ. ಆಳ್ವ ಅವರು ತಮ್ಮ ಅಸಂಖ್ಯಾತ ಬೆಂಬಲಿಗರೊಂದಿಗೆ ಪ್ರಾಥಮಿಕ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ಮೆರವಣಿಗೆಯಲ್ಲಿ ಜನತಾದಳದ ಕಚೇರಿಗೆ ಬಂದರು. ಆದರೆ ಅಲ್ಲಿ ಬಾಗಿಲಿಗೆ ಬೀಗ ಹಾಕಿತ್ತು. ತಮ್ಮ ನಾಯಕನಿಗೆ ಆದ ಮುಖಭಂಗವನ್ನು ಕಂಡು ಆಳ್ವರ ಬೆಂಬಲಿಗರು ತೀವ್ರವಾಗಿ ಪ್ರತಿಭಟಿಸಿದರು. ಅವರನ್ನು ನಿಯಂತ್ರಿಸಲು ಪೊಲೀಸರು ಹೆಣಗಾಡಿದರು.

● **ಮೂರು ಬೃಹತ್ ಉದ್ದಿಮೆಗೆ ಅನುಮತಿ**

ಬೆಂಗಳೂರು, ಮಾರ್ಚ್ 14– ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿ ಮುಕಂದ್ ಉಕ್ಕು ಸ್ಥಾವರವೂ ಸೇರಿದಂತೆ ಒಟ್ಟು 8,954 ಕೋಟಿ ರೂಪಾಯಿ ಬಂಡವಾಳದ ಮೂರು ಬೃಹತ್ ಉದ್ದಿಮೆಗಳಿಗೆ ಸಚಿವ ಸಂಪುಟ ಇಂದು ಅನುಮತಿ ನೀಡಿದೆ.

ಶಹಾಬಾದಿನ ಎಚ್‌ಎಂಪಿ ಸಿಮೆಂಟ್ಸ್ ಹಾಗೂ ಕೊಪ್ಪಳ ತಾಲ್ಲೂಕಿನ ಗಿಣಿಗೇರಾದಲ್ಲಿ ಸ್ಥಾಪಿಸಲಾಗುವ ನ್ಯಾಷನಲ್ ಎಂಜಿನಿಯರಿಂಗ್ ಸಂಸ್ಥೆಗಳಿಗೆ ಈ ಅನುಮತಿ ಸಿಕ್ಕಿದೆ.

50 ವರ್ಷಗಳ ಹಿಂದೆ

ಸೋಮವಾರ, 15-3-1971

● **ಸಂವಿಧಾನ ತಿದ್ದುವ ಸಾಮರ್ಥ್ಯ ಲಭ್ಯ**

ನವದೆಹಲಿ, ಮಾರ್ಚ್ 14– ಜವಾಹರಲಾಲ್ ನೆಹರೂ ನಾಯಕತ್ವದಲ್ಲಿ 1962ರಲ್ಲಿ ಪಡೆದಿದ್ದಂತೆ, ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಹಾಗೂ ಅದರಿಂದ ಸಂವಿಧಾನ ತಿದ್ದುವ ಸಾಮರ್ಥ್ಯವನ್ನು ಇಂದು ಪ್ರಥಮ ಬಾರಿಗೆ ಆಡಳಿತ ಕಾಂಗ್ರೆಸ್ ಸಾಧಿಸಿತು.

ಇಂದು ಸಂಜೆ 6.30ರವರೆಗಿನ ಎಣಿಕೆಯಲ್ಲಿ ದೊರೆತ 509 ಲೋಕಸಭೆ ಸ್ಥಾನಗಳ ಫಲಿತಾಂಶಗಳಲ್ಲಿ ಆಡಳಿತ ಕಾಂಗ್ರೆಸ್ 348 ಸ್ಥಾನಗಳನ್ನು ಗಳಿಸಿದೆ. 518 ಚುನಾಯಿತ ಸದಸ್ಯ ಬಲದ ಸಭೆಯಲ್ಲಿ ಮೂವರು ನಾಮಕರಣ ಸದಸ್ಯರಿರುತ್ತಾರೆ.

ರಾಜಧನ ರದ್ದುಪಡಿಸಲು ಸಂವಿಧಾನಕ್ಕೆ ತಿದ್ದುಪಡಿ ತರಲು ಸಾಧ್ಯವಾಗದೆ ಹೋದುದೇ ದಿಢೀರ್ ಚುನಾವಣೆಗೆ ಆಡಳಿತ ಕಾಂಗ್ರೆಸ್ಸನ್ನು ಪ್ರಚೋದಿಸಿತ್ತು.

● **ಬಂಗಾಳದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಲು ಎರಡೂ ಪಕ್ಷಗಳ ಪೈಪೋಟಿ**

ಕಲ್ಕತ್ತ, ಮಾರ್ಚ್ 14– ಪಶ್ಚಿಮ ಬಂಗಾಳ ವಿಧಾನಸಭೆಯ ಮಧ್ಯಂತರ ಚುನಾವಣೆಗಳಲ್ಲಿ ಯಾವುದೇ ಒಂದು ಪಕ್ಷಕ್ಕೆ ನಿಚ್ಚಳ ಬಹುಮತ ಪ್ರಾಪ್ತವಾಗದೆ ಮಾರ್ಕ್ಸಿಸ್ಟ್ ನಾಯಕತ್ವದ ಸಂಯುಕ್ತ ವಾಮರಂಗ ಮತ್ತು ಆಡಳಿತ ಕಾಂಗ್ರೆಸ್‌ಗಳೆರಡೂ ಸಂಪುಟ ರಚನೆಗೆ ಕಾತರ ತೋರಿಸುತ್ತಿವೆ.

ಸಂಗತ

ಕಷ್ಟಕ್ಕೊದಗುವ ಕಟಿಕಿ ಜಲಪಾತ!

ವಿಶಾಖಪಟ್ಟಣ ಜಿಲ್ಲೆಯಲ್ಲಿರುವ ಈ ಜಲಪಾತಕ್ಕೆ ಬರುವ ಪ್ರವಾಸಿಗರಿಂದ ಸಂಗ್ರಹವಾದ ಹಣವನ್ನು ಗ್ರಾಮಸ್ಥರ ಅಭ್ಯುದಯಕ್ಕೆ ಬಳಸಲಾಗುತ್ತಿದೆ

● ಶ್ರೀಗುರು

ಅಬ್ಬಿ, ಜೋಗ, ಮಾಗೋಡು, ಶಿವಗಂಗೆ, ಉಂಚಳ್ಳಿ ಜಲಪಾತಗಳನ್ನು ನೋಡಿರುತ್ತೀರಿ ಇಲ್ಲವೆ ಅವುಗಳ ಬಗ್ಗೆ ಕೇಳಿರುತ್ತೀರಿ. ನಯಾಗರ, ಏಂಜಲ್ ಜಲಪಾತಗಳೂ ಗೊತ್ತಿವೆ. ಆದರೆ ಇದೇನಿದು? 'ಎಟಿಎಂ ಜಲಪಾತ'? ನೋಡಿಲ್ಲ, ಕೇಳಿಲ್ಲ, ಇದೆಲ್ಲಿದೆಯಪ್ಪಾ ಎಂಬ ಪ್ರಶ್ನೆ ಮೂಡದೇ ಇರದು.

ಇದು ಅಂತಿಂಥ ಜಲಪಾತವಲ್ಲ! ಇಲ್ಲಿ ಮೇಲಿನಿಂದ ನೀರೂ ಧುಮುಕುತ್ತದೆ ಮತ್ತು ವರ್ಷಪೂರ್ತಿ ಹಣವೂ ಸುರಿಯುತ್ತದೆ! ಹಳ್ಳಿ ಮನೆಗಳ ಸದಸ್ಯರ ಹುಟ್ಟು, ಸಾವು, ಹೆರಿಗೆ, ಅಪಘಾತ, ಆಂಬುಲೆನ್ಸ್ ಸೌಲಭ್ಯ, ಚಿಕಿತ್ಸೆಗೆ ತಗಲುವ ತುರ್ತು ಖರ್ಚನ್ನು ಈ ಜಲಪಾತವೇ ಭರಿಸುತ್ತದೆ. ಇದೇನೂ ಪವಾಡ ಭೂಮಿಯಲ್ಲ. ಹಾಗಂತ ನಮಗೂ ಹಣಕಾಸಿನ ಮುಗ್ಗಟ್ಟಿದೆ ಎಂದು ರಾತ್ರಿ ಬಸ್ ಹತ್ತಿ ಬೆಳಿಗ್ಗೆ ಜಲಪಾತದೆದುರು ನಿಂತುಬಿಟ್ಟೀರಿ! ಈ ಸೌಲಭ್ಯ ನಿಮಗಲ್ಲ. ಕಟಿಕಿ ಗ್ರಾಮದವರಿಗೆ ಮಾತ್ರ. ವಿಶಾಖಪಟ್ಟಣ ಜಿಲ್ಲೆಯ ನಯನ ಮನೋಹರ ಅರಕು ಕಣಿವೆಯಲ್ಲಿ ಗೋಸ್ಥಾನಿ ನದಿಯಿಂದಾದ ಕಟಿಕಿ ಜಲಪಾತ ಮಳೆಗಾಲವಿರುವಷ್ಟೂ ದಿನ ಮೈದುಂಬಿಕೊಂಡು ಸುಮಾರು 52 ಅಡಿಗಳಿಂದ ಕೆಳಗೆ ಧುಮುಕಿ ನೋಡುಗರ ಹೃನ್ಮನ ತಣಿಸುತ್ತದೆ.

ಪೂರ್ವ ಘಟ್ಟಗಳ ದಟ್ಟಾರಣ್ಯದ ಅರಕು ಕಣಿವೆಯಲ್ಲಿ 19 ಬುಡಕಟ್ಟು ಜನಾಂಗಗಳಿವೆ. ಅವರ ಸಂಸ್ಕೃತಿ– ಆಚರಣೆ, ಚಿಕಿತ್ಸಾ ಪದ್ಧತಿ, ಮರದ ಮೇಲಿನ ಗುಡಿಸಲು, ಬೊರ್ರಾ ಗುಹೆ, ಸಾಂಪ್ರದಾಯಿಕ ಡಿಂಶಾ ನೃತ್ಯ, ಬುಡಕಟ್ಟು ಮ್ಯೂಸಿಯಂ, ಕರಕುಶಲ ಕಲೆ ಮತ್ತು ಜಲಪಾತಗಳು ಸಾವಿರಾರು ಪ್ರವಾಸಿಗರನ್ನು ವರ್ಷವಿಡೀ ಕೈಬೀಸಿ ಕರೆಯುತ್ತವೆ.

ಬುಡಕಟ್ಟು ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವ ಕಟಿಕಿ, ಡೇಕಾಪುರಂ, ಕುಂತಿಯಸಿಮಿಡಿ ಹಳ್ಳಿಗಳಲ್ಲಿ ಶಾಲೆಗೆ ಹೋಗಿ ಓದು ಕಲಿತವರು ಕಡಿಮೆ. ಜೀವನದ ಪಾಠ ಕಲಿತ ಬುದ್ಧಿವಂತರ ಸಂಖ್ಯೆಯೇ ಹಿರಿದು. ಜಲಪಾತ ವೀಕ್ಷಿಸಲು ಬರುವ ಪ್ರವಾಸಿಗರ ವಾಹನಗಳಿಗೆ ಪಾರ್ಕಿಂಗ್ ಶುಲ್ಕ ವಿಧಿಸಿ, ಅದರಿಂದ ಬರುವ ಆದಾಯವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲು ತೀರ್ಮಾನಿಸಿದ ಯುವಕರು, 2009ರಲ್ಲಿ 'ಕಟಿಕಿ ಜಲಪಾತ ಅಭಿವೃದ್ಧಿ ಸಮಿತಿ'ಯನ್ನು ರಚಿಸಿ ಗ್ರಾಮಸಭೆಯ ಸಹಕಾರ ಕೋರಿದರು. ಮೂರೂ ಹಳ್ಳಿಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ರಚಿಸಿ, ಸ್ಥಳಕ್ಕೆ ಬರುವ ಕಾರಿಗೆ ನಲವತ್ತು ಮತ್ತು ಬೈಕಿಗೆ ಹತ್ತು ರೂಪಾಯಿ ಶುಲ್ಕ ವಸೂಲು ಮಾಡಲು ಜಲಪಾತದ ದಾರಿಯ ಆರಂಭದಲ್ಲಿ ಶುಲ್ಕ ಸಂಗ್ರಹ ಕಟ್ಟೆ ಸ್ಥಾಪಿಸಲಾಯಿತು. ಸುದ್ದಿ ತಿಳಿದ ಮರುದಿನವೇ ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿ ಟೋಲ್ ಕಟ್ಟೆಯನ್ನು ಕಿತ್ತು ಹಾಕಿ 'ನೀವು ಮಾಡುತ್ತಿರುವುದು ಕಾನೂನಿನ ಉಲ್ಲಂಘನೆಯಾಗುತ್ತದೆ, ಪ್ರವಾಸಿ ತಾಣವನ್ನು ನೋಡಿಕೊಳ್ಳಲು, ನಿರ್ವಹಿಸಲು ಸಂಯೋಜಿತ ಬುಡಕಟ್ಟು ಅಭಿವೃದ್ಧಿ ನಿಗಮಗಳಿವೆ (ಇಂಟಿಗ್ರೇಟೆಡ್ ಟ್ರೈಬಲ್ ಡೆವಲಪ್‌ಮೆಂಟ್ ಏಜೆನ್ಸಿ), ಹಳ್ಳಿಗಳಿಗೆ ನೈಸರ್ಗಿಕ ಸಂಪತ್ತಿನ ವ್ಯಾಪಾರೀಕರಣದ ಹಕ್ಕಿಲ್ಲ' ಎಂದು ಧಮಕಿ ಹಾಕಿಹೋದರು.

ಹೆದರದ ಊರಿನ ಯುವಕ ಗೆಮ್ಮೇಲ ಚಿಮ್ಮಯ್ಯ ತಮ್ಮ ಯೋಜನೆ ಕಾರ್ಯಗತಗೊಳಿಸಲು ಜಿಲ್ಲಾಧಿಕಾರಿ ಕಚೇರಿಗೆ ಊರಿನ ಹತ್ತಾರು ಯುವಕರೊಂದಿಗೆ ನಿಯೋಗ ಹೊರಟೇಬಿಟ್ಟರು. ಆಗ ನೆರವಿಗೆ ಬಂದ ವಿಶಾಖಪಟ್ಟಣದ ಎನ್‌ಜಿಒ 'ಸಮತಾ'ದ ನಿರ್ದೇಶಕ ರವಿ ರೆಬ್ಬಪ್ರಗಾದ, ಜಿಲ್ಲಾಧಿಕಾರಿಯನ್ನು ಒಪ್ಪಿಸುವಲ್ಲಿ ಸಹಾಯವಾಗುವ ಕಾನೂನಿನ ಬಗ್ಗೆ ಯುವಕರ ತಂಡಕ್ಕೆ ಮಾಹಿತಿ ನೀಡಿದರು.

ಬುಡಕಟ್ಟು ಜನರ ಸಾಂಸ್ಕೃತಿಕ ಮತ್ತು ಆರ್ಥಿಕ ಮೂಲಗಳನ್ನು ಕಾಪಾಡಲೆಂದೇ ಇರುವ ಸಂವಿಧಾನದ 5ನೇ ಶೆಡ್ಯೂಲ್, ಬುಡಕಟ್ಟು ಜನರಿರುವ ಪ್ರದೇಶದ ಜಲಪಾತ, ಗಿರಿಧಾಮ, ಸರೋವರ, ಬೃಹತ್ ಮರ ಅಥವಾ ಇನ್ನಾವುದೇ ನೈಸರ್ಗಿಕ ತಾಣದ ಮೇಲೆ ಬುಡಕಟ್ಟು ಜನರ ಸಂಪೂರ್ಣ ಹಕ್ಕು ಇರುತ್ತದೆ ಎಂದು ಹೇಳಿದೆ. ಇದನ್ನೇ ಜಿಲ್ಲಾಧಿಕಾರಿಗೆ ಮನದಟ್ಟು ಮಾಡಿಕೊಟ್ಟ ಗ್ರಾಮಸಭಾದ ಸದಸ್ಯರು 7 ವರ್ಷಗಳ ನಿರಂತರ ಹೋರಾಟದ ನಂತರ ಜಲಪಾತ ವೀಕ್ಷಣೆಯ ಪ್ರವೇಶ ಶುಲ್ಕ ಸಂಗ್ರಹಿಸಲು ಅನುಮತಿ ಪಡೆದುಕೊಂಡರು. ಕೂಡಲೇ ಮೂರೂ ಹಳ್ಳಿಗಳ 10 ಜನ ಪ್ರಜ್ಞಾವಂತ ಪ್ರತಿನಿಧಿಗಳ ತಂಡ ರಚಿಸಿದ ಗ್ರಾಮಸಭಾ, ವ್ಯವಸ್ಥಿತವಾಗಿ ಶುಲ್ಕ ಸಂಗ್ರಹಿಸಿ ಬ್ಯಾಂಕ್‌ನಲ್ಲಿ ಖಾತೆ ತೆರೆದು ಜಮಾ ಮಾಡುವಂತೆ ಸದಸ್ಯರಿಗೆ ಸೂಚಿಸಿತು.

ಕಳೆದ ಮಳೆಗಾಲದ ದಿನಗಳಲ್ಲಿ ₹ 2.30 ಲಕ್ಷ ಶುಲ್ಕ ಸಂಗ್ರಹವಾಯಿತು. ಅದರಲ್ಲಿ ₹ 38,000 ಖರ್ಚು ಮಾಡಿ, ಜಲಪಾತದ ಹಾದಿಯ ಜಾರು ಮೆಟ್ಟಿಲುಗಳನ್ನು ಸುಲಭವಾಗಿ ಕ್ರಮಿಸಲು ರೈಲುಹಳಿಗಳ ಹಿಡಿಕೆಯನ್ನು ಅಳವಡಿಸಿ, ಪ್ರವಾಸಿಗರಿಗಾಗಿ ಶೌಚಾಲಯವನ್ನೂ ನಿರ್ಮಿಸಿದ ಸಮಿತಿ, ಹಳ್ಳಿಯ ಜನರಿಗೆ ಬೇಕಾದ ಔಷಧಿ, ಮಕ್ಕಳ ಶಾಲಾ ಶುಲ್ಕ, ರಸ್ತೆ ನಿರ್ಮಾಣ, ಜಲಪಾತದ ದಾರಿಯ ನಿರ್ವಹಣೆ ವೆಚ್ಚಗಳನ್ನು ಭರಿಸುತ್ತ, ದೇಶದ ಇತರ ಗ್ರಾಮಸಭೆಗಳಿಗೆ ಮಾದರಿ ಎನಿಸಿದೆ.

ಕೋವಿಡ್– 19 ಸ್ಫೋಟವಾದಾಗ ಸರ್ಕಾರದ ನೆರವಿಗಾಗಿ ಕಾಯದೆ, ₹ 50 ಸಾವಿರ ಖರ್ಚು ಮಾಡಿ ಮೂರೂ ಹಳ್ಳಿಗಳ ಜನರಿಗೆ ಎರಡು ತಿಂಗಳು ತರಕಾರಿ ಮತ್ತು ಅಡುಗೆ ಎಣ್ಣೆಯನ್ನು ವಿತರಿಸಿದ ಸಮಿತಿ, ಸ್ವಾವಲಂಬನೆಯ ತಾಜಾ ಉದಾಹರಣೆಯನ್ನು ದೇಶದ ಮುಂದಿರಿಸಿದೆ. ಅನುಕರಿಸುವವರು ಬೇಕಷ್ಟೇ.

ವಾಚಕರ ವಾಣಿ

ಜಾಗೃತಿ ಸಂದೇಶಕ್ಕೂ ಬೇಕು ವ್ಯಾಕ್ಸಿನ್!

ಕೊರೊನಾ ದುಷ್ಕಾಲದ ಅತಿ ದೊಡ್ಡ ರಗಳೆ ಏನೆಂದರೆ ಫೋನ್ ಮೂಲಕ ಬರುವ ಜಾಗೃತಿ ಸಂದೇಶಗಳು. ಲಾಕ್‌ಡೌನ್ ಜೊತೆಜೊತೆಗೇ ಬಂದ ಇದು, ಅನ್‌ಲಾಕ್ ಆಗಿ, ವ್ಯಾಕ್ಸಿನ್ ಬಂದು, ರೀಲಾಕ್ ಆಗುವ ಹಂತಕ್ಕೆ ಬಂದರೂ ಮರೆಯಾಗುವ ಲಕ್ಷಣವೇ ಕಾಣುತ್ತಿಲ್ಲ. ಲಸಿಕೆ ಹಾಕಿಸಿಕೊಂಡರಾದರೂ ಇದರಿಂದ ಪಾರಾಗಬಹುದೆಂದು ಎಣಿಸಿದ್ದೆ. ಊಹೂಂ! ಮೊದಲ ಡೋಸ್ ಹಾಕಿಸಿಕೊಂಡು ಆಸ್ಪತ್ರೆಯ ಕುರ್ಚಿಯಿಂದ ಏಳುವ ಮೊದಲೇ ನನ್ನ ನಂಬರಿಗೆ ಛಕ್ಕಂತ ಸರ್ಟಿಫಿಕೇಟ್ ಬಂತು ನಿಜ. ಆದರೆ ಬಳಿಕ ಫೋನ್ ಎತ್ತಿ ಡಯಲ್ ಮಾಡಿದ ಮೊದಲ ನಂಬರಿನ ಜೊತೆಗೇ ಮತ್ತೆ ಬಂತು ಎಚ್ಚರಿಕೆಯ ಸಂದೇಶ. 'ಸಾಕ್ರಪಾ ಉಪದೇಶ' ಎಂದು ಕೂಗಿ ಹೇಳೋಣವೆಂದರೆ, ಫೋನ್ ಕಂಪನಿಗಳು ಕಿವಿಗೂ ಮಾಸ್ಕ್ ಹಾಕಿಕೊಂಡಿದ್ದರೆ- ಎಲ್ಲಿ ಯಾರಿಗೆ ಹೇಳೋಣ? ಈ ಸಂದೇಶವನ್ನು ಪ್ರತಿಬಂಧಿಸಬಲ್ಲ ವ್ಯಾಕ್ಸಿನ್ ಇಲ್ಲವೇ?

ನಾಗೇಶ ಹೆಗಡೆ, ಕೆಂಗೇರಿ

ಮೈಸೂರಿನ ಪ್ರಗತಿ: ವಿಸ್ತೃತ ಚರ್ಚೆ ನಡೆಯಲಿ

ಮೈಸೂರು ನಗರದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಬೆಳೆಸಲು ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್ ಕೆಲವು ಪ್ರಮುಖ ನಿರ್ಧಾರಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಕೆಲವು ನಿರ್ಧಾರಗಳು ಸ್ವಾಗತಾರ್ಹವಾಗಿದ್ದರೂ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಾಣಕ್ಕೆ ಪರಿಸರವಾದಿಗಳಿಂದ ವಿರೋಧ ವ್ಯಕ್ತವಾಗಿದೆ. ಈ ಬಗ್ಗೆ ಪರಿಸರವಾದಿಗಳೊಂದಿಗೆ ಸಚಿವರು ವಿಸ್ತೃತವಾದ ಚರ್ಚೆ ನಡೆಸಬೇಕಾಗಿದೆ. ಅದೇ ರೀತಿ ಪ್ರತಿವರ್ಷ ಆಚರಿಸಲಾಗುವ ನಾಡಹಬ್ಬ ದಸರೆಯನ್ನು ನಿರ್ವಹಿಸಲು ಒಂದು ಶಾಶ್ವತವಾದ ಸ್ವಾಯತ್ತ ಮಂಡಳಿ ರಚಿಸುವುದು ಈಗಿನ ತುರ್ತು ಅಗತ್ಯವಾಗಿದೆ. ಈ ಮಂಡಳಿಯು ಮೈಸೂರಿನ ರಾಜ ಪ್ರಮುಖರು, ಉಸ್ತುವಾರಿ ಸಚಿವರು, ಲೋಕಸಭಾ ಸದಸ್ಯರು ಸೇರಿದಂತೆ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ ಸೇರಿದಂತೆ ಹಿರಿಯ ಅಧಿಕಾರಿಗಳು, ಸ್ಥಳೀಯ ಗಣ್ಯ ನಾಗರಿಕರು, ಪತ್ರಕರ್ತರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರನ್ನು ಒಳಗೊಂಡಿರಬೇಕು.

ದೆಹಲಿಯ ಪ್ರಗತಿ ಮೈದಾನದ ಮಾದರಿಯಲ್ಲಿ ನಗರದಲ್ಲಿ ಕೂಡ ವಸ್ತುಪ್ರದರ್ಶನವನ್ನು ವರ್ಷಪೂರ್ತಿ ನಡೆಸುವ ಕಾರ್ಯಕ್ರಮ ರೂಪಿಸಬಹುದು. ದಸರಾ ಹಬ್ಬದ ಸಂದರ್ಭದಲ್ಲಿ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಪ್ರತಿಭೆಗಳಿಗೂ ಆದ್ಯತೆ ನೀಡುವಂತೆ ಆಗಬೇಕು.

ಡಾ. ಕೆ.ವಿ.ವಾಸು, ಮೈಸೂರು

ಅಭಿವೃದ್ಧಿ ನೀತಿ ಸ್ಥಾನಪಲ್ಲಟ

ಒಂದು ಕಾಲದಲ್ಲಿ ರಾಷ್ಟ್ರೀಕರಣ ಎಂಬುದು ಅಭಿವೃದ್ಧಿಯ ನೀತಿಯಾಗಿತ್ತು. ಈಗ ಖಾಸಗೀಕರಣ ಅಭಿವೃದ್ಧಿಯ ನೀತಿ ಎನಿಸುತ್ತಿದೆ. ಕಾಲ ಕಳೆದಂತೆ ಸರ್ಕಾರದ ನೀತಿಗಳು ಸ್ಥಾನಪಲ್ಲಟ ಆಗುತ್ತಿವೆ. ಎರಡು ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣ ಮಾಡುವ ಸರ್ಕಾರದ ಉದ್ದೇಶ ಈ ಮಾತಿಗೆ ನಿದರ್ಶನವಾಗಿದೆ.

ಖಾಸಗೀಕರಣದಿಂದಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತೆ ಶ್ರೀಮಂತರ ಸೊತ್ತಾಗಲಿವೆಯೇ ಎಂಬ ಅನುಮಾನ ಸಹಜವಾಗಿ ಉಂಟಾಗುತ್ತದೆ. ಹಾಗಾಗಿ ರಾಷ್ಟ್ರೀಕೃತ ಬ್ಯಾಂಕುಗಳ ಅಧಿಕಾರಿಗಳ ಒಕ್ಕೂಟ ದೇಶದಾದ್ಯಂತ ಇದೇ 15 ಮತ್ತು 16ರಂದು ಎರಡು ದಿನಗಳ ಮುಷ್ಕರಕ್ಕೆ ಕರೆ ಕೊಟ್ಟಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ಡಾ. ಟಿ.ಪಿ.ಗಿರಡ್ಡಿ, ಜಮಖಂಡಿ

ಬೆವರು ಮತ್ತು ಕಾಯಕ

ಬರಗೂರು ರಾಮಚಂದ್ರಪ್ಪ ಅವರ 'ದೇವರ ದೇವರು ಜನರ ಬೆವರು' (ಪ್ರ.ವಾ., ಮಾರ್ಚ್ 10) ಮತ್ತು ಬಸವರಾಜ ಸಾದರ ಅವರ 'ಕಾಯಕದ ಬೆವರು...' (ವಾ.ವಾ., ಮಾರ್ಚ್ 12) ಕುರಿತು ಕೆಲವು ಮಾತುಗಳು. ಕೊಪ್ಪಳದ ನನ್ನ ನಿವೃತ್ತ ಮಿತ್ರರೊಬ್ಬರು ಇತ್ತೀಚೆಗೆ ಆಸ್ಪತ್ರೆಗೆ ಹೋಗಲು ಒಂದು ರಿಕ್ಷಾ ಹತ್ತಿದರಂತೆ. ರಿಕ್ಷಾ ಚಾಲಕ ಹೈಸ್ಕೂಲಿನಲ್ಲಿ ಬಹಳ ವರ್ಷಗಳ ಹಿಂದೆ ನಮ್ಮ ಮಿತ್ರರ ವಿದ್ಯಾರ್ಥಿಯಾಗಿದ್ದನಂತೆ. ಅವನು ಪರಿಚಯ ಹೇಳಿಕೊಂಡು ಮಾತನಾಡುತ್ತ, 'ಸರ್, ನಿವೃತ್ತಿ ಆದ ಮೇಲೆ ಉಪಜೀವನಕ್ಕೆ ಏನು ಮಾಡುತ್ತಿದ್ದೀರಿ' ಎಂದು ಕೇಳಿದನಂತೆ. ಇವರು, 'ಸರ್ಕಾರ ನನಗೆ ತಿಂಗಳು 30-40 ಸಾವಿರ ಪೆನ್ಷನ್ ಕೊಡುತ್ತದಪ್ಪಾ' ಅಂದರಂತೆ. ಅವನು ಅಚ್ಚರಿ ವ್ಯಕ್ತಪಡಿಸುತ್ತ 'ಸರ್ಕಾರ ಖಾಲಿ ಕೂಡ್ರಿಸಿ ತಿಂಗಳ 30-40 ಸಾವಿರ ಕೊಡ್ತದರೇ, ನಿಮ್ದು ಭೇಷ್ ಬಿಡ್ರಿ, ನಾವ ದಿವಸ ಮುಂಜಾನಿಂದ ಸಂಜಿ ತನಕ ದುಡದ್ರೂ ನಾಲ್ಕೈದ ನೂರ ಆಗುದಿಲ್ರಿ' ಅಂದನಂತೆ. ಇಂಥ ಮಾತುಗಳು ಎಲ್ಲ ಪಿಂಚಣಿದಾರರ ಕಿವಿಗಳ ಮೇಲೆ ಬಿದ್ದಿರಲಾರವು. ಆದರೂ ಯಾವುದೇ ಬೆವರು, ಬವಣೆ ಇಲ್ಲದೆ ಪಿಂಚಣಿ ಪಡೆಯುವ ಸಂವೇದನಾಶೀಲರಿಗೆ ಇಂಥ ಮಾತುಗಳು ಚುಚ್ಚುತ್ತವೆ ಮತ್ತು ಇಂಥ ಅಸಹನೆ ಎಲ್ಲ ಅಶ್ರಮಿಕ ವರ್ಗದ ಕುರಿತು ಇತರರಲ್ಲಿ ಇದ್ದೇ ಇರುತ್ತದೆ.

'ಸರ್ಕಾರದ ಕೆಲಸ ದೇವರ ಕೆಲಸ', 'ಕಾಯಕವೇ ಕೈಲಾಸ' ಎಂದು ಸರ್ಕಾರ ವಿಧಾನಸೌಧ, ಸುವರ್ಣ ಸೌಧದ ಮೇಲೇನೋ ಬರೆಸಿದೆ. ಆದರೆ ಕಾಯಕಕ್ಕೂ ಅಥವಾ ಬೆವರಿಗೂ ಸರ್ಕಾರಿ ಕೆಲಸಕ್ಕೂ ಎಲ್ಲಿಯ ಸಂಬಂಧ! ಕಾಯಕವೆಂದರೆ ಆತ್ಮಸಾಕ್ಷಿಯಿಂದ ಮಾಡುವ ದುಡಿಮೆ. ಆಗ ಕಾಯಕದಲ್ಲಿ ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥತೆ, ದೇಹಶ್ರಮ ಇತ್ತು. ಜಂಗಮ ದಾಸೋಹಕ್ಕೆಂದು ಪರಸೇವೆ ಎಂಬುದಿತ್ತು. ಈಗ ಬೆವರಿಲ್ಲದ ದುಡಿಮೆ, ಗಳಿಕೆ ಮುನ್ನೆಲೆಗೆ ಬಂದಿವೆ. ಸರ್ಕಾರಗಳೇ ದಾಸೋಹ ಕೇಂದ್ರಗಳಾಗಿವೆ. ಸರ್ಕಾರದ ಸಕಲ ಸೌಲಭ್ಯಗಳು, ಅಧಿಕಾರ, ಗಳಿಕೆ ಮಾರ್ಗವಾಗಿರುವಾಗ, ಅಕಾಯಕವೇ ಕಾಯಕವಾಗಿರುವಾಗ ಶ್ರಮ ಸಂಸ್ಕೃತಿ ಹಿನ್ನೆಲೆಗೆ ಸರಿದಿದೆ.

ನಿಜ, ಈಗಲೂ ರೈತರಿಂದ ಹಿಡಿದು, ಕಾರ್ಮಿಕರಾದಿಯಾಗಿ ಎಲ್ಲರ ದೇಹಶ್ರಮದಿಂದಲೇ ನಾಡು, ದೇಶ ಅಭಿವೃದ್ಧಿ ಕಾಣುವುದು. ಆದರೆ 'ದುಡಿದು ಮೈ ಬಗ್ಗಿಸುವವರು, ತಿಂದು ಮೈ ಕೊಬ್ಬಿಸುವವರು' ಎಂದು ನಮ್ಮ ಸಮಾಜವೇ ವಿಭಜನೆಗೊಂಡಿರುವಾಗ ಕಾಯಕವೇ ಕೈಲಾಸ ಎಂಬಂತಹವು ಕೇವಲ ಬಾಹ್ಯಾಡಂಬರದ ನುಡಿಗಳಾಗಿ ಸಮಾಜವನ್ನು ಅಣಕಿಸುತ್ತಿರುತ್ತವೆ, ನಮ್ಮ ಪ್ರಜ್ಞೆಯನ್ನು ಕೆಣಕುತ್ತಿರುತ್ತವೆ.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಲಿಯನೇರ್‌ಗಳ ಸಂಪತ್ ಸಮೃದ್ಧಿ

2021ರಲ್ಲಿ ಈವರೆಗೆ ತಮ್ಮ ಸಂಪತ್ತನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಿಕೊಂಡ ಉದ್ಯಮಿಗಳಲ್ಲಿ ಭಾರತದ ಗೌತಮ್ ಅದಾನಿ ಮೊದಲ ಸ್ಥಾನದಲ್ಲಿದ್ದಾರೆ. ಈ ಅವಧಿಯಲ್ಲಿ ಟೆಸ್ಲಾ ಸಿಇಒ ಇಲಾನ್ ಮಸ್ಕ್, ಅಮೆಜಾನ್ ಸಿಇಒ ಜೆಫ್ ಬೆಜೋಸ್ ಅವರನ್ನೂ ಮೀರಿಸಿರುವ ಅದಾನಿ ಅವರು ₹1.18 ಲಕ್ಷ ಕೋಟಿಯಷ್ಟು ತಮ್ಮ ಸಂಪತನ್ನು ಹೆಚ್ಚಿಸಿಕೊಂಡಿದ್ದಾರೆ. ಅದಾನಿ ಅವರ ಸಂಪತ್ತಿನಲ್ಲಿ ಆಗಿರುವ ದಿಢೀರ್ ಏರಿಕೆಯನ್ನು ವಿರೋಧ ಪಕ್ಷಗಳು ಪ್ರಶ್ನಿಸಿವೆ

ಕೋವಿಡ್ ಮಹಾಮಾರಿಯು ಜಗತ್ತಿನಲ್ಲಿ ಕೋಟ್ಯಂತರ ಮಂದಿಯ ಉದ್ಯೋಗವನ್ನು ಕಸಿದುಕೊಂಡು ಅವರನ್ನು ಸಂಕಷ್ಟಕ್ಕೆ ತಳ್ಳಿದ್ದರೆ, ಹಲವು ಶ್ರೀಮಂತರ ಸಂಪತ್ತು ಈ ವಿಷಮ ಕಾಲದಲ್ಲಿಯೂ ವೃದ್ಧಿಯಾಗಿದೆ. ಪಿಡುಗಿನ ಕಾರಣದಿಂದ ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಭಾರಿ ಪ್ರಮಾಣದಲ್ಲಿ ಹೆಚ್ಚಿದೆ. ಇಂಥ ಸಂದರ್ಭದಲ್ಲೂ ಜಗತ್ತಿನಲ್ಲಿ ಅನೇಕ ಬಿಲಿಯನೇರ್‌ಗಳು (ಸುಮಾರು ₹ ಏಳು ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಸಂಪತ್ತು ಇರುವವರು) ಹುಟ್ಟಿಕೊಂಡಿದ್ದಾರೆ ಎಂದು ಹಲವು ವರದಿಗಳು ಹೇಳಿವೆ.

ವರದಿಗಳ ಪ್ರಕಾರ, ಕಳೆದ ಒಂದು ವರ್ಷದಲ್ಲಿ ಭಾರತದ 40 ಮಂದಿ ಬಿಲಿಯನೇರ್‌ಗಳ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗಿದ್ದಾರೆ.

ಭಾರತಕ್ಕೆ ಕೊರೊನಾ ಪ್ರವೇಶ ಪಡೆದ ಬಳಿಕ ಜಾರಿ ಮಾಡಿದ ಲಾಕ್‌ಡೌನ್‌ನ ಮೊದಲ ಕೆಲವು ತಿಂಗಳಲ್ಲಿ ಕೆಲವು ಉದ್ಯಮಿಗಳ ಆದಾಯಕ್ಕೆ ಸ್ವಲ್ಪ ಕುತ್ತು ಬಂದಿದೆ. ಆದರೆ, ಕೆಲವೇ ದಿನಗಳಲ್ಲಿ ಅವರು ಚೇತರಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಗಳಿಕೆಯಲ್ಲಿ ಶೇ 35ಕ್ಕೂ ಹೆಚ್ಚು ಏರಿಕೆ ದಾಖಲಿಸಿದ್ದಾರೆ ಎಂದು ವರದಿಯಾಗಿದೆ.

ಕಳೆದ ವರ್ಷ ಮಾರ್ಚ್‌ನಿಂದ ಡಿಸೆಂಬರ್ ಅಂತ್ಯದ ವರೆಗಿನ ಅವಧಿಯಲ್ಲಿ ದೇಶದ ಪ್ರಮುಖ 100 ಬಿಲಿಯನೇರ್‌ಗಳ ಒಟ್ಟಾರೆ ಆದಾಯವು ₹12,97,822 ಕೋಟಿಯಷ್ಟು ಏರಿಕೆಯಾಗಿದೆ ಎಂದು ಆಕ್ಸ್‌ಫಾಮ್ ಸಂಸ್ಥೆ ಸಿದ್ಧಪಡಿಸಿದ 'ದಿ ಇನ್‌ಇಕ್ವಾಲಿಟಿ ವೈರಸ್' ಎಂಬ ವರದಿಯಲ್ಲಿ ಹೇಳಲಾಗಿದೆ.

ರಿಲಯನ್ಸ್ ಸಂಸ್ಥೆಯ ಮುಖ್ಯಸ್ಥ ಮುಕೇಶ್ ಅಂಬಾನಿ ಅವರ ಪ್ರತಿ ಒಂದು ಗಂಟೆಯ ಗಳಿಕೆಯು ಕೌಶಲರಹಿತ ಕಾರ್ಮಿಕನೊಬ್ಬನ 10,000 ವರ್ಷಗಳ ಗಳಿಕೆಗೆ ಹಾಗೂ ಪ್ರತಿ ಸೆಕೆಂಡ್‌ನ ಗಳಿಕೆಯು ಇಂಥ ಕಾರ್ಮಿಕನ ಮೂರು ವರ್ಷಗಳ ಗಳಿಕೆಗೆ ಸಮ ಎಂದು ವರದಿ ಹೇಳಿದೆ. ಕೋವಿಡ್ ಅವಧಿಯಲ್ಲಿ ನಮ್ಮಲ್ಲಿನ ಶ್ರೀಮಂತರ ಗಳಿಕೆಯು ಯಾವ ಪ್ರಮಾಣದಲ್ಲಿ ಹೆಚ್ಚಿದೆ ಎಂಬುದಕ್ಕೆ ವರದಿಯು ಇನ್ನೊಂದು ಉದಾಹರಣೆ ನೀಡಿದೆ. ದೇಶದ ಪ್ರಮುಖ 11 ಮಂದಿ ಬಿಲಿಯನೇರ್‌ಗಳು ಈ ಅವಧಿಯಲ್ಲಿ ಮಾಡಿರುವ ಗಳಿಕೆಯ ಮೇಲೆ ಶೇ 1ರಷ್ಟು ತೆರಿಗೆ ವಿಧಿಸಿದರೆ, ಆ ಮೊತ್ತವು ಸರ್ಕಾರವು ಜನೌಷಧ ಯೋಜನೆಗೆ ಮಾಡುವ ವೆಚ್ಚವನ್ನು 140 ಪಟ್ಟು ಹೆಚ್ಚಿಸಬಹುದು. ಈ ಮೊತ್ತವು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 10 ವರ್ಷಗಳ ಕಾಲ ನಡೆಸಲು ಅಥವಾ ಆರೋಗ್ಯ ಸಚಿವಾಲಯದ ವಿವಿಧ ಯೋಜನೆಗಳನ್ನು 10 ವರ್ಷಗಳ ಕಾಲ ನಡೆಸಲು ಸಾಕಾಗುತ್ತದೆ ಎಂದಿದೆ.

ಗೌತಮ್ ಅದಾನಿ, ಶಿವ ನಾಡಾರ್, ಸೈರಸ್ ಪೂನಾವಾಲಾ, ಉದಯ್ ಕೋಟಕ್, ಅಜೀಂ ಪ್ರೇಮ್‌ಜಿ, ಸುನಿಲ್ ಮಿತ್ತಲ್, ರಾಧಾಕೃಷ್ಣನ್ ದಮಾನಿ, ಕುಮಾರಮಂಗಲಂ ಬಿರ್ಲಾ ಹಾಗೂ ಲಕ್ಷ್ಮಿ ಮಿತ್ತಲ್ ಅವರ ಸಂಪತ್ತು 2020ರ ಮಾರ್ಚ್ ನಂತರ ಭಾರಿ ಪ್ರಮಾಣದಲ್ಲಿ ಹೆಚ್ಚಿದೆ.

ಇನ್ನೊಂದೆಡೆ, ಏಪ್ರಿಲ್ ತಿಂಗಳಲ್ಲಿ ದೇಶದಲ್ಲಿ ಪ್ರತಿ ಗಂಟೆಗೆ 1.70 ಲಕ್ಷ ಜನರು ಉದ್ಯೋಗ ಕಳೆದುಕೊಂಡು ಸಂಕಷ್ಟಕ್ಕೆ ಒಳಗಾಗಿದ್ದರು. ಬಡತನ ರೇಖೆಗಿಂತ ಸ್ವಲ್ಪ ಮೇಲೆ ಇದ್ದ ಸುಮಾರು 40 ಕೋಟಿ ಜನರು ಕೆಲವು ತಿಂಗಳ ಮಟ್ಟಿಗಾದರೂ ಬಡತನರೇಖೆಗಿಂತ ಕೆಳಕ್ಕೆ ಬಂದಿದ್ದರು, ಆದರೆ ಬಿಲಿಯನೇರ್‌ಗಳ ಉದ್ಯಮ ವಿಸ್ತರಣೆಯ ಯೋಜನೆಗಳು ಹೆಚ್ಚಿನ ತೊಡಕಿಲ್ಲದೆ ಕಾರ್ಯಗತಗೊಂಡಿವೆ ಎನ್ನಲಾಗಿದೆ.

ಮುಕೇಶ್ ಅಂಬಾನಿ

ಭಾರತಕ್ಕೆ ಸೀಮಿತವಲ್ಲ

ಈ ಅಸಮಾನತೆ ಭಾರತಕ್ಕಷ್ಟೇ ಸೀಮಿತವಲ್ಲ. ಜಗತ್ತಿನ ಬಹುತೇಕ ಎಲ್ಲಾ ರಾಷ್ಟ್ರಗಳಲ್ಲಿ ಕೋವಿಡ್ ಅವಧಿಯಲ್ಲಿ ಹೊಸ ಬಿಲಿಯನೇರ್‌ಗಳು ಹುಟ್ಟಿಕೊಂಡಿದ್ದಾರೆ. ವಿಶೇಷವಾಗಿ ಆರೋಗ್ಯ ಸೇವೆ, ಔಷಧ ತಯಾರಿಕಾ ಕ್ಷೇತ್ರಗಳಲ್ಲಿರುವವರು ಈ ಅವಧಿಯಲ್ಲಿ ತಮ್ಮ ಗಳಿಕೆಯನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿದ್ದಾರೆ.

ಮೋದಿಯ ಸುತ್ತ ಅದಾನಿ ವಿವಾದಗಳು

ಮಾಧ್ಯಮ ಮತ್ತು ಪ್ರಚಾರದಿಂದ ಸದಾ ದೂರವಿರುವ ಗೌತಮ್ ಅದಾನಿ ಅವರು ಹೆಚ್ಚು ಸುದ್ದಿಯಾದದ್ದು ವಿವಾದಗಳಿಂದಲೇ. ಈ ಎಲ್ಲಾ ವಿವಾದಗಳೂ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ತಳಕು ಹಾಕಿಕೊಂಡಿವೆ. ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವುದಕ್ಕೂ ಮುನ್ನ, ಅಹಮದಾಬಾದ್‌ನಿಂದ ನವದೆಹಲಿಗೆ ವಿಶೇಷ ವಿಮಾನದಲ್ಲಿ ಬಂದಿದ್ದರು. ಈ ವಿಮಾನವು ಗೌತಮ್ ಅದಾನಿ ಅವರ ಒಡೆತನದಾಗಿತ್ತು ಮತ್ತು ಈ ಪ್ರಯಾಣದ ಸಂಪೂರ್ಣ ವೆಚ್ಚವನ್ನು ಅದಾನಿ ಅವರೇ ಭರಿಸಿದ್ದರು. 'ಮೋದಿ ಅವರು ಉದ್ಯಮಿಗಳನ್ನು ಓಲೈಸುತ್ತಿದ್ದಾರೆ. ಪ್ರಧಾನಿಯಾದವರು ಉದ್ಯಮಿಯೊಬ್ಬರ ಆತಿಥ್ಯವನ್ನು ಒಪ್ಪಿಕೊಳ್ಳಬಾರದು' ಎಂದು ಎಡಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಮೋದಿ ಮತ್ತು ಅದಾನಿ ಅವರು ಈವರೆಗೆ 4 ವಿದೇಶ ಪ್ರಯಾಣಗಳಲ್ಲಿ ಜತೆಯಾಗಿದ್ದಾರೆ. ಇದಕ್ಕೂ ಆಕ್ಷೇಪ ವ್ಯಕ್ತವಾಗಿದೆ.

ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನಲ್ಲಿ ಜಗತ್ತಿನ ಅತಿದೊಡ್ಡ ಕಲ್ಲಿದ್ದಲು ಗಣಿಯ ಗುತ್ತಿಗೆ ಗೌತಮ ಅದಾನಿ ಅವರಿಗೆ ದೊರೆತಿದೆ. ಈ ಗಣಿಯಿಂದ ಪರಿಸರ ಸೂಕ್ಷ್ಮ ಪ್ರದೇಶವಾದ ಗ್ರೇಟ್ ಬ್ಯಾರಿಯರ್ ರೀಫ್‌ಗೆ ಧಕ್ಕೆಯಾಗುತ್ತದೆ ಎಂದು ಭಾರಿ ವಿರೋಧ ವ್ಯಕ್ತವಾಗಿತ್ತು. ಈ ಗಣಿಗಾರಿಕೆಯ ಗುತ್ತಿಗೆ ದೊರೆಯುವುದಕ್ಕೂ ಮುನ್ನ 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಐದು ದಿನಗಳ ಮಟ್ಟಿಗೆ ಆಸ್ಟ್ರೇಲಿಯಾಕ್ಕೆ ಭೇಟಿ ನೀಡಿದ್ದರು. ಈ ಭೇಟಿಯಲ್ಲಿ ಮೋದಿ ಅವರ ಜತೆ ಗೌತಮ್ ಅದಾನಿ ಸಹ ಇದ್ದರು. ಮೋದಿ ಅವರ ಈ ಭೇಟಿಯ ನಂತರವೇ ಕ್ವೀನ್ಸ್‌ಲ್ಯಾಂಡ್‌ನ ಕಲ್ಲಿದ್ದಲು ಗಣಿಯ ಒಪ್ಪಂದ ಅಂತಿಮವಾಗಿತ್ತು. 'ಅದಾನಿ ಅವರಿಗೆ ಗುತ್ತಿಗೆ ದೊರೆಯುವಲ್ಲಿ ಮೋದಿ ಮಧ್ಯಸ್ಥಿಕೆ ವಹಿಸಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿತ್ತು.

2020ರ ಡಿಸೆಂಬರ್‌ನಲ್ಲಿ ಭಾರತಕ್ಕೆ ಆಸ್ಟ್ರೇಲಿಯಾದ ಹೈಕಮಿಷನರ್ ಹರಿಂದರ್ ಸಿಧು ಅವರು, 'ಅದಾನಿ ಅವರ ಗಣಿಗಾರಿಕೆಯ ಕೆಲಸ ನಡೆಯುತ್ತಿದೆ. ಗಣಿಗಾರಿಕೆ ಕೆಲವೇ ದಿನಗಳಲ್ಲಿ ಆರಂಭವಾಗಲಿದೆ. ಆದರೆ, ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವಕ್ಕೆ (ಆರ್‌ಸಿಇಪಿ) ಬರುವ ಬಗ್ಗೆ ಭಾರತ ಸರ್ಕಾರ ಮತ್ತೆ ಯೋಚಿಸಬೇಕು' ಎಂದು ಹೇಳಿದ್ದರು. 'ಅದಾನಿ ಅವರಿಗೆ ಗಣಿಗಾರಿಕೆಗೆ ಅವಕಾಶ ನೀಡಿದ್ದಕ್ಕೆ ಪ್ರತಿಯಾಗಿ ಆರ್‌ಸಿಇಪಿಗೆ ಸಹಿಹಾಕಲು ಆಸ್ಟ್ರೇಲಿಯಾ ಒತ್ತಡ ಹೇರುತ್ತಿದೆ. ಅದಾನಿ ಪರವಾಗಿ ಮೋದಿ ಚೌಕಾಶಿ ನಡೆಸಿದ್ದಾರೆ' ಎಂದು ಸಿಪಿಎಂ ಟ್ವೀಟ್‌ನಲ್ಲಿ ಹೇಳಿತ್ತು.

ದೇಶದ ಆರು ವಿಮಾನ ನಿಲ್ದಾಣಗಳನ್ನು ಖಾಸಗೀಕರಣ ಮಾಡುವ ಕೇಂದ್ರ ಸರ್ಕಾರದ ನಿರ್ಧಾರವೂ ಭಾರಿ ವಿವಾದಕ್ಕೆ ಕಾರಣವಾಗಿತ್ತು. ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ ಅನುಭವವೇ ಇಲ್ಲದ, ಅದಾನಿ ಅವರ ಮಾಲೀಕತ್ವದ ಅದಾನಿ ಏರ್‌ಪೋರ್ಟ್ಸ್‌ಗೆ ಆರು ವಿಮಾನ ನಿಲ್ದಾಣಗಳನ್ನು ಕೇಂದ್ರ ಸರ್ಕಾರ ವಹಿಸಿಕೊಟ್ಟಿದೆ. 'ಅನನುಭವಿ ಕಂಪನಿಗಳು ಬಿಡ್ಡಿಂಗ್‌ನಲ್ಲಿ ಭಾಗವಹಿಸಲು ಅವಕಾಶವೇ ಇರಲಿಲ್ಲ. ಆದರೆ, ಅದಾನಿ ಅವರಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಬಿಡ್ಡಿಂಗ್ ನಿಯಮಗಳಲ್ಲಿ ತಿದ್ದುಪಡಿ ತರಲಾಗಿದೆ' ಎಂದು ಕಾಂಗ್ರೆಸ್ ಆರೋಪಿಸಿತ್ತು. 'ಇದು ಬಂಡವಾಳಶಾಹಿಯ ಓಲೈಕೆಯೇ ಸರಿ' ಎಂದು ಕೇರಳ ಹಣಕಾಸು ಸಚಿವ ಥಾಮಸ್ ಐಸಾಕ್ ಟೀಕಿಸಿದ್ದರು.

ಭಾರತೀಯ ನೌಕಾಪಡೆಯ ಜಲಾಂತರ್ಗಾಮಿಗಳನ್ನು ನಿರ್ಮಿಸುವ 18 ವರ್ಷಗಳ ಅಂದಾಜು ₹ 60,000 ಕೋಟಿ ಮೌಲ್ಯದ ಗುತ್ತಿಗೆ ಪಡೆಯಲು ಜಲಾಂತರ್ಗಾಮಿ ನೌಕೆ ತಯಾರಿಕೆಯಲ್ಲಿ ಅನುಭವವೇ ಅದಾನಿ ಜೆವಿ ಬಿಡ್ಡಿಂಗ್ ಮಾಡಿತ್ತು. ಅಂತಹ ಕಂಪನಿ ಬಿಡ್ಡಿಂಗ್ ಮಾಡಲು ಅವಕಾಶವೇ ಇರಲಿಲ್ಲ. ಆದರೂ ಅಂತಿಮ ಮೂರು ಕಂಪನಿಗಳಲ್ಲಿ ಅದಾನಿ ಜೆವಿ ಅವಕಾಶ ಪಡೆದಿತ್ತು ಎಂದು ಕಾಂಗ್ರೆಸ್ ಆರೋಪಿಸಿತ್ತು. ಅಂತಿಮವಾಗಿ ಈ ಗುತ್ತಿಗೆ ಅದಾನಿ ಜೆವಿಗೆ ದೊರೆಯಲಿಲ್ಲ.

ರಾಹುಲ್ ಪ್ರಶ್ನೆ

ಗೌತಮ್ ಅದಾನಿ ಅವರ ಸಂಪತ್ತು 2020ರಲ್ಲಿ ಶೇ 50ರಷ್ಟು ಏರಿಕೆ ಹೇಗಾಯಿತು ಎಂದು ರಾಹುಲ್ ಪ್ರಶ್ನಿಸಿದ್ದರು. '2020ರಲ್ಲಿ ನಿಮ್ಮ ಸಂಪತ್ತು ಎಷ್ಟು ಏರಿಕೆಯಾಯಿತು? ಸೊನ್ನೆ. ನೀವು ಜೀವನ ನಡೆಸಲೇ ಹೆಣಗಾಡುತ್ತಿರುವಾಗ ಅದಾನಿ ಅವರ ಸಂಪತ್ತು ಶೇ 50ರಷ್ಟು ಏರಿಕೆಯಾಗಿ ₹ 12 ಲಕ್ಷ ಕೋಟಿಯಾಗುತ್ತದೆ. ಇದು ಏಕೆ ಎಂಬುದನ್ನು ಹೇಳುತ್ತೀರಾ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಪ್ರಶ್ನಿಸಿದ್ದರು.

ಶುಕ್ರವಾರ ನಡೆದ ಕ್ವಾಡ್ ಕೂಟದ ವರ್ಚುವಲ್ ಸಭೆ

'ಕ್ವಾಡ್' ವಿಸ್ತಾರದ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕ್ವಾಡ್'ನ ಐತಿಹಾಸಿಕ ಮೊದಲ ಶೃಂಗ ಸಭೆ ನಡೆದು ಎರಡು ದಿನಗಳ ಬಳಿಕ, ಈ ಕೂಟವು ಇನ್ನಷ್ಟು ವಿಸ್ತಾರವಾಗುವ ಸಾಧ್ಯತೆ ಕಾಣಿಸಿಕೊಂಡಿದೆ. ಹಿಂದೂ ಮಹಾಸಾಗರ–ಪೆಸಿಫಿಕ್ ಸಾಗರ ಪ್ರದೇಶವನ್ನು ಮುಕ್ತ, ಸುರಕ್ಷಿತ ಮತ್ತು ಸಮೃದ್ಧವಾಗಿಸುವುದಕ್ಕಾಗಿ ಇತರ ದೇಶಗಳನ್ನು ಜತೆಗೆ ಸೇರಿಸಿಕೊಳ್ಳಲು ಭಾರತ, ಜಪಾನ್, ಆಸ್ಟ್ರೇಲಿಯಾ ಮತ್ತು ಅಮೆರಿಕ ಇರುವ 'ಕ್ವಾಡ್' ಕೂಟವು ಸಿದ್ಧವಾಗಿದೆ.

'ಕ್ವಾಡ್ ಎಂಬುದು ಸಮಾನ ಮನಸ್ಕ ಪಾಲುದಾರರ ಗುಂಪು. ಶಾಂತಿ ಮತ್ತು ಸಮೃದ್ಧಿಯ ಉದ್ದೇಶದ ಸಮಾನ ಮುನ್ನೋಟವನ್ನು ಮುಂದಿಡುವುದು ಈ ಕೂಟದ ಬದ್ಧತೆ. ಈ ಗುರಿಗಳನ್ನು ಇರಿಸಿಕೊಂಡಿರುವ ಎಲ್ಲ ದೇಶಗಳನ್ನು ಸ್ವಾಗತಿಸುತ್ತೇವೆ ಮತ್ತು ಅವರೊಂದಿಗೆ ಕೆಲಸ ಮಾಡಲು ಉತ್ಸುಕರಾಗಿದ್ದೇವೆ' ಎಂದು ಕ್ವಾಡ್ ದೇಶಗಳ ನಾಯಕರು ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನದಲ್ಲಿ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್, ಜಪಾನ್‌ನ ಪ್ರಧಾನಿ ಯೊಶಿಹಿಡೆ ಸುಗಾ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಜಂಟಿಯಾಗಿ ಈ ಲೇಖನ ಬರೆದಿದ್ದಾರೆ.

ನಾಲ್ಕು ದೇಶಗಳ ಅನೌಪಚಾರಿಕ ಕೂಟದಂತೆ ಇದ್ದ 'ಕ್ವಾಡ್', ಈಗ ಪ್ರಜಾಸತ್ತಾತ್ಮಕ ದೇಶಗಳ ಮುಖ್ಯಸ್ಥರ ಸಮಿತಿಯ ಮಟ್ಟಕ್ಕೆ ಏರಿದೆ. ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್‌ನಲ್ಲಿ ಎದುರಾಗುವ ಭದ್ರತಾ ಬೆದರಿಕೆಯನ್ನು ಹಿಮ್ಮೆಟ್ಟಿಸಲು ಸಜ್ಜಾಗಿದ್ದೇವೆ ಎಂಬ ಸಂದೇಶವನ್ನು ಚೀನಾಕ್ಕೆ ಸೂಕ್ಷ್ಮವಾಗಿ ಮತ್ತು ದೃಢವಾಗಿ ರವಾನಿಸಲಾಗಿದೆ.

ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಮಾತ್ರವಲ್ಲದೆ ಜಗತ್ತಿನ ಇತರ ಭಾಗಗಳನ್ನೂ ಈ ಕೂಟವು ಒಳಗೊಳ್ಳಲಿದೆ ಎಂಬ ಸಂದೇಶವು ಲೇಖನದಲ್ಲಿ ಸ್ಪಷ್ಟವಾಗಿದೆ.

ಎಲ್ಲರಿಗೂ ಲಸಿಕೆ

ಕೋವಿಡ್ ತಡೆ ಲಸಿಕೆ ರಾಜತಾಂತ್ರಿಕತೆಯೂ ಲೇಖನದಲ್ಲಿ ಉಲ್ಲೇಖವಾಗಿದೆ. ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ಎಲ್ಲ ದೇಶಗಳಿಗೆ ಲಸಿಕೆ ಲಭ್ಯವಾಗುವಂತೆ ಮಾಡಲಾಗುವುದು ಎಂದು ಕ್ವಾಡ್ ನಾಯಕರ ವರ್ಚುವಲ್ ಸಭೆಯಲ್ಲಿ ಘೋಷಿಸಲಾಗಿತ್ತು.

'ಭಾರತದಲ್ಲಿ ಸುರಕ್ಷಿತವಾದ, ಪರಿಣಾಮಕಾರಿಯಾದ ಮತ್ತು ಎಲ್ಲರಿಗೂ ಲಭ್ಯವಾಗುವಂತಹ ಲಸಿಕೆಗಳನ್ನು ತಯಾರಿಸಲಾಗುವುದು. ಉತ್ಪಾದನೆಯನ್ನು ಹೆಚ್ಚಿಸಲಾಗುವುದು. 2022ರೊಳಗೆ ಈ ಪ್ರದೇಶದ ಎಲ್ಲರಿಗೂ ಲಸಿಕೆ ದೊರೆಯುವಂತೆ ಮಾಡಲು ಎಲ್ಲ ಹಂತಗಳಲ್ಲಿಯೂ ಪಾಲುದಾರಿಕೆ ಇರಲಿದೆ' ಎಂದು ಲೇಖನದಲ್ಲಿ ಭರವಸೆ ನೀಡಲಾಗಿದೆ.

ಪರಿಸರಕ್ಕೆ ಒತ್ತು

ಹವಾಮಾನ ಬದಲಾವಣೆಯ ವಿಚಾರವನ್ನೂ ಲೇಖನದಲ್ಲಿ ಚರ್ಚಿಸಲಾಗಿದೆ. ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿಯೂ ಹವಾಮಾನ ಬದಲಾವಣೆ ತಡೆಯುವುದು ಆದ್ಯತೆಯಾಗಬೇಕಿದೆ. ಪ್ಯಾರಿಸ್ ಒಪ್ಪಂದವನ್ನು ಇನ್ನಷ್ಟು ಬಲಪಡಿಸಬೇಕಿದೆ. ಎಲ್ಲ ದೇಶಗಳೂ ಹವಾಮಾನ ಬದಲಾವಣೆ ತಡೆ ಯತ್ನಗಳನ್ನು ಹೆಚ್ಚಿಸಬೇಕಿದೆ ಎಂದು ಲೇಖನದಲ್ಲಿ ಕರೆ ಕೊಡಲಾಗಿದೆ.

ಅದಾನಿ ಸಂಪತ್ತಿನ ನಾಗಾಲೋಟ

ಭಾರತದ ಶ್ರೀಮಂತರು ಎಂದ ಕೂಡಲೇ ನೆನಪಾಗುವುದು ಉದ್ಯಮಿಗಳಾದ ಅಂಬಾನಿ ಹಾಗೂ ಅದಾನಿ ಅವರ ಹೆಸರುಗಳು. ಮುಖೇಶ್ ಅಂಬಾನಿ ಅವರ ತಂದೆ ಧೀರೂಭಾಯಿ ಅಂಬಾನಿ ಅವರು ರಿಲಯನ್ಸ್ ಎಂಬ ಉದ್ಯಮವನ್ನು ಕಟ್ಟಿದ್ದರು. ಅವರ ಪುತ್ರ ಮುಕೇಶ್ ಅಂಬಾನಿ ಅವರು ತಂದೆಯ ಉದ್ಯಮವನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ದರು. ಆದರೆ ಗೌತಮ್ ಅದಾನಿ ಕತೆ ಹಾಗಿಲ್ಲ. ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ಅವರು ಕೆಲವೇ ವರ್ಷಗಳಲ್ಲಿ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ ಸೇರಿದ್ದು ಅಚ್ಚರಿಯ ಕತೆ.

ಕಾಲೇಜು ಅಧ್ಯಯನವನ್ನು ಅರ್ಧಕ್ಕೆ ಬಿಟ್ಟವರು ಗೌತಮ್ ಅದಾನಿ. ತಂದೆ ಜವಳಿ ವ್ಯವಹಾರ ನಡೆಸುತ್ತಿದ್ದರು. ವ್ಯವಹಾರದಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾದ ಅದಾನಿ, 80ರ ದಶಕದ ಆರಂಭದಲ್ಲಿ ಮುಂಬೈನಲ್ಲಿ ವಜ್ರದ ವ್ಯಾಪಾರಕ್ಕೆ ಇಳಿದರು. ಬಳಿಕ ತವರು ರಾಜ್ಯ ಗುಜರಾತಿಗೆ ಮರಳಿ ಅಲ್ಲಿ, ಸಹೋದರನ ಪ್ಲಾಸ್ಟಿಕ್ ವ್ಯವಹಾರಕ್ಕೆ ನೆರವಾದರು.

1988ರಲ್ಲಿ ಅದಾನಿ ಟ್ರೇಡಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. 1990ರಲ್ಲಿ ಅರಬ್ಬಿ ಸಮುದ್ರ ತೀರದ ಮುಂದ್ರಾ ಬಂದರು ನಿರ್ವಹಣೆಯ ಜವಾಬ್ದಾರಿ ಸಿಕ್ಕಿತು. ಈ ಬಂದರು ವರ್ಷಕ್ಕೆ 26.4 ಕೋಟಿ ಟನ್ ಸರಕು ನಿರ್ವಹಿಸುತ್ತದೆ. ಇದು ಭಾರತದ ಖಾಸಗಿ ವಲಯದ ದೊಡ್ಡ ಬಂದರು ಆಗಿದೆ.

ಇಲ್ಲಿಂದ ಅದಾನಿ ಅವರು ತಮ್ಮ ವ್ಯವಹಾರ ಚಟುವಟಿಕೆಗಳನ್ನು ಇತರ ಕ್ಷೇತ್ರಗಳಿಗೆ ವಿಸ್ತರಿಸಿದರು. ವಿದ್ಯುತ್, ಅನಿಲ, ರಿಯಲ್ ಎಸ್ಟೇಟ್, ಗಣಿಗಾರಿಕೆ ಮೊದಲಾದ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಆಸ್ಟ್ರೇಲಿಯಾದಂತಹ ದೇಶದಲ್ಲಿ ಇವರ ಬೃಹತ್ ಗಣಿಗಾರಿಕೆ ಇದೆ. ಖಾಸಗಿ ವಲಯದ ವಿದ್ಯುತ್ ಕ್ಷೇತ್ರದಲ್ಲಿ ಅದಾನಿ ಅವರು ದೇಶದ ಅತಿದೊಡ್ಡ ವಿದ್ಯುತ್ ಉತ್ಪಾದಕ ಎನಿಸಿಕೊಂಡಿದ್ದಾರೆ.

ಗಣಿಗಾರಿಕೆ, ಅನಿಲ ಮತ್ತು ಬಂದರು ಸೇರಿದಂತೆ ವಿವಿಧ ಕಂಪನಿಗಳ ಷೇರುಗಳು ಕಳೆದ ವರ್ಷ ಹೆಚ್ಚು ಗಳಿಕೆ ಕಂಡವು. 6 ಬಿಲಿಯನ್ ಡಾಲರ್ (ಸುಮಾರು ₹40 ಸಾವಿರ ಕೋಟಿ) ಮೊತ್ತದ ಸೌರಶಕ್ತಿ ಒಪ್ಪಂದ ಪಡೆಯುವ ಮೂಲಕ ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಹೋದ ವರ್ಷ ಆರು ಪಟ್ಟು ಹೆಚ್ಚು ಗಳಿಕೆ ದಾಖಲಿಸಿತು. ಇದು 2025ರ ವೇಳೆಗೆ ವಿಶ್ವದ ಅತಿದೊಡ್ಡ ನವೀಕರಿಸಬಹುದಾದ ಇಂಧನ ತಯಾರಿಕಾ ಸಂಸ್ಥೆಯಾಗುವತ್ತ ಹೆಜ್ಜೆ ಇರಿಸಿದೆ.





ಗೌತಮ್ ಅದಾನಿ

2016ರವರೆಗೂ ಅದಾನಿ ಅವರ ಆಸ್ತಿ ಮೌಲ್ಯ 3.5 ಬಿಲಿಯನ್ ಡಾಲರ್ (ಸುಮಾರು ₹25 ಸಾವಿರ ಕೋಟಿ) ಮಾತ್ರ. ಇಲ್ಲಿಂದ ಪ್ರತೀ ವರ್ಷವೂ ಅವರ ಆಸ್ತಿ ಮೌಲ್ಯ ಏರಿಕೆಯಾಗುತ್ತಲೇ ಹೋಯಿತು. ಕೊರೊನಾ ವೈರಸ್‌ನಿಂದ ದೇಶದ ಆರ್ಥಿಕತೆ ಮಂಕಾಗಿದ್ದರೂ, ಕಳೆದ ವರ್ಷ ಅದಾನಿ ಅವರ ಆಸ್ತಿ ಮೌಲ್ಯ ಏರಿಕೆಗೆ ಯಾವುದೇ ಧಕ್ಕೆಯಾಗಿಲ್ಲ. ತಮ್ಮ ವ್ಯವಹಾರಕ್ಕೆ ಅನುಕೂಲವಾಗುವ ನೀತಿಗಳನ್ನು ರೂಪಿಸಲು ರಾಜಕಾರಣಿಗಳು ಹಾಗೂ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಜಾಣ್ಮೆಯನ್ನು ಅದಾನಿ ಅವರು ಸಿದ್ಧಿಸಿಕೊಂಡಿದ್ದಾರೆ ಎಂಬ ಮಾತಿದೆ. ಈ ಕಾರಣಕ್ಕಾಗಿಯೇ ಹಲವು ವಿಮಾನ ನಿಲ್ದಾಣಗಳು, ಬಂದರುಗಳು, ವಿದ್ಯುತ್ ಯೋಜನೆಗಳ ಗುತ್ತಿಗೆಯನ್ನು ಅವರು ಅನಾಯಾಸವಾಗಿ ಪಡೆದುಕೊಳ್ಳಲು ಸಾಧ್ಯವಾಗಿದೆ ಎನ್ನಲಾಗುತ್ತಿದೆ.

ಉದಾಹರಣೆಗೆ, ಸರ್ಕಾರವು ಆರು ಪ್ರಾದೇಶಿಕ ವಿಮಾನ ನಿಲ್ದಾಣಗಳನ್ನು ನಿರ್ವಹಿಸಲು ಬಿಡ್‌ಗಳನ್ನು ಆಹ್ವಾನಿಸಿತ್ತು. ಆದರೆ, ವಿಮಾನ ನಿಲ್ದಾಣಗಳನ್ನು ನಡೆಸುವಲ್ಲಿ ಅನುಭವವಿಲ್ಲದವರೂ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಸರ್ಕಾರ ನಿಯಮ ಬದಲಾಯಿಸಿದ್ದು ಅದಾನಿ ಅವರಿಗೆ ನೆರವಾಗಿತ್ತು.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ಹ್ಯೂರನ್ ಗ್ಲೋಬಲ್ ರಿಚ್ ಲಿಸ್ಟ್, **ವರದಿ:** ಉದಯ ಯು., ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಮಮತಾ ಬ್ಯಾನರ್ಜಿ ಅವರ ಬಲಗಾಲಿಗೆ ಗಾಯವಾಗಿದೆ. ಅದಕ್ಕೆ ಬ್ಯಾಂಡೇಜ್ ಸುತ್ತಿಕೊಂಡು ಪ್ರಚಾರ ನಡೆಸುತ್ತಿದ್ದಾರೆ. ಆದರೆ ಆಸ್ಪತ್ರೆಯಲ್ಲಿ ಅವರ ಎಡಗಾಲಿಗೆ ಬ್ಯಾಂಡೇಜ್ ಸುತ್ತಲಾಗಿದೆ. ಚುನಾವಣಾ ಪ್ರಚಾರಕ್ಕೋಸ್ಕರ ಅವರು ಇಂತಹ ನಾಟಕವಾಡುತ್ತಿದ್ದಾರೆ' ಎಂದು ಪಶ್ಚಿಮ ಬಂಗಾಳ ಬಿಜೆಪಿಯ ಹಲವು ಕಾರ್ಯಕರ್ತರು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಮಮತಾ ಬ್ಯಾನರ್ಜಿ ಅವರ ಬಲಗಾಲಿನ ಹಿಮ್ಮಡಿಗೆ ಕ್ರೇಪ್‌ಬ್ಯಾಂಡ್ ಸುತ್ತಿರುವ ಚಿತ್ರವೂ ಈ ಪೋಸ್ಟ್‌ಗಳಲ್ಲಿ ಇದೆ.

ಇದು ಸುಳ್ಳು ಸುದ್ದಿ. ಈ ಚಿತ್ರವನ್ನು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಇದು ಹಳೆಯ ಚಿತ್ರ. 2020ರ ನವೆಂಬರ್ 16ರಂದು ಹಿರಿಯ ನಟ ಸೌಮಿತ್ರಾ ಚಟರ್ಜಿ ಅವರ ಅಂತಿಮದರ್ಶನಕ್ಕೆ ಬಂದಿದ್ದಾಗ ತೆಗೆಯಲಾಗಿದ್ದ ಮಮತಾ ಅವರ ಚಿತ್ರವನ್ನು, ಈಗಿನದ್ದು ಎಂದು ಹಂಚಿಕೊಳ್ಳಲಾಗುತ್ತಿದೆ. ಪಾದದ ನೋವಿನ ಕಾರಣಕ್ಕೆ ಮಮತಾ ಅವರ ಬಲಗಾಲಿನ ಹಿಮ್ಮಡಿಗೆ ಗುಲಾಬಿ ಬಣ್ಣದ ಕ್ರೇಪ್‌ಬ್ಯಾಂಡ್ ಹಾಕಲಾಗಿತ್ತು. ಅದನ್ನೇ ಬ್ಯಾಂಡೇಜ್ ಎಂದು ಹೇಳುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಹಳೆಯ ಚಿತ್ರವನ್ನು ಈಗ ಹಂಚಿಕೊಳ್ಳಲಾಗುತ್ತಿದೆ ಎಂದು ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಜ್ಞೆಯನ್ನು ದಾಟದ ಲಕ್ಷ್ಮಿ

ಮಿಥಿಲೆಯ ರಾಜ ವಿದೇಹನಿಗೆ ಎರಡು ಕೆಲಸಗಳನ್ನು ಒಮ್ಮೆಗೇ ಮಾಡಬೇಕೆಂಬ ಮನಸ್ಸಾಯಿತು. ಮೊದಲನೆಯದು ತನ್ನ ಅಮಾತ್ಯರು ಎಷ್ಟು ಅಜ್ಞರು ಎಂಬುದನ್ನು ಎಲ್ಲರಿಗೂ ತೋರುವುದು ಮತ್ತು ಮಹೋಷಧಕುಮಾರನ ಬುದ್ಧಿಮತ್ತೆಯನ್ನು ತಿಳಿಯಪಡಿಸುವುದು. ಒಂದು ದಿನ ಪೂರ್ತಿ ದರ್ಬಾರ ನಡೆದಿದ್ದಾಗ ರಾಜ ತನ್ನ ಆಸ್ಥಾನದ ರತ್ನಗಳಾದ ಅಮಾತ್ಯರುಗಳಿಗೆ ಒಂದು ಪ್ರಶ್ನೆ ಕೇಳಿದ. 'ಇಬ್ಬರು ವ್ಯಕ್ತಿಗಳಿದ್ದಾರೆ. ಒಬ್ಬ ಮನುಷ್ಯ ಪ್ರಜ್ಞಾವಂತ, ವಿನಯಿ ಮತ್ತು ಸದಾಚಾರಿ, ಆದರೆ ಬಡವ. ಮತ್ತೊಬ್ಬ ಅತ್ಯಂತ ಶ್ರೀಮಂತ. ಆದರೆ ಅವನು ಮಹಾಗರ್ವಿ, ಪ್ರಜ್ಞಾರಹಿತ ಮತ್ತು ದುರಾಚಾರಿ. ಇಬ್ಬರಲ್ಲಿ ಯಾರು ಶ್ರೇಷ್ಠರು? ಯಾರನ್ನು ಜನ ಒಪ್ಪುತ್ತಾರೆ?.'

ಅಮಾತ್ಯ ಸೇನಕನಿಗೆ ಇದು ತುಂಬ ಸುಲಭದ ಪ್ರಶ್ನೆ. ಆತ ತಕ್ಷಣ ಉತ್ತರಕೊಟ್ಟ. 'ಇದರಲ್ಲಿ ಚಿಂತಿಸುವಂಥದ್ದೇನಿದೆ ಮಹಾಸ್ವಾಮಿ? ಪ್ರಪಂಚದಲ್ಲಿ ಮೂರ್ಖರು, ವಿದ್ಯೆ ಪಡೆದವರು, ವಿದ್ಯೆ ಇಲ್ಲದವರು, ಉತ್ತಮರು ಎಲ್ಲರೂ ಶ್ರೀಮಂತ ಮನುಷ್ಯನ ನೌಕರರಾಗಿ ಬಿಡುತ್ತಾರೆ. ಹಣಕ್ಕಾಗಿ ದಾಸ್ಯವನ್ನು ಪಡೆಯುತ್ತಾರೆ. ಆದ್ದರಿಂದ ಗುಣಗಳಿಗಿಂತ ಹಣ ಮುಖ್ಯ'. 'ಈ ಮಾತು ಸರಿಯೇ? ನಿಮಗೆಲ್ಲ ಒಪ್ಪಿತವಿದೆಯೆ?' ಕೇಳಿದ ರಾಜ. ಅವನ ಪ್ರಶ್ನೆ ಮುಖ್ಯವಾಗಿ ಇದ್ದದ್ದು ಮಹೋಷಧಕುಮಾರನನ್ನು ಉದ್ದೇಶಿಸಿದ್ದು. ಕುಮಾರ ತಕ್ಷಣವೇ ಹೇಳಿದ, 'ಮಹಾರಾಜ, ಹಣವನ್ನೇ ಶ್ರೇಷ್ಠ ಎಂದುಕೊಳ್ಳುವ ಮೂರ್ಖ ಪಾಪ-ಕರ್ಮ ಮಾಡುತ್ತಾನೆ. ಈ ಲೋಕವನ್ನು ಮಾತ್ರ ಗಮನಿಸುತ್ತ ಪರಲೋಕವನ್ನು ಮರೆಯುವ ಆತ ಎರಡೂ ಕಡೆಗೂ ಪಾಪಕ್ಕೆ ಗುರಿಯಾಗುತ್ತಾನೆ. ಆದ್ದರಿಂದ ಮೂರ್ಖ ಶ್ರೀಮಂತ ಮತ್ತು ಬಡವ ಪಂಡಿತರಲ್ಲಿ, ಬಡವ ಪಂಡಿತನೇ ಶ್ರೇಷ್ಠ'. ಸೇನಕ ಹೇಳಿದ, 'ಮಹಾರಾಜ, ಮಹೋಷಧ ಇನ್ನು ಹುಡುಗ. ಅವನ ಬಾಯಿಯಿಂದ ಕುಡಿದ ಹಾಲಿನ ವಾಸನೆ ಬರುತ್ತದೆ. ಅವನಿಗೆ ಈ ವಿಷಯ ಏನು ಗೊತ್ತು? ಜ್ಞಾನದಿಂದ, ತಿಳವಳಿಕೆಯಿಂದ, ಒಳ್ಳೆಯ ನಡತೆಯಿಂದ ಐಶ್ವರ್ಯ ಪ್ರಾಪ್ತಿಯಾಗುವುದಿಲ್ಲ. ಏನೂ ಓದದ ನಮ್ಮ ಗೋರಿಮಂದನ ಶ್ರೇಷ್ಠಿಯನ್ನು ನೋಡು. ಅವನ ಬಳಿ ಅಪಾರ ಐಶ್ವರ್ಯ, ಅದರಿಂದ ಅವನ ಸುಖ ಭೋಗ. ಆದರೆ ಅಪಾರ ವಿದ್ಯೆ ಪಡೆದ ಬಡ ಬ್ರಾಹ್ಮಣನನ್ನು ನೋಡು. ಅವನು ಬದುಕುವುದು ಭಿಕ್ಷೆಯಿಂದ. ಆದ್ದರಿಂದ ಜ್ಞಾನಕ್ಕಿಂತ ಐಶ್ವರ್ಯವೇ ಶ್ರೇಷ್ಠ'.

'ಹಣಕ್ಕೂ, ಆನಂದಕ್ಕೂ ಯಾವುದೇ ಸಂಬಂಧವಿಲ್ಲ. ಭಿಕ್ಷೆಯಿಂದ ಬದುಕುವ ಬ್ರಾಹ್ಮಣನಿಗೆ ತೃಪ್ತಿ ಇದೆ, ಯಾಕೆಂದರೆ ಅವನಲ್ಲಿ ಜ್ಞಾನವಿದೆ. ಈ ಶ್ರೀಮಂತನಿಗೆ ತೃಪ್ತಿಯೇ ಇಲ್ಲ. ಸದಾಕಾಲ ಬಿಸಿಲಿನಲ್ಲಿ ಬಿದ್ದ ಮೀನಿನಂತೆ ಒದ್ದಾಡುತ್ತಾನೆ. ಬದುಕಿನಲ್ಲಿ ಸಂತೋಷ ಬರುವುದು ಆನಂದದಿಂದ, ಐಶ್ವರ್ಯದಿಂದಲ್ಲ' ಎಂದ ಕುಮಾರ. ಸೇನಕ ಬಿಟ್ಟಾನೆಯೆ? 'ಕಾಡಿನಲ್ಲಿ ರುಚಿಯಾದ ಹಣ್ಣುಗಳಿರುವ ಮರವನ್ನೇ ಎಲ್ಲ ಪಕ್ಷಿಗಳು ಮುತ್ತಿಕೊಳ್ಳುವಂತೆ, ಶ್ರೀಮಂತನನ್ನು ಮಾತ್ರ ಜನ ಆದರಿಸುತ್ತಾರೆ' ಎಂದ. ಅದಕ್ಕೆ ಮಹೋಷಧಕುಮಾರ ಹೇಳಿದ, 'ಆದರೆ ಹಣ್ಣಿಲ್ಲದಾಗ ಆ ಮರಕ್ಕೆ ಯಾವ ಪಕ್ಷಿಯೂ ಬರದಂತೆ, ಮನುಷ್ಯನ ಶ್ರೀಮಂತಿಕೆ ಕರಗಿದೊಡನೆ ಜನ ದೂರವಾಗುತ್ತಾರೆ. ಪ್ರಪಂಚ ನೆನಪಿನಲ್ಲಿಡುವುದು ಸಾಧಕರನ್ನು, ಜ್ಞಾನಿಗಳನ್ನು, ಬರೀ ಶ್ರೀಮಂತರನ್ನಲ್ಲ. ಭೋಗರತ ಮನುಷ್ಯರಿಗೆ ಮಾತ್ರ ಲಕ್ಷ್ಮಿ ಪ್ರಿಯಳು. ಜ್ಞಾನವೃದ್ಧರ ಜ್ಞಾನವೇ ಅತುಲನೀಯ. ಲಕ್ಷ್ಮಿ ಎಂದಿಗೂ ಪ್ರಜ್ಞೆಯನ್ನು ದಾಟಲಾರಳು'. ಜನ ಸಾಧು, ಸಾಧು ಎಂದು ಕುಮಾರನನ್ನು ಹೊಗಳಿದರು. ಸೇನಕ ಸುಮ್ಮನಾದ. ರಾಜನಿಗೆ ಸಂತೋಷವಾಯಿತು.

ದಿನ ಭವಿಷ್ಯ

ಸೋಮವಾರ 15 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ದ್ವಿತೀಯ ಗಂ. 26-36 (ಸಾ. 5-12) ಸೋಮವಾರ ನಿತ್ಯ ನಕ್ಷತ್ರ ರೇವತಿ ಗಂ. 51-49 (ರಾ. 3-17) ಶುಕ್ಲ ನಾಮ ಯೋಗ ಗಂ. 0-30 ಕೌಲವ ಕರಣ ಗಂ. 26-36 ವಿಷ ಗಂ. 19-23 ಅಮೃತ ಗಂ. 45-37 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-31 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 6

ಮೇಷ: ಉದ್ಯೋಗದಲ್ಲಿ ಬದಲಾವಣೆಯಾಗುವ ನಿರೀಕ್ಷೆ. ಯುವಕರಿಗೆ ಪ್ರಶಂಸೆಯ ಸುರಿಮಳೆ. ನೆರೆಹೊರೆಯವರೊಂದಿಗೆ ವಿರಸ ತಲೆದೋರಬಹುದು. ಉದ್ಯಮ ಸ್ಥಳದಲ್ಲಿ ನವೀಕರಣ/ ಬದಲಾವಣೆ ಮಾಡಲಿದ್ದೀರಿ.

ವೃಷಭ: ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ತೈಲ ವ್ಯಾಪಾರಿಗಳಿಗೆ ಅಧಿಕ ಧನಲಾಭ. ಲೆಕ್ಕಪತ್ರಗಳನ್ನು ಮರುಪರಿಶೀಲನೆಗೆ ಒಳಪಡಿಸಬೇಕಾದ ಅನಿವಾರ್ಯತೆ ತಲೆದೋರೀತು.

ಮಿಥುನ: ಬಟ್ಟೆ ಹಾಗೂ ಲೋಹ ವ್ಯಾಪಾರ ಮಾಡುವವರಿಗೆ ವಿಶೇಷ ಆದಾಯ. ಹಣಕಾಸು ಸಂಸ್ಥೆಗಳ ಅಧಿಕಾರಿಗಳ ವ್ಯತಿರಿಕ್ತ ಸಲಹೆಯಿಂದಾಗಿ ನಷ್ಟ. ಲೇವಾದೇವಿದಾರರಿಗೆ ವಿಶೇಷ ಲಾಭದ ನಿರೀಕ್ಷೆ ಕಂಡುಬರುವುದು.

ಕರ್ಕಾಟಕ: ಆಮದು–ರಫ್ತು ವ್ಯವಹಾರದಲ್ಲಿ ತೊಡಗಿಕೊಂಡಿರುವವರಿಗೆ ಉತ್ತಮ ಲಾಭ. ಪಾಲುಗಾರಿಕೆ ವ್ಯವಹಾರ ಸ್ವಲ್ಪಮಟ್ಟಿನ ಇರುಸುಮುರುಸು ತರುವ ಸಾಧ್ಯತೆ. ಉದ್ಯೋಗಸ್ಥರಿಗೆ ಒಳ್ಳೆಯ ಸುದ್ದಿ.

ಸಿಂಹ: ಉದ್ಯೋಗ ಕ್ಷೇತ್ರದಿಂದ ಒಳ್ಳೆಯ ಸುದ್ದಿ. ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಕೌಟುಂಬಿಕ ವಿರಸ ಮೂಡುವ ಸಾಧ್ಯತೆ. ಮಕ್ಕಳು ಉದ್ಯೋಗ ನಿಮಿತ್ತ ವಿದೇಶ ಪ್ರಯಾಣ ಮಾಡುವ ಸಾಧ್ಯತೆ.

ಕನ್ಯಾ: ಅಡೆತಡೆಗಳ ನಡುವೆಯೂ ಶುಭ ಕಾರ್ಯ ನೆರವೇರಿಸಲಿದ್ದೀರಿ. ವಿಮಾ ಅಧಿಕಾರಿಗಳಿಗೆ ಸ್ಥಾನ ಬದಲಾವಣೆ. ಔಷಧ ತಯಾರಕರು, ಬಣ್ಣಮುಂತಾದ ರಾಸಾಯನಿಕ ವಸ್ತುಗಳ ವ್ಯವಹಾರಗಳಲ್ಲಿ ತೊಡಗಿದವರಿಗೆ ಉತ್ತಮ ಲಾಭ.

ತುಲಾ: ಅಧಿಕಾರಿಗಳ ಅಸಹಕಾರದಿಂದ ಸರಕಾರದಿಂದಾಗಬೇಕಾದ ಕೆಲಸ ವಿಳಂಬ. ನಿರಾಸೆಯ ಮಧ್ಯೆ ಆಸೆಯ ಸೆಳೆವೊಂದು ಕಂಡುಬರಲಿದೆ. ಕಾರ್ಯಸಾಧನೆಗಾಗಿ ಅನ್ಯ ಮಾರ್ಗವೊಂದನ್ನು ಕಂಡುಕೊಳ್ಳುವಿರಿ.

ವೃಶ್ಚಿಕ: ಸಂಗಾತಿಗೆ ನೆರೆಹೊರೆಯವರಿಂದ ಸ್ವಲ್ಪಮಟ್ಟಿನ ಪ್ರತಿರೋಧ. ನವೀನ ವ್ಯವಹಾರವೊಂದರಲ್ಲಿ ಹಣ ವಿನಿಯೋಗ. ಹೊಸ ಉದ್ಯಮದಿಂದ ಶ್ರೇಯಸ್ಸು. ಧಾರ್ಮಿಕ ಕಾರ್ಯಗಳಿಗಾಗಿ ಧನ ವಿನಿಯೋಗ ಮಾಡಲಿದ್ದೀರಿ.

ಧನು: ರಾಜಕೀಯ ವ್ಯಕ್ತಿಗಳಿಗೆ ಆಶಾದಾಯಕ ದಿನ. ಸರ್ಕಾರಿ ಹುದ್ದೆಯಲ್ಲಿರುವವರು ಭ್ರಷ್ಟಾಚಾರದ ಆರೋಪವನ್ನು ಎದುರಿಸಬೇಕಾದೀತು. ವಿಚಾರಣೆ ವೇಳೆಯಲ್ಲಿ ಸಂಯಮದಿಂದಾಗಿ ಎಲ್ಲವೂ ನಿರಾಳವಾಗಲಿವೆ.

ಮಕರ: ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಾಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು.

ಕುಂಭ: ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿ ಉಂಟುಮಾಡಲಿದೆ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯ ಪೂರ್ವಕ ಪ್ರಸ್ತಾಪ. ಸಾಲದಿಂದ ಮುಕ್ತಿ ಹೊಂದಿ ನಿರಾಳತೆ.

ಮೀನ: ತರಕಾರಿ ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಕಂಡುಬರಲಿದೆ.

ನಿಮ್ಮ ಜನ್ಮದಿನ 15-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ನಿಷ್ಠಾನಿಷ್ಠಗಳ ಅರಿವು ಇರುವುದರಿಂದ ಉತ್ತಮ ಕೆಲಸಗಳನ್ನು ಕೈಗೆತ್ತಿಕೊಂಡು ನಿಧಾನವಾಗಿ ಯಶಸ್ಸನ್ನು ಸಾಧಿಸಲಿದ್ದೀರಿ. ಸಮಾಜದ ಏಳ್ಗೆಗಾಗಿ ಕೈಗೊಂಡ ಕಾರ್ಯಗಳಲ್ಲಿ ಏಳ್ಗೆ ಸಹಿಸದವರಿಂದ ಸ್ವಲ್ಪಮಟ್ಟಿನ ವಿರೋಧ ಎದುರಿಸಬೇಕಾಗುವುದು. ಸಂತಾನ ಭಾಗ್ಯ ಕಂಡುಬರುತ್ತಿದೆ.

ಪದಬಂಧ 4537 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
3.ಸಪೂರವಾದ ಸೊಂಟ (4)
5.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
7.ಮಣ ಭಾರದ ಹಣವನ್ನು ಸಾಗಿಸಿದ ಜಾಗ (3)
8.ದಾಯಾದಿ ಜಗಳವಿದು (5)
9.ಪರಿಶುದ್ಧವಾದುದು, ವನದ ಕೊನೆಗೆ ಕಂಡಿದೆ (3)
10.ವೇಗ ಅಥವಾ ಶೀಘ್ರತೆ (3)
12.ಕೆಲಸಕ್ಕೆ ಬಾರದವ (4)
13.ಆಣೆಯಲ್ಲೇ ತಪ್ಪು ಹೊರಿಸುವುದು! (4)

ಮೇಲಿಂದ ಕೆಳಕ್ಕೆ
1.ಅತಿಯಾದ ದುಃಖ (4)
2.ಈತ ಅತ್ಯಂತ ಬುದ್ಧಿವಂತ (4)
4.ಎಲ್ಲರನ್ನೂ ಒಂದುಗೂಡಿಸುವುದು (5)
6.ವಿಶೇಷವಾದ ಜ್ಞಾನ (3)
7.ಹಿರಿಮೆಯನ್ನು ಹೇಳುವ ಘನತೆ (3)
9.ಪಾರು ವಹಿಸಿಕೊಂಡಿರುವ ಮೇಲ್ವಿಚಾರಣೆ (4)
11.ಕೂಲಂಕಷವಾದ ವಿಚಾರಣೆ (4)



4736ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವ್ಯಾಮೋಹ 3.ಬಾಕು 5.ವಿಷ 6.ಕರ್ಮಾಂತರ 7.ನದೀಮುಖಜಭೂ 10.ತಳವಾರ 11.ಹನಿ 13.ಗುಗ್ಗು 14.ಗೆದ್ದಲು

ಮೇಲಿಂದ ಕೆಳಕ್ಕೆ: 1.ವ್ಯಾಸ 2.ಹರುಷ 4.ಕುಬೇರ 5.ವಿಧಾನ 6.ಕಣಜ 8.ಮುಷ್ಕರ 9.ಮಿಸುನಿ 10.ತರಗು 11.ಹಳಗೆ 12.ಸೋಲು

ಸುಡೊಕು 4923

	6		8	7			9	3
								4
	8	4	5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4922 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹400
12 ಮೊಟ್ಟೆಗೆ	₹54

ಮೈಸೂರು

100 ಮೊಟ್ಟೆಗೆ	₹403

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಂತರ ಕಾಯ್ದುಕೊಳ್ಳಿ

4ನೇ ವರ್ಷದ ಪುಣ್ಯಸ್ಮರಣೆ

ಎಂ. ಜಿ. ನೀಲಾಂಬಿಕೆ

ಜನನ: 29-12-1942 ಮರಣ: 15-03-2017

ನಿಮ್ಮ ಚಿರಸ್ಮರಣೆಯೊಂದಿಗೆ ಕುಟುಂಬ ಸದಸ್ಯರು ಆರ್.ಟಿ. ನಗರ, ಬೆಂಗಳೂರು-32

ಪ್ರಜಾವಾಣಿ

FOR ADVERTISEMENT QUERIES
• OBITUARY
• REMEMBRANCES

Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಸಾಲ ನೀಡಿಕೆ, ಠೇವಣಿ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕ್‌ಗಳು ನೀಡಿರುವ ಸಾಲದ ಮೊತ್ತ ಹಾಗೂ ಸಂಗ್ರಹಿಸಿರುವ ಠೇವಣಿ ಮೊತ್ತವು ಫೆಬ್ರುವರಿ 26ಕ್ಕೆ ಕೊನೆಗೊಂಡ 15 ದಿನಗಳ ಅವಧಿಯಲ್ಲಿ ಏರಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಹಿತಿ ನೀಡಿದೆ.

ಈ 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ಗಳು ನೀಡಿರುವ ಸಾಲದ ಪ್ರಮಾಣ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 6.63ರಷ್ಟು ಹೆಚ್ಚಾಗಿ ₹ 107.75 ಲಕ್ಷ ಕೋಟಿಗಳಿಗೆ ತಲುಪಿದೆ.

ಠೇವಣಿ ಸಂಗ್ರಹವು ಶೇ 12.06 ರಷ್ಟು ಹೆಚ್ಚಾಗಿದ್ದು ₹ 149.34 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

2020ರ ಫೆಬ್ರುವರಿ 28ಕ್ಕೆ ಕೊನೆಗೊಂಡ 15 ದಿನಗಳ ಅವಧಿಯಲ್ಲಿ ಬ್ಯಾಂಕ್ ಸಾಲ ₹ 101.05 ಲಕ್ಷ ಕೋಟಿ ಮತ್ತು ಠೇವಣಿ ₹ 133.26 ಲಕ್ಷ ಕೋಟಿಗಳಷ್ಟಿತ್ತು ಎಂದು ಆರ್‌ಬಿಐನಲ್ಲಿ ಮಾಹಿತಿ ಇದೆ.

2021ರ ಫೆಬ್ರುವರಿ 12ಕ್ಕೆ ಕೊನೆಗೊಂಡ 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ಗಳು ಸಾಲ ನೀಡಿದ ಪ್ರಮಾಣ ಶೇ 6.58ರಷ್ಟು ಹೆಚ್ಚಾಗಿ ₹ 107.04 ಲಕ್ಷ ಕೋಟಿಗಳಿಗೆ ಹಾಗೂ ಠೇವಣಿ ಶೇ 11.75ರಷ್ಟು ಹೆಚ್ಚಾಗಿ ₹ 147.81 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿತ್ತು.

ಹಿಂದಿನ ಅವಧಿಗೆ ಹೋಲಿಸಿದರೆ ಫೆಬ್ರುವರಿ 26ಕ್ಕೆ ಕೊನೆಗೊಂಡ 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆಯ ಬೆಳವಣಿಗೆಯು ಸ್ಥಿರವಾಗಿದ್ದು ಕೋವಿಡ್–19ಕ್ಕೂ ಮುಂಚಿನ ತಿಂಗಳುಗಳಲ್ಲಿ ಇದ್ದ ಮಟ್ಟಕ್ಕೆ ಮರಳಿದೆ.

2020ರ ಏಪ್ರಿಲ್‌ನಲ್ಲಿ ಸಾಲ ನೀಡಿಕೆಯ ಬೆಳವಣಿಗೆ ದರವು ಶೇ 6.5ರಿಂದ ಶೇ 7.2ರ ಆಸುಪಾಸಿನಲ್ಲಿತ್ತು ಎಂದು ಕೇರ್ ರೇಟಿಂಗ್ಸ್ ಸಂಸ್ಥೆಯು ತನ್ನ ವರದಿಯಲ್ಲಿ ತಿಳಿಸಿದೆ.

ಸಣ್ಣ ಸಾಲ ನೀಡಿಕೆಯು ಹೆಚ್ಚಾಗುತ್ತಿರುವುದರಿಂದ ಬ್ಯಾಂಕ್‌ಗಳು ನೀಡಿರುವ ಒಟ್ಟಾರೆ ಸಾಲದ ಮೊತ್ತದಲ್ಲಿ ಏರಿಕೆ ಕಂಡುಬರುತ್ತಿದೆ ಎನ್ನುವುದು ವಿಶ್ಲೇಷಕರ ಅಭಿಪ್ರಾಯವಾಗಿದೆ.

ಎ.ಸಿ. ಬೆಲೆ ಗರಿಷ್ಠ ಶೇ 8ರಷ್ಟು ಹೆಚ್ಚಳ



ನವದೆಹಲಿ (ಪಿಟಿಐ): ಮನೆಗಳಲ್ಲಿ ಬಳಸುವ ಹವಾನಿಯಂತ್ರಕಗಳ (ಎ.ಸಿ.) ಬೆಲೆಯನ್ನು ಶೇಕಡ 5ರಿಂದ ಶೇ 8ರವರೆಗೆ ಹೆಚ್ಚಿಸಲು ಕಂಪನಿಗಳು ಚಿಂತನೆ ನಡೆಸುತ್ತಿವೆ. ಹೀಗಿದ್ದರೂ ಈ ವರ್ಷದಲ್ಲಿ ಎರಡಂಕಿ ಪ್ರಗತಿ ಸಾಧಿಸುವ ವಿಶ್ವಾಸವನ್ನೂ ಅವು ಹೊಂದಿವೆ.

ಲೋಹ ಮತ್ತು ಕಂಪ್ರೆಸ್ಸರ್ ಬೆಲೆಯಲ್ಲಿ ಏರಿಕೆ ಆಗಿರುವುದರಿಂದ ಎ.ಸಿ. ಬೆಲೆಯನ್ನು ಗರಿಷ್ಠ ಶೇ 5ರ ವರೆಗೂ ಹೆಚ್ಚಿಸುವುದಾಗಿ ಡಾಯ್ಕಿನ್ ಕಂಪನಿ ತಿಳಿಸಿದೆ. ಎಸಿ ಬೆಲೆಯನ್ನು ಶೇ 6ರಿಂದ ಶೇ 8ರ ಆಸುಪಾಸಿನಲ್ಲಿ, ರೆಫ್ರಿಜರೇಟ್ ಬೆಲೆಯನ್ನು ಶೇ 3ರಿಂದ ಶೆ 4ರಷ್ಟು ಹೆಚ್ಚಿಸಲು ಪ್ಯಾನಾಸಾನಿಕ್ ಕಂಪನಿ ಚಿಂತನೆ ನಡೆಸಿದೆ. ಬ್ಲೂಸ್ಟಾರ್ ಕಂಪನಿಯು ಏಪ್ರಿಲ್‌ನಿಂದ ಶೇ 3ರಷ್ಟು ಬೆಲೆ ಹೆಚ್ಚಳ ಮಾಡಲು ಮುಂದಾಗಿದೆ.

ಮನೆಯಿಂದಲೇ ಕೆಲಸ ಮಾಡುವ ಸಂಸ್ಕೃತಿಯ ಕಾರಣದಿಂದಾಗಿ ಎ.ಸಿ.ಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಲಿದೆ. ಇದರಿಂದಾಗಿ ಎರಡಂಕಿ ಪ್ರಗತಿ ಸಾಧ್ಯವಾಗಲಿದೆ ಎನ್ನುವುದು ವೋಲ್ಟಾಸ್, ಡಾಯ್ಕಿನ್, ಎಲ್‌ಜಿ, ಪ್ಯಾನಾಸಾನಿಕ್, ಹಾಯರ್, ಬ್ಲೂ ಸ್ಟಾರ್ ಮತ್ತು ಸ್ಯಾಮ್ಸಂಗ್ ಕಂಪನಿಗಳ ನಿರೀಕ್ಷೆಯಾಗಿದೆ.

ಸಾರ್ವಜನಿಕರಿಗೆ ಐದು ಕಂಪನಿಗಳ ಷೇರುಗಳು ಖರೀದಿಗೆ ಮುಕ್ತ

ಈ ವಾರ ಐಪಿಒ ಮೆರವಣಿಗೆ!

• ವಿಜಯ್ ಜೋಷಿ

ಬೆಂಗಳೂರು: ಮಾರ್ಚ್ 15ರಿಂದ 17ರವರೆಗಿನ ಅವಧಿಯಲ್ಲಿ ಒಟ್ಟು ಐದು ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಲಿವೆ. ಒಂದೇ ವಾರದಲ್ಲಿ ಐದು ಕಂಪನಿಗಳ ಐಪಿಒ (ಕಂಪನಿಯ ಷೇರುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಸುವ ಪ್ರಕ್ರಿಯೆ) ಇರುವುದು ಈಚಿನ ದಿನಗಳಲ್ಲಿ ಇದೇ ಮೊದಲು.

ದೇಶದ ಷೇರು ಮಾರುಕಟ್ಟೆಗಳತ್ತ ಹಣದ ಹರಿವು ಹೆಚ್ಚಿರುವುದು, ಷೇರು ಮಾರುಕಟ್ಟೆಯು ಸಕಾರಾತ್ಮಕ ವಹಿವಾಟು ಕಾಣುತ್ತಿರುವುದು ಸಾಲು ಸಾಲು ಕಂಪನಿಗಳು ಐಪಿಒ ಮೊರೆ ಹೋಗುತ್ತಿರುವುದಕ್ಕೆ ಕಾರಣ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ರಾಸಾಯನಿಕಗಳ ತಯಾರಿಕಾ ಕಂಪನಿಯಾದ ಲಕ್ಷ್ಮಿ ಆರ್ಗ್ಯಾನಿಕ್ ಇಂಡಸ್ಟ್ರೀಸ್ ಮತ್ತು ಎಂಜಿನಿಯರಿಂಗ್ ಕಂಪನಿಯಾದ ಕ್ರಾಫ್ಟ್ಸ್‌ಮನ್ ಆಟೊಮೇಷನ್ ಐಪಿಒ ಸೋಮವಾರದಿಂದ (ಮಾ. 15) ಆರಂಭ ಆಗಲಿದೆ. ಚಿನ್ನಾಭರಣಗಳ ಮಾರಾಟ ಮಳಿಗೆಗಳನ್ನು ದೇಶದ ಹಲವು ರಾಜ್ಯಗಳಲ್ಲಿ ಹೊಂದಿರುವ 'ಕಲ್ಯಾಣ್ ಜ್ಯುವೆಲ್ಲರ್ಸ್ ಇಂಡಿಯಾ ಲಿಮಿಟೆಡ್' ಕಂಪನಿಯ ಐಪಿಒ ಮಂಗಳವಾರದಿಂದ (ಮಾ. 16) ಶುರುವಾಗಲಿದೆ.

ಕಿರು ಹಣಕಾಸು ಸಂಸ್ಥೆಯಾದ 'ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್' ಹಾಗೂ ಗೇಮಿಂಗ್ ಅಪ್ಲಿಕೇಷನ್‌ಗಳ ಅಭಿವೃದ್ಧಿಯಲ್ಲಿ ತೊಡಗಿರುವ ನಜಾರಾ ಟೆಕ್ನಾಲಜೀಸ್‌ನ ಐಪಿಒ ಬುಧವಾರದಿಂದ (ಮಾ. 18) ಆರಂಭ ಆಗಲಿದೆ. ಅನುಪಮ್ ರಾಸಾಯನ್ ಇಂಡಿಯಾ ಲಿಮಿಟೆಡ್ ಕಂಪನಿಯ ಐಪಿಒಗೆ ಬಿಡ್ ಸಲ್ಲಿಕೆ ಈಗಾಗಲೇ ಆರಂಭವಾಗಿದ್ದು, ಮಂಗಳವಾರದ ವರೆಗೆ (ಮಾ. 16) ಬಿಡ್ ಸಲ್ಲಿಸಲು ಅವಕಾಶ ಇದೆ.

'ಷೇರು ಮಾರುಕಟ್ಟೆಯು ಏರು ಮುಖ ಚಲನೆ ಕಾಣುತ್ತಿದೆ. ಈ ಕಾರಣದಿಂದಾಗಿ, ಇಷ್ಟೊಂದು ಕಂಪನಿಗಳು ಒಂದೇ ಸಮಯದಲ್ಲಿ ಐಪಿಒಗೆ ಮುಂದಾಗಿವೆ ಅನಿಸುತ್ತಿದೆ. ಐಪಿಒಗೆ ಮುಂದಾಗುವ ಎಲ್ಲ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಜಾಣತನ ಆಗಲಾರದು. ಹಣಕಾಸಿನ ಸ್ಥಿತಿಗತಿ ಚೆನ್ನಾಗಿರುವ, ಒಳ್ಳೆಯ ಕಾರ್ಪೊರೇಟ್ ಆಡಳಿತ ಇರುವ ಹಾಗೂ ಭವಿಷ್ಯದಲ್ಲಿ ಒಳ್ಳೆಯ ವಹಿವಾಟು ನಡೆಸಬಹುದಾದ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಒಳಿತು' ಎಂದು ಸುವಿಷನ್ಸ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರಮೋದ್ ಬಿ.ಪಿ. ವಿಶ್ಲೇಷಿಸಿದರು.

'ಚಿನ್ನದ ದರ ಇಳಿಕೆ ಕಂಡಿದೆ. ದೇಶಿ ಬಾಂಡ್ ಮಾರುಕಟ್ಟೆಯು ಹಲವರ ನಿರೀಕ್ಷೆಗೆ ಅನುಗುಣವಾಗಿ ಲಾಭ ತಂದು ಕೊಟ್ಟಿಲ್ಲ. ಆದರೆ, ಲಾಕ್‌ಡೌನ್ ನಂತರದಲ್ಲಿ ಷೇರು ಮಾರುಕಟ್ಟೆಯು ಒಳ್ಳೆಯ ಲಾಭ ತಂದುಕೊಟ್ಟಿದೆ. ಹಾಗಾಗಿ, ಬಹಳಷ್ಟು ಜನ ಹೂಡಿಕೆದಾರರು ಷೇರು ಮಾರುಕಟ್ಟೆಗಳ ಕಡೆ ಮುಖ ಮಾಡಿದ್ದಾರೆ. ಹೂಡಿಕೆದಾರರಲ್ಲಿನ ಉತ್ಸಾಹ, ಪೂರಕ ವಾತಾವರಣದ ಪ್ರಯೋಜನ ಪಡೆಯಲು ಕಂಪನಿಗಳೂ ಮುಂದಾಗಿವೆ' ಎಂದು ಹಣಕಾಸು ತಜ್ಞರೊಬ್ಬರು ಅಭಿಪ್ರಾಯಪಟ್ಟರು.

2020–21ರಲ್ಲಿ ನಡೆದ ಐಪಿಒಗಳ ಪೈಕಿ ಶೇಕಡ 78ರಷ್ಟು ಕಂಪನಿಗಳ ಷೇರುಗಳು, ಷೇರುಮಾರುಕಟ್ಟೆಯಲ್ಲಿ ವಹಿವಾಟು ಆರಂಭಿಸಿದ ಮೊದಲ ದಿನವೇ ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿವೆ. ಐಪಿಒಗಳ ವಿಚಾರವಾಗಿ ಸಣ್ಣ ಹೂಡಿಕೆದಾರರಲ್ಲಿ ಉತ್ಸಾಹ ಹೆಚ್ಚಲು ಇದು ಕೂಡ ಒಂದು ಕಾರಣ ಆಗಿರಬಹುದು ಎಂದು ಪ್ರಮೋದ್ ಹೇಳಿದರು.

ಐಪಿಒ ಹಾದಿಯಲ್ಲಿರುವ ಕಂಪನಿಗಳು

ಕಂಪನಿ	ಐಪಿಒ ಮೊತ್ತ	ಐಪಿಒ ಅರ್ಜಿ ಸಲ್ಲಿಸಲು ಅವಕಾಶ
ಲಕ್ಷ್ಮಿ ಆರ್ಗ್ಯಾನಿಕ್ ಇಂಡಸ್ಟ್ರೀಸ್	₹ 600 ಕೋಟಿ	ಮಾ. 15ರಿಂದ 17
ಕ್ರಾಫ್ಟ್ಸ್‌ಮನ್ ಆಟೊಮೇಷನ್	₹ 824 ಕೋಟಿ	ಮಾ. 15ರಿಂದ 17
ಕಲ್ಯಾಣ್ ಜ್ಯುವೆಲ್ಲರ್ಸ್ ಇಂಡಿಯಾ ಲಿಮಿಟೆಡ್	₹ 1,175 ಕೋಟಿ	ಮಾ. 16ರಿಂದ 18
ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್	₹ 582 ಕೋಟಿ	ಮಾ. 17ರಿಂದ 19
ನಜಾರಾ ಟೆಕ್ನಾಲಜೀಸ್	₹ 583 ಕೋಟಿ	ಮಾ. 17ರಿಂದ 19

(*ಇಲ್ಲಿನ ವಿವರ ಮಾಹಿತಿಗೆ ಮಾತ್ರ. ಇದು ಹೂಡಿಕೆ ಶಿಫಾರಸು ಅಲ್ಲ)

ಐಪಿಒ: ಷೇರು ಸಿಗುವ ಸಾಧ್ಯತೆ ಹೆಚ್ಚಿಸುವುದು ಹೇಗೆ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

'ನಾನು ಬಹಳಷ್ಟು ಬಾರಿ ಐಪಿಒಗೆ (ಆರಂಭಿಕ ಸಾರ್ವಜನಿಕ ಹೂಡಿಕೆ) ಅರ್ಜಿ ಸಲ್ಲಿಸಿದ್ದೇನೆ. ಆದರೆ ಒಂದು ಬಾರಿಯೂ ನನಗೆ ಐಪಿಒದಲ್ಲಿ ಷೇರುಗಳು ಸಿಕ್ಕಿಲ್ಲ' ಎಂದು ಅನೇಕರು ದೂರುತ್ತಾರೆ. ಐಪಿಒಗೆ ಅರ್ಜಿ ಸಲ್ಲಿಸಿ ಮಾತ್ರಕ್ಕೆ, ಹಂಚಿಕೆ ವೇಳೆ (Share Allotment) ಷೇರುಗಳು ಸಿಕ್ಕೇ ಸಿಗುತ್ತದೆ ಎಂಬ ಖಾತರಿ ಇಲ್ಲ. ಐಪಿಒ ಮೂಲಕ ಷೇರು ಖರೀದಿಸಲು ಹೂಡಿಕೆದಾರರು ನಿರೀಕ್ಷೆಗೂ ಮೀರಿ ಮುಂದಾದರೆ ಲಾಟರಿ ಪದ್ಧತಿ ಮೂಲಕ ಷೇರುಗಳ ಹಂಚಿಕೆಯಾಗುತ್ತದೆ. ಹೀಗಿದ್ದರೂ, ಐಪಿಒ ಮೂಲಕ ಷೇರು ಪಡೆದುಕೊಳ್ಳುವ ಸಾಧ್ಯತೆಯನ್ನು ಹೆಚ್ಚಿಸಿಕೊಳ್ಳಲು ಕೆಲವು ಸರಳ ಮಾರ್ಗಗಳಿವೆ.

1) ಅರ್ಜಿಯನ್ನು ಸರಿಯಾಗಿ ಭರ್ತಿ ಮಾಡಿ: ಅಪೂರ್ಣ ಮಾಹಿತಿ ಅಥವಾ ಅಸ್ಪಷ್ಟ ಮಾಹಿತಿಯ ಕಾರಣಕ್ಕಾಗಿ ಬಹಳಷ್ಟು ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ. ಎರಡೆರಡು ಕಡೆ ಬಿಡ್ಡಿಂಗ್ ಮಾಡಿ, ಒಂದು ಕಡೆ ಹೂಡಿಕೆದಾರ ಅಂತ ನಮೂದಿಸಿ, ಮತ್ತೊಂದು ಕಡೆ ಷೇರುದಾರ ಎಂದು ನಮೂದಿಸಿದರೆ ನಿಮ್ಮ ಕೋರಿಕೆ ರದ್ದಾಗುವ ಸಾಧ್ಯತೆ ಇರುತ್ತದೆ. ಪ್ಯಾನ್ ನಂಬರ್, ಡಿ-ಮ್ಯಾಟ್ ಖಾತೆ ವಿವರ, ಬ್ಯಾಂಕ್ ವಿವರ ಸರಿಯಾಗಿದೆಯಾ ಎಂಬುದನ್ನು ನೋಡಿಕೊಳ್ಳಿ.

ನೀವು ಆನ್‌ಲೈನ್ ಆ್ಯಪ್‌ಗಳ ಮೂಲಕ ಐಪಿಒ ಅರ್ಜಿ ಸಲ್ಲಿಸುತ್ತಿದ್ದರೆ ಬ್ಯಾಂಕ್ ಖಾತೆ, ಡಿ-ಮ್ಯಾಟ್ ಖಾತೆ ಮತ್ತು ಯುಪಿಐ ಐಡಿ ನಿಮ್ಮ ಪ್ಯಾನ್ ನಂಬರ್ ಜೊತೆ ಸರಿಯಾಗಿ ಲಿಂಕ್ ಆಗಿದೆಯೇ ಎಂಬುದನ್ನು ನೋಡಿಕೊಳ್ಳಿ. ಕೆಲವರು ಐಪಿಒಗೆ ಅರ್ಜಿ ಸಲ್ಲಿಸುವಾಗ ತಮ್ಮ ಬ್ಯಾಂಕ್ ಖಾತೆ, ಡಿ-ಮ್ಯಾಟ್ ಮತ್ತು ಪ್ಯಾನ್ ವಿವರ ನೀಡಿ, ಮಡದಿಯ ಯುಪಿಐ ಐಡಿ ಲಿಂಕ್ ಮಾಡಿರುತ್ತಾರೆ. ಹೀಗಾದಾಗ ಅರ್ಜಿ ತಿರಸ್ಕೃತಗೊಳ್ಳುತ್ತದೆ. ಅರ್ಜಿ ಭರ್ತಿ ಮಾಡುವಾಗ ಯಾವುದೇ ಲೋಪ ಆಗದಂತೆ ನೋಡಿಕೊಳ್ಳಿ.

2) ಹಲವು ಡಿ-ಮ್ಯಾಟ್ ಖಾತೆಗಳನ್ನು ಬಳಸಿದರೆ ಅರ್ಜಿ ತಿರಸ್ಕೃತ: ನಿಮ್ಮ ಬಳಿ ಎರಡೋ ಮೂರೋ ಡಿ-ಮ್ಯಾಟ್ ಖಾತೆಗಳಿದ್ದು, ಎಲ್ಲಾ ಖಾತೆಗಳಿಂದ ಒಂದೇ ಪ್ಯಾನ್ ನಂಬರ್ ಬಳಸಿ ಐಪಿಒಗೆ ಅರ್ಜಿ ಸಲ್ಲಿಸಿದರೆ ಅದು ತಿರಸ್ಕೃತಗೊಳ್ಳುತ್ತದೆ. ಹಾಗಾಗಿ, ಒಂದೇ ಡಿ-ಮ್ಯಾಟ್ ಖಾತೆ ಬಳಸಿ ಅರ್ಜಿ ಸಲ್ಲಿಸಿ.

3) ಕುಟುಂಬದವರು, ಸ್ನೇಹಿತರ ಡಿ-ಮ್ಯಾಟ್ ಖಾತೆ ಬಳಸಿ: ನಿಮ್ಮ ಡಿ-ಮ್ಯಾಟ್ ಖಾತೆ ಬಳಸಿ ಐಪಿಒಗೆ ಅರ್ಜಿ ಸಲ್ಲಿಸುವ ಜೊತೆಗೆ, ನಿಮ್ಮ ಮಡದಿ, ಮಕ್ಕಳು, ಸ್ನೇಹಿತರು ಅಥವಾ ಸಂಬಂಧಿಕರ ಹೆಸರಲ್ಲಿ ಡಿ-ಮ್ಯಾಟ್ ಖಾತೆಯಿದ್ದರೆ ಅಲ್ಲಿಂದಲೂ ಅರ್ಜಿ ಸಲ್ಲಿಸಿ. ಐಪಿಒದಲ್ಲಿ ನಿರೀಕ್ಷೆಗೂ ಮೀರಿ ಜನರು ಹೂಡಿಕೆ ಮಾಡಿದಾಗ ಷೇರುಗಳ ಹಂಚಿಕೆ ಲಾಟರಿ ಪದ್ಧತಿಯಲ್ಲಿ ಆಗುವ ಕಾರಣ ಕುಟುಂಬದವರು, ಸ್ನೇಹಿತರ ಅಕೌಂಟ್ ಬಳಸಿ ಅರ್ಜಿ ಸಲ್ಲಿಸಿದಾಗ ಷೇರುಗಳು ಸಿಗುವ ಸಾಧ್ಯತೆ ಹೆಚ್ಚಾಗುತ್ತದೆ. ಪ್ಯಾನ್ ಕಾರ್ಡ್ ಆಧಾರದಲ್ಲಿ ಐಪಿಒ ಹಂಚಿಕೆಯಾಗುವುದರಿಂದ ಹೀಗೆ ಮಾಡಿದಾಗ ಷೇರುಗಳು ಸಿಗುವ ಸಾಧ್ಯತೆ ದ್ವಿಗುಣವಾಗುತ್ತದೆ.

4) ಕಟ್ ಆಫ್ ಬೆಲೆ ಆಯ್ಕೆ ಮಾಡಿ: ಐಪಿಒ ನಂತರದಲ್ಲಿ ನಿಗದಿತ ಕಂಪನಿ ಷೇರುದಾರರಿಗೆ ಯಾವ ಬೆಲೆಗೆ ಷೇರುಗಳನ್ನು ಹಂಚಿಕೆ ಮಾಡುತ್ತದೋ ಅದೇ ಕಟ್ ಆಫ್ ಬೆಲೆ (Cut-off price). ಉದಾಹರಣೆಗೆ ಐಪಿಒ ಮಾಡುತ್ತಿರುವ ಕಂಪನಿ ₹ 100ರಿಂದ ₹ 105ರ ಬೆಲೆಯಲ್ಲಿ ಷೇರುಗಳನ್ನು ಬಿಡ್ ಮಾಡಬಹುದು ಎಂದು ಹೇಳುತ್ತದೆ ಎಂದುಕೊಳ್ಳೋಣ. ನೀವು ಪ್ರತಿ ಷೇರಿಗೆ ₹ 105 ಕೊಡಲು ಒಪ್ಪಿದರೆ ನಿಮಗೆ ಷೇರು ಸಿಗುವ ಸಾಧ್ಯತೆ ಹೆಚ್ಚಿಗೆ ಇರುತ್ತದೆ.

ಐಪಿಒದಲ್ಲಿ ಹೂಡಿಕೆಗೆ ಮಾಡುವ ಮುನ್ನ ಗಮನಿಸಿ:

1. ನೀವು ಐಪಿಒ ಹೂಡಿಕೆ ಮಾಡಲು ಬಯಸಿರುವ ಕಂಪನಿ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ.
2. ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಅವರ ಪೂರ್ವಾಪರಗಳೇನು ಎಂಬುದನ್ನು ಗಮನಿಸಿ.
3. ಕಂಪನಿಯ ಭವಿಷ್ಯದ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿ ಕಲೆಹಾಕಿ.
4. ಕಂಪನಿಯ ಮೌಲ್ಯವನ್ನು ಸರಿಯಾಗಿ ಅಂದಾಜು ಮಾಡಿ. ಕಂಪನಿಯು ಗಳಿಕೆಗೆ ಮಾಡುತ್ತಿರುವ ವೆಚ್ಚದ ಅನುಪಾತ ಅರಿತುಕೊಳ್ಳಿ.
5. ಐಪಿಒಗೆ ಹೋಗುವ ಕಂಪನಿಯು ತನ್ನ ಇಡೀ ಉದ್ಯಮಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಾರ್ವಜನಿಕವಾಗಿ ಮುಕ್ತವಾಗಿಟ್ಟಿರುತ್ತದೆ. ಆ ದಾಖಲೆಯಲ್ಲಿ ಕಂಪನಿಯ ಹಣಕಾಸಿನ ಸ್ಥಿತಿಗತಿ ಸೇರಿ ಎಲ್ಲ ಮಾಹಿತಿ ಇರುತ್ತದೆ. ಇದನ್ನು ಸರಿಯಾಗಿ ಓದಿದಾಗ ನಿರ್ದಿಷ್ಟ ಐಪಿಒ ಹೂಡಿಕೆಗೆ ನೀವು ಮುಂದಾಗಬೇಕೇ ಬೇಡವೇ ಎನ್ನುವುದು ಅರಿವಾಗುತ್ತದೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂ ನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆಯಲ್ಲಿ ಹೆಚ್ಚಿದ ಅನಿಶ್ಚಿತ ಸ್ಥಿತಿ

ಮಾರ್ಚ್ 12ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಗಳು ಒಂದಿಷ್ಟು ಗಳಿಕೆಯೊಂದಿವೆ ವಹಿವಾಟು ಪೂರ್ಣಗೊಳಿಸಿವೆ. 50,792 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಮತ್ತು 15,030 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇಕಡ 1ರಷ್ಟು ಗಳಿಕೆ ಕಂಡಿವೆ. ನಿಫ್ಟಿ ಬ್ಯಾಂಕ್ ಶೇ 1ರಷ್ಟು ಗಳಿಸಿದ್ದರೆ, ಮಿಡ್ ಕ್ಯಾಪ್ ಸೂಚ್ಯಂಕ ಬಹುತೇಕ ಯಥಾಸ್ಥಿತಿಯಲ್ಲಿದೆ. ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಹೆಚ್ಚಾದ ಕಾರಣ ಷೇರುಪೇಟೆ ಸೂಚ್ಯಂಕಗಳು ಕಳೆದ ಶುಕ್ರವಾರದ ವಹಿವಾಟಿನಲ್ಲಿ ಏಕಾಏಕಿ ಕುಸಿತ ದಾಖಲಿಸಿವೆ.

ಮಾರ್ಚ್ 8ರಿಂದ ಮಾರ್ಚ್ 12ರವರೆಗಿನ ವಹಿವಾಟನ್ನು ಗಮನಿಸಿದರೆ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಹೆಚ್ಚಾಗಿರುವುದು ಕಂಡುಬರುತ್ತದೆ. ವಲಯವಾರು ಪ್ರಗತಿಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್, ವಾಹನ ಉತ್ಪಾದನೆ, ರಿಯಲ್ ಎಸ್ಟೇಟ್ ವಲಯಗಳು ಶೇ 1ರಿಂದ ಶೇ 3ರಷ್ಟು ಕುಸಿದಿವೆ. ಮಾಹಿತಿ ತಂತ್ರಜ್ಞಾನ ವಲಯ ಅತಿ ಹೆಚ್ಚು ಗಳಿಕೆ ಕಂಡಿದೆ.

ಇಳಿಕೆ-ಏರಿಕೆ: ನಿಫ್ಟಿಯಲ್ಲಿ ಕಳೆದ ವಾರದ ವಹಿವಾಟಿನಲ್ಲಿ ಹೀರೊ ಮೋಟೋಕಾರ್ಪ್ ಶೇ 3.21ರಷ್ಟು, ಅದಾನಿ ಪೋರ್ಟ್ಸ್ ಶೇ 2.78ರಷ್ಟು, ಬಜಾಜ್ ಆಟೋ ಶೇ 2.76ರಷ್ಟು, ಅಲ್ಟ್ರಾ ಟೆಕ್ ಸಿಮೆಂಟ್ ಶೇ 2.53ರಷ್ಟು ಮತ್ತು ಟಾಟಾ ಮೋಟರ್ಸ್ ಶೇ 2.34ರಷ್ಟು ಕುಸಿತ ದಾಖಲಿಸಿವೆ. ಯುಪಿಎಲ್ ಶೇ 4.86ರಷ್ಟು, ಟೆಕ್ ಮಹೀಂದ್ರ ಶೇ 4.54ರಷ್ಟು, ಇನ್ಫೊಸಿಸ್ ಶೇ 4.42ರಷ್ಟು, ಎಚ್‌ಸಿಎಲ್ ಟೆಕ್ ಶೇ 4.01ರಷ್ಟು ಮತ್ತು ಎಲ್ ಆ್ಯಂಡ್ ಟಿ ಶೇ 3.45ರಷ್ಟು ಗಳಿಕೆ ಕಂಡಿವೆ. ಮಿಡ್ ಕ್ಯಾಪ್ ವಲಯದಲ್ಲಿ ಎಂಟಿಎನ್‌ಎಲ್, ಸಾರೆಗಾಮ, ಬಿಇಎಂಎಲ್, ಕಾನ್ ಫಿನ್ ಮತ್ತು ಐಟಿಡಿಸಿ ಹೆಚ್ಚು ಗಳಿಕೆ ದಾಖಲಿಸಿವೆ.

ಮುನ್ನೋಟ: ಕೈಗಾರಿಕೆ ಉತ್ಪಾದನೆ ಅಂಕಿ-ಅಂಶ ಮತ್ತು ಗ್ರಾಹಕ ಬೆಲೆ ಸೂಚ್ಯಂಕದ ದತ್ತಾಂಶಕ್ಕೆ ಷೇರುಪೇಟೆ ಇಂದು ಪ್ರತಿಕ್ರಿಯಿಸುವ ಸಾಧ್ಯತೆಯಿದೆ. ಇದರ ಜತೆ ಜಾಗತಿಕ ವಿದ್ಯಮಾನಗಳು ಮತ್ತು ಕೋವಿಡ್ ಕುರಿತ ಬೆಳವಣಿಗೆಗಳು ಪ್ರಭಾವ ಬೀರಲಿವೆ. ಮಾರುಕಟ್ಟೆಯಲ್ಲಿ ಸದ್ಯ ಅನಿಶ್ಚಿತತೆ ಮುಂದುವರಿಯಲಿದೆ. ಈಗಿನ ಸ್ಥಿತಿಯಲ್ಲಿ ಆರ್ಥಿಕವಾಗಿ ಸದೃಢವಾಗಿರುವ ಮತ್ತು ಮೂಲಭೂತವಾಗಿ ಉತ್ತಮ ಬೆಳವಣಿಗೆ ಸಾಧಿಸಿರುವ ಕಂಪನಿಗಳಲ್ಲಿ ಹೂಡಿಕೆ ಮಾಡುವುದನ್ನು ಪರಿಗಣಿಸಬಹುದು.

ಮುಷ್ಕರ: ಬ್ಯಾಂಕಿಂಗ್ ಸೇವೆಗಳಿಗೆ ಅಡ್ಡಿ ಸಂಭವ

ನವದೆಹಲಿ (ಪಿಟಿಐ): ಬ್ಯಾಂಕ್ ಒಕ್ಕೂಟಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಸೋಮವಾರ, ಮಂಗಳವಾರ ಮುಷ್ಕರ ನಡೆಸಲು ಕರೆ ನೀಡಿರುವ ಕಾರಣ ಕೆಲವು ಬ್ಯಾಂಕಿಂಗ್ ಸೇವೆಗಳಿಗೆ ಅಡ್ಡಿಯಾಗುವ ಸಾಧ್ಯತೆ ಇದೆ.

ಬ್ಯಾಂಕ್ ಶಾಖೆಗಳಿಗೆ ಹೋಗಿ ಠೇವಣಿ ಇರಿಸುವುದು, ಶಾಖೆಗಳಿಂದ ಹಣ ಹಿಂದಕ್ಕೆ ಪಡೆಯುವುದು, ಚೆಕ್ ಕ್ಲಿಯರೆನ್ಸ್ ಮತ್ತು ಸಾಲ ಮಂಜೂರಾತಿ ಸೇವೆಗಳಲ್ಲಿ ವ್ಯತ್ಯಯ ಆಗಬಹುದು ಎನ್ನಲಾಗಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ ಈ ಮುಷ್ಕರಕ್ಕೆ ಕರೆ ನೀಡಲಾಗಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹230-392

ದ್ವಿತಳಿ (ಬಿ.ವಿ) ₹202-441

4 ವಿಮಾನ ನಿಲ್ದಾಣಗಳ ಷೇರು ಮಾರಾಟಕ್ಕೆ ಕೇಂದ್ರ ಚಿಂತನೆ

ನವದೆಹಲಿ (ಪಿಟಿಐ): ಈಗಾಗಲೇ ಖಾಸಗೀಕರಣಗೊಂಡಿರುವ ಬೆಂಗಳೂರು, ದೆಹಲಿ, ಹೈದರಾಬಾದ್ ಮತ್ತು ಮುಂಬೈ ವಿಮಾನ ನಿಲ್ದಾಣಗಳಲ್ಲಿ ಕೇಂದ್ರ ಸರ್ಕಾರ ಇನ್ನೂ ಉಳಿಸಿಕೊಂಡಿರುವ ಷೇರುಪಾಲನ್ನು ಮಾರಾಟ ಮಾಡುವ ಆಲೋಚನೆ ನಡೆದಿದೆ.

ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಕೇಂದ್ರ ಸರ್ಕಾರ ಉದ್ದೇಶಿಸಿರುವ, ₹ 2.5 ಲಕ್ಷ ಕೋಟಿ ಮೊತ್ತದ ಷೇರು ವಿಕ್ರಯದ ಒಂದು ಭಾಗ ಇದಾಗಿದೆ.

ನಾಲ್ಕು ವಿಮಾನ ನಿಲ್ದಾಣಗಳಲ್ಲಿ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಹೊಂದಿರುವ ಷೇರುಪಾಲನ್ನು ಮಾರಾಟ ಮಾಡಲು ಮತ್ತು 2021-22ನೆಯ ಹಣಕಾಸು ವರ್ಷದಲ್ಲಿ ಇನ್ನೂ 13 ವಿಮಾನ ನಿಲ್ದಾಣಗಳನ್ನು ಖಾಸಗೀಕರಣಗೊಳಿಸಲು ಗುರುತಿಸಲಾಗಿದೆ ಎಂದು ಕಳೆದ ತಿಂಗಳು ಕಾರ್ಯದರ್ಶಿಗಳ ಸಮಿತಿಯಲ್ಲಿ ನಡೆದ ಚರ್ಚೆಯ ಕುರಿತು ಮಾಹಿತಿ ಇರುವ ಇಬ್ಬರು ತಿಳಿಸಿದ್ದಾರೆ.

ಜಂಟಿ ಸಹಭಾಗಿತ್ವದಲ್ಲಿ ನಡೆಯುತ್ತಿರುವ ದೆಹಲಿ, ಮುಂಬೈ, ಬೆಂಗಳೂರು ಮತ್ತು ಹೈದರಾಬಾದ್ ವಿಮಾನ ನಿಲ್ದಾಣಗಳಲ್ಲಿನ 'ಎಎಐ'ನ ಷೇರು ಪಾಲನ್ನು ಮಾರಾಟ ಮಾಡಲು ನಾಗರಿಕ ವಿಮಾನಯಾನ ಸಚಿವಾಲಯವು ಅಗತ್ಯ ಅನುಮೋದನೆ ಪಡೆಯಲಿದೆ. ಕೆಲವೇ ದಿನಗಳಲ್ಲಿ ಈ ವಿಷಯವು ಸಂಪುಟದ ಮುಂದೆ ಬರುವ ಸಾಧ್ಯತೆ ಇದೆ ಎಂದೂ ಅವರು ತಿಳಿಸಿದ್ದಾರೆ.

13 ವಿಮಾನ ನಿಲ್ದಾಣಗಳನ್ನು ಖಾಸಗೀಕರಣಗೊಳಿಸಲು ಗುರುತಿಸಲಾಗಿದ್ದು, ಲಾಭದಲ್ಲಿರುವ ಮತ್ತು ಲಾಭದಲ್ಲಿ ಇಲ್ಲದೇ ಇರುವ ನಿಲ್ದಾಣಗಳನ್ನು ಸೇರಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ವಿಮಾನ ನಿಲ್ದಾಣಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ನಿರ್ಧರಿಸಿದ ಬಳಿಕ ಮೊದಲ ಹಂತದಲ್ಲಿ, ಕಳೆದ ವರ್ಷ ಲಖನೌ, ಅಹಮದಾಬಾದ್, ಜೈಪುರ, ಮಂಗಳೂರು, ತಿರುವನಂತಪುರ ಮತ್ತು ಗುವಾಹಟಿ ವಿಮಾನ ನಿಲ್ದಾಣಗಳು ಅದಾನಿ ಸಮೂಹದ ತೆಕ್ಕೆಗೆ ಹೋಗಿವೆ.

ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅದಾನಿ ಸಮೂಹವು ಶೇ 74ರಷ್ಟು ಷೇರುಪಾಲು ಹೊಂದಿದೆ. ಉಳಿದಿರುವ ಶೇ 26ರಷ್ಟು ಪಾಲು 'ಎಎಐ' ಬಳಿ ಇದೆ.

ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಿಎಂಆರ್ ಸಮೂಹದ ಪಾಲು ಶೇ 54ರಷ್ಟಿದೆ. ಎಎಐ ಶೇ 26ರಷ್ಟು ಹಾಗೂ ಫ್ರಾಪೋರ್ಟ್ ಎಜಿ ಮತ್ತು ಎರ್ಮನ್ ಮಲೇಷ್ಯಾ ಕಂಪನಿಗಳು ತಲಾ ಶೇ 10ರಷ್ಟು ಪಾಲು ಹೊಂದಿವೆ.

ಹೈದರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಂಧ್ರಪ್ರದೇಶ ಸರ್ಕಾರದೊಂದಿಗೆ 'ಎಎಐ' ಶೇ 26ರಷ್ಟು ಪಾಲು ಹೊಂದಿದೆ. ಅದೇ ರೀತಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ನಾಟಕ ಸರ್ಕಾರದೊಂದಿಗೆ 'ಎಎಐ' ಶೇ 26ರಷ್ಟು ಪಾಲು ಹೊಂದಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಭವಿಷ್ಯ

Astrology

★॥ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು॥★ ನಿಮ್ಮ_ಸಮಸ್ಯೆ ಯಾವುದೇಯಿದ್ದರೂ ಶ್ರೀ_ಭದ್ರಕಾಳಿದೇವಿಯ ಬಲಿಷ್ಠ_ಪೂಜೆಯಿಂದ ಗ್ಯಾರಂಟಿ_ಪರಿಹಾರ. ವಿಶೇಷ_ಸೂಚನೇ: ನಮ್ಮ_ಮೋಡಿ_ಸಿದ್ಧಾಂತ ತಪ್ಪದು. ಸ್ತ್ರೀ_ಮೋಡಿ, ಪುರುಷ_ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ನಿಮ್ಮ ಯಾವುದೇ ರೀತಿಯ ವಶೀಕರಣ ಹಾಗೂ ನಿಮ್ಮ ಸಮಸ್ಯೆಗಳಾದ ಸಂತಾನ, ಸತಿ-ಪತಿ ಕಲಹ, ಸಾಲಬಾಧೆ, ಪ್ರೇಮವಿಚಾರ, ಶತ್ರುನಾಶ, ಇನ್ನೂ ಅನೇಕ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ವಿಶಿಷ್ಟ ಶಾಸ್ತ್ರೋಕ್ತ ಪರಿಹಾರ ಶತಸಿದ್ಧ.9980714116

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

ಪ್ರಖ್ಯಾತ ಪಂಡಿತರು, ವಶೀಕರಣ ಸ್ಪೆಷಲಿಸ್ಟ್. ಯಾವುದೇ ಗುಪ್ತ ಸಮಸ್ಯೆಗಳಿಗೆ ಕೇರಳೀಯ, ಬಂಗಾಳಿ ಪದ್ಧತಿಯಿಂದ ಖಚಿತ ಪರಿಹಾರ. A.R. ಗಣಾಚಾರಿ 9902157331

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ಮಹಿಳೆಯರಿಗೆ ಮಹಿಳೆಯರಿಗೆ ಮಹಿಳೆಯರಿಗೆ ಮನೆಯಿಂದಲೇ ಕಾಲ್ ಸೆಂಟರ್ ಮಾಡುವಂತಹ ಕೆಲಸ. ಹೆಚ್ಚಿನ ಮಾಹಿತಿಗೆ ನಿಮ್ಮ ಹೆಸರು ಊರಿನ ಹೆಸರು ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ. 9916766429

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

★ನೇರನೇಮಕಾತಿ★ ಬೆಂಗಳೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ CF AYUR ಕಂಪನಿಗೆ ಪಿ.ಯು.ಸಿ. ಡಿಗ್ರಿಯಾಗಿರುವ 19ರಿಂದ 24ವರ್ಷದೊಳಗಿನ ಯುವಕ/ ಯುವತಿಯರು ತಕ್ಷಣ ಬೇಕಾಗಿದ್ದಾರೆ. ಸಂಬಳ:18,000 24,000 ವಸತಿಯೂಟವಿರುತ್ತದೆ. 9740015552/ 9743282734

ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

VIDEOCON, ಟಯೋಟಾ, TVS, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,600- 56,000/- ವಸತಿಯೂಟವಿದೆ. 9611715755

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಕೆಲಸ, ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 9108059956

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ . ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ : 9606385001, 9606523337 .

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಒಳ್ಳೆಯ ಮನೆ ಕೆಲಸದವರು ಹೆಂಗಸರು ಫ್ಯಾಮಿಲಿ ಸಹಿತ ಬೇಕಾಗಿದ್ದಾರೆ. ವಾಸವಿರಲು ಮನೆಯನ್ನು ಕೊಡುತ್ತೇವೆ. ಸಂಪರ್ಕಿಸಿರಿ : ಶಶಿಧರ್ 9886092877 .

ವಾಹನ

Four Wheelers Selling

Others

ಕೊಡುಗೆಗಳ ಸುರಿಮಳೆ ಟಾಟಾ V-30 ಕೊಳ್ಳಲು ಸುವರ್ಣಾವಕಾಶ

TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

8.8 x 5.3 ft

52 kW ಇಂಜಿನ್

₹20,000/-* ದವರೆಗೆ ಗ್ರಾಹಕರ ಕೊಡುಗೆಗಳು

ಎಕ್ಸ್‌ಚೇಂಜ್ ₹25,000/-* ದವರೆಗೆ

Intra V-10 ಮತ್ತು V-30 A/C ಮಾದರಿಯಲ್ಲೂ ಲಭ್ಯ

ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ

Bangalore -7259784441

Bangalore/Mysore 95389 35533

Tumkur/Davanagere/ Chitradurga-7829055525

Mangalore/Shivamogga/ Udupi/Hassan/ Chikkamagalur/Karwar 96208 63338

Hubli/Haveri/Gadag/Bellary/ Raichur - 9620955858

Bagalkot/Bijapur/Gulbarga/ Belgaum/Bidar 8095202223

* ಷರತ್ತುಗಳು ಅನ್ವಯಿಸುತ್ತದೆ.

ಪ್ರವಾಸ

Travel

02.05.2021, 14.05.2021, 04.06.2021,04.07.2021 ರಿಂದ 14/20/27 ದಿನಗಳ ಕಾಶಿ,ಗಯಾ, ಪೂರಿಜಗನ್ನಾಥ್, ಪ್ರಯಾಗ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ವೈಷ್ಣೋದೇವಿ, ದೆಹಲಿ/14 ದಿನಗಳ ಮುಕ್ತಿನಾಥ್, ನೇಪಾಳ, ಪೊಖ್ರಾ,ಜನಕಪುರಿ, ನೈಮಿಶಾರಣ್ಯ, ಘೋರಕ್-ಪುರ್. 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

31.03.2021 ರೈಲು/ ಬಸ್ಸಿನಲ್ಲಿ 15 ದಿನಗಳ ದೆಹಲಿ, ಜೈಪುರ್,ಕಾಶಿ, ಬುದ್ಧಗಯಾ, ಅಲಹಾಬಾದ್ (ಕೆಲವೇ ಸೀಟುಗಳಿವೆ). ರೂಪಶ್ರೀ ಟ್ರಾವೆಲ್ಸ್ ಪದ್ಮನಾಭನಗರ, ಬೆಂಗಳೂರು-61. 9448508708, 8317446683

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details

Contact: 9880856233 | 9731810277
9901641752 | 9845114560 | 9886213331

ಉದ್ಯಮಿ ಮುಕೇಶ್ ಅಂಬಾನಿ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣ

ವಾಜೆ ಬಂಧನ: ಎನ್‌ಐಎ ವಶಕ್ಕೆ

ಪ್ರಜಾವಾಣಿ ವಾರ್ತೆ

ಮುಂಬೈ: ಉದ್ಯಮಿ ಮುಕೇಶ್ ಅಂಬಾನಿ ಅವರ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ರಾತ್ರಿ ಬಂಧಿತರಾಗಿದ್ದ ಮುಂಬೈ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಮಾರ್ಚ್ 25ರವರೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಶಕ್ಕೆ ಒಪ್ಪಿಸಲಾಗಿದೆ.

ಸ್ಥಳೀಯ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ದಕ್ಷಿಣ ಮುಂಬೈನ ನ್ಯಾಯಾಲಯದಲ್ಲಿ ವಾಜೆ (49) ಅವರನ್ನು ಹಾಜರುಪಡಿಸಲಾಯಿತು. ಹೆಚ್ಚಿನ ತನಿಖೆಗಾಗಿ ವಾಜೆ ಅವರನ್ನು ಎನ್‌ಐಎ ವಶಕ್ಕೆ ನ್ಯಾಯಾಲಯ ಒಪ್ಪಿಸಿದೆ. ಫೆಬ್ರುವರಿ 25ರಂದು ಅಂಬಾನಿ ಅವರ ಮನೆ ಮುಂದೆ ಸ್ಫೋಟಕ ತುಂಬಿದ ಸ್ಕಾರ್ಪಿಯೊ ಕಾರು ಪತ್ತೆಯಾಗಿತ್ತು. ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವ ಆರೋಪದ ಮೇಲೆ ವಾಜೆ ಅವರನ್ನು ಬಂಧಿಸಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ವಾಜೆ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಶನಿವಾರ ಬೆಳಿಗ್ಗೆ 11.30ಕ್ಕೆ ದಕ್ಷಿಣ ಮುಂಬೈನ ಕಂಬಾಲ್ಲಾ ಹಿಲ್ ಪ್ರದೇಶದಲ್ಲಿರುವ ಎನ್‌ಐಎ ಕಚೇರಿಗೆ ಕರೆಸಿಕೊಳ್ಳಲಾಗಿತ್ತು. ಸುಮಾರು 12 ಗಂಟೆಗಳ ವಿಚಾರಣೆ ಬಳಿಕ, ಸ್ಫೋಟಕಗಳ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ (ಐಪಿಸಿ) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ವಾಜೆ ಅವರನ್ನು ಬಂಧಿಸಲಾಯಿತು ಎಂದು ತಿಳಿಸಿದ್ದಾರೆ.

ಅಂಬಾನಿ ಮನೆ ಮುಂದೆ ಪತ್ತೆಯಾದ ಸ್ಫೋಟಕಗಳಿದ್ದ ಸ್ಕಾರ್ಪಿಯೊ ತಮ್ಮದು ಎಂದು ಠಾಣೆ ಮೂಲದ ವ್ಯಾಪಾರಿ ಮನ್‌ಸುಖ್ ಹಿರೇನ್ (45) ಹೇಳಿಕೊಂಡಿದ್ದರು. ತಮ್ಮ ವಾಹನ ಫೆ.18ರಂದು ಐರೋಲಿ–ಮುಲುಂದ್ ಸೇತುವೆ ಬಳಿಯಿಂದ ಕಳುವಾಗಿದೆ ಎಂದು ಪೊಲೀಸರಿಗೆ ದೂರು ನೀಡಲಾಗಿತ್ತು ಎಂದು ಹಿರೇನ್ ತಿಳಿಸಿದ್ದರು.

ಆದರೆ, ಮಾರ್ಚ್ 5ರಂದು ಠಾಣೆಯಲ್ಲಿ ಹಿರೇನ್ ಅವರ ಮೃತದೇಹ ಪತ್ತೆಯಾಗಿತ್ತು. ಹಿರೇನ್ ಅವರ ಅನುಮಾನಾಸ್ಪದ ಸಾವಿನ ನಂತರ ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಲಾಗಿತ್ತು.

ರಾಜ್ಯ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಸಹ ಹಿರೇನ್ ಹತ್ಯೆ ಪ್ರಕರಣದ ತನಿಖೆಯನ್ನು ಕೈಗೊಂಡಿದೆ. ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ತಮ್ಮ ಪತಿಯ ಸಾವಿನ ಹಿಂದೆ ವಾಜೆ ಕೈವಾಡವಿದೆ ಎಂದು ಹಿರೇನ್ ಅವರ ಪತ್ನಿ ವಿಮಲಾ ಆರೋಪಿಸಿದ್ದರು.

‘ಎನ್‌ಕೌಂಟರ್ ಸ್ಪೆಷಲಿಸ್ಟ್’ ಎಂದೇ ಖ್ಯಾತಿ ಪಡೆದಿದ್ದ ಸಚಿನ್ ವಾಜೆ, ಕ್ರಿಮಿನಲ್‌ಗಳು ಎನ್ನಲಾದ 63 ಮಂದಿಯನ್ನು ಎನ್‌ಕೌಂಟರ್‌ಗಳಲ್ಲಿ ಸಾಯಿಸಿದ್ದರು. 2002ರಲ್ಲಿ ನಡೆದ ಘಾಟ್ಕೋಪರ್ ಸ್ಫೋಟಕ್ಕೆ ಸಂಬಂಧಿಸಿದಂತೆ ಶಂಕಿತ ಆರೋಪಿ ಖ್ವಾಜಾ ಯೂನುಸ್ ಪೊಲೀಸ್ ವಶದಲ್ಲಿ ಸಾವಿಗೀಡಾಗಿದ್ದ. ಈ ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ 2004ರಲ್ಲಿ ವಾಜೆ ಅಮಾನತುಗೊಂಡಿದ್ದರು. ಬಳಿಕ ಕಳೆದ ವರ್ಷ ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದರು.

ಅಮಾನತುಗೊಂಡಿದ್ದ ಅವಧಿಯಲ್ಲಿ ವಾಜೆ ಶಿವಸೇನಾ ಸೇರಿದ್ದರು. 2008ರವರೆಗೆ ವಾಜೆ ಶಿವಸೇನಾ ಸದಸ್ಯರಾಗಿದ್ದರು ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಸಹ ಇತ್ತೀಚೆಗೆ ಹೇಳಿಕೆ ನೀಡಿದ್ದರು.

ಕಳೆದ ವರ್ಷ ನವೆಂಬರ್‌ನಲ್ಲಿ ಪತ್ರಕರ್ತ ಅರ್ನಬ್ ಗೋಸ್ವಾಮಿ ಅವರನ್ನು ಬಂಧಿಸಿದ ತಂಡದ ನೇತೃತ್ವವನ್ನು ವಾಜೆ ವಹಿಸಿದ್ದರು.

ಇನ್ನೋವಾ ಕಾರು ವಶ

ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಭಾನುವಾರ ಬಿಳಿ ಬಣ್ಣದ ಇನ್ನೋವಾ ಕಾರನ್ನು ಮುಂಬೈನಲ್ಲಿ ವಶಕ್ಕೆ ಪಡೆದಿದೆ.

ಫೆಬ್ರುವರಿ 25ರಂದು ಅಂಬಾನಿ ಅವರ ಮನೆ ಮುಂದೆ ಸ್ಫೋಟಕ ತುಂಬಿದ ಸ್ಕಾರ್ಪಿಯೋ ಕಾರು ನಿಲುಗಡೆ ಮಾಡಲಾಗಿತ್ತು. ಅದಕ್ಕೂ ಮುನ್ನ ಅದನ್ನು ಇನೋವಾ ಕಾರೊಂದು ಹಿಂಬಾಲಿಸುತ್ತಿತ್ತು. ಇದು ಅದೇ ಇನೋವಾ ಕಾರು ಇರಬಹುದೇ ಎನ್ನುವ ಬಗ್ಗೆ ನಿಖರ ಮಾಹಿತಿ ಲಭ್ಯವಿಲ್ಲ.

‘ಆರ್‌ಟಿಒನ ನೋಂದಣಿ ಸಂಖ್ಯೆ ‘ಎಂಎಚ್ 01 A ಝಡ್‌ಎ 403’ ಇನ್ನೋವಾ ಕಾರನ್ನು ವಶಕ್ಕೆ ಪಡೆಯಲಾಗಿದೆ. ಈ ಕಾರಿನ ಹಿಂದೆ ಪೊಲೀಸ್ ಎಂದು ಬರೆಯಲಾಗಿದೆ. ಸದ್ಯ ಟೋಯಿಂಗ್ ವ್ಯಾನ್ ಸಹಾಯದಿಂದ ಕಾರನ್ನು ಪೆದ್ದರ್ ರಸ್ತೆಯಲ್ಲಿರುವ ಎನ್‌ಐಎ ಕಚೇರಿಗೆ ತರಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ನೈತಿಕ ಬಲ ಕುಗ್ಗಿಸುವ ಪ್ರಯತ್ನ’

ಮುಂಬೈ ಪೊಲೀಸರ ನೈತಿಕತೆ ಕುಗ್ಗಿಸಲು ಮತ್ತು ಮಹಾರಾಷ್ಟ್ರದಲ್ಲಿ ಅಸ್ಥಿರತೆ ಸೃಷ್ಟಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಶಿವಸೇನಾ ಆರೋಪಿಸಿದೆ.

‘ನಾವು ಎನ್‌ಐಎ ಗೌರವಿಸುತ್ತೇವೆ. ಆದರೆ, ಈ ಪ್ರಕರಣದ ತನಿಖೆಯನ್ನು ನಮ್ಮ ಪೊಲೀಸರೇ ಕೈಗೊಳ್ಳಬಹುದಿತ್ತು. ಮುಂಬೈ ಪೊಲೀಸ್ ಮತ್ತು ಭಯೋತ್ಪಾದನಾ ನಿಗ್ರಹ ದಳಕ್ಕೆ ವಿಶೇಷ ಗೌರವವಿದೆ. ಆದರೆ, ಸಿಬಿಐ ಮತ್ತು ಎನ್‌ಐಎನಂತಹ ಕೇಂದ್ರದ ತನಿಖಾ ಸಂಸ್ಥೆಗಳು ಪದೇ ಪದೇ ಮಧ್ಯ ಪ್ರವೇಶಿಸಿ ಮುಂಬೈ ಪೊಲೀಸರ ನೈತಿಕತೆಯನ್ನು ಕುಗ್ಗಿಸುತ್ತಿವೆ’ ಎಂದು ಶಿವಸೇನಾ ಮುಖ್ಯ ವಕ್ತಾರ ಸಂಜಯ್ ರಾವುತ್ ತಿಳಿಸಿದ್ದಾರೆ. ‘ವಾಜೆ ಪ್ರಾಮಾಣಿಕ ಮತ್ತು ಸಮರ್ಥ ಅಧಿಕಾರಿ. ಟಿಆರ್‌ಪಿ ಹಗರಣವನ್ನು ಬಯಲಿಗೆಳೆದಿದ್ದೇ ವಾಜೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

ಶಿವಸೇನಾ ಬೆಂಬಲ: ಬಿಜೆಪಿ ಕಿಡಿ

ಸಚಿನ್ ವಾಜೆ ಪರ ಬೆಂಬಲ ವ್ಯಕ್ತಪಡಿಸಿರುವುದಕ್ಕೆ ಶಿವಸೇನಾ ವಿರುದ್ಧ ಮಹಾರಾಷ್ಟ್ರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಕಿಡಿಕಾರಿದ್ದಾರೆ. ‘ಇದೊಂದು ದೊಡ್ಡ ಸಂಚು. ಸಚಿನ್ ವಾಜೆ ಬಂಧಿಸಿರುವುದು ತನಿಖೆಯ ಮೊದಲ ಹಂತ. ಪೊಲೀಸ್ ಪಡೆಯಲ್ಲಿದ್ದವರೇ ಈ ರೀತಿ ಕಾರ್ಯನಿರ್ವಹಿಸಿದರೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವವರು ಯಾರು? ವಾಜೆ ಅವರಿಗೆ ಸರ್ಕಾರ ಆಶ್ರಯ ನೀಡಿದೆ. ಎನ್‌ಐಎ ಬಳಿ ಸಾಕ್ಷ್ಯಗಳಿರುವುದರಿಂದ ಬಂಧಿಸಿದೆ’ ಎಂದು ಹೇಳಿದ್ದಾರೆ. ‘ನಾನು ಮುಖ್ಯಮಂತ್ರಿಯಾಗಿದ್ದಾಗ ಗೃಹ ಖಾತೆಯನ್ನು ಹೊಂದಿದ್ದೆ. ಅಮಾನತುಗೊಂಡಿದ್ದ ವಾಜೆ ಅವರನ್ನು ಮರುನೇಮಿಸಬೇಕು ಎಂದು ಶಿವಸೇನಾ ನಾಯಕರು ಒತ್ತಾಯಿಸಿದ್ದರು. ಆಗ ಅಡ್ವೋಕೆಟ್ ಜನರಲ್ ಅವರ ಸಲಹೆ ಪಡೆದು ಮರು ನೇಮಕ ಮಾಡಲಿಲ್ಲ. ವಾಜೆ ವಿರುದ್ಧ ಪ್ರಕರಣ ಬಾಂಬೆ ಹೈಕೋರ್ಟ್‌ನಲ್ಲಿದೆ’ ಎಂದು ಹೇಳಿದ್ದಾರೆ.

ರಾಷ್ಟ್ರಪತಿ ಆಡಳಿತ ಹೇರಲು ಒತ್ತಾಯ: ಮಹಾರಾಷ್ಟ್ರದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕು ಎಂದು ಹಿರಿಯ ಬಿಜೆಪಿ ನಾಯಕ ಮತ್ತು ರಾಜ್ಯಸಭಾ ಸದಸ್ಯ ನಾರಾಯಣ ರಾಣೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

ವಾಜೆ ಬಂಧನದ ಬಗ್ಗೆ ಯಾವುದೇ ರೀತಿಯ ಹೇಳಿಕೆ ನೀಡುವುದಿಲ್ಲ. ಇದು ಸ್ಥಳೀಯ ವಿಷಯವಾಗಿದೆ.
ಶರದ್ ಪವಾರ್
ಎನ್‌ಸಿಪಿ ಮುಖ್ಯಸ್ಥ

ಸತ್ಯದ ಆಧಾರದ ಮೇಲೆ ಕ್ರಮಕೈಗೊಳ್ಳಲಾಗುವುದು. ಎನ್‌ಐಎ ಮತ್ತು ಎಟಿಎಸ್ ಈ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿವೆ.
ಅನಿಲ್ ದೇಶಮುಖ್
ಮಹಾರಾಷ್ಟ್ರ ಗೃಹ ಸಚಿವ

ಸಮರ್ಪಕವಾದ ತನಿಖೆ ನಡೆದರೆ ಹುದುಗಿಕೊಂಡಿರುವ ಎಲ್ಲ ಮಾಹಿತಿಯೂ ಹೊರಬರಲಿದೆ. ಸರ್ಕಾರವೂ ಪತನಗೊಳ್ಳಲಿದೆ. ನನ್ನ ವಿರುದ್ಧ 200ಕ್ಕೂ ಹೆಚ್ಚು ಎಫ್‌ಐಆರ್‌ಗಳು ದಾಖಲಾಗಬಹುದು
ಕಂಗನಾ ರನೌತ್, ನಟಿ

ತಮಿಳುನಾಡಿನತ್ತ ಇ.ವಿ. ಕಂಪನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು/ಚೆನ್ನೈ: ಬೆಂಗಳೂರು ಮೂಲದ ಓಲಾ ಮತ್ತು ಏಥರ್ ಕಂಪನಿಗಳು ದ್ವಿಚಕ್ರ ವಾಹನ ತಯಾರಿಕಾ ಘಟಕಗಳನ್ನು ತಮಿಳುನಾಡಿನ ಹೊಸೂರಿನಲ್ಲಿ ಆರಂಭಿಸಲಿರುವುದು, ಆ ರಾಜ್ಯ ರೂಪಿಸಿರುವ ವಿದ್ಯುತ್ ಚಾಲಿತ ವಾಹನ ನೀತಿಯತ್ತ ಗಮನ ಹರಿಯುವಂತೆ ಮಾಡಿದೆ. ಈ ಎರಡು ಕಂಪನಿಗಳನ್ನು ತನ್ನತ್ತ ಸೆಳೆಯಲು ತಮಿಳುನಾಡು ಸರ್ಕಾರ, ಕಂಪನಿಗಳ ಅಗತ್ಯಕ್ಕೆ ಸೂಕ್ತವಾದ ಪ್ಯಾಕೇಜ್‌ಗಳನ್ನು ಕೂಡ ನೀಡಿದೆ.

‘ವಿದ್ಯುತ್ ಚಾಲಿತ (ಇ.ವಿ.) ದ್ವಿಚಕ್ರ ವಾಹನಗಳ ತಯಾರಿಕೆಯಲ್ಲಿ ಕೂಡ ತಮಿಳುನಾಡು ಮುಂಚೂಣಿಗೆ ಬರಬೇಕು ಎಂಬುದು ನಮ್ಮ ಬಯಕೆ. ಆಟೊಮೊಬೈಲ್ ಉದ್ಯಮದಲ್ಲಿ ರಾಜ್ಯವು ಈಗಾಗಲೇ ನಾಯಕತ್ವದ ಸ್ಥಾನದಲ್ಲಿದೆ’ ಎಂದು ಸರ್ಕಾರದ ಮೂಲವೊಂದು ‘ಪ್ರಜಾವಾಣಿ’ಗೆ ತಿಳಿಸಿದೆ.

ಈ ಎರಡು ಕಂಪನಿಗಳು ಕರ್ನಾಟಕ ಸರ್ಕಾರದ ಜೊತೆಯೂ ಮಾತುಕತೆ ನಡೆಸಿದ್ದವು. ಆದರೆ, ಹೊಸೂರು–ಕೃಷ್ಣಗಿರಿ ಪ್ರದೇಶದಲ್ಲಿ ಆಟೊಮೊಬೈಲ್ ಉದ್ಯಮಕ್ಕೆ ಅಗತ್ಯವಿರುವ ಪೂರೈಕೆದಾರರ ನೆಲೆ ಚೆನ್ನಾಗಿರುವುದು, ‘ಭೂಬ್ಯಾಂಕ್’ ನೀತಿಯ ಮೂಲಕ ಜಮೀನು ಲಭ್ಯವಿರುವುದು, ಹಣಕಾಸಿನ ಕೊಡುಗೆಗಳು, ಬೆಂಗಳೂರಿಗೂ ಹತ್ತಿರ ಇರುವುದು ಆ ಕಂಪನಿಗಳು ತಮಿಳುನಾಡನ್ನು ಆಯ್ಕೆ ಮಾಡಿಕೊಳ್ಳಲು ಕಾರಣ.



ಮಿಲಿಟರಿ ಆಡಳಿತದ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಹೆಚ್ಚಿದ ಬೆಂಬಲ

ಮ್ಯಾನ್ಮಾರ್: 14 ಪ್ರತಿಭಟನಕಾರರ ಹತ್ಯೆ

ಯಾಂಗೂನ್ (ಎಪಿ, ರಾಯಿಟರ್ಸ್): ಮಿಲಿಟರಿ ಆಡಳಿತ ವಿರೋಧಿಸಿ ಮ್ಯಾನ್ಮಾರ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದೆ.

ಪ್ರತಿಭಟನೆಯನ್ನು ಹತ್ತಿಕ್ಕಲು ಮಿಲಿಟರಿ ಆಡಳಿತ ವಿವಿಧ ರೀತಿಯ ಪ್ರಯತ್ನಗಳನ್ನು ಮುಂದುವರಿಸಿದೆ. ಯಾಂಗೂನ್‌ನಲ್ಲಿ ಭದ್ರತಾ ಪಡೆಗಳು ಭಾನುವಾರ ಪ್ರತಿಭಟನಕಾರರ ಮೇಲೆ ನಡೆಸಿದ ಗುಂಡಿನ ದಾಳಿಯಲ್ಲಿ 14 ಮಂದಿ ಸಾವಿಗೀಡಾಗಿದ್ದಾರೆ. ಪ್ರತಿಭಟನಕಾರರ ಮೇಲೆ ಅಶ್ರುವಾಯು ಮತ್ತು ರಬ್ಬರ್ ಬುಲೆಟ್‌ಗಳನ್ನು ಸಹ ಸಿಡಿಸಲಾಗಿದ್ದು, ಹಲವರು ಗಾಯಗೊಂಡಿದ್ದಾರೆ.

ಬೆಂಬಲ: ಮ್ಯಾನ್ಮಾರ್‌ನಲ್ಲಿ ಮಿಲಿಟರಿ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗೆ ನೀಡಿರುವ ಬೆಂಬಲವನ್ನು ಮುಂದುವರಿಸುವುದಾಗಿ, ಪದಚ್ಯುತ ಸರ್ಕಾರದ ನಾಯಕ ಮಾನ್ ವಿನ್ ಖೈಂಗ್ ಥಾನ್ ಹೇಳಿದ್ದಾರೆ.

ಮ್ಯಾನ್ಮಾರ್‌ನ ಕಾಚಿನ್‌ನಲ್ಲಿ ಪ್ರತಿಭಟನಕಾರರ ಮೇಲೆ ಭದ್ರತಾ ಸಿಬ್ಬಂದಿ ಅಶ್ರುವಾಯು ಸಿಡಿಸಿದರು

ಪದಚ್ಯುತ ನಾಯಕಿ ಆಂಗ್ ಸಾನ್ ಸೂಕಿ ನೇತೃತ್ವದ ನ್ಯಾಷನಲ್ ಲೀಗ್ ಆಫ್ ಡೆಮಾಕ್ರಸಿ ಪಕ್ಷದ ಮುಖಂಡರಾಗಿರುವ ಥಾನ್ ಅವರನ್ನು ಪಕ್ಷದ ಹಂಗಾಮಿ ಉಪಾಧ್ಯಕ್ಷರನ್ನಾಗಿ ಘೋಷಿಸಲಾಗಿದೆ.

‘ದೇಶ ಈಗ ಕರಾಳ ದಿನಗಳನ್ನು ಎದುರಿಸುತ್ತಿದೆ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಬೇಕು ಎಂಬುದು ಮಿಲಿಟರಿಯ ದೌರ್ಜನ್ಯದಿಂದ ನಲುಗುತ್ತಿರುವ ನಮ್ಮ ಸಹೋದರರ ಆಶಯವಾಗಿದೆ. ಈ ಆಶಯ ಸಾಕಾರಗೊಳ್ಳಬೇಕು ಎಂದರೆ ಈ ಕ್ರಾಂತಿಯನ್ನು ಮುಂದುವರಿಸಬೇಕು’ ಎಂದು ಥಾನ್ ಪ್ರತಿಪಾದಿಸಿದ್ದಾರೆ.

‘ನಾವು ಹೋರಾಟವನ್ನು ಕೈಬಿಡಬಾರದು. ಒಗ್ಗಟ್ಟಿನಿಂದ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾಗಿದೆ. ನಮ್ಮ ಗುರಿಯನ್ನು ತಲುಪವವರೆಗೂ ಹೋರಾಟ ನಡೆಸಬೇಕಾಗಿದೆ’ ಎಂದು ಹೇಳಿದ್ದಾರೆ.

ಉಡಾನ್: ವಿಮಾನ ಸಂಚಾರಕ್ಕೆ ಬಿಡ್ ಆಹ್ವಾನ

ನವದೆಹಲಿ (ಪಿಟಿಐ): ‘ಉಡಾನ್’ ಯೋಜನೆಯಡಿ 392 ವಾಯುಮಾರ್ಗಗಳಲ್ಲಿ ವಿಮಾನಗಳ ಹಾರಾಟಕ್ಕೆ ನಾಗರಿಕ ವಿಮಾನಯಾನ ಸಚಿವಾಲಯ ಬಿಡ್ ಆಹ್ವಾನಿಸಿದೆ.

‘ಸ್ವಾತಂತ್ರ್ಯದ ಅಮೃತ ಮಹೋತ್ಸವ’ದ ಅಂಗವಾಗಿ ಈ ಬಿಡ್ ಆಹ್ವಾನಿಸಲಾಗುತ್ತಿದೆ’ ಎಂದು ಸಚಿವಾಲಯ ಭಾನುವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ದೇಶೀಯವಾಗಿ ವಿಮಾನ ಸಂಪರ್ಕ ಜಾಲವನ್ನು ವಿಸ್ತರಿಸುವುದು ಹಾಗೂ ವಿಮಾನಯಾನ ಜನರಿಗೆ ಕೈಗೆಟುಕುವಂತಾಗಬೇಕು ಎಂಬ ಪ್ರಯತ್ನದ ಭಾಗವಾಗಿ ಸಚಿವಾಲಯ ಇಂಥ ಕ್ರಮಕ್ಕೆ ಮುಂದಾಗಿದೆ.

ಸಂಕ್ಷಿಪ್ತ ಸುದ್ದಿ

ಸುಳ್ಳು ದೂರುಗಳ ವಿರುದ್ಧ ಕಠಿಣ ಕ್ರಮಕ್ಕೆ ಮನವಿ

ನವದೆಹಲಿ: ವ್ಯಕ್ತಿ ವಿರುದ್ಧ ಸುಳ್ಳು ದೂರು ನೀಡಿ ಕ್ರಿಮಿನಲ್ ಪ್ರಕರಣ ದಾಖಲಿಸುವುದನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಲು ಹಾಗೂ ಇಂಥ ಪ್ರಕರಣಗಳಲ್ಲಿ ಬಲಿಪಶು ಆಗುವವರಿಗೆ ಪರಿಹಾರ ನೀಡುವ ಸಂಬಂಧ ಮಾರ್ಗಸೂಚಿಗಳನ್ನು ರಚಿಸಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರಿ ಬಿಜೆಪಿ ಮುಖಂಡ ಕಪಿಲ್ ಶರ್ಮಾ ಸುಪ್ರೀಂಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದಾರೆ.

ಅತ್ಯಾಚಾರ ಪ್ರಕರಣವೊಂದರಲ್ಲಿ ಶಿಕ್ಷೆಗೆ ಒಳಗಾಗಿದ್ದ ವಿಷ್ಣು ತಿವಾರಿ ಅವರನ್ನು ನಿರಪರಾಧಿ ಎಂದು ಅಲಹಾಬಾದ್ ಹೈಕೋರ್ಟ್ ಕಳೆದ ಜ. 28ರಂದು ತೀರ್ಪು ನೀಡಿದೆ. ಭೂವಿವಾದಕ್ಕೆ ಸಂಬಂಧಪಟ್ಟಂತೆ ತಿವಾರಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು ಎಂದೂ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಈ ಪ್ರಕರಣದ ಹಿನ್ನೆಲೆಯಲ್ಲಿ ಶರ್ಮಾ ಅವರು, ವಕೀಲ ಅಶ್ವಿನಿಕುಮಾರ್ ದುಬೆ ಅವರ ಮೂಲಕ ಪಿಐಎಲ್ ಸಲ್ಲಿಸಿದ್ದಾರೆ.

ಹೆಣ್ಣುಹುಲಿ ಅವನಿ ಮರಿ ಸಾವು

ನಾಗಪುರ: ಹೆಣ್ಣುಹುಲಿ ಅವನಿಯ ಮರಿ, ಕಾಡೊಳಗೆ ಬಿಟ್ಟ 8 ದಿನಗಳ ನಂತರ ಮೃತಪಟ್ಟಿತು ಎಂದು ಮಹಾರಾಷ್ಟ್ರ ಅರಣ್ಯ ಇಲಾಖೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಪಿಟಿಆರ್‌ಎಫ್–84’ ಎಂದು ಹೆಸರಿಸಲಾಗಿದ್ದ, 3 ವರ್ಷದ ಹೆಣ್ಣು ಹುಲಿಯನ್ನು ಮಾರ್ಚ್ 5ರಂದು ನಾಗಪುರ ಬಳಿಯ ಪೆಂಚ್ ಹುಲಿ ಸಂರಕ್ಷಿತಾರಣ್ಯದಲ್ಲಿ (ಪಿಟಿಆರ್) ಬಿಡಲಾಗಿತ್ತು. ‘ಕಾಡಿನ ಇತರ ಪ್ರಾಣಿಗಳೊಂದಿಗೆ ನಡೆದ ಕಾದಾಟದಲ್ಲಿ ಹುಲಿಮರಿಯ ಬಲಗಾಲಿನಲ್ಲಿ ಗಾಯಗಳಾಗಿದ್ದವು. ಮಾರ್ಚ್ 8ರಂದು ಈ ಮರಿಯನ್ನು ಅರಣ್ಯದಿಂದ ಕರೆತಂದು ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೇ ಹುಲಿಮರಿ ಶನಿವಾರ ರಾತ್ರಿ 10ಕ್ಕೆ ಮೃತಪಟ್ಟಿತು ಎಂದು ಮುಖ್ಯ ಅರಣ್ಯಸಂರಕ್ಷಣಾಧಿಕಾರಿ ರವಿಕಿರಣ್ ಗೋವೇಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬುರ್ಖಾ ನಿಷೇಧ, ಸಾವಿರಕ್ಕೂ ಅಧಿಕ ಮದರಸಾ ಬಂದ್‌ಗೆ ಶ್ರೀಲಂಕಾ ನಿರ್ಧಾರ

ಕೊಲಂಬೊ (ಎಪಿ): ರಾಷ್ಟ್ರೀಯ ಭದ್ರತೆ ಕಾರಣ ಮುಸ್ಲಿಂ ಮಹಿಳೆಯರು ಬುರ್ಖಾ ಧರಿಸುವುದನ್ನು ನಿಷೇಧಿಸಲು ಹಾಗೂ 1,000ಕ್ಕೂ ಅಧಿಕ ಮದರಸಾಗಳನ್ನು ಮುಚ್ಚಲು ನಿರ್ಧರಿಸಲಾಗಿದೆ ಎಂದು ಶ್ರೀಲಂಕಾ ಸರ್ಕಾರ ಪ್ರಕಟಿಸಿದೆ.

‘ಈ ವಿಷಯಕ್ಕೆ ಸಂಬಂಧಿಸಿದ ಪ್ರಸ್ತಾವಕ್ಕೆ ಸಹಿ ಹಾಕಿದ್ದು, ಅದನ್ನು ಅನುಮೋದನೆಗಾಗಿ ಸಚಿವ ಸಂಪುಟಕ್ಕೆ ಕಳುಹಿಸಲಾಗುವುದು’ ಎಂದು ಸಾರ್ವಜನಿಕ ಭದ್ರತಾ ಸಚಿವ ಶರತ್ ವೀರಶೇಖರ ಹೇಳಿದ್ದಾರೆ. ಬೌದ್ಧ ದೇವಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ, ‘ಬುರ್ಖಾ ಧಾರಣೆ ರಾಷ್ಟ್ರದ ಭದ್ರತೆ ಮೇಲೆ ನೇರ ಪರಿಣಾಮ ಬೀರುತ್ತದೆ’ ಎಂದು ಸಚಿವ ವೀರಶೇಖರ ಹೇಳಿರುವ ವಿಡಿಯೊವೊಂದನ್ನು ಸಾರ್ವಜನಿಕ ಭದ್ರತಾ ಸಚಿವಾಲಯ ಹಂಚಿಕೊಂಡಿದೆ.

‘ನಾನು ಚಿಕ್ಕವನಿದ್ದಾಗ ಸಾಕಷ್ಟು ಜನ ಮುಸ್ಲಿಂ ಗೆಳೆಯರಿದ್ದರು. ಆಗ, ಮುಸ್ಲಿಂ ಮಹಿಳೆಯರಾಗಲಿ, ಬಾಲಕಿಯರಾಗಲಿ ಬುರ್ಖಾ ಧರಿಸುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಅದು ಧಾರ್ಮಿಕ ಉಗ್ರವಾದದ ಸಂಕೇತವಾಗಿದೆ. ಹೀಗಾಗಿ, ಬುರ್ಖಾ ಧರಿಸುವುದನ್ನು ನಿಶ್ಚಿತವಾಗಿಯೂ ನಿಷೇಧಿಸುತ್ತೇವೆ’ ಎಂದೂ ವೀರಶೇಖರ ಹೇಳಿದ್ದಾರೆ.

‘ದೇಶದಲ್ಲಿ ಸಾವಿರಕ್ಕೂ ಅಧಿಕ ಮದರಸಾಗಳು ಇವೆ. ಇವು ರಾಷ್ಟ್ರೀಯ ಶಿಕ್ಷಣ ನೀತಿ ಅನುಸಾರ ಕಾರ್ಯ ನಿರ್ವಹಿಸುತ್ತಿಲ್ಲ. ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಇವುಗಳು ನೋಂದಣಿಯನ್ನೂ ಮಾಡಿಲ್ಲ. ಹೀಗಾಗಿ ಈ ಮದರಸಾಗಳನ್ನು ಸಹ ಬಂದ್ ಮಾಡಲಾಗುವುದು’ ಎಂದರು ಹೇಳಿದ್ದಾರೆ.

2019ರಲ್ಲಿ ಈಸ್ಟರ್ ದಿನ ಚರ್ಚ್ ಹಾಗೂ ಹೋಟೆಲ್‌ಗಳ ಮೇಲೆ ನಡೆದ ಬಾಂಬ್ ದಾಳಿಯಲ್ಲಿ 260ಕ್ಕೂ ಅಧಿಕ ಜನರು ಮೃತಪಟ್ಟಿದ್ದರು. ಈ ಘಟನೆ ನಂತರ ಬುರ್ಖಾ ಧರಿಸುವುದನ್ನು ಶ್ರೀಲಂಕಾ ಸರ್ಕಾರ ತಾತ್ಕಾಲಿಕವಾಗಿ ನಿಷೇಧಿಸಿತ್ತು.

ಉಗ್ರನ ಹತ್ಯೆ: ಅಮೆರಿಕ ರೈಫಲ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಗ್ರಾಮವೊಂದರಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಉಗ್ರನೊಬ್ಬನನ್ನು ಕೊಂದಿರುವ ಭದ್ರತಾ ಪಡೆಗಳು, ಅಮೆರಿಕ ತಯಾರಿಸಿರುವ ರೈಫಲ್ ಮತ್ತು 36 ಗುಂಡುಗಳನ್ನು ಭಾನುವಾರ ವಶಪಡಿಸಿಕೊಂಡಿವೆ.

ಈ ಕುರಿತು ಸೇನೆಯು ತನ್ನ ಅಧಿಕೃತ ಟ್ವಿಟರ್‌ನಲ್ಲಿ ಪ್ರಕಟಿಸಿದ್ದು, ಎನ್‌ಕೌಂಟರ್ ಸ್ಥಳದಲ್ಲಿ ₹9,600 ನಗದು ಸಹ ವಶಪಡಿಸಿಕೊಂಡಿರುವುದಾಗಿ ತಿಳಿಸಿದೆ.

ಜೈಶ್ ಎ ಮೊಹಮ್ಮದ್ (ಜೆಇಎಂ) ಉನ್ನತ ಕಮಾಂಡರ್ ಸಜ್ಜಾದ್ ಅಫ್ಘಾನಿ ಮತ್ತು ವಿದೇಶಿ ಉಗ್ರರು ಇರುವ ಮಾಹಿತಿ ದೊರೆಯುತ್ತಿದ್ದಂತೆ ಶನಿವಾರ ಸಂಜೆ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದವು. ರಾತ್ರಿ ಸಮಯದಲ್ಲಿ ಕಾರ್ಯಾಚರಣೆ ಬಂದ್ ಮಾಡಲಾಗಿತ್ತು. ಉಗ್ರರು ಪರಾರಿಯಾಗದಂತೆ ತಡೆಯಲು ಗ್ರಾಮದ ಸುತ್ತ ಭದ್ರತೆಯನ್ನು ಬಿಗಿಗೊಳಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಭದ್ರತಾ ಪಡೆಗಳ ಶೋಧ ಕಾರ್ಯಾಚರಣೆಗೆ ಮಾಹಿತಿ ನೀಡಲು ಬಂದಿದ್ದ ಐವರು ಗ್ರಾಮಸ್ಥರು ಉಗ್ರರಿರುವ ಮನೆಯೊಳಗೆ ಸಿಕ್ಕಿಹಾಕಿಕೊಂಡಿದ್ದರಿಂದ ಕಾರ್ಯಾಚರಣೆ ನಿಲ್ಲಿಸಲಾಗಿತ್ತು. ಗ್ರಾಮಸ್ಥರನ್ನು ಸುರಕ್ಷಿತವಾಗಿ ಹೊರಗೆ ಕರೆತರಲಾಗಿದ್ದು, ಶೋಧ ಕಾರ್ಯ ಮುಂದುವರಿದಿದೆ’ ಎಂದು ಕಾಶ್ಮೀರದ ಪೊಲೀಸ್ ಮಹಾನಿರೀಕ್ಷಕ ವಿಜಯ್ ಕುಮಾರ್ ಹೇಳಿದ್ದಾರೆ.

ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಉಗ್ರ ಸಜ್ಜಾದ್ ಅಫ್ಘಾನಿ ಎಂಬುದು ದೃಢಪಟ್ಟಿಲ್ಲ. ಗುರುತು ಪತ್ತೆ ಹಚ್ಚುವ ಕಾರ್ಯ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಜಯಭೇರಿ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಿದೆ.

ಪ್ರಮುಖ ವಿರೋಧ ಪಕ್ಷವಾದ ತೆಲುಗು ದೇಶಂ ಪಕ್ಷ ಕೇವಲ ಐದು ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಎರಡಂಕಿ ದಾಟಿದೆ. ಬಿಜೆಪಿ ಮತ್ತು ಜನ ಸೇನಾ ಪಕ್ಷ ಅಲ್ಪಮಟ್ಟಿಗೆ ಗೆಲುವು ಸಾಧಿಸಿವೆ. ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿದೆ.

12 ಮಹಾನಗರ ಪಾಲಿಕೆಗಳಲ್ಲಿ 11ರಲ್ಲಿ ವೈಎಸ್‌ಆರ್ ಕಾಂಗ್ರೆಸ್ ಅಧಿಕಾರ ಪಡೆದುಕೊಂಡಿದೆ. ಹೈಕೋರ್ಟ್ ಆದೇಶದ ಕಾರಣ ಎಲೂರು ಮಹಾನಗರ ಪಾಲಿಕೆಯ ಮತ ಎಣಿಕೆ ಕೈಗೊಂಡಿಲ್ಲ.

ವೈ.ಎಸ್. ಜಗನ್

75 ಮುನ್ಸಿಪಾಲಿಟಿಗಳ 2,122 ವಾರ್ಡ್‌ಗಳಲ್ಲಿ 1,754 ವಾರ್ಡ್‌ಗಳಲ್ಲಿ ವೈಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಟಿಡಿಪಿ 270 ಸ್ಥಾನಗಳಲ್ಲಿ ಜಯಗಳಿಸಿದೆ. ಬಿಜೆಪಿ 8, ಜನ ಸೇನಾ ಪಕ್ಷ 19, ಇತರ ಪಕ್ಷಗಳ ಅಭ್ಯರ್ಥಿಗಳು ಮತ್ತು ಪಕ್ಷೇತರರು 71 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ ಎಂದು ರಾಜ್ಯ ಚುನಾವಣಾ ಆಯೋಗ ಮಾಹಿತಿ ನೀಡಿದೆ.

‘ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ನಾಯಕತ್ವದಲ್ಲಿ ಜನರು ವಿಶ್ವಾಸವಿಟ್ಟು ಮತ ಹಾಕಿದ್ದಾರೆ. ಕಳೆದ 22 ತಿಂಗಳಲ್ಲಿ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿದ್ದಾರೆ. ಹೀಗಾಗಿ, ಮತದಾರರು ಬೆಂಬಲಿಸಿದ್ದಾರೆ’ ಎಂದು ವೈಎಸ್‌ಆರ್ ಕಾಂಗ್ರೆಸ್ ಪ್ರಕಟಣೆ ತಿಳಿಸಿದೆ.

‘ಮೂರು ರಾಜಧಾನಿಗಳನ್ನು ಸ್ಥಾಪಿಸುವ ಸರ್ಕಾರದ ನಿರ್ಧಾರಕ್ಕೂ ಜನರು ಮತದಾನದ ಮೂಲಕ ಬೆಂಬಲಿಸಿದ್ದಾರೆ’ ಎಂದು ಅದು ಹೇಳಿದೆ.

ಎರಡನೇ ಟಿ–20 ಕ್ರಿಕೆಟ್ ಪಂದ್ಯ: ವಾಷಿಂಗ್ಟನ್ ಸುಂದರ್, ಶಾರ್ದೂಲ್‌ಗೆ ತಲಾ ಎರಡು ವಿಕೆಟ್

ಇಶಾನ್–ಕೊಹ್ಲಿ ಅಬ್ಬರದಾಟಕ್ಕೆ ಒಲಿದ ಜಯ

ಅರ್ಧಶತಕ ಗಳಿಸಿದ ಇಶಾನ್ ಕಿಶನ್ (ಎಡ) ಅವರನ್ನು ಅಭಿನಂದಿಸಿದ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ–ಪಿಟಿಐ ಚಿತ್ರ

ಅಹಮದಾಬಾದ್ : ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಪದಾರ್ಪಣೆಯ ಪಂದ್ಯದಲ್ಲಿಯೇ ಮಿಂಚಿದ ಇಶಾನ್ ಕಿಶನ್ ಮತ್ತು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಆಟ ರಂಗೇರಿತು.

ಇವರಿಬ್ಬರ ಆಕರ್ಷಕ ಅರ್ಧಶತಕಗಳ ಬಲದಿಂದ ಭಾರತ ತಂಡವು 7 ವಿಕೆಟ್‌ಗಳಿಂದ ಇಂಗ್ಲೆಂಡ್ ವಿರುದ್ಧದ ಟ್ವೆಂಟಿ–20 ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ಬೌಲರ್‌ಗಳು ಮಿಂಚಿದರು. ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 17.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 166 ರನ್ ಗಳಿಸಿತು. ಮೊದಲ ಪಂದ್ಯದಲ್ಲಿ ಅನುಭವಿಸಿದ್ದ ಸೋಲಿಗೆ ಸೇಡು ತೀರಿಸಿಕೊಂಡಿತು. ಆ ಪಂದ್ಯದಲ್ಲಿ ಸೊನ್ನೆ ಸುತ್ತಿದ್ದ ವಿರಾಟ್ ಕೊಹ್ಲಿ (ಅಜೇಯ 73;49ಎಸೆತ, 5ಬೌಂಡರಿ, 3ಸಿಕ್ಸರ್) ಈ ಹಣಾಹಣಿಯಲ್ಲಿ ಲಯಕ್ಕೆ ಮರಳಿದರು. ಬಹಳ ದಿನಗಳ ನಂತರ ಅವರ ಸುಂದರ ಆಟ ಕಣ್ಣಿಗೆ ಕಟ್ಟಿತು. ಸಿಕ್ಸರ್ ಮೂಲಕ ತಂಡದ ಗೆಲುವಿನ ರನ್ ಗಳಿಸಿದ ಅವರು ಮಿಂಚಿದರು. ಪದಾರ್ಪಣೆ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಇಶಾನ್ ಕಿಶನ್ (56; 32 ಎಸೆತ) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 94 ರನ್ ಕಲೆಹಾಕಿದರು.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಮೂರು ಸಾವಿರ ರನ್ ಗಳಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾದರು.

ಪದಾರ್ಪಣೆಯಲ್ಲಿ ಮಿಂಚು: ಗುರಿ ಬೆನ್ನಟ್ಟಿದ ಆತಿಥೇಯರ ಆರಂಭ ಚೆನ್ನಾಗಿರಲಿಲ್ಲ. ಆರಂಭಿಕ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ತಮಗೆ ಲಭಿಸಿದ ಮತ್ತೊಂದು ಅವಕಾಶವನ್ನು ಬಳಸಿಕೊಳ್ಳುವಲ್ಲಿ ವಿಫಲರಾದರು. ಮೊದಲ ಓವರ್‌ನ ಕೊನೆಯ ಎಸೆತದಲ್ಲಿ ವಿಕೆಟ್‌ಕೀಪರ್‌ಗೆ ಕ್ಯಾಚ್ ಆದ ರಾಹುಲ್ ನಿರ್ಗಮಿಸಿದರು. ಆಗ ತಂಡದ ಖಾತೆಯಲ್ಲಿ ಒಂದೂ ರನ್ ಇರಲಿಲ್ಲ.

ಆದರೆ ಇನ್ನೊಂದು ಬದಿಯಲ್ಲಿದ್ದ ಇಶಾನ್ ತಮ್ಮ ಮೇಲೆ ಇನಿಂಗ್ಸ್ ಕಟ್ಟುವ ಹೊಣೆ ಹೊತ್ತುಕೊಂಡರು. ಹೋದ ವರ್ಷ ಐಪಿಎಲ್‌ನಲ್ಲಿ ಮಿಂಚಿದ್ದ ಇಶಾನ್ ನಿರ್ಭಯವಾಗಿ ಬ್ಯಾಟ್ ಬೀಸಿದರು. ಬೌಂಡರಿ ಗಳಿಸುವುದರೊಂದಿಗೆ ಖಾತೆ ತೆರೆದ ಅವರ ಆಟ ರಂಗೇರಿತು. ಜೋಫ್ರಾ ಆರ್ಚರ್, ಆದಿಲ್ ರಶೀದ್, ಟಾಮ್ ಕರನ್ ಅವರ ಎಸೆತಗಳಿಗೆ ತಕ್ಕ ಉತ್ತರ ನೀಡಿದರು.

ಇಬ್ಬರಿಗೂ ಅದೃಷ್ಟವೂ ಜೊತೆ ನೀಡಿತು. ಐದನೇ ಓವರ್‌ನಲ್ಲಿ ಕ್ರಿಸ್ ಜೋರ್ಡಾನ್ ಬೌಲಿಂಗ್‌ನಲ್ಲಿ ಕೊಹ್ಲಿಯ ಕ್ಯಾಚ್ ಅನ್ನು ವಿಕೆಟ್‌ಕೀಪರ್ ಜೋಸ್ ಬಟ್ಲರ್ ಬಿಟ್ಟರು. ಆದರೆ ಕಷ್ಟಕರವಾಗಿದ್ದ ಕ್ಯಾಚ್ ಪಡೆಯುವಲ್ಲಿ ಜೋಸ್ ಪ್ರಯತ್ನ ಕೈಗೂಡಲಿಲ್ಲ.ಆದರೆ, 8ನೇ ಓವರ್‌ನಲ್ಲಿ ರಶೀದ್ ಎಸೆತದಲ್ಲಿ ಇಶಾನ್ ಕಿಶನ್ ಕ್ಯಾಚ್ ಬಿಟ್ಟ ಬೆನ್ ಸ್ಟೋಕ್ಸ್ ಪರಿತಪಿಸಿದರು.

10ನೇ ಓವರ್‌ನಲ್ಲಿ ಸಿಕ್ಸರ್ ಎತ್ತಿದ ಇಶಾನ್ ಚೊಚ್ಚಲ ಅರ್ಧಶತಕ ದಾಖಲಿಸಿದರು. ಈ ಸಾಧನೆ ಮಾಡಿದ ಭಾರತದ ನಾಲ್ಕನೇ ಬ್ಯಾಟ್ಸ್‌ಮನ್ ಆದರು. ಇದೇ ಓವರ್‌ನಲ್ಲಿ ರಿವರ್ಸ್ ಸ್ವೀಪ್ ಮಾಡಲು ಯತ್ನಿಸಿದ ಇಶಾನ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಯುಡಿಆರ್‌ಎಸ್ ಅವಕಾಶ ಪಡೆದರೂ ಪ್ರಯೋಜನವಾಗಲಿಲ್ಲ. ಕೊಹ್ಲಿ ಜೊತೆಗೆ 94 ರನ್‌ಗಳ ಜೊತೆಯಾಟವಾಡಿದರು.

ಇಶಾನ್ ಆಟದಲ್ಲಿ ನಾಲ್ಕು ಸಿಕ್ಸರ್‌ಗಳಿದ್ದವು. ಅವರ ನಂತರ ಕ್ರೀಸ್‌ಗೆ ಬಂದ ರಿಷಭ್ ಪಂತ್ 13 ಎಸೆತಗಳಲ್ಲಿ 26 ರನ್ ಗಳಿಸಿದರು. ತಮ್ಮ ಎಂದಿನ ಉತ್ತಮ ಲಯದಲ್ಲಿ ಎರಡು ಸಿಕ್ಸರ್ ಮತ್ತು ಎರಡು ಬೌಂಡರಿ ಹೊಡೆದರು. ಅವರು ಔಟಾದ ಮೇಲೆ ಶ್ರೇಯಸ್ ಅಯ್ಯರ್ ಮತ್ತು ಕೊಹ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಅದರೊಂದಿಗೆ ಭಾರತದ ಬೌಲರ್‌ಗಳ ಶ್ರಮಕ್ಕೆ ತಕ್ಕ ಫಲ ಲಭಿಸಿತು.

ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್ ಮತ್ತು ಯಜುವೇಂದ್ರ ಚಾಹಲ್ ಅವರ ಶಿಸ್ತಿನ ಬೌಲಿಂಗ್ ನಿಂದಾಗಿ ಇಂಗ್ಲೆಂಡ್ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಇಂಗ್ಲೆಂಡ್ ಬ್ಯಾಟ್ಸ್‌ಮನ್ ಜೇಸನ್ ರಾಯ್ (46 ರನ್) ಅವರು ಉತ್ತಮ ಕಾಣಿಕೆ ನೀಡಿದರು.

ಪದಾರ್ಪಣೆಯ ಟಿ20 ಪಂದ್ಯದಲ್ಲಿ ಅರ್ಧಶತಕ (ಭಾರತ)

ರನ್	ಬ್ಯಾಟ್ಸ್‌ಮನ್	ಎದುರಾಳಿ	ಸ್ಥಳ	ವರ್ಷ
61	ಅಜಿಂಕ್ಯ ರಹಾನೆ	ಇಂಗ್ಲೆಂಡ್	ಮ್ಯಾಂಚೆಸ್ಟರ್	2011
56	ಇಶಾನ್ ಕಿಶನ್	ಇಂಗ್ಲೆಂಡ್	ಅಹಮದಾಬಾದ್	2021
50	ರಾಬಿನ್ ಉತ್ತಪ್ಪ	ಪಾಕಿಸ್ತಾನ	ಡರ್ಬನ್	2007
50*	ರೋಹಿತ್ ಶರ್ಮಾ	ದ.ಅಫ್ರಿಕಾ	ಡರ್ಬನ್	2007

ವಿರಾಟ್ ಕೊಹ್ಲಿ ದಾಖಲೆ

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಮೂರು ಸಾವಿರ ರನ್ ಗಳಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ವಿರಾಟ್ ಕೊಹ್ಲಿ ಪಾತ್ರರಾದರು.

ಇಂಗ್ಲೆಂಡ್ ಎದುರಿನ ಎರಡನೇ ಪಂದ್ಯದಲ್ಲಿ ಅಜೇಯ 73 ರನ್ ಗಳಿಸಿದರು. ಈ ಪಂದ್ಯ ಆಡುವ ಮುನ್ನ ಅವರ ಖಾತೆಯಲ್ಲಿ 2928 ರನ್‌ಗಳು ಇದ್ದವು. ಈ ದಾಖಲೆಯ ಪಟ್ಟಿಯಲ್ಲಿ ನ್ಯೂಜಿಲೆಂಡ್‌ನ ಮಾರ್ಟಿನ್ ಗಪ್ಟಿಲ್ (2839) ಮತ್ತು ಭಾರತದ ರೋಹಿತ್ ಶರ್ಮಾ (2773) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ತಂದೆಗೆ ಅರ್ಧಶತಕ ಅರ್ಪಣೆ: ಪದಾರ್ಪಣೆ ಪಂದ್ಯದಲ್ಲಿ ತಾವು ದಾಖಲಿಸಿದ ಅರ್ಧಶತಕವನ್ನು ಇಶಾನ್ ಕಿಶನ್ ತಮ್ಮ ತಂದೆಗೆ ಅರ್ಪಿಸಿದ್ದಾರೆ.

ಪಂದ್ಯಶ್ರೇಷ್ಠ ಗೌರವ ಗಳಿಸಿದ ನಂತರ ಮಾತನಾಡಿದ ಅವರು, 'ನಾನು ಈ ದಿನಕ್ಕಾಗಿ ಕನಸು ಕಂಡಿದ್ದೆ. ನಾನು ಕ್ರಿಕೆಟಿಗನಾಗಲು ಅಪ್ಪನೇ ಕಾರಣ. ಈ ಸಾಧನೆ ಅವರಿಗೆ ಸಲ್ಲಬೇಕು' ಎಂದು ಹೇಳಿದರು.

ಸ್ಕೋರ್‌ಕಾರ್ಡ್

ಇಂಗ್ಲೆಂಡ್ 6ಕ್ಕೆ 164 (20 ಓವರ್‌ಗಳಲ್ಲಿ)

ಜೇಸನ್ ರಾಯ್ ಸಿ ಭುವನೇಶ್ವರ್ ಕುಮಾರ್ ಬಿ ವಾಷಿಂಗ್ಟನ್ ಸುಂದರ್	46
ಜೋಸ್ ಬಟ್ಲರ್ ಎಲ್‌ಬಿಡಬ್ಲ್ಯು ಭುವನೇಶ್ವರ್ ಕುಮಾರ್	0
ಡೇವಿಡ್ ಮಲಾನ್ ಎಲ್‌ಬಿಡಬ್ಲ್ಯು ಯಜುವೇಂದ್ರ ಚಾಹಲ್	24
ಜಾನಿ ಬೆಸ್ಟೊ ಸಿ ಸೂರ್ಯಕುಮಾರ್ ಯಾದವ್ ಬಿ ವಾಷಿಂಗ್ಟನ್ ಸುಂದರ್	20
ಏಯಾನ್ ಮಾರ್ಗನ್ ಸಿ ರಿಷಭ್ ಪಂತ್ ಬಿ ಶಾರ್ದೂಲ್ ಠಾಕೂರ್	28
ಬೆನ್ ಸ್ಟೋಕ್ಸ್ ಸಿ ಹಾರ್ದಿಕ್ ಪಾಂಡ್ಯ ಬಿ ಶಾರ್ದೂಲ್ ಠಾಕೂರ್	24
ಸ್ಯಾಮ್ ಕರನ್ ಔಟಾಗದೆ	6
ಕ್ರಿಸ್ ಜೋರ್ಡಾನ್ ಔಟಾಗದೆ	0
ಇತರೆ (ಬೈ 1, ಲೆಗ್‌ಬೈ 10, ವೈಡ್ 5)	16

ವಿಕೆಟ್ ಪತನ: 1-1 (ಜೋಸ್ ಬಟ್ಲರ್, 0.3), 2-64 (ಡೇವಿಡ್ ಮಲಾನ್, 8.2), 3-91 (ಜೇಸನ್ ರಾಯ್, 11.1), 4-119 (ಜಾನಿ ಬೆಸ್ಟೊ, 13.5), 5-142 (ಏಯಾನ್ ಮಾರ್ಗನ್, 17.1), 6-160 (ಬೆನ್ ಸ್ಟೋಕ್ಸ್, 19.4)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–28–1, ವಾಷಿಂಗ್ಟನ್ ಸುಂದರ್ 4–0–29–2, ಶಾರ್ದೂಲ್ ಠಾಕೂರ್ 4–0–29–2, ಹಾರ್ದಿಕ್ ಪಾಂಡ್ಯ 4–0–33–0, ಯಜುವೇಂದ್ರ ಚಾಹಲ್ 4–0–34–1

ಭಾರತ 3ಕ್ಕೆ 166 (17.5 ಓವರ್‌ಗಳಲ್ಲಿ)

ಕೆ.ಎಲ್.ರಾಹುಲ್ ಸಿ ಜೋಸ್ ಬಟ್ಲರ್ ಬಿ ಸ್ಯಾಮ್ ಕರನ್	0
ಇಶಾನ್ ಕಿಶನ್ ಎಲ್‌ಬಿಡಬ್ಲ್ಯು ಬಿ ಆದಿಲ್ ರಶೀದ್	56
ವಿರಾಟ್ ಕೊಹ್ಲಿ ಔಟಾಗದೆ	73
ರಿಷಭ್ ಪಂತ್ ಸಿ ಜಾನಿ ಬೆಸ್ಟೊ ಬಿ ಕ್ರಿಸ್ ಜೋರ್ಡಾನ್	26
ಶ್ರೇಯಸ್ ಅಯ್ಯರ್ ಔಟಾಗದೆ	8
ಇತರೆ (ಲೆಗ್‌ಬೈ 1, ನೋಬಾಲ್ 1, ವೈಡ್ 1)	3

ವಿಕೆಟ್ ಪತನ: 1-0 (ಕೆ.ಎಲ್.ರಾಹುಲ್, 0.6), 2-94 (ಇಶಾನ್ ಕಿಶನ್, 9.6), 3-130 (ರಿಷಭ್ ಪಂತ್, 13.4),

ಬೌಲಿಂಗ್: ಸ್ಯಾಮ್ ಕರನ್ 4-1-22-1, ಜೊಫ್ರಾ ಆರ್ಚರ್ 4–0–24–0, ಕ್ರಿಸ್ ಜೋರ್ಡಾನ್ 2.5–0–38–1, ಟಾಮ್ ಕರನ್ 2–0–26–0, ಬೆನ್ ಸ್ಟೋಕ್ಸ್ 1–0–17–0, ಆದಿಲ್ ರಶೀದ್ 4–0–38–1

ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ; ಸರಣಿ 1–1ರಲ್ಲಿ ಸಮ.

ಪಂದ್ಯಶ್ರೇಷ್ಠ: ಇಶಾನ್ ಕಿಶನ್

ಮುಂದಿನ ಪಂದ್ಯ: ಮಾರ್ಚ್ 16ರಂದು; ಅಹಮದಾಬಾದ್

ಟಿಟಿ: ಮುಖ್ಯ ಸುತ್ತಿಗೆ ಯಶಸ್ವಿನಿ

ಬೆಂಗಳೂರು: ರಾಜ್ಯದ ಖುಷಿ ವಿ. ಹಾಗೂ ಯಶಸ್ವಿನಿ ಘೋರ್ಪಡೆ ಅವರು ರಾಷ್ಟ್ರೀಯ ಜೂನಿಯರ್ ಹಾಗೂ ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮುಖ್ಯ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಮಧ್ಯಪ್ರದೇಶದ ಇಂದೋರ್‌ನಲ್ಲಿ ಮಾರ್ಚ್ 7ರಿಂದ ಚಾಂಪಿಯನ್‌ಷಿಪ್ ನಡೆಯುತ್ತಿದೆ.

ಯೂತ್ ಬಾಲಕಿಯರ ವಿಭಾಗದಲ್ಲಿ ಅರ್ಹತಾ ಪಂದ್ಯದಲ್ಲಿ ಖುಷಿ 3–0ರಿಂದ ಗುಜರಾತ್‌ನ ಕವೀಷಾ ಅವರನ್ನು ಸೋಲಿಸಿದರು. ಯಶಸ್ವಿನಿ ಘೋರ್ಪಡೆ ಇಷ್ಟೇ ಅಂತರದಿಂದ ತಮಿಳುನಾಡಿನ ಫ್ಲೋರಾ ಎಸ್. ಎದುರು, ಅನರ್ಘ್ಯ ಮಂಜುನಾಥ್ 3–0ರಿಂದ ಹಿಮಾಚಲ ಪ್ರದೇಶದ ತನಿಷಾ ವಿರುದ್ಧ ಗೆದ್ದರು.

ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಅನರ್ಘ್ಯ ಹಾಗೂ ಯಶಸ್ವಿನಿ ನೇರ ಅರ್ಹತೆ ಗಿಟ್ಟಿಸಿದರು. ಕರುಣಾ ಅವರು ಗೋವಾದ ಅನುಶ್ರೀ ವಿರುದ್ಧ, ಅದಿತಿ ಜೋಷಿ ಅವರು ಅತುಲ್ಯ ಎದುರು ಗೆದ್ದು ಮುಖ್ಯ ಸುತ್ತು ತಲುಪಿದರು.

ಸ್ಟೂಡೆಂಟ್ಸ್ ಯೂನಿಯನ್‌ಗೆ ಜಯ

ಬೆಂಗಳೂರು: ಉತ್ತಮ ಆಟವಾಡಿದ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ 3–2 ಗೋಲುಗಳಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಸೋಲಿಸಿತು.

ವಿಜಯ್ ಹಜಾರೆ: ಮಾಧವ್ ಕೌಶಿಕ್, ಆದಿತ್ಯ ತಾರೆ ಶತಕ

ಮುಂಬೈ ಮುಡಿಗೆ ಟ್ರೋಫಿ

ಆದಿತ್ಯ ತಾರೆ

ದೆಹಲಿ (ಪಿಟಿಐ): ನಾಯಕ ಪೃಥ್ವಿ ಶಾ ಮತ್ತೊಮ್ಮೆ ತಮ್ಮ ಬ್ಯಾಟಿಂಗ್ ವೈಭವ ಪ್ರದರ್ಶಿಸಿದರು. ಟೂರ್ನಿಯಲ್ಲಿ ಐದನೇ ಶತಕ ಗಳಿಸಲು ಸಾಧ್ಯವಾಗದೇ ಇದ್ದರೂ 39 ಎಸೆತಗಳಲ್ಲಿ 73 ರನ್ (10 ಬೌಂಡರಿ, 4 ಸಿಕ್ಸರ್) ಸಿಡಿಸಿ ಮಿಂಚಿದರು. ಮೂರನೇ ಕ್ರಮಾಂಕದ ಆದಿತ್ಯ ತಾರೆ (118; 107 ಎಸೆತ, 18 ಬೌಂ) ಅಮೋಘ ಬ್ಯಾಟಿಂಗ್ ಮಾಡಿ ಎದುರಾಳಿಗಳನ್ನು ಕಂಗೆಡಿಸಿದರು.

ಇವರಿಬ್ಬರ ಭರ್ಜರಿ ಆಟದ ನೆರವಿನಿಂದ ಉತ್ತರ ಪ್ರದೇಶವನ್ನು ಆರು ವಿಕೆಟ್‌ಗಳಿಂದ ಮಣಿಸಿದ ಮುಂಬೈ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿತು.

ಆರಂಭಿಕ ಬ್ಯಾಟ್ಸ್‌ಮನ್ ಮಾಧವ್ ಕೌಶಿಕ್ (158; 156 ಎ, 15 ಬೌಂ, 4 ಸಿ) ಅವರ ದಾಖಲೆಯ ಶತಕ, ಸಮರ್ಥ್ ಸಿಂಗ್ ಮತ್ತು ಅಕ್ಷದೀಪ್ ನಾಥ್ ಅವರ ಅರ್ಧಶತಕಗಳ ನೆರವಿನಿಂದ ಉತ್ತರ ಪ್ರದೇಶ 312 ರನ್ ಕಲೆ ಹಾಕಿತ್ತು. ಕಠಿಣ ಗುರಿ ಬೆನ್ನತ್ತಿದ ಮುಂಬೈ 51 ಎಸೆತಗಳು ಬಾಕಿ ಇರುವಾಗಲೇ ನಾಲ್ಕು ವಿಕೆಟ್ ಕಳೆದುಕೊಂಡು ದಡ ಸೇರಿತು. ಈ ಮೂಲಕ ನಾಲ್ಕನೇ ಬಾರಿ ಪ್ರಶಸ್ತಿ ಗಳಿಸಿದ ಸಾಧನೆ ಮಾಡಿತು. ಒಟ್ಟು 827 ರನ್ ಗಳಿಸಿದ ಪೃಥ್ವಿ ಶಾ ಟೂರ್ನಿಯ ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ರನ್ ಕಲೆ ಹಾಕಿದ ಆಟಗಾರ ಎನಿಸಿಕೊಂಡರು.

ಮಯಂಕ್ ದಾಖಲೆ ಮೀರಿದ ಕೌಶಿಕ್:ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಉತ್ತರಪ್ರದೇಶಕ್ಕೆ ಮಾಧವ್ ಕೌಶಿಕ್ ಮತ್ತು ಸಮರ್ಥ್ ಸಿಂಗ್ (55; 73 ಎ, 4 ಬೌಂ, 3 ಸಿ) ಅಮೋಘ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರು 122 ರನ್ ಸೇರಿಸಿದರು. ನಾಯಕ ಕರಣ್ ಶರ್ಮಾ ಶೂನ್ಯಕ್ಕೆ ಔಟಾದರೂ ಕೌಶಿಕ್ ಮತ್ತು ಪ್ರಿಯಂ ಗರ್ಗ್ 38 ರನ್ ಸೇರಿದರು. ಗರ್ಗ್ ಮರಳಿದ ನಂತರ ಕೌಶಿಕ್ ಜೊತೆಗೂಡಿದ ಅಕ್ಷದೀಪ್ ನಾಥ್ (55; 40 ಎ, 4 ಬೌಂ, 3 ಸಿ) 128 ರನ್‌ಗಳನ್ನು ಸೇರಿಸಿ ತಂಡವನ್ನು 300ರ ಸನಿಹ ತಲುಪಿಸಿ ಔಟಾದರು. ಅಕ್ಷದೀಪ್ ರನೌಟ್ ಆದರು. ವಿಜಯ್ ಹಜಾರೆ ಟ್ರೋಫಿಯ ಫೈನಲ್ ಪಂದ್ಯದಲ್ಲಿ ಗರಿಷ್ಠ ವೈಯಕ್ತಿಕ ಮೊತ್ತ ಗಳಿಸಿದ ಆಟಗಾರ ಎಂಬ ದಾಖಲೆ ಕೌಶಿಕ್ ಪಾಲಾಯಿತು. 2014ರಲ್ಲಿ ಪಂಜಾಬ್ ವಿರುದ್ಧ 125 ರನ್ ಗಳಿಸಿದ್ದ ಕರ್ನಾಟಕದ ಮಯಂಕ್ ಅಗರವಾಲ್ ಅವರ ಹೆಸರಿನಲ್ಲಿ ಇಲ್ಲಿಯವರೆಗೆ ಈ ದಾಖಲೆ ಇತ್ತು.

ಸಂಕ್ಷಿಪ್ತ ಸ್ಕೋರು: ಉತ್ತರ ಪ್ರದೇಶ: 50 ಓವರ್‌ಗಳಲ್ಲಿ 4ಕ್ಕೆ 312 (ಮಾಧವ ಕೌಶಿಕ್ ಔಟಾಗದೆ 158, ಸಮರ್ಥ್ ಸಿಂಗ್ 55, ಪ್ರಿಯಂ ಗರ್ಗ್ 21, ಅಕ್ಷದೀಪ್ ನಾಥ್ 55; ತನುಷ್ ಕೋಟ್ಯಾನ್ 54ಕ್ಕೆ2, ಪ್ರಶಾಂತ್ ಸೋಳಂಕಿ 71ಕ್ಕೆ1); ಮುಂಬೈ: 41.3 ಓವರ್‌ಗಳಲ್ಲಿ 4ಕ್ಕೆ 315 (ಪೃಥ್ವಿ ಶಾ 73, ಯಶಸ್ವಿ ಜೈಸ್ವಾಲ್ 29, ಆದಿತ್ಯ ತಾರೆ ಔಟಾಗದೆ 118, ಶಮ್ಸ್ ಮುಲಾನಿ 36, ಶಿವಂ ದುಬೆ 42; ಯಶ್ ದಯಾಳ್ 71ಕ್ಕೆ 1, ಶಿವಂ ಮಾವಿ 63ಕ್ಕೆ1, ಶಿವಂ ಶರ್ಮಾ 71ಕ್ಕೆ1, ಸಮೀರ್ ಚೌಧರಿ 43ಕ್ಕೆ1). ಫಲಿತಾಂಶ: ಮುಂಬೈಗೆ 6 ವಿಕೆಟ್‌ಗಳ ಜಯ; ಪ್ರಶಸ್ತಿ. ಪಂದ್ಯಶ್ರೇಷ್ಠ: ಆದಿತ್ಯ ತಾರೆ.

ಪೃಥ್ವಿ ಶಾಗೆ ಗಾಯ: ಫೀಲ್ಡಿಂಗ್ ಮಾಡುತ್ತಿದ್ದಾಗ ಮೊಣಕಾಲಿನ ಕೆಳಭಾಗದ ಮೂಳೆಗೆ ಚೆಂಡು ತಾಗಿ ಗಂಭೀರ ಗಾಯಗೊಂಡ ಮುಂಬೈ ತಂಡದ ನಾಯಕ ಪೃಥ್ವಿ ಶಾ ಅವರನ್ನು ಸಹ ಆಟಗಾರರು ಅಂಗಣದಿಂದ ಎತ್ತಿಕೊಂಡು ಹೋದರು. ನಂತರ ಮುಂಬೈ ಪರ ಇನಿಂಗ್ಸ್ ಆರಂಭಿಸಿದರು.

ಮೊಟೇರಾ ಪಿಚ್ 'ಸಾಧಾರಣ':ಐಸಿಸಿ

ನವದೆಹಲಿ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯ ಆಯೋಜನೆಯಾಗಿದ್ದ ಮೊಟೇರಾ ಕ್ರೀಡಾಂಗಣದ ಪಿಚ್ 'ಸಾಧಾರಣ' ಗುಣಮಟ್ಟದ್ದಾಗಿತ್ತು ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರೇಟಿಂಗ್ ನೀಡಿದೆ.

ಆ ಪಂದ್ಯವು ಎರಡನೇ ದಿನವೇ ಮುಕ್ತಾಯವಾಗಿತ್ತು. ಭಾರತದ ಸ್ಪಿನ್ ದಾಳಿಯ ಮುಂದೆ ಇಂಗ್ಲೆಂಡ್ ತತ್ತರಿಸಿತ್ತು. ಅದರಿಂದಾಗಿ ಪಿಚ್ ಬಗ್ಗೆ ಬಹಳಷ್ಟು ಪರ ವಿರೋಧ ಚರ್ಚೆಗಳು ನಡೆದಿದ್ದವು. ವಿಶೇಷವಾಗಿ ಇಂಗ್ಲೆಂಡ್ ಮಾಜಿ ಕ್ರಿಕೆಟಿಗರು ಟೀಕಿಸಿದ್ದರು.

ಇದೇ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಮೊದಲ ಟಿ20 ಪಂದ್ಯದಲ್ಲಿ ಬಳಕೆಯಾದ ಪಿಚ್ ಉತ್ತಮ ಗುಣಮಟ್ಟದ್ದಾಗಿದೆ ಎಂದೂ ಐಸಿಸಿ ಹೇಳಿದೆ.

ಪ್ರಜಾವಾಣಿ

ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ಗರಡಿಮನೆ ಪುಟ್ಟ ದ್ವಾರದ ಗುಟ್ಟು!

ಗರಡಿಮನೆ ಎಂದರೆ ಕುಸ್ತಿ ತರಬೇತಿ ಕೇಂದ್ರ ಮಾತ್ರವಲ್ಲ. ಅದೊಂದು ಸಂಸ್ಕೃತಿ, ಸಂಪ್ರದಾಯ ಮತ್ತು ಪಾರಂಪರಿಕ ಮೌಲ್ಯಗಳನ್ನು ಕಲಿಸುವ ಶಾಲೆ. ಊರು–ಕೇರಿಯ ಆರೋಗ್ಯ ದೇಗುಲ ಮತ್ತು ಸಾಮಾಜಿಕ ಸ್ವಾಸ್ಥ್ಯ, ಭದ್ರತೆಗಳನ್ನೂ ಕಾಪಾಡುವ ಉತ್ತಮ ಯುವಪಡೆಯನ್ನು ಬೆಳೆಸುವ ತಾಣ. ಅಜಾನುಬಾಹು ಪೈಲ್ವಾನರನ್ನು ಬೆಳೆಸುವ ಈ ಗರಡಿಮನೆಗಳ ಪ್ರವೇಶದ್ವಾರ ಮಾತ್ರ ಏಕೆ ಪುಟ್ಟದಾಗಿರುತ್ತದೆ? ಇಲ್ಲಿ ನೋಡಿ..

QR ಕೋಡ್ ಸ್ಕ್ಯಾನ್ ಮಾಡಿ

ಮಹಿಳಾ ಕ್ರಿಕೆಟ್: ಸೋತು ಸರಣಿ ಕೈ ಚೆಲ್ಲಿದ ಭಾರತ

ಲಖನೌ (ಪಿಟಿಐ): ಆರಂಭಿಕ ಬ್ಯಾಟರ್ ಪೂನಂ ರಾವತ್ (ಔಟಾಗದೆ 104; 123 ಎಸೆತ, 10 ಬೌಂಡರಿ) ಅವರ ಶತಕ ಮತ್ತು ಮಧ್ಯಮ ಕ್ರಮಾಂಕದ ಹರ್ಮನ್‌ಪ್ರೀತ್ ಕೌರ್ (54; 35 ಎ, 7 ಬೌಂ, 1 ಸಿ) ಅವರ ಸ್ಫೋಟಕ ಬ್ಯಾಟಿಂಗ್ ವ್ಯರ್ಥವಾಯಿತು.

ಅಗ್ರಕ್ರಮಾಂಕದ ನಾಲ್ವರ ಅರ್ಧಶತಕಗಳ ಬಲದಿಂದ ದಕ್ಷಿಣ ಆಫ್ರಿಕಾ ಮಹಿಳೆಯರ ತಂಡ ನಾಲ್ಕನೇ ಏಕದಿನ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಏಕಾನ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಹಣಾಹಣಿಯಲ್ಲಿ ಭಾರತ ನೀಡಿದ 267 ರನ್‌ಗಳ ಗೆಲುವಿನ ಗುರಿಯನ್ನು ಪ್ರವಾಸಿ ತಂಡ 48.4 ಓವರ್‌ಗಳಲ್ಲಿ ತಲುಪಿತು. ಇದಕ್ಕಾಗಿ ತಂಡ ಕಳೆದುಕೊಂಡದ್ದು ಮೂರು ವಿಕೆಟ್ ಮಾತ್ರ. ಈ ಗೆಲುವಿನೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ ದಕ್ಷಿಣ ಆಫ್ರಿಕಾ 3–1ರ ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಭಾರತ 50 ಓವರ್‌ಗಳಲ್ಲಿ 4ಕ್ಕೆ 266 (ಪ್ರಿಯಾ ಪೂನಿಯಾ 32, ಪೂನಂ ರಾವತ್ ಔಟಾಗದೆ 104, ಮಿಥಾಲಿ ರಾಜ್ 45, ಹರ್ಮನ್‌ಪ್ರೀತ್ ಕೌರ್ 54; ಶಬ್ನಿಮ್ ಇಸ್ಮಾಯಿಲ್ 50ಕ್ಕೆ1, ತೂಮಿ ಶೇಖುಖುನೆ 63ಕ್ಕೆ2, ನೊಂಡುಮಿಸೆ ಶಾಂಗಸೆ 41ಕ್ಕೆ1); ದಕ್ಷಿಣ ಆಫ್ರಿಕಾ: 48.4 ಓವರ್‌ಗಳಲ್ಲಿ 3ಕ್ಕೆ 269 (ಲಿಜೆಲಿ ಲೀ 69, ಲೌರಾ ವೊಲ್ವಾರ್ಟ್ 53, ಲಾರಾ ಗೊಡಾಲ್ ಔಟಾಗದೆ 59, ಮಿಗ್ನನ್ ಡು ಪ್ರೀಜ್ 61, ಮರಿಜನೆ ಕಾಪ್ ಔಟಾಗದೆ 22; ಮಾನಸಿ ಜೋಶಿ 43ಕ್ಕೆ1, ರಾಜೇಶ್ವರಿ ಗಾಯಕವಾಡ್ 39ಕ್ಕೆ1). ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 7 ವಿಕೆಟ್‌ಗಳ ಜಯ; ಸರಣಿಯಲ್ಲಿ 3–1ರ ಮುನ್ನಡೆ. ಪಂದ್ಯದ ಶ್ರೇಷ್ಠ ಆಟಗಾರ್ತಿ: ಮಿಗ್ನನ್ ಡು ಪ್ರೀಜ್.


ತಲೆ ಬೋಳಾಗಿಸಿಕೊಂಡು ಹೊಸ 'ಅವತಾರ'ದಲ್ಲಿ ಕಾಣಿಸಿಕೊಂಡ ಮಹೇಂದ್ರ ಸಿಂಗ್ ಧೋನಿ– ಚೆನ್ನೈ ಸೂಪರ್ ಕಿಂಗ್ಸ್ ಟ್ವಿಟರ್ ಚಿತ್ರ

ಫೆನ್ಸಿಂಗ್: ಭವಾನಿಗೆ ಒಲಿಂಪಿಕ್ಸ್ ಟಿಕೆಟ್


ಭವಾನಿ ದೇವಿ –ಟ್ವಿಟರ್ ಚಿತ್ರ

ಚೆನ್ನೈ (ಪಿಟಿಐ): ತಮಿಳುನಾಡಿನ ಸಿ.ಎ ಭವಾನಿ ದೇವಿ ಒಲಿಂಪಿಕ್ಸ್ ಕೂಟಕ್ಕೆ ಆಯ್ಕೆಯಾದ ಭಾರತದ ಮೊದಲ ಫೆನ್ಸರ್ ಎನಿಸಿಕೊಂಡಿದ್ದಾರೆ. ಇಲ್ಲಿ ನಡೆದ ಸ್ಪರ್ಧೆಯ ತಂಡ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಸೋತ ಭವಾನಿ ದೇವಿ ಅಡ್ಜಸ್ಟೆಡ್ ಆಫಿಷಿಯಲ್ ರ್‍ಯಾಂಕಿಂಗ್ (ಎಒಆರ್) ಮಾದರಿಯಲ್ಲಿ ಒಲಿಂಪಿಕ್ಸ್‌ಗೆ ಅರ್ಹರಾದರು. ಏಷ್ಯಾ ಮತ್ತು ಓಷಿನಿಯಾ ವಲಯದಿಂದ ಲಭ್ಯ ಇರುವ ಎರಡು ಸ್ಥಾನಗಳ ಪೈಕಿ ಒಂದರಲ್ಲಿ ಅವರು ಆಯ್ಕೆಯಾಗಿದ್ದಾರೆ.

ಇದೊಂದು ಐತಿಹಾಸಿಕ ಕ್ಷಣವಾಗಿದ್ದು ಭವಾನಿ ದೇವಿ ಅವರಿಗೆ ಅಭಿನಂದನೆ ಸಲ್ಲಲೇಬೇಕು ಎಂದು ಭಾರತ ಕ್ರೀಡಾ ಪ್ರಾಧಿಕಾರ ಟ್ವೀಟ್ ಮಾಡಿದೆ. ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಕೂಡ ಭವಾನಿ ಅವರನ್ನು ಅಭಿನಂದಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ದಿಗ್ಗಜ ಬಾಕ್ಸರ್ ಮರ್ವಿನ್ ನಿಧನ


ಮರ್ವಿನ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಬಾಕ್ಸಿಂಗ್ ದಿಗ್ಗಜ ಮರ್ವಿನ್ ಹೆಗ್ಲರ್ ಶನಿವಾರ ತಡರಾತ್ರಿ ನಿಧನರಾಗಿದ್ದಾರೆ. ಹೆಗ್ಲರ್ ಅವರಿಗೆ 66 ವರ್ಷ ವಯಸ್ಸಾಗಿತ್ತು.

ಹೆಗ್ಲರ್ ನಿಧನರಾಗಿರುವ ಮಾಹಿತಿಯನ್ನು ಅವರ ಪತ್ನಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ. ಹೆಗ್ಲರ್ 1973ರಿಂದ 87ರವರೆಗೂ ಬಾಕ್ಸಿಂಗ್‌ನಲ್ಲಿ ಮಿಂಚಿದ್ದರು. 1980 ಹಾಗೂ 1987ರಲ್ಲಿ ಮಿಡಲ್ ಹೆವಿವೇಟ್ ಚಾಂಪಿಯನ್ ಆಗಿದ್ದರು.

1983ರಲ್ಲಿ ಅಂತರರಾಷ್ಟ್ರೀಯ ಹಾಗೂ ವಿಶ್ವ 'ಹಾಲ್ ಆಫ್ ಫೇಮ್'ಗಳಲ್ಲಿ ಅವರ ಹೆಸರು ಸೇರ್ಪಡೆಯಾಗಿತ್ತು. 14 ವರ್ಷಗಳ ವೃತ್ತಿಜೀವನದಲ್ಲಿ 67 ಬಾರಿ ಸ್ಪರ್ಧಿಸಿದ್ದರು.

ಐಪಿಎಲ್‌ಗೆ ಎರಡು ಹೊಸ ತಂಡಗಳು: ಮೇನಲ್ಲಿ ಹರಾಜು

ನವದೆಹಲಿ (ಪಿಟಿಐ): ವಿಶ್ವದ ಶ್ರೀಮಂತ ಕ್ರಿಕೆಟ್ ಲೀಗ್ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ-20 ಟೂರ್ನಿಯಲ್ಲಿ ಇನ್ನೆರಡು ಹೊಸ ತಂಡಗಳ ಸೇರ್ಪಡೆಯಾಗಲಿದ್ದು, ಮೇನಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ. ಇದರೊಂದಿಗೆ ಮುಂದಿನ ವರ್ಷದಿಂದ ಐಪಿಎಲ್ ಟೂರ್ನಿಯಒಟ್ಟು ತಂಡಗಳ ಸಂಖ್ಯೆ 10ಕ್ಕೆ ಏರಿಕೆಯಾಗಲಿದೆ. ಪ್ರಸಕ್ತ ಸಾಲಿನ ಟೂರ್ನಿಯು ಏಪ್ರಿಲ್‌ನಲ್ಲಿ ಆರಂಭವಾಗಿ ಮೇನಲ್ಲಿ ಅಂತ್ಯ ಕಾಣಲಿದೆ. ಟೂರ್ನಿಯ ಅಂತಿಮ ಹಂತದಲ್ಲಿ ಹೊಸ ಎರಡು ಫ್ರಾಂಚೈಸಿಗಳಿಗಾಗಿ ಹರಾಜು ಪ್ರಕ್ರಿಯೆ ನಡೆಯಲಿದೆ.

ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ ಸೇರಿದಂತೆ ಬಿಸಿಸಿಐ ಉನ್ನತ ಪದಾಧಿಕಾರಿಗಳು, ಐಪಿಎಲ್ ಆಡಳಿತ ಮಂಡಳಿ ಅಂಗೀಕರಿಸಿದ ವಿವಿಧ ನಿರ್ಣಯಗಳ ಬಗ್ಗೆ ಶನಿವಾರ ಚರ್ಚೆ ನಡೆಸಿದರು.

7 ಸಾವಿರ ರನ್ ಪೂರೈಸಿದ ಮಿಥಾಲಿ


ಮಿಥಾಲಿ ರಾಜ್

ಎರಡು ದಿನಗಳ ಹಿಂದೆಯಷ್ಟೇ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಪೂರೈಸಿರುವ ಮಿಥಾಲಿ ರಾಜ್ ಏಕದಿನ ಕ್ರಿಕೆಟ್‌ನಲ್ಲಿ ಏಳು ಸಾವಿರ ರನ್ ಗಳಿಸಿದರು. ಈ ಸಾಧನೆ ಮಾಡಿದ ಮೊದಲ ಮಹಿಳೆ ಎಂಬ ಖ್ಯಾತಿ ಅವರ ಮುಡಿಯೇರಿತು.

ಭಾನುವಾರ ಅವರು ಆಡಿದ್ದು ವೈಯಕ್ತಿಕ 213ನೇ ಪಂದ್ಯವಾಗಿತ್ತು. 1999ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಮಿಥಾಲಿಗೆ ಈಗ 38 ವರ್ಷ ವಯಸ್ಸು. ಆರು ಸಾವಿರ ರನ್ ಪೂರೈಸಿದ ಮೊದಲ ಆಟಗಾರ್ತಿ ಎಂಬ ಖ್ಯಾತಿಯನ್ನು ಮಿಥಾಲಿ ಈ ಹಿಂದೆ ತಮ್ಮದಾಗಿಸಿಕೊಂಡಿದ್ದರು. ಹೆಚ್ಚು ರನ್ ಗಳಿಸಿದವರ ಪಟ್ಟಿಯ ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್‌ನ ನಿವೃತ್ತ ಆಟಗಾರ್ತಿ ಚಾರ್ಲೊಟೆ ಎಡ್ವರ್ಡ್ಸ್ ಖಾತೆಯಲ್ಲಿ 5,992 ರನ್‌ಗಳಿವೆ.